ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ

ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ

ಪೀಠಾರೋಹಣ

ದಶಮಾನೋತ್ಸವ ಸ್ಮರಣ ಸಂಪುಟ

ಶ್ರೀ ಭಗವತ್ಪಾದ ಪ್ರಕಾಶನ (ರಿ.)
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ
ಮಠದೇವಳ, ಸಿರ್ಸಿ, ಉತ್ತರ ಕನ್ನಡ

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ

ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ

ಪೀಠಾರೋಹಣ

ದಶಮಾನೋತ್ಸವ ಸ್ಮರಣ ಸಂಪುಟ

ಪ್ರಧಾನ ಸಂಪಾದಕರು :
ವಿದ್ವಾನ್ ರಾಮಚಂದ್ರ ಶರ್ಮಾ ತ್ಯಾಗಲಿ

ಶ್ರೀ ಭಗವತ್ಪಾದ ಪ್ರಕಾಶನ (ರಿ.)
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ
ಮಠದೇವಳ-581336. ಸಿರ್ಸಿ, ಉತ್ತರ ಕನ್ನಡ

Sri Srimad Jagadguru Shankaracharya Sir Sri Gangadharendra Saraswati Swamigala Peetharohana Dashamanotsava Smarana Samputa

Edited by : Sri Ramachandra Sharma Tyagali

Pages : x + 216 + 8

Year : 23-3-2002

Copies : 1,000

© : *Sri Bhagavatpada Prakashana*

Price : Rs.90/-

Published by : Sri Bhagavatpada Prakashana (R.)
Sri Sonda Svarna valli Mahasamsthana,
Mathadevala-581336. Sirsi, Uttarakannada.

ಸಂಪಾದಕ ಸಮಿತಿ

ರಾಮಚಂದ್ರ ಶರ್ಮಾ ತ್ಯಾಗಲಿ (ಪ್ರಧಾನ ಸಂಪಾದಕರು)

ವಿದ್ವಾನ್ ಭಾಲಚಂದ್ರಶಾಸ್ತ್ರಿಗಳು
ಪ್ರಾಂಶುಪಾಲರು ಸಂಸ್ಕೃತ ಕಾಲೇಜ್, ಸ್ವರ್ಣವಲ್ಲಿ

ಪ್ರೊ. ಜಿ.ಎಸ್. ಭಟ್ಟ
ಸಂಸ್ಕೃತ ವಿಭಾಗ, ಕೆನರಾ ಕಾಲೇಜ್, ಮಂಗಳೂರು

ಪ್ರೊ. ಪಿ.ಐ. ಹೆಗಡೆ
ಕಾರ್ಯದರ್ಶಿ, ಭಗವತ್ಪಾದ ಪ್ರಕಾಶನ

Typeset & Printed at :
VAGARTHA, No.149, 8th Cross, N.R. Colony, Bangalore-19. Ph.6527677

ಪ್ರಕಾಶಕರ ನುಡಿ

ಭಾರತದ ಸಾಂಸ್ಕೃತಿಕ ಪ್ರಪಂಚದ ಮಹಾಚೇತನವಾದ ಆದಿಶಂಕರಾಚಾರ್ಯರು (ಕ್ರಿ.ಶ. 788-820) ಈ ಪುಣ್ಯಭೂಮಿಯಲ್ಲಿ ಅವತರಿಸಿ ಅದ್ವೈತ ಮತದ ಸಂಸ್ಥಾಪನಕಾರ್ಯ ಮಾಡಿರುವುದು ನಮ್ಮ ಭಾಗ್ಯ ವಿಶೇಷವಾಗಿದೆ. ಆದಿಶಂಕರರ ಅನುಗ್ರಹದಿಂದ ಕಾಶಿಯ ದಶಾಶ್ವಮೇಧ ಘಾಟಿನಲ್ಲಿ ಆರಂಭವಾದ ಸ್ವರ್ಣವಲ್ಲೀ ಮಠವು ಮುಂದೆ ಕ್ರಮವಾಗಿ ಉಜ್ಜಯಿನಿ, ಗೋಕರ್ಣ, ಕಡತೋಕೆ, ಸಹಸ್ರಲಿಂಗ ಮತ್ತು ಇಂದಿನ ಸ್ವರ್ಣವಲ್ಲಿಗೆ ಬಂದು ಧರ್ಮದೀಪವಾಗಿ ಬೆಳಗುತ್ತಲಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸುಂದರ ನಿಸರ್ಗ ಪರಿಸರದ ರಮ್ಯ ತಾಣದಲ್ಲಿರುವ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನವು ಅದ್ವೈತ ಮತದ ಮಹಾಗುರುಪೀಠವಾಗಿ ಪ್ರಸಿದ್ಧವಾಗಿದೆ. ಸುಮಾರು ಹನ್ನೆರಡು ನೂರು ವರ್ಷಗಳ ಭವ್ಯವಾದ ಇತಿಹಾಸ ಶ್ರೀಮಠಕ್ಕಿದೆ. ಶ್ರೀ ಶ್ರೀ ವಿಶ್ವವಂದ್ಯ ಸರಸ್ವತಿಗಳಿಂದ ಆರಂಭವಾಗಿ ಇಂದಿನ ಪೀಠಾಧಿಪತಿಗಳಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿಗಳವರೆಗೆ 54 ಯತಿವರ್ಯರು ಶ್ರೀಮಠದ ಸಂಸ್ಕೃತಿ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಸಮಸ್ತ ಗೋಕರ್ಣ ಮಂಡಲಕ್ಕೆ ಗುರುಪೀಠವಾಗುವುದರ ಜೊತೆಗೆ ಶ್ರೀಮಠದ ವ್ಯಾಪ್ತಿಯಲ್ಲಿದ್ದು ನಾಡಿನಾದ್ಯಂತ ಅಪಾರ ಸಂಖ್ಯೆಯ ಭಕ್ತಕೋಟಿಯನ್ನು ಶ್ರೀಮಠವು ಪಡೆದಿದೆ.

ಸ್ವರ್ಣವಲ್ಲೀ ಮಹಾಸಂಸ್ಥಾನವು ಭಾರತೀಯ ಸಂಸ್ಕೃತಿಯ ಪ್ರಸಾರ ಮಾಡುತ್ತಿದ್ದು ವೇದವಿದ್ಯಾವ್ಯಾಸಂಗಕೇಂದ್ರವಾಗಿ ಜನಜನಿತವಾಗಿದೆ. ವೈದಿಕ ಸಂಸ್ಕೃತಿ-ಸಂಸ್ಕಾರಗಳನ್ನು ಪ್ರಚುರಪಡಿಸುವುದು, ಆದಿಶಂಕರರ ವೇದಾಂತ ಸಾರವನ್ನು ಮನೆ ಮನೆಗಳಿಗೆ ತಲುಪಿಸುವುದು, ಧಾರ್ಮಿಕ ವಿಧಿವಿಧಾನಗಳನ್ನು ಕರ್ಮಾನುಷ್ಠಾನ, ಯೋಗವನ್ನು ನಿರಂತರವಾಗಿ ನಡೆಸುತ್ತಾ ಶ್ರೀಮಠವು ಭಕ್ತಕೋಟಿಯ ಕಣ್ಮಣಿಯಾಗಿ ಬೆಳೆದಿದೆ. ವೈದಿಕ ವಿದ್ವಾಂಸರು, ಸಾಹಿತಿಗಳು, ಕಲಾವಿದರು ಶ್ರೀಮಠಕ್ಕೆ ಆಗಮಿಸಿ ಇದರ ವಿದ್ವತ್ ಪರಂಪರೆಯನ್ನು ಮುನ್ನಡೆಸುತ್ತಿದ್ದಾರೆ. ಯಜ್ಞಯಾಗಾದಿಗಳನ್ನು ನಿರಂತರವಾಗಿ ನಡೆಸುತ್ತಾ ದೇವತೆಗಳ ಸಂಪ್ರೀತಿಗೆ ಕಾರಣವಾಗಿ ಲೋಕಕಲ್ಯಾಣದ ಉದಾತ್ತ ಭಾವನೆಯನ್ನು ಪ್ರಕಟಿಸುತ್ತಲಿರುವ ಶ್ರೀಮಠವು ಭಕ್ತಕೋಟಿಯ ಕಾಮಧೇನುವಾಗಿದೆ. ವೈದಿಕ

ಧರ್ಮದ ಆಚಾರ ಹಾಗೂ ವಿಚಾರ ಪರಂಪರೆಯನ್ನೂ, ಸಂಸ್ಕೃತಿ ಸಂವರ್ಧನೆಯನ್ನೂ, ವೇದ ವಿದ್ಯಾ ಪ್ರಸಾರವನ್ನೂ, ಕಲಾಪೋಷಣೆಯನ್ನೂ, ಸಮಾಜ ಕಲ್ಯಾಣವನ್ನೂ ಸಾಧಿಸುವಲ್ಲಿ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನವು ಮಹತ್ವದ ಹೆಜ್ಜೆಯಿಟ್ಟಿದೆ. ಅನ್ನದಾನ, ವಿದ್ಯಾದಾನ, ಅಭಯದಾನವನ್ನು ನೀಡಿ ಭಕ್ತರ ಬದುಕಿನ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುತ್ತಲಿರುವ ಈ ಮಹಾಸಂಸ್ಥಾನ ಜನತೆಯ ಜೀವನವನ್ನು ಪಾವನವಾಗಿಸುವ ಮಹಾಸಂಕಲ್ಪದಲ್ಲಿ ತೊಡಗಿದೆ.

ಸ್ವರ್ಣವಲ್ಲೀ ಮಹಾಸಂಸ್ಥಾನದ 54ನೆಯ ಪೀಠಾಧಿಪತಿಗಳಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿಗಳ ದಿವ್ಯ ನೇತೃತ್ವದಲ್ಲಿ 'ಶ್ರೀ ಭಗವತ್ಪಾದ ಪ್ರಕಾಶನ' ಸಂಸ್ಥೆಯು ಆರಂಭವಾಗಿದ್ದು ಅದು ಅನೇಕ ಗುರುತರವಾದ ಧ್ಯೇಯೋದ್ದೇಶಗಳನ್ನೊಳಗೊಂಡಿದೆ.

1. ಹಸ್ತಪ್ರತಿ, ತಾಡೋಲೆ, ಕಡತಗಳನ್ನು ಸಂಗ್ರಹಿಸಿ ದೊಡ್ಡ ಭಂಡಾರ ತೆರೆದು ಅವುಗಳ ಸಂಪಾದನೆ, ಪರಿಷ್ಕರಣ, ಪ್ರಕಟಣ ಕಾರ್ಯ ಕೈಗೊಳ್ಳುವುದು.

2. ಅದ್ವೈತ ತತ್ತ್ವಸಿದ್ಧಾಂತ, ಆದಿಶಂಕರರ ವೇದಾಂತಸಾರ, ಜೀವನ, ಉಪದೇಶಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಪ್ರಕಟಿಸುವುದು.

3. ಆದಿಶಂಕರರ ಸಮಗ್ರ ಸಾಹಿತ್ಯ ಸಂಪುಟ, ಸ್ತೋತ್ರಕೃತಿಗಳ ಅನುವಾದ ಸಾಹಿತ್ಯವನ್ನು ಪ್ರಕಟಿಸುವುದು.

4. ಶ್ರೀಗಳ ಪ್ರವಚನ ಸಂಪುಟಗಳು, ವೇದಾಂತ ವಿಚಾರದ ವೈಚಾರಿಕ ಕೃತಿಗಳನ್ನು ಪ್ರಕಟಿಸುವುದು.

5. ಭಾರತೀಯ ಸಂಸ್ಕೃತಿಮಾಲೆ, ಪ್ರಾಚೀನ ಸಾಹಿತ್ಯರತ್ನ ಮಾಲೆಯ ಗ್ರಂಥಗಳ ಪ್ರಕಟಣೆ ಮಾಡುವುದು.

6. ವೇದ ಸಮ್ಮೇಳನ, ಇತಿಹಾಸ ಸಮ್ಮೇಳನ, ಸಂಸ್ಕೃತಿ ಸಮ್ಮೇಳನ, ಕಲಾ ಸಮ್ಮೇಳನ, ವಿವಿಧ ವಿಚಾರ ಸಂಕಿರಣ, ಕಮ್ಮಟ, ವಿದ್ವಾಂಸರ ಉಪನ್ಯಾಸ ಮೂಲಕ ಕೃತಿಗಳ ಪ್ರಕಟಣೆ ಮಾಡುವುದು.

7. ಧಾರ್ಮಿಕ ಆಚರಣೆ, ಕರ್ಮಾನುಷ್ಠಾನ, ವೈದಿಕ ಧರ್ಮದ ಸಂಸ್ಕೃತಿ-ಸಂಸ್ಕಾರಕ್ಕೆ ಸಂಬಂಧಿಸಿದ ಗ್ರಂಥಗಳ ಪ್ರಕಟಣೆ ಮಾಡುವುದು.

8. ಅದ್ವೈತ ವೇದಾಂತಕ್ಕೆ ಸಂಬಂಧಿಸಿದ ಸಂಶೋಧನ ಕೇಂದ್ರ ಹಾಗೂ ಗ್ರಂಥಾಲಯ ಸಾಮಗ್ರಿ ಸಂಗ್ರಹ ಭಂಡಾರ ಸ್ಥಾಪಿಸುವುದು.

9. ಸ್ಥಳೀಯ ಜಾನಪದ, ಸಂಸ್ಕೃತಿ, ಸಂಶೋಧನೆಯ ಗ್ರಂಥ ಪ್ರಕಟಿಸುವುದು.

10. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸಾಧಕ ಚೇತನಗಳ ಪುಣ್ಯಪುರುಷರ ಸಾಹಿತ್ಯರತ್ನ ಮಾಲೆ ಆರಂಭಿಸುವುದು.

11. 'ಸ್ವರ್ಣವಲ್ಲೀ ಪ್ರಭಾ' ಮಾಸಿಕ ಪತ್ರಿಕೆಯನ್ನು ನಡೆಸುವುದು. ಇವೇ ಮೊದಲಾದ ಉನ್ನತ ಗುರಿಗಳನ್ನು ಇಟ್ಟುಕೊಂಡು ಶ್ರೀ ಭಗವತ್ಪಾದರ ಪ್ರಕಾಶನವು ಪುಸ್ತಕ ಪ್ರಕಟಣಾ ಕಾರ್ಯವನ್ನು ಆರಂಭಿಸುತ್ತಲಿದೆ.

ಪುಸ್ತಕಗಳ ಮೂಲಕ ಅಕ್ಷರಸ್ಥ ಸಮಾಜದಲ್ಲಿ ಧರ್ಮ, ಸಾಹಿತ್ಯ, ಸಂಸ್ಕೃತಿಯ ಬೀಜವನ್ನು ಬಿತ್ತಿ ಸಮಾಜೋನ್ನತಿ ಸಾಧಿಸಬೇಕೆಂಬುದು ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಉಪದೇಶಾಮೃತವಾಗಿದೆ. ತಾರುಣ್ಯದ ಚೈತನ್ಯ, ವಿದ್ವತ್ತೇಜಸ್ಸು, ಆಳಚಿಂತನೆಯ ಗಾಂಭೀರ್ಯ ಮತ್ತು ಕಠಿಣ ತಪೋನಿಷ್ಠೆಗಳು ಸಂಗಮಿಸಿದ ಪೂಜ್ಯ ಶ್ರೀಗಳು ಕ್ರಿಯಾಚೇತನರಾಗಿ ಧರ್ಮ-ಸಂಸ್ಕೃತಿಗಳ ಪ್ರಚಾರದ ಜೊತೆಗೆ ಪರಿಸರ ಸಂರಕ್ಷಣೆಯಂತಹ ವಿಧಾಯಕ ಕಾರ್ಯದಲ್ಲಿ ನೇತೃತ್ವವಹಿಸಿ ಮಾರ್ಗದರ್ಶನ ಮಾಡುತ್ತಿದ್ದಾರೆ.

ಪೂಜ್ಯ ಶ್ರೀಗಳ ಪೀಠಾರೋಹಣವಾದದ್ದು 2-2-1991ರಂದು ಅಂದರೆ 2-2-2001ರಂದು 10 ವರ್ಷಗಳೇ ಸಂದಾಯವಾಗುತ್ತಿವೆ. ಈ ಸುಸಂದರ್ಭದಲ್ಲಿ ''ಪೀಠಾರೋಹಣದ ದಶಮಾನೋತ್ಸವ ಸಮಾರಂಭವನ್ನು ಅತ್ಯಂತ ವಿಜೃಂಭಣೆ-ಯಿಂದ ಆಚರಿಸಬೇಕೆಂಬುದು ಶ್ರೀಮಠದ ಆಡಳಿತ ಕಮಿಟಿಯ ನಿರ್ಣಯ-ವಾಗಿದೆ. ಈ ಮಹಾಸಂಸ್ಥಾನದ ಅಂಗ ಸಂಸ್ಥೆಯಾದ ಭಗವತ್ಪಾದ ಪ್ರಕಾಶನವು ತನ್ನದೇ ಆದ ಕೊಡುಗೆಯನ್ನು ಕೊಡಬೇಕೆಂದು ನಿಶ್ಚಯಿಸಿ, ''ದಶಮಾನೋತ್ಸವ ಸ್ಮರಣ ಸಂಪುಟವೆಂಬ ಗ್ರಂಥವನ್ನು ಬಿಡುಗಡೆ ಗೊಳಿಸಲು ಉದ್ಯುಕ್ತವಾಗಿದೆ. ಇಂತಹ ಒಂದು ಗ್ರಂಥ ಪೂಜ್ಯ ಶ್ರೀಗಳ ಬಹುಮುಖ ಕ್ರಿಯಾ ಶೀಲತೆಯನ್ನು ಬಿಂಬಿಸುವ ಅನೇಕ ಪ್ರಬಂಧಗಳನ್ನು ಒಳಗೊಂಡಿರಬೇಕಾದದ್ದು ಉಚಿತ. ಕಾರಣ ಪೂಜ್ಯ ಶ್ರೀಗಳೊಡನೆ ನಿಕಟ ಸಂಪರ್ಕವಿರುವ ವಿದ್ವಾಂಸರನ್ನು ಕೇಳಿಕೊಂಡಾಗ ತುಂಬು ಹೃದಯದಿಂದ ಅತ್ಯಂತ ಗೌರವಾದರಗಳೊಂದಿಗೆ ಲೇಖನವನ್ನು ಬರೆದು ಕೊಟ್ಟಿದ್ದಾರೆ. ಆ ಎಲ್ಲ ಲೇಖಕರನ್ನೂ ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಈ ಪುಸ್ತಕದ

ಪೂರ್ತಿ ಜವಾಬ್ದಾರಿಯನ್ನು ಹೊತ್ತಂಥವರು ವಿದ್ವಾನ್ ರಾಮಚಂದ್ರ ಶರ್ಮ ತ್ಯಾಗಲಿ ಅವರು. ಅವರು ತಮ್ಮ ಹಿಂದಿನ ಎಲ್ಲ ಅನುಭವಗಳನ್ನೂ ಇಲ್ಲಿ ತೊಡಗಿಸಿ, ಸಂಪಾದಕರ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಅಚ್ಚುಕಟ್ಟಾಗಿ ಹಾಗೂ ದೋಷರಹಿತವಾಗಿ ಹೊರತರುವ ಹೊಣೆಹೊತ್ತು ಯಶಸ್ವಿಯಾದ ವಿದ್ವಾನ್ ರಾಮಚಂದ್ರ ಶರ್ಮಾ ತ್ಯಾಗಲಿಯವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಈ ಪುಸ್ತಕವನ್ನು ಅಂದವಾಗಿ ಮತ್ತು ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ವಾಗರ್ಥದವರಿಗೆ ನಮ್ಮ ಕೃತಜ್ಞತೆಗಳು.

ನಮ್ಮೊಂದಿಗೆ ಪೂರ್ತಿ ಸಹಕಾರ ನೀಡಿ, ಆರ್ಥಿಕ ನೆರವನ್ನೂ ನೀಡಿದ ಆಡಳಿತ ಕಮಿಟಿ ಮತ್ತು ದಶಮಾನೋತ್ಸವ ಸಮಿತಿಯ ಎಲ್ಲ ಸದಸ್ಯರಿಗೂ ನಮ್ಮ ಕೃತಜ್ಞತೆಗಳು.

''ದಶಮಾನೋತ್ಸವ ಸ್ಮರಣಸಂಪುಟ'' ಗ್ರಂಥವನ್ನು ಬಿಡುಗಡೆ ಮಾಡಲು ಅನುಮತಿಸಿ ಅನುಗ್ರಹಿಸಿದ ಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳವರಿಗೆ ನಮ್ಮ ಭಕ್ತಿಪೂರ್ವಕ ನಮಸಗಳು.

ಶ್ರೀಮಠದ ಅಭಿಮಾನೀ ಭಕ್ತರೆಲ್ಲರ ಕೈಸೇರಿ ಈ ಗ್ರಂಥವು ಮೆಚ್ಚುಗೆಗೆ ಪಾತ್ರವಾಗಲಿ ಎಂಬುದು ನಮ್ಮ ಸದಾಶಯ.

ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ
ದಿನಾಂಕ : 28-4-2001

ಶ್ರೀ ಭಗವತ್ಪಾದ ಪ್ರಕಾಶನದ ಪರವಾಗಿ
ಡಾ|| ಜಿ. ಎಂ. ಹೆಗಡೆ, ಧಾರವಾಡ
ಶ್ರೀ ಪಿ.ಆಯ್. ಹೆಗಡೆ ಶಿರಸಿ

ಸಂಪಾದಕೀಯ

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ ಪೀಠಾರೋಹಣ ದಶಮಾನೋತ್ಸವದ ಸಂಭ್ರಮದ ಸವಿನೆನಪಿನ ಸ್ಮರಣ ಸಂಪುಟವನ್ನು ಶ್ರೀಗುರುಚರಣ ಕಮಲಗಳಲ್ಲಿ ಅರ್ಪಿಸುತ್ತಿದ್ದೇವೆ.

ಶ್ರೀ ಶ್ರೀಗಳವರು ಪೀಠಾರೋಹಣ ಮಾಡಿ ಕಳೆದ ಹತ್ತು ವರ್ಷಗಳಲ್ಲಿ ಶಿಷ್ಯರಿಗಾಗಿ, ಸಮಾಜಕ್ಕಾಗಿ ರಾಷ್ಟ್ರಹಿತಕ್ಕಾಗಿ ಮಾಡಿದ ಕಾರ್ಯಕ್ರಮಗಳ ಸಾಧನೆಗಳ ಸಿಂಹಾವಲೋಕನ ಸಂಗ್ರಹವೇ ಈ ಸಂಪುಟ. ''ಕರ್ತಾರಃ ಸುಲಭಾ ಲೋಕೇ ವಿಜ್ಞಾತಾರಸ್ತು ದುರ್ಲಭಾಃ'' ಲೋಕದಲ್ಲಿ ಮಾಡುವವರು ಸುಲಭವಾಗಿ ಸಿಕ್ಕುತ್ತಾರೆ. ಆದರೆ ಮಾಡುವವರನ್ನೂ, ಅವರು ಮಾಡಿದ ಸಾಧನೆಗಳನ್ನೂ ಅರಿತು ಗುರುತಿಸುವವರು ವಿರಳ. ಎನ್ನುವ ಸಂಸ್ಕೃತ ಲೋಕೋಕ್ತಿಯಂತೆ ಜನತೆಗೆ ಶ್ರೀ ಶ್ರೀಗಳ ಪುರುಷೋತ್ತಮ ವ್ಯಕ್ತಿತ್ವವನ್ನೂ, ಶಿಷ್ಯ ಸಮೂಹದ ಮೇಲೆ ಅವರಿಗಿರುವ ವಾತ್ಸಲ್ಯ-ಪ್ರೀತಿಯನ್ನೂ, ಜನಕ್ಕಾಗಿ, ದೇಶಕ್ಕಾಗಿ, ಅವರು ಮಾಡುತ್ತಿರುವ ಚಿಂತನೆಗಳನ್ನೂ, ಕಾರ್ಯಕ್ರಮಗಳನ್ನೂ ಲೋಕಕ್ಕೆ ಶ್ರುತಪಡಿಸಿ, ದಾಖಲಿಸುವುದೇ ಈ ಸಂಪುಟದ ಉದ್ದೇಶ. ಶ್ರೀ ಶ್ರೀಗಳಿಂದಲೇ ರೂಪಿತವಾದ, ಶ್ರೀಮಠದ ಅಂಗ ಸಂಸ್ಥೆ ಶ್ರೀ ಭಗವತ್ಪಾದ ಪ್ರಕಾಶನ ಸಂಸ್ಥೆಯು ಇಂಥ ಒಂದು ಸಂಪುಟವನ್ನು ರಚಿಸಿ ಅರ್ಪಿಸಿ ದಶಮಾನೋತ್ಸವ ಸಂದರ್ಭಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸಲು ಯೋಚಿಸಿತು. ಶ್ರೀಭಗವತ್ಪಾದ ಪ್ರಕಾಶನದ ಕಾರ್ಯದರ್ಶಿಗಳಾದ ಶ್ರೀ ಪ್ರೊ.ಪಿ.ಐ. ಹೆಗಡೆ ಅವರು ಈ ಸಂಪುಟವನ್ನು ಸಿದ್ಧಪಡಿಸುವ ಕಾರ್ಯವನ್ನು ಒಪ್ಪಿಸಿದರು. ನಾಡಿನ ಅನೇಕ-ವಿದ್ವಾಂಸರನ್ನು ಸಂಪರ್ಕಿಸಿ ಅವರಿಂದ ಲೇಖನಗಳನ್ನು ಪಡೆದು ಮುದ್ರಿಸಿ ಸಿದ್ಧವಾದ ಈ ಸಂಪುಟ ಓದುಗರ ಕೈಯಲ್ಲಿ ಇದೆ.

ಕಿರಿ ವಯಸ್ಸಿನಲ್ಲೇ ಹಿರಿಯ ಸಾಧನೆಗಳನ್ನು ತೋರಿದ ಶ್ರೀ ಶ್ರೀಗಳ ವ್ಯಕ್ತಿತ್ವ ಉನ್ನತವಾದದ್ದು. ಸರ್ವಸ್ವವನ್ನೂ ತ್ಯಾಗಮಾಡಿ, ಸನ್ಯಾಸಾಶ್ರಮವನ್ನು ಸ್ವೀಕರಿಸಿ ತಮ್ಮೆಲ್ಲ ಚಿಂತನೆ, ಸಾಧನೆ, ಕಾರ್ಯಕೌಶಲ್ಯಗಳನ್ನು ನಾಡಿಗಾಗಿ ತಮ್ಮ ಶಿಷ್ಯಕೋಟಿಗಾಗಿ ಧಾರೆ ಎರೆಯುತ್ತಿದ್ದಾರೆ. ವಾಗ್ಮಿತೆ, ವಿದ್ವತ್ತು, ಉತ್ಸಾಹ, ಪ್ರಜಾಕಾರುಣ್ಯ, ದೂರ ದೃಷ್ಟಿ, ಸಕಲ ಭೂತಹಿತ ಚಿಂತನೆ, ಪರಿಸರ ಪ್ರೀತಿ, ರಾಷ್ಟ್ರಭಕ್ತಿ, ಧರ್ಮನಿಷ್ಠೆ, ಮುಂತಾದ ಸದ್ಗುಣಗಳ ಗಣಿಯಾಗಿದ್ದಾರೆ. ಲೋಕ ಸಂಗ್ರಹವನ್ನು ನಿರ್ಲಿಪ್ತ, ನಿಷ್ಕಾಮವಾಗಿ ಮಾಡುತ್ತ ತಪೋನಿಷ್ಠರಾಗಿದ್ದಾರೆ. ಕೇವಲ ಹತ್ತು ವರ್ಷಗಳಲ್ಲೆ ತಮ್ಮ ವ್ಯಕ್ತಿತ್ವದಿಂದ

ರಾಷ್ಟ್ರಾದ್ಯಂತ ಜನತೆಯ ದೃಷ್ಟಿಯನ್ನು ತಮ್ಮತ್ತ ಸೆಳೆದ ಶ್ರೀ ಶ್ರೀಗಳು ಭವಿಷ್ಯದಲ್ಲಿ ಲೋಕಕ್ಕಾಗಿ ಇನ್ನೂ ಅನೇಕ ಕಾರ್ಯ ಯೋಜನೆಗಳನ್ನು ತಮ್ಮ ಮನೋಭೂಮಿಕೆಯಲ್ಲಿ ಚಿಂತನಾ ಶಿಲ್ಪವಾಗಿ ರಚಿಸಿಕೊಳ್ಳುತ್ತಿದ್ದಾರೆ. ಇಂಥ ಶ್ರೀ ಶ್ರೀಗಳ ಹತ್ತು ಹರ್ಷದ ಎಲ್ಲ ಸಾಧನೆಗಳನ್ನೂ ಈ ಕಿರು ಪುಸ್ತಕದಲ್ಲಿ ದಾಖಲಿಸಲು ಸಾಧ್ಯವಿಲ್ಲ. ಆದ್ದರಿಂದ ಸಾಮಾನ್ಯ ಪಕ್ಷಿನೋಟದಂತೆ ಸಾಧ್ಯವಾದಷ್ಟು ವಿಷಯಗಳನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿದೆ.

ಲೇಖನಗಳನ್ನು ನೀಡಿದ ಎಲ್ಲಾ ವಿದ್ವಾಂಸರಿಗೂ, ಸಕಲವಿಧದಲ್ಲೂ ಬೆಂಬಲಿಗರಾಗಿ ನಿಂತ ಶ್ರೀ ಭಗವತ್ಪಾದ ಪ್ರಕಾಶನದ ಕಾರ್ಯದರ್ಶಿಗಳಾದ ಪ್ರೊ. ಪಿ.ಐ. ಹೆಗಡೆಯವರಿಗೂ, ಡಾ।। ಜಿ.ಎಂ. ಹೆಗಡೆಯವರಿಗೂ, ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ''ವಾಗರ್ಥ''ದವರಿಗೂ ಕೃತಜ್ಞತಾ ವಂದನೆಗಳು.

ಶಿಷ್ಯರ ಸತ್ಕಾರ್ಯಗಳಿಗೆ ಸದಾ ಆಶೀರ್ವಾದವನ್ನೂ, ಅನುಗ್ರಹವನ್ನೂ, ಪ್ರೇರಣೆಯನ್ನೂ ನೀಡುವ ಶ್ರೀ ಶ್ರೀಗಳ ಚರಣಕಮಲಗಳಲ್ಲಿ ಭಕ್ತಿಪೂರ್ವಕ ನಮನಗಳು.

- ರಾಮಚಂದ್ರ ಶರ್ಮಾ ತ್ಯಾಗಲಿ

ಅನುಕ್ರಮಣಿಕಾ

ಪೂಜ್ಯ ಶ್ರೀ ಶ್ರೀಗಳವರ ವೈದಿಕ ವಿದ್ಯಾಭಿಮಾನ
-ವಿದ್ವಾನ್ ಎನ್. ರಂಗನಾಥ ಶರ್ಮಾ 1

ಪೀಠಾರೋಹಣದ ಹಿಂದೆ
-ಜಿ.ಎಸ್. ಹೆಗಡೆ ಅಜ್ಜಿಬಳ್ 11

ಅಭಯ ಪ್ರದಾನ - *ಶ್ರೀ ಶ್ರೀಗಳ ಭಾಷಣ* 17

ಹತ್ತು ವರ್ಷಗಳ ಸಂನ್ಯಾಸ ಪೀಠಾಧಿಪತಿತ್ವ ಕುರಿತು
ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳೊಡನೆ ಸಂದರ್ಶನ
- ಡಾ. ಜಿ.ಎನ್. ಭಟ್ಟ 22

ಗಾಯತ್ರೀ ಜಪಯಜ್ಞ ಹಾಗೂ ಸಂವಿಧಾನದಲ್ಲಿ ಆಧ್ಯಾತ್ಮಿಕತೆ
-ವಿದ್ವಾನ್ ರಾಮಚಂದ್ರ ಶರ್ಮಾ ತ್ಯಾಗಲಿ 33

ಸಹೃದಯ ಸರಸ್ವತಿ
-ಶತಾವಧಾನಿ ಡಾ|| ಆರ್. ಗಣೇಶ್ 37

ಯುವಯತಿ - ಅಲೆ ಅಲೆ ಸರೋವರ
-ಡಾ. ಶ್ರೀರಾಮಭಟ್ಟ 47

ಸ್ವರ್ಣವಲ್ಲಿಯ ಶಾಸ್ತ್ರಚಿಂತನ ಗೋಷ್ಠಿ
-ಹಿತ್ಲಳ್ಳಿ ಸೂರ್ಯನಾರಾಯಣ ನಾಗೇಂದ್ರಭಟ್ಟ, ಮೈಸೂರು. 52

ಪರಿಸರ ಸಂರಕ್ಷಣೆ : ಶ್ರೀ ಸ್ವರ್ಣವಲ್ಲಿ ಶ್ರೀಗಳ ದೃಷ್ಟಿ ಮತ್ತು ಹೆಜ್ಜೆ
-ಅನಂತ ಹೆಗಡೆ ಆಶೀಸರ 94

ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಆಶ್ರಯದಲ್ಲಿ ಇತಿಹಾಸ ಸಮ್ಮೇಳನ
-ಡಾ|| ಎ.ಕೆ. ಶಾಸ್ತ್ರಿ 107

ಶ್ರೀಸ್ವಾಮಿಗಳು ಮತ್ತು ಸಂಸ್ಕೃತ ಸಂಭಾಷಣ ಆಂದೋಲನ
-ಸತ್ಯನಾರಾಯಣ ಭಟ್ಟ 113

ಯೋಗ ಸಂಗಮ
-ಪ್ರೊ. ಕೆ.ವಿ. ಭಟ್ 120

ಸೋಂದಾದ ಐತಿಹಾಸಿಕ ಶಿಲ್ಪಕಲೆಗಳ ರಕ್ಷಣೆಯಲ್ಲಿ ಶ್ರೀ ಶ್ರೀಗಳ ನೇತೃತ್ವ
-ಶ್ರೀ ಪರಮೇಶ್ವರ ವಿ. ಹೆಗಡೆ 124

ಶ್ರೀ ರಾಜರಾಜೇಶ್ವರೀ ವಿದ್ಯಾಸಂಸ್ಥೆ ಹಾಗೂ ಸಂಸ್ಕೃತ ಮಹಾವಿದ್ಯಾಲಯ
ನಡೆದು ಬಂದ ದಾರಿಯ ಒಂದು ಸಿಂಹಾವಲೋಕನ
-ವಿದ್ವಾನ್ ಭಾಲಚಂದ್ರ ಶಾಸ್ತ್ರಿಗಳು 128

ವೇದ ಪಾರಾಯಣ ಮತ್ತು ವೇದ ಸಂಗಮ
-ವಿದ್ವಾನ್ ಎಂ. ಸುಬ್ರಹ್ಮಣ್ಯ ಭಟ್, ಬೀರೂರು 132

ಕೋಟಿ ಕುಂಕುಮಾರ್ಚನೆ - ರಾಷ್ಟ್ರ ರಕ್ಷಣೆಗೆ ಶ್ರೀಗಳವರ ಕಾಣಿಕೆ
-ಡಾ|| ಪಿ. ಶಂಕರರಾವ್ 144

ಕೋಟಿ ತುಳಸೀ ಅರ್ಚನೆ
-ಗಣೇಶ ಭಟ್ಟ ಕೊಪ್ಪ 150

ಶ್ರೀ ಶಂಕರಾಚಾರ್ಯರನ್ನು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ
-ಡಾ. ಜಿ.ಎಂ. ಹೆಗಡೆ 157

ಶ್ರೀ ಸ್ವರ್ಣವಲ್ಲಿ ಮಠದಿಂದ ಸಾಹಿತ್ಯಕ ಕೊಡುಗೆ : ಒಂದು ವಿಹಂಗಮ ನೋಟ
ಲೇ: ''ನಾ.ಸು.'' ಭರತನ ಹಳ್ಳಿ 161

ಜೀವನ ಶಿಕ್ಷಣ ಅಧ್ಯಯನ ಶಿಬಿರ
ಲೇಖಕ- ಶ್ರೀ ಗಣೇಶ ಭಟ್ಟ, ಕೊಪ್ಪ 175

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಗಂಗಾಧರೇಂದ್ರ
ಸರಸ್ವತೀ ಸ್ವಾಮಿಯವರು ಹಾಗೂ ವೇದಗೋಷ್ಠಿಗಳು
-ಸಾಂಬದೀಕ್ಷಿತ ಗೋಕರ್ಣ 181

ಸನಾತನ ಧರ್ಮದ ದಾರಿದೀವಿಗೆ : ಶ್ರೀ ಸ್ವರ್ಣವಲ್ಲೀ ಶ್ರೀ ಶ್ರೀಗಳವರು
-ಆರ್.ಎನ್. ಹೆಗಡೆ, ಭಂಡೀಮನೆ ಮುಂಬಯಿ 185

''ವ್ಯಸನ ರಹಿತ ಸಮಾಜ ನಿರ್ಮಾಣ''
-ಎಂ.ಎನ್. ಹೆಗಡೆ ಹಳವಳ್ಳಿ 188

ಧರ್ಮಸಾಮ್ರಾಜ್ಯದ ನೇತಾರರು ಸಮಾಜ ಸಂಘಟನಾ ಚತುರರು ಶಿಸ್ತಿನ ಮೂರ್ತಿ
ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನಂ
-ಡಾ. ಎನ್.ಜಿ. ಭಟ್ಟ ಚಿತ್ರಿಗಿ, ಮುಂಬೈ 194

ದಶಮಾನದ ಮಹತ್ವದ (ಕೆಲವು) ಘಟನೆಗಳು
-ಪ್ರೊ. ಪಿ.ಐ. ಹೆಗಡೆ 199

ಪೂಜ್ಯ ಶ್ರೀ ಶ್ರೀಗಳವರ ವೈದಿಕ ವಿದ್ಯಾಭಿಮಾನ

-ವಿದ್ವಾನ್ ಎನ್. ರಂಗನಾಥ ಶರ್ಮಾ

ಶ್ರೀಮದ್ಗಂಗಾಧರೇಂದ್ರಂ ಯತಿಪತಿಮಹಿತಂ ಸ್ವರ್ಣವಲ್ಲೀಮಠಸ್ಥಂ
ವೈದುಷ್ಯಂ ಧರ್ಮಮಾರ್ಗಂ ಶ್ರುತಿತತಿವಿಹಿತಂ ಶ್ರದ್ಧಯೋದ್ಧರ್ತುಮುತ್ಕಮ್ ।
ವಿದ್ವದ್ವರ್ಯಂ ಗಭೀರಾಸ್ವಪಿ ವಿವಿಧಕಲಾಸ್ವದ್ವಿತೀಯಾತ್ಮವಿದ್ಯಾ-
ಪ್ರಜ್ಞಾವೈಶದ್ಯಹೃದ್ಯಂ ಭಸಿತಸಿತತನುಂ ಭಕ್ತಿಪೂರ್ವಂ ನಮಾಮಃ ॥

ಪುಣ್ಯಭೂಮಿಯಾದ ಭಾರತದೇಶದಲ್ಲಿ ಲೋಕೋತ್ತರ ಗ್ರಂಥಗಳಾದ ವೇದಗಳೂ ವೇದೋಕ್ತಧರ್ಮಗಳೂ ನೆಲೆನಿಂತು ಅನಾದಿಕಾಲದಿಂದಲೂ ಮಾನವನಿಗೆ ಶ್ರೇಯೋಮಾರ್ಗವನ್ನು ತೋರಿಸುತ್ತಾ ಬಂದಿವೆ. ಸಂಸ್ಕಾರ-ಬಲದಿಂದ ಪ್ರಕೃತಿಸಹಜವಾದ ವಿಷಯಭೋಗಾಭಿಲಾಷೆಯೂ ಮಾನವಜಾತಿಗೆ ಗಂಟು-ಬಿದ್ದಿರುತ್ತದೆ. ಆದ್ದರಿಂದ ಅದನ್ನು ಅಲಕ್ಷಿಸದೆ ಪ್ರೇಯೋಮಾರ್ಗವನ್ನು ವೇದವು ಬೋಧಿಸಿದೆ. ಪ್ರೇಯಸ್ಸಂಪಾದನೆಗೆ ಅರ್ಥಕಾಮಗಳು ಮುಖ್ಯವಾದವು. ಅವೂ ಪುರುಷಾರ್ಥಗಳೇ. ಆದರೆ ಅವನ್ನು ಸಂಪಾದಿಸಿ ಸುಖಿಸುವುದು, ಧರ್ಮ ಮಾರ್ಗದಿಂದಲೇ ಆಗತಕ್ಕದ್ದೆಂದು ವೇದವು ವಿಧಿಸಿದೆ. 'ಧರ್ಮಾದರ್ಥಶ್ಚ ಕಾಮಶ್ಚ' ಎಂಬುದೇ ನಮ್ಮ ಧರ್ಮಗ್ರಂಥಗಳ ನಿಲುವು. ಈ ನಿಲುವು ಪ್ರವೃತ್ತಿಮಾರ್ಗಕ್ಕೆ ಸೇರಿದ್ದು. ಪ್ರವೃತ್ತಿನಿವೃತ್ತಿಮಾರ್ಗಗಳೆರಡನ್ನು ಬೋಧಿಸುವುದರಿಂದ ವೇದೋಕ್ತ-ಧರ್ಮಕ್ಕೆ ಪೂರ್ಣತೆ ಲಭಿಸಿದೆ. ಆದ್ದರಿಂದಲೇ ಮನುಮಹರ್ಷಿಯು

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ॥

ಎಂದು ಧೀರವಾಣಿಯಿಂದ ಉದ್ಗರಿಸಿದ್ದಾನೆ.

ಕಾಲಮಹಿಮೆಯಿಂದ ಈ ಧರ್ಮಕ್ಕೆ ಬಾಧೆಯುಂಟಾದಾಗ ಶ್ರೀರಾಮ, ಶ್ರೀಕೃಷ್ಣ -ಮುಂತಾದ ಮಹಾತ್ಮರು ಅವತರಿಸಿ, ಧರ್ಮವನ್ನು ಸುಸ್ಥಿತಿಗೆ ತಂದಿರಿಸುತ್ತಾ

ಬಂದಿದ್ದಾರೆ. ಆ ಕಾಲದ ಧರ್ಮವಿರೋಧಿಗಳೆಂದರೆ ಬಲಾಢ್ಯರಾದ ರಾಜರು. ಪ್ರಜೆಗಳು ತಪ್ಪುದಾರಿಗೆ ಇಳಿದಾಗ ಅವರನ್ನು ದಂಡಿಸಬೇಕಾದವನು ರಾಜ. ರಾಜನೇ ತಪ್ಪುದಾರಿಗೆ ಇಳಿದಾಗ ಧರ್ಮವನ್ನುಳಿಸತಕ್ಕವರು ಯಾರು?

ಇದೆಲ್ಲ ಯುಗಾಂತರದ ವಿಷಯವಾಯಿತು. ಆಗ ರಾಜ್ಯದಲ್ಲಿ ಧರ್ಮರಕ್ಷಣೆಯು ಕ್ಷತ್ರಿಯರ ಹೊಣೆಯಾಗಿತ್ತು. 'ನಂದಾಂತಂ ಕ್ಷತ್ರಿಯಕುಲಂ' ಎಂಬ ವಚನದಂತೆ ಈ ಕಲಿಯುಗದಲ್ಲಿ ಕ್ಷತ್ರಿಯ ಕುಲವೇ ಅಳಿಸಿಹೋಯಿತು. ಬ್ರಾಹ್ಮಣರ ಮಾರ್ಗದರ್ಶನ ದಲ್ಲಿ ಕ್ಷತ್ರಿಯರು ಧರ್ಮವನ್ನು ರಕ್ಷಿಸುತ್ತಿದ್ದರು. ಕ್ಷತ್ರಿಯರು ಅಳಿದಾಗ ಮಾರ್ಗ-ದರ್ಶಕರಾಗಿದ್ದ ಬ್ರಾಹ್ಮಣರೂ ಕ್ರಮವಾಗಿ ತಪ್ಪುದಾರಿಗೆ ಇಳಿಯತೊಡಗಿದರು. ಅವರದು ಬುದ್ಧಿಬಲ, ಬಾಹುಬಲವಲ್ಲ. ಅಜ್ಞಾನದಿಂದಲೋ ಅಥವಾ ಗುಂಪುಕಟ್ಟಿ ಸ್ವಾರ್ಥವನ್ನು ಸಾಧಿಸುವುದಕ್ಕಾಗಿಯೇ ತಮಗೆ ತೋರಿದಂತೆ ಗ್ರಂಥಗಳನ್ನು ರಚಿಸಿ ಪ್ರಚಾರಮಾಡತೊಡಗಿದರು. ಹೊಸಮತಗಳು ಬಂದವು. ಸಂಪ್ರದಾಯಸಿದ್ಧವಾದ ವೇದಾರ್ಥವೂ ಧರ್ಮಸ್ವರೂಪವೂ ಮಾಸಿದವು. ಈ ಸಮಯದಲ್ಲಿ ಶ್ರೀ ಶಂಕರಭಗವತ್ಪಾದರು ಉದಿಸಿದರು. ಅನಾದಿಯಾಗಿ ಬಂದಿದ್ದ ಸಂಪ್ರದಾಯ ಸಿದ್ಧವಾದ ವೈದಿಕ ಧರ್ಮವನ್ನು ಉಳಿಸಿಬೆಳೆಸಲು ಸರ್ವಪ್ರಯತ್ನಗಳನ್ನು ಮಾಡಿದರು.

ಆಚಾರ್ಯರು ಪ್ರಸ್ಥಾನತ್ರಯಕ್ಕೆ ವಿಸ್ತಾರವಾದ ಭಾಷ್ಯಗಳನ್ನು ಪ್ರಕರಣಗ್ರಂಥಗಳನ್ನು ರಚಿಸಿ, ಭಾರತದ ಆದ್ಯಂತ ಸಂಚರಿಸಿ, ಅವೈದಿಕ ಮತಗಳನ್ನು ಖಂಡಿಸಿ ವೈದಿಕ ಸಿದ್ಧಾಂತದ ವಿಜಯಪತಾಕೆಯನ್ನು ಎಲ್ಲೆಲ್ಲಿಯೂ ಹಾರಿಸಿದರು. ಅವರ ತಪಃಶಕ್ತಿ, ಬುದ್ಧಿಶಕ್ತಿ, ಕರ್ತೃತ್ವ, ದೂರದರ್ಶಿತ್ವಗಳು ಅಸಾಧಾರಣವಾದವು; ಲೋಕೋತ್ತರ ವಾದವು. ಈ ವೈದಿಕ ಧರ್ಮವು ಶಾಶ್ವತವಾಗಿ ಉಳಿಯಬೇಕಾದರೆ, ಅವಿರತವಾಗಿ ಇದನ್ನು ಪಾಲಿಸುತ್ತ ಪ್ರಚಾರಮಾಡತಕ್ಕವರು ಬೇಕು. ಈ ಮಹಾಕಾರ್ಯವು ಗೃಹಸ್ಥರಿಂದ ಆಗತಕ್ಕದ್ದಲ್ಲ. ವಿರಕ್ತರಾದ ಸಂನ್ಯಾಸಿಗಳ ಒಂದು ಪರಂಪರೆಯೇ ಸ್ಥಾಪಿತವಾಗಬೇಕು. ಈ ಸಂನ್ಯಾಸಿಗಳು ಪರಿವ್ರಾಜಕರಾಗಿ ಅಲೆಯುತ್ತಿದ್ದರೆ, ಪರಂಪರೆಯಾಗಿ ಇದು ಮುಂದುವರಿಯುವುದಿಲ್ಲ'' ಇತ್ಯಾದಿಯಾಗಿ ಆಲೋಚಿಸಿ ಆ ಧೀಮಂತರು ಭರತಖಂಡದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ತಮ್ಮ ಶಿಷ್ಯರ ಮೂಲಕ ಈ ದೇಶದ ವಿಭಿನ್ನ ಪ್ರದೇಶಗಳಲ್ಲಿ ಹಲವಾರು ಅದ್ವೈತಮಠಗಳನ್ನು ಸ್ಥಾಪಿಸುವಂತೆ ಪ್ರೇರಿಸಿದರು. ಈ ಘನೋದ್ದೇಶದಿಂದ ಈ ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ ಹಲವಾರು ಮಠಗಳು ತಲೆಯೆತ್ತಿದವು. ವೈದಿಕ ಧರ್ಮರಕ್ಷಣೆಗಾಗಿ ಒಂದು ಕ್ರಾಂತಿಯೇ ನಡೆದುಹೋಯಿತು. ಈ ಎಲ್ಲ ಅದ್ವೈತ ಮಠಗಳಿಗೂ ಮೂಲಕಾರಣರಾದವರು ಶ್ರೀ ಶಂಕರಾಚಾರ್ಯರು. ಇಂದಿಗೆ ಸುಮಾರು 1300

ವರ್ಷಗಳ ಹಿಂದೆ ನಡೆದ ಒಂದು ಮಹಾಕ್ರಾಂತಿಯಿದು. ಹೀಗೆ ಧರ್ಮರಕ್ಷಣೆಗಾಗಿ ತನ್ನನ್ನು ಮೀಸಲಾಗಿಟ್ಟುಕೊಂಡು ಪರಂಪರೆಯಿಂದ ಬಂದ ಧರ್ಮಪೀಠಗಳಲ್ಲಿ ಈ ಸೋಂದಾ ಸ್ವರ್ಣವಲ್ಲೀ ಮಠವು ವಿಖ್ಯಾತವಾಗಿದೆ.

ಶ್ರೀಮಠದ ಪ್ರಥಮಾಚಾರ್ಯರು ಶ್ರೀ ವಿಶ್ವವಂದ್ಯಸರಸ್ವತಿಗಳೆಂದು ತಿಳಿದು-ಬರುತ್ತದೆ. ಈ ಗುರುಪರಂಪರೆಯಿಂದ ಬಂದ ಶ್ರೀ ಚಂದ್ರಶೇಖರ ಸರಸ್ವತೀ ಸ್ವಾಮಿಗಳವರಿಗೆ ಸೋದೆ ಸಂಸ್ಥಾನದ ರಾಜನಾದ ಅರಸಪ್ಪನಾಯಕನು ಈಗಿನ ಸ್ವರ್ಣವಲ್ಲೀ ಮಠವನ್ನು ಕಟ್ಟಿಸಿ ಅರ್ಪಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಈ ಗುರುಪರಂಪರೆಯಲ್ಲಿ ಬಂದ ಯತೀಶ್ವರರೆಲ್ಲರೂ ಮಹಾತಪಸ್ವಿಗಳೂ ವಿದ್ವಾಂಸರೂ ಧರ್ಮರಕ್ಷಣೆಯಲ್ಲಿ ನಿರತರೂ ಆಗಿದ್ದಾರೆ. ಅವರಲ್ಲಿ ಶ್ರೀ ವಿಶ್ವನಾಥ ಸರಸ್ವತಿಗಳ ಕರಕಮಲ ಸಂಜಾತರಾದ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ''ಸ್ವಾರಾಜ್ಯಸಿದ್ಧಿ'' ಎಂಬ ಒಂದು ಪ್ರೌಢಗ್ರಂಥವನ್ನು ರಚಿಸಿದರೆಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಅವರು ಕಾಶೀಕ್ಷೇತ್ರದಲ್ಲಿ ಶ್ರೀ ಸ್ವಪ್ರಕಾಶಯತಿಗಳೆಂಬ ವಿದ್ವಾಂಸ-ರೊಡನೆ ವಾದಮಾಡಿ ಅವರನ್ನು ಪರಾಜಯಗೊಳಿಸಿದ್ದರಂತೆ. ಈ ಪರಂಪರೆ-ಯಲ್ಲಿಯೇ ಶ್ರೀಗುರು ಪೀಠದಲ್ಲಿ ವಿರಾಜಮಾನರಾದವರು ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳು. ಇವರು ದೊಡ್ಡವಿದ್ವಾಂಸರೂ ತಪೋನಿಷ್ಠರೂ ಆಗಿ ವಿಖ್ಯಾತರಾದ ಮಹಾಮಹಿಮರು. ಈ ಮಹಾಸ್ವಾಮಿಗಳ ಕರಕಮಲ ಸಂಜಾತರಾಗಿ ಈಗ ಶ್ರೀ ಸ್ವರ್ಣವಲ್ಲೀ ಜಗದ್ಗುರು ಪೀಠಾಧಿಷ್ಠಿತರಾಗಿರತಕ್ಕವರೇ ನಮ್ಮೆಲ್ಲರ ಗೌರವಕ್ಕೆ ಪಾತ್ರರಾದ ಪರಮಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು.

ಶ್ರೀ ಶ್ರೀಗಳವರು ಬಾಲ್ಯದಲ್ಲಿಯೇ ಕಾಲೋಚಿತವಾದ ವೇದಾಧ್ಯಯನವನ್ನು ಮಾಡಿ ಆಚಾರನಿಷ್ಠರಾಗಿದ್ದರು. ಸಂಸ್ಕೃತಪಾಠಶಾಲೆಯಲ್ಲಿ ಕಾವ್ಯ-ವ್ಯಾಕರಣಾದಿ-ಗಳನ್ನು ಅಭ್ಯಾಸಮಾಡಿ ಪ್ರೌಢವಿದ್ಯಾಭ್ಯಾಸಕ್ಕಾಗಿ ಮೈಸೂರು ನಗರಕ್ಕೆ ಹೋಗಿ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯನ್ನು ಸೇರಿದರು. ಅವರ ಚಿತ್ತವೃತ್ತಿಯು ವೇದಾಂತದ ಕಡೆಗೆ ಒಲಿದದ್ದರಿಂದ ಆ ಮಹಾಪಾಠಶಾಲೆಯಲ್ಲಿ ಅದ್ವೈತವೇದಾಂತ ಶಾಸ್ತ್ರವನ್ನು ಆರಿಸಿಕೊಂಡರು. ವಿಖ್ಯಾತವಿದ್ವಾಂಸರಾಗಿದ್ದ ವಿದ್ವಾನ್ ಕೆ. ರಾಮಚಂದ್ರ ಸೋಮಯಾಜಿಗಳು ವೇದಾಂತದ ಪ್ರಾಧ್ಯಾಪಕ-ರಾಗಿದ್ದರು. ಅವರು ನಿವೃತ್ತರಾದ ಮೇಲೆ ಅವರ ಸ್ಥಾನವನ್ನೇರಿದ ವೇ.ಬ್ರ. ವಿದ್ವಾನ್ ನಾರಾಯಣಭಟ್ಟರ ಸಾಂನಿಧ್ಯದಲ್ಲಿ ವೇದಾಂತದ ಪ್ರೌಢಾಧ್ಯಯನವು ಸಾಗಿತು. ವೇ.ಬ್ರ. ನಾರಾಯಣಭಟ್ಟರು ತರ್ಕವೇದಾಂತಗಳೆರಡರಲ್ಲೂ ಅದ್ವಿತೀಯ

ಪಾಂಡಿತ್ಯವನ್ನು ಗಳಿಸಿದವರು. ಅವರಿಂದ ವೇದಾಂತದಲ್ಲಿ ಉತ್ತಮ ವೈದುಷ್ಯವನ್ನು ಗಳಿಸಿ ವಿದ್ವದುತ್ತಮಪರೀಕ್ಷೆಯಲ್ಲಿ ಪ್ರಥಮ ಕಕ್ಷ್ಯೆಯನ್ನಡರಿ ತೇರ್ಗಡೆಯಾದರಲ್ಲದೆ, ಆ ವರ್ಷದಲ್ಲಿ ''ಸರ್ವಪ್ರಾವೀಣ್ಯ''ವನ್ನು ಪಡೆದರು. ಶ್ರೀ ಶ್ರೀಗಳವರ ಪ್ರತಿಭಾಶಕ್ತಿಗೆ ಇದೊಂದು ನಿದರ್ಶನ.

ಎಲ್ಲ ಶಾಸ್ತ್ರಗಳ ಅಧ್ಯಯನಕ್ಕೂ ನ್ಯಾಯಶಾಸ್ತ್ರವು ತುಂಬ ಉಪಕಾರಿಯಾದದ್ದು. ಈ ರಹಸ್ಯವನ್ನರಿತಿದ್ದ ಶ್ರೀ ಶ್ರೀಗಳವರು ಮೈಸೂರಿನಲ್ಲಿ ವಿದ್ಯಾರ್ಥಿಯಾಗಿ-ದ್ದಾಗಲೇ, ನ್ಯಾಯಶಾಸ್ತ್ರದಲ್ಲಿ ವಿಶಿಷ್ಟಜ್ಞಾನವನ್ನು ಸಂಪಾದಿಸಬೇಕೆಂದು ಬಯಸಿದರು. ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಸಂಶೋಧಕರೂ ಸುಪ್ರಸಿದ್ಧ ನ್ಯಾಯವಿದ್ವಾಂಸರೂ ಆದ ವೇ.ಬ್ರ. ವಿದ್ವಾನ್ ಕೆ.ಎಸ್. ವರದಾಚಾರ್ಯರ ಬಳಿ ಖಾಸಗಿಯಾಗಿ ನ್ಯಾಯಶಾಸ್ತ್ರಾಧ್ಯಯನವನ್ನು ಕೈಗೊಂಡರು. ವೇ.ಬ್ರ. ಕೆ.ಎಸ್. ವರದಾಚಾರ್ಯರು ಅತ್ಯಂತ ಉದಾರಪ್ರವೃತ್ತಿಯವರೂ ವಿದ್ಯಾಪಕ್ಷಪಾತಿಗಳೂ ಆದ್ದರಿಂದ ಈ ಶಿಷ್ಯನ ಜ್ಞಾನಾರ್ಜನೆಯ ಕುತೂಹಲವನ್ನೇ ಗಮನಿಸಿ, ಆಸಕ್ತಿಯನ್ನು ತಳೆದು ನ್ಯಾಯಶಾಸ್ತ್ರವನ್ನಿವರಿಗೆ ಬೋಧಿಸಿದರು.

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀಸ್ವಾಮಿಗಳು ಶ್ರೀಮಠದಲ್ಲಿ ಸಂನ್ಯಾಸ ದೀಕ್ಷೆಯನ್ನವಲಂಬಿಸಿದ ಮೇಲೆಯೂ ಶ್ರೀ ಕೆ.ಎಸ್. ವರದಾಚಾರ್ಯರನ್ನು ತಮ್ಮ ಮಠಕ್ಕೆ ಕರೆಸಿಕೊಂಡು ತಮ್ಮ ಶಾಸ್ತ್ರಾಧ್ಯಯನವನ್ನು ಮುಂದುವರಿಸಿದರು. ಶ್ರೀ ಶ್ರೀಗಳವರ ವಿದ್ಯಾರ್ಜನೆಯ ಪರಮಾಸಕ್ತಿಗೂ ಶ್ರೀ ವರದಾಚಾರ್ಯರ ಶ್ರೇಷ್ಠವಾದ ವೈದುಷ್ಯ ಶಿಷ್ಯವಾತ್ಸಲ್ಯಗಳಿಗೂ ಇದೊಂದು ನಿದರ್ಶನವಾಗಿ ನಿಲ್ಲುತ್ತದೆ.

ವೇದಾಂತ, ತರ್ಕಶಾಸ್ತ್ರಗಳೆರಡು ವಶವಾದಾಗ ಸಾಂಖ್ಯ, ವ್ಯಾಕರಣಾದಿ ಶಾಸ್ತ್ರಗಳ ಅಧ್ಯಯನವು ಸುಗಮವಾಗುತ್ತದೆ. ಕ್ರಮವಾಗಿ ಶ್ರೀ ಶ್ರೀಗಳವರು ಇತರ ಶಾಸ್ತ್ರಗಳನ್ನೂ, ಅಧ್ಯಯನ ಮಾಡಿ ಅವುಗಳಲ್ಲಿ ಗಣನೀಯವಾದ ಪಾಂಡಿತ್ಯವನ್ನು ಗಳಿಸಿಕೊಂಡಿದ್ದಾರೆ. ಶ್ರೀಮಠದಲ್ಲಿ ಶ್ರೀಚಕ್ರಾರ್ಚನೆಯು ಪ್ರಧಾನವಾಗಿ ನಡೆಯುತ್ತಾ ಬಂದಿದೆ. ಶ್ರೀ ಶ್ರೀಗಳವರು ಶ್ರೀ ವಿದ್ಯಾರ್ಚನೆಯಲ್ಲಿ ಅಧಿಕವಾದ ಜ್ಞಾನವನ್ನು ಪಡೆಯಬೇಕೆಂದು, ವೇ.ಬ್ರ. ವಿದ್ವಾನ್ ಕೆ.ಪಿ. ಶಂಕರ ಶಾಸ್ತ್ರಿಗಳನ್ನು ಕರೆಸಿಕೊಂಡು ಅವರಿಂದ ಶ್ರೀ ವಿದ್ಯಾರಹಸ್ಯವನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ.

ಜ್ಞಾನಾರ್ಜನೆಯಲ್ಲಿ ಆಸಕ್ತಿಯು ಬೆಳೆಯಿತೆಂದರೆ ಅದು ವಿರಮಿಸುವ ಪ್ರಸಂಗವೇ ಬರುವುದಿಲ್ಲ. ಅದರಲ್ಲಿಯೂ ಬಹುಮಂದಿ ಶಿಷ್ಯರನ್ನೊಳಗೊಂಡು ಎಲ್ಲ ಜನತೆಯ ಗೌರವಕ್ಕೆ ಪಾತ್ರವಾದ ಶ್ರೀಗುರುಪೀಠದ ಅಧ್ಯಕ್ಷತೆಯು ಪ್ರಾಪ್ತವಾದಾಗ

ವಿದ್ಯಾಭಿಮಾನವು ಬಹುಮುಖವಾಗಿ ಹರಡಿ ವಿಸ್ತೃತವಾಗಿ ಬೆಳೆಯಲಾರಂಭಿಸುತ್ತದೆ. ಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳು ಈ ದಿಶೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಕೈಗೊಂಡರು. ಅಲ್ಲದೆ ಸಮಾಜದ ಎಲ್ಲ ವರ್ಗದವರ ಹಿತಕ್ಕಾಗಿ, ಅವರಲ್ಲಿ ಧರ್ಮನಿಷ್ಠೆಯನ್ನು ಬೆಳೆಸುವುದಕ್ಕಾಗಿ, ವೈದಿಕ ಸಂಸ್ಕೃತಿಯನ್ನು ಎಂದರೆ ಭಾರತೀಯ ಸಂಸ್ಕೃತಿಯನ್ನು ಉಳಿಸುವುದಕ್ಕಾಗಿ ಬೆಳೆಸುವುದಕ್ಕಾಗಿ ಮಾರ್ಗೋಪಾಯಗಳನ್ನು ಚಿಂತಿಸಿ, ನೂತನ ವೇದಿಕೆಗಳ ಮೂಲಕ ಆಚರಣೆಗೆ ತರುತ್ತಲೇ ಇದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾವಿಸಿದೆ.

1. ಶಾಸ್ತ್ರಾಧ್ಯಯನ ಗೋಷ್ಠೀ

ಶ್ರೀ ಸೋಂದಾಸ್ವರ್ಣವಲ್ಲೀ ಮಹಾಸಂಸ್ಥಾನವು ಪ್ರತಿವರ್ಷವೂ ಶ್ರೀಮಠದಲ್ಲಿ ಮೇಲ್ಕಂಡ ಗೋಷ್ಠಿಯನ್ನು ನಡೆಸುತ್ತಿದೆ. ವಿವಿಧ ಶಾಸ್ತ್ರಗಳಲ್ಲಿ ಖ್ಯಾತರಾದ ವಿದ್ವಾಂಸರನ್ನು ಆಹ್ವಾನಿಸಿ, ವಿಭಿನ್ನ ಶಾಸ್ತ್ರಗಳಲ್ಲಿ ಶಾಸ್ತ್ರೀಯ ಚಿಂತನಗಳನ್ನು ನಡೆಸಲಾಗುವುದು. ಸೌಕರ್ಯವನ್ನನುಸರಿಸಿ ಸುಮಾರು ಒಂದು ವಾರ ಪರ್ಯಂತ ಈ ಗೋಷ್ಠಿ ನಡೆಯುತ್ತದೆ. ವ್ಯಾಕರಣ, ತರ್ಕ, ಪೂರ್ವಮೀಮಾಂಸಾ, ಧರ್ಮಶಾಸ್ತ್ರ ಸಾಂಖ್ಯ, ಜ್ಯೌತಿಷ, ಅಲಂಕಾರ, ವೇದಾಂತ -ಇವು ವಿಚಾರಕ್ಕೊಳಗಾಗುವ ಶಾಸ್ತ್ರಗಳು. ಇವುಗಳಲ್ಲಿ (ಅದ್ವೈತ)ವೇದಾಂತಕ್ಕೆ ಅಧಿಕವಾದ ಪ್ರಾಧಾನ್ಯವು ಸಹಜವಾಗಿ ಸಲ್ಲುತ್ತದೆ.

ಇದು ವಾದಗೋಷ್ಠಿಯಲ್ಲ. ಅನ್ಯತ್ರ ನಡೆಯುವ ವಾದಗೋಷ್ಠಿಗಳು ವಾದದಲ್ಲಿಯೇ ಮುಕ್ತಾಯವಾಗುವುದರಿಂದಲೂ ಯಾವುದೇ ಒಂದು ವಿಚಾರವೂ ಉಚಿತರೀತಿಯಲ್ಲಿ ಚರ್ಚಿತವಾಗದಿರುವುದರಿಂದಲೂ ಶ್ರೀ ಶ್ರೀಗಳವರು ಒಂದು ನೂತನಮಾರ್ಗದಲ್ಲಿ ಶಾಸ್ತ್ರಾಧ್ಯಯನಗೋಷ್ಠಿಗಳನ್ನು ನಡೆಸುತ್ತಿದ್ದಾರೆ. ಗೊತ್ತಾದ ವಿಷಯದ ಮೇಲೆ ವಿದ್ವಾಂಸರು ಪ್ರೌಢಪ್ರಬಂಧಗಳನ್ನು ಬರೆದುತಂದು ಓದುತ್ತಾರೆ. ಅದರ ಮೇಲೆ ಚಿಂತನ ನಡೆಯುತ್ತದೆ. ಈ ಕ್ರಮದಲ್ಲಿಯೂ ವಾದವು ಬೆಳೆಯ-ಬಹುದು. ಅದು ವಸ್ತುನಿಷ್ಠವಾಗುವುದರಿಂದ ಎಲ್ಲ ವಿದ್ವಾಂಸರೂ ಸೇರಿ ಆ ವಿಷಯದಲ್ಲಿ 'ಇದಮಿತ್ಥಂ' ಎಂಬ ಒಂದು ನಿರ್ಣಯಕ್ಕೆ ಬರಲು ಸಾಧ್ಯವಾಗುತ್ತದೆ. ಇದು ವಿದ್ವಜ್ಜನರಿಗೂ ಸ್ವಬುದ್ಧಿ ಪರಿಶುದ್ಧಿಗೆ ಅತ್ಯಂತ ಉಪಯುಕ್ತವಾಗುತ್ತದೆ. ಅಲ್ಲದೆ ಈ ಕ್ರಮದಲ್ಲಿ ಪಾಂಡಿತ್ಯದ ಮೆರವಣಿಗೆಯಾಗಲಿ ಅನ್ಯರ ತೇಜೋವಧ ಪ್ರಸಂಗವಾಗಲಿ ಇರುವುದಿಲ್ಲ. ಪಂಡಿತಜನರಿಗೆ ಮತ್ತು ಜಿಜ್ಞಾಸುಗಳಿಗೆ ಅತ್ಯಂತ ಪ್ರಯೋಜನಕಾರಿಯಾದ ವಿಧಾನವಿದು.

ಈ ಗೋಷ್ಠಿಗೆ ಬರುವ ಎಲ್ಲ ವಿದ್ವಾಂಸರಿಗೂ ಪ್ರಶಂಸನೀಯವಾದ ರೀತಿಯಲ್ಲಿ ವಸತಿಭೋಜನಾದಿ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗುವುದು. ಅನಂತರ ಭಾಗವಹಿಸಿದ ವಿದ್ವಾಂಸರನ್ನು ಸಮುಚಿತವಾಗಿ ಗೌರವಿಸಿ ಸುವರ್ಣಮಂತ್ರಾಕ್ಷತೆ-ಯನ್ನಿತ್ತು ಕಳಿಸಿಕೊಡಲಾಗುವುದು. ಈ ಗೋಷ್ಠೀವಿಧಾನವು ವಿದ್ವಜ್ಜನಪ್ರಿಯ-ವಾದ್ದರಿಂದ ಪ್ರತಿವರ್ಷವೂ ವರ್ಧಿಸುತ್ತಲೇ ಇದೆ.

2. ಸಂಸ್ಕೃತ ಮಹಾವಿದ್ಯಾಲಯ

ಶ್ರೀಮಠದಲ್ಲಿ ಬಹಳ ಹಿಂದಿನಿಂದಲೂ ಒಂದು ಪಾಠಶಾಲೆ ಇದ್ದು ವೇದ ಮತ್ತು ಸಂಸ್ಕೃತವನ್ನು ಕಲಿಸಲಾಗುತ್ತಿತ್ತು. ಅದು ಪ್ರಾಥಮಿಕ ಶಿಕ್ಷಣ. ಈಗ ಶ್ರೀ ಶ್ರೀಗಳವರ ನೇತೃತ್ವದಲ್ಲಿ ಅದು ದೊಡ್ಡದಾಗಿ ಬೆಳೆಯುತ್ತ ಶ್ರೀ ರಾಜರಾಜೇಶ್ವರೀ ಮಹಾವಿದ್ಯಾಲಯವಾಗಿದೆ. ಸರ್ಕಾರದಿಂದ ಮಾನಿತವಾಗಿದೆ. ಅದ್ವೈತವೇದಾಂತ, ಪೂರ್ವಮೀಮಾಂಸಾ, ಜ್ಯೋತಿಷ್ಯ ಶಾಸ್ತ್ರಗಳಲ್ಲಿ ವಿದ್ವದುತ್ತಮ ಪರೀಕ್ಷೆಯವರೆಗೆ ಶಿಕ್ಷಣ ಉಂಟು. ನುರಿತ ಅಧ್ಯಾಪಕರಿದ್ದಾರೆ. ಕಾವ್ಯ ವ್ಯಾಕರಣಗಳಲ್ಲಿ ಸಾಹಿತ್ಯ ಪರೀಕ್ಷೆಯವರೆಗೆ ತರಗತಿಗಳಿವೆ. ಕೃಷ್ಣಯಜುರ್ವೇದವನ್ನು ವಿದ್ವದುತ್ತಮದವರೆಗೆ ಕಲಿಸಲಾಗುತ್ತದೆ.

ವಿದ್ಯಾರ್ಥಿಗಳಿಗೆ ಮಠದಲ್ಲಿಯೇ ವಸತಿಭೋಜನಗಳ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಿಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಪಾರಿತೋಷಿಕ ಗಳನ್ನಿತ್ತು ಪ್ರೋತ್ಸಾಹಿಸುವುದಕ್ಕಾಗಿ ದತ್ತಿನಿಧಿಯನ್ನು ಸ್ಥಾಪಿಸಿದ್ದಾರೆ. ಇದೆಲ್ಲವೂ ಸರ್ವತೋಮುಖವಾಗಿ ಬೆಳೆಯುತ್ತಿದೆ.

3. ಶ್ರೀಮಠದ ಆಶ್ರಯದಲ್ಲಿ 'ಸ್ವರ್ಣವಲ್ಲೀ ಪ್ರಭಾ' ಎಂಬ ಮಾಸಿಕಪತ್ರಿಕೆ-ಯನ್ನು ಪ್ರಕಟಿಸಲಾಗುತ್ತಿದೆ. ಶ್ರೀ ಶ್ರೀಗಳವರೇ ಈ ಪತ್ರಿಕೆಯ ಸಂಸ್ಥಾಪಕರೂ ಮಹಾಪೋಷಕರೂ ಪ್ರೇರಕರೂ ಆಗಿದ್ದಾರೆ. ಈ ಪತ್ರಿಕೆಯಲ್ಲಿ ಹಲವು ಬಗೆಯ ಧಾರ್ಮಿಕ ಲೇಖನಗಳನ್ನೂ ಶಾಸ್ತ್ರವಿಚಾರಗಳನ್ನೂ ಒಳಗೊಂಡ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಇದು ಕನ್ನಡಭಾಷೆಯಲ್ಲಿರುವುದರಿಂದ ಎಲ್ಲ ಕನ್ನಡಿಗರಿಗೂ ಉಪಯುಕ್ತವಾಗಿದೆ. ಮಠದಲ್ಲಿ ನಡೆಯುವ ಕಾರ್ಯಕ್ರಮಗಳ ಪರಿಚಯವೂ ಇದರಲ್ಲಿ ದೊರೆಯುತ್ತದೆ. ಈ ಪತ್ರಿಕೆಯು ಲೋಕಪ್ರಿಯವಾಗಿ ಚಂದಾದಾರರನ್ನು ಬೆಳೆಸಿಕೊಂಡು ಅಭಿವೃದ್ಧಿಪಥದಲ್ಲಿ ಸಾಗುತ್ತಿದೆ.

4. ಉಪನಯನ

ಷೋಡಶಸಂಸ್ಕಾರಗಳಲ್ಲಿ ಉಪನಯನವು ಬ್ರಾಹ್ಮಣ ಬಾಲಕನಿಗೆ ಶ್ರೇಷ್ಠವಾದ ಸಂಸ್ಕಾರ. ಇದರಿಂದಲೇ ಆತನಿಗೆ ದ್ವಿಜತ್ತ್ವವು ಸಿದ್ಧಿಸುತ್ತದೆ. ಈ ಸಂಸ್ಕಾರವು

ಶಾಸ್ತ್ರೋಕ್ತವಿಧಿಪೂರ್ವಕವಾಗಿ ನಡೆಯಬೇಕು. ಮತ್ತು ವಿಹಿತಕಾಲದಲ್ಲಿ ಆಗಬೇಕು. ಈ ವಿಷಯದಲ್ಲಿ ಮಾತಾಪಿತೃಗಳ ಗಮನವನ್ನು ಸೆಳೆಯುವುದಕ್ಕಾಗಿಯೂ ವಿಧಿವತ್ತಾಗಿ ಮಕ್ಕಳಿಗೆ ಉಪನಯನವನ್ನು ನೆರವೇರಿಸುವ ಸಾಮರ್ಥ್ಯವಿಲ್ಲದವರ ಸೌಕರ್ಯ-ಕ್ಕಾಗಿಯೂ ಶ್ರೀಮಠದಲ್ಲಿ ಧರ್ಮೋಪನಯನಗಳನ್ನು ನಡೆಸುವ ಕಾರ್ಯಕ್ರಮವನ್ನು ಶ್ರೀ ಶ್ರೀಗಳವರು ಆರಂಭಿಸಿದ್ದಾರೆ. ಇದು ಯಾವದಿನ ನಡೆಯುವುದೆಂಬುದನ್ನು ಸಾಕಷ್ಟು ಪೂರ್ವದಲ್ಲಿಯೇ ಪ್ರಕಟಿಸಲಾಗುತ್ತದೆ. ಈ ವ್ಯವಸ್ಥೆಯಿಂದ ಬಹಳ ಕುಟುಂಬಗಳಿಗೆ ತುಂಬ ಉಪಕಾರವಾಗುತ್ತಿದೆ.

ಅಲ್ಲದೆ ಉಪನೀತರಾದ ವಟುಗಳು ಸಂಧ್ಯಾವಂದನೆಯನ್ನು ಪ್ರತಿದಿನವೂ ತಪ್ಪದೆ ಆಚರಿಸುವಂತೆ ತಿಳಿವಳಿಕೆಯನ್ನು ಸಂಧ್ಯಾಚರಣೆಯ ಪ್ರಯೋಜನಗಳನ್ನು ಬೋಧಿಸುತ್ತಾರೆ. ವಿಭಿನ್ನ ಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗಾಗಿ ಬೇಸಿಗೆ ರಜಾಕಾಲದಲ್ಲಿ ವೇದಾಧ್ಯಯನ ಶಿಬಿರವನ್ನೇರ್ಪಡಿಸುತ್ತಿದ್ದಾರೆ. ಆ ಸಮಯ-ದಲ್ಲಿ ಬರುವ ವಿದ್ಯಾರ್ಥಿಗಳಿಗೆ ಉಚಿತವಾದ ವಸತಿಭೋಜನಗಳ ವ್ಯವಸ್ಥೆ ಇದೆ. ಕಾಲೋಚಿತವಾಗಿ ಅತ್ಯಾವಶ್ಯಕವಾದ ವೇದಮಂತ್ರಗಳನ್ನು ಈ ಶಿಬಿರದ ವಿದ್ಯಾರ್ಥಿಗಳಿಗೆ ಕಲಿಸಲಾಗುವುದು. ಮೊದಲನೆಯ ವರ್ಷದಲ್ಲಿ ಕಲಿತವರು ಎರಡನೆಯ ವರ್ಷವೂ ಬಂದು ವೇದಾಧ್ಯಯನವನ್ನು ಮುಂದುವರಿಸಬಹುದು. ಲೌಕಿಕ ವಿದ್ಯಾರ್ಜನೆಯ ಜೊತೆಗೆ ಬ್ರಾಹ್ಮಣ್ಯವನ್ನು ಕಾಪಾಡಿಕೊಳ್ಳಲು ಬೇಕಾದ ವೈದಿಕ ವಿದ್ಯಾರ್ಜನೆಯೂ ಆಗಲೆಂಬ ಉದ್ದೇಶದಿಂದ ನಡೆಯುವ ಪ್ರಶಂಸನೀಯವಾದ ಕಾರ್ಯಕ್ರಮವಿದು. ರಜಾದಿನಗಳಲ್ಲಿ ನಡೆಯುವ ಈ ಶಿಬಿರದಲ್ಲಿ ಭಾರತೀಯ ಸಂಸ್ಕೃತಿಯ ಪರಿಚಯವು ಬಾಲಕರಿಗಾಗಲೆಂಬ ಇನ್ನೊಂದು ಉದ್ದೇಶವೂ ಸೇರಿದೆ. ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ, ವೈದಿಕ ಸಂಸ್ಕಾರಗಳು, ವರ್ಣಾಶ್ರಮಧರ್ಮಗಳು, ನೀತಿ-ನಡವಳಿಕೆ ಮುಂತಾದ ವಿಷಯಗಳಲ್ಲಿ ಉಪನ್ಯಾಸಗಳ ಮೂಲಕ ಸಾಕಷ್ಟು ತಿಳಿವಳಿಕೆಯನ್ನು ನೀಡಲಾಗುವುದು.

5. ಬಾಲಿಕಾ ಶಿಕ್ಷಣ ಶಿಬಿರ

ಮೇಲ್ಕಂಡ ಕಾರ್ಯಕ್ರಮವು ಬಾಲಕರಿಗಾಯಿತು. ಬಾಲಿಕೆಯರಿಗೆ ಬಂದ ಲಾಭವೇನು? ಸ್ತ್ರೀಯರು ಸಮಾಜದ ಅರ್ಧಾಂಗವಾಗಿದ್ದಾರೆ. ಭಾರತೀಯ ಸಂಸ್ಕೃತಿಯು, ಬ್ರಾಹ್ಮಣ್ಯವು ನಮ್ಮ ಸಮಾಜದಲ್ಲಿ ಇನ್ನೂ ಜೀವಂತವಾಗಿರುವುದು ಸ್ತ್ರೀಯರಿಂದ ಎಂದರೆ ಅತಿಶಯೋಕ್ತಿಯಾಗದು. ಅದು ಉಳಿಯಬೇಕಾದದ್ದು

ಮುಖ್ಯವಾಗಿ ಸ್ತ್ರೀಯರಿಂದಲೇ. ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಇದನ್ನರಿತು ಬೇಸಿಗೆ ರಜಾದಿನಗಳಲ್ಲಿ ಬಾಲಿಕೆಯರಿಗಾಗಿ ಶಿಕ್ಷಣ ಶಿಬಿರವನ್ನೇರ್ಪಡಿಸುತ್ತಿದ್ದಾರೆ. ವೇದಾಧ್ಯಯನ ಒಂದನ್ನು ಬಿಟ್ಟು ಉಳಿದ ಎಲ್ಲ ಸಾಂಸ್ಕೃತಿಕ ವಿಚಾರಗಳನ್ನೂ ಇಲ್ಲಿ ಬೋಧಿಸಲಾಗುತ್ತದೆ. ಅಲ್ಲದೆ ನಮ್ಮ ಹವ್ಯಕಸಮಾಜದಲ್ಲಿ ಪ್ರಸಿದ್ಧವಾದ ಹಾಡುಗಳನ್ನು ಹೇಳುವುದು, ರಂಗವಲ್ಲಿಯನ್ನು ಹಾಕುವುದು -ಮುಂತಾದ ಕಲೆಗಳು ಕ್ರಮವಾಗಿ ಕುಟುಂಬದಿಂದ ಮರೆಯಾಗುತ್ತಿವೆ. ಈ ವಿಷಯಗಳಲ್ಲಿ ಶಿಬಿರವು ಬಾಲಿಕೆಯರಿಗೆ ಯೋಗ್ಯಶಿಕ್ಷಣವನ್ನೀಯುತ್ತದೆ. ಶ್ರೀ ಶ್ರೀಗಳವರ ಸೂಕ್ಷ್ಮದರ್ಶಿತೆಯನ್ನೂ ಸಮಾಜ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಅವರಿಗಿರುವ ಕಳಕಳಿಯನ್ನೂ ಇದರಿಂದ ಊಹಿಸಿಕೊಳ್ಳಬಹುದು.

6. ಅರ್ಚಕರ ಮತ್ತು ಪುರೋಹಿತರ ಸಮವಾಯ

ಇಲ್ಲಿ ಅರ್ಚಕರೆಂದರೆ ದೇವಸ್ಥಾನಗಳಲ್ಲಿ ನಿಯುಕ್ತರಾದ ಅರ್ಚಕರು. ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ದೇವಸ್ಥಾನವು ಇದ್ದೇ ಇರುತ್ತದೆ. ಈ ದೇವಸ್ಥಾನಗಳು ಆಗಮಶಾಸ್ತ್ರದಂತೆ ಪ್ರತಿಷ್ಠಿತವಾಗಿದ್ದು ಆಗಮಶಾಸ್ತ್ರೋಕ್ತ-ವಿಧಿಯಂತೆ ಅರ್ಚನೆಯು ನಡೆಯಬೇಕು. ಶಿವ, ವಿಷ್ಣು, ಗಣಪತಿ, ದೇವಿ, ಆಂಜನೇಯ ದೇವಸ್ಥಾನಗಳು ವಿಶೇಷವಾಗಿ ಕಂಡುಬರುತ್ತವೆ. ಈ ಮೂರ್ತಿಗಳ ಪೂಜಾವಿಧಾನವು ಮನೆಗಳಲ್ಲಿ ನಡೆಯುವ ಪೂಜೆಗಿಂತ ಭಿನ್ನವಾಗಿರುವುದುಂಟು. ಕೆಲವು ಮೂರ್ತಿಗಳಿಗೆ ನಿತ್ಯಾಭಿಷೇಕವಿದೆ, ಕೆಲವಕ್ಕೆ ನಿತ್ಯವೂ ಅಭಿಷೇಕವಿಲ್ಲ. ಈ ಮೂರ್ತಿಗಳಲ್ಲಿ ದೇವತಾವಾಹನೆಯನ್ನು ಪ್ರತಿದಿನ ಮಾಡಬೇಕೆ-ಬೇಡವೆ? ಇತ್ಯಾದಿ ಪ್ರಶ್ನೆಗಳು ಹುಟ್ಟುತ್ತವೆ. ಅಲ್ಲದೆ ಅಷ್ಟಬಂಧ, ಕುಂಭಾಭಿಷೇಕ -ಮುಂತಾದವುಗಳ ವಿಷಯದಲ್ಲಿ ಅರ್ಚಕರಿಗೆ ಸ್ಪಷ್ಟವಾದ ತಿಳಿವಳಿಕೆ ಬೇಕು.

ಪುರೋಹಿತನೆಂದರೆ ಧಾರ್ಮಿಕವಿಷಯಗಳಲ್ಲಿ ಶಿಷ್ಯರ ಮುಂದೆ ನಿಂತು ಮಾರ್ಗದರ್ಶನ ಮಾಡತಕ್ಕವನು, ಶಿಷ್ಯರ ಹಿತವನ್ನು ಬಯಸತಕ್ಕವನು ಎಂದು ಶಬ್ದಾರ್ಥ. ಇದರಿಂದ ಪುರೋಹಿತರಿಗಿರುವ ಜವಾಬ್ದಾರಿ ಎಷ್ಟೆಂಬುದು ವ್ಯಕ್ತವಾಗುತ್ತದೆ. ಶಿಷ್ಯರಾದ ತಾರ್ಕಿಕರಿಗೆ ಈ ಕಾಲದಲ್ಲಿ ಪ್ರಾಯೇಣ ಧಾರ್ಮಿಕವಿಚಾರದಲ್ಲಿ ಏನೂ ಗೊತ್ತಿರುವುದಿಲ್ಲ. ಸಮಯೋಚಿತವಾಗಿ ಅದನ್ನು ಈ ಲೌಕಿಕಜನರಿಗೆ ತಿಳಿಸುವುದು ಪುರೋಹಿತರ ಕರ್ತವ್ಯವಾಗಿರುತ್ತದೆ. ಮತ್ತು ಪುರೋಹಿತರ ಆಚಾರಣೆಗಳಲ್ಲಿಯೂ ಕೆಲವು ದೋಷಗಳು ಸೇರಿಕೊಂಡಿರುತ್ತವೆ. ಅಂತೆಯೇ ಅರ್ಚಕರಿಗೂ ಪುರೋಹಿತರಿಗೂ ಒದಗುವ ಕೆಲವು ಕ್ಲೇಶಗಳೂ

ಸಮಸ್ಯೆಗಳೂ ಉಂಟು. ಈ ಕಾರಣಗಳಿಂದ ಆಗಾಗ ಒಂದು ಗೋಷ್ಠಿ-ಯನ್ನೇರ್ಪಡಿಸಿ, ಚರ್ಚಿಸಿ ಒಂದು ನಿರ್ಣಯಕ್ಕೆ ಬರುವುದು. ಈ ಸಮವಾಯದ ಉದ್ದೇಶವಾಗಿರುತ್ತದೆ. ಇದೊಂದು ಅತ್ಯಾವಶ್ಯಕವಾದ ಕಾರ್ಯಕ್ರಮ.

ಈ ಪ್ರಕಾರದಲ್ಲಿ ಶ್ರೀ ಶ್ರೀಗಳವರು ಸಮಾಜಕಲ್ಯಾಣಕ್ಕಾಗಿ ಯೋಜಿಸಿದ ವಿಧಾನಗಳು ಬಹುಮುಖವಾದವು. ಗಾಯತ್ರೀಮಂತ್ರವು ಬ್ರಾಹ್ಮಣ್ಯದ ಆತ್ಮವಾಗಿರುತ್ತದೆ. ಇದರ ಮಹತ್ತ್ವದ ಅರಿವನ್ನು ಮೂಡಿಸುವುದಕ್ಕಾಗಿ ಕೋಟಿ ಗಾಯತ್ರೀಜಪವಿಧಿಯನ್ನು ಯೋಜಿಸಿ, ಹಳ್ಳಿಹಳ್ಳಿಗಳಲ್ಲಿಯೂ ಜಪ ಮಾಡಿಸಿ ಒಂದು ಜಪಯಜ್ಞವನ್ನು ಮಠದಲ್ಲಿ ಯಶಸ್ವಿಯಾಗಿ ನೆರವೇರಿಸಿದರು. 'ಶ್ರೀ ಗಾಯತ್ರೀ ಜಪಯಜ್ಞ'ವೆಂಬ ಪುಸ್ತಕವನ್ನು ರಚಿಸಿ ಹಂಚಿದ್ದಾರೆ. ಹೆಣ್ಣುಮಕ್ಕಳಿಂದ ಶ್ರೀ ರಾಜರಾಜೇಶ್ವರೀ ದೇವಿಗೆ ಲಕ್ಷಕುಂಕುಮಾರ್ಚನೆಯನ್ನು ಮಾಡಿಸಿದರು. ಕಾರ್ಗಿಲ್‌ಯುದ್ಧಪ್ರಸಂಗದಲ್ಲಿ ಭಾರತದೇಶಕ್ಕೆ ಜಯವಾಗಲೆಂಬ ಸಂಕಲ್ಪವೂ ಇದರ ಜೊತೆಗಿತ್ತು. 'ನಿರ್ವ್ಯಸನ ಸಮಾಜ'ವೆಂಬ ಗುರಿಯನ್ನಿಟ್ಟುಕೊಂಡು ಬೀಡಿ, ಸಿಗರೇಟ್, ಮಧ್ಯಪಾನಾದಿಗಳಲ್ಲಿರುವ ಕೆಡುಕುಗಳನ್ನು ವಿವರಿಸಿ, ಆ ಕೆಟ್ಟ ಚಟಗಳನ್ನು ಬಿಡಿಸುವ ಪ್ರಯತ್ನವು ಪ್ರಶಂಸನೀಯವಾಗಿ ನಡೆದಿದೆ. ಅನೇಕರು ಶ್ರೀಗಳವರ ಬೋಧನೆ-ಯಿಂದ ಆ ಚಟಗಳನ್ನು ತ್ಯಜಿಸಿದ್ದಾರೆ. ಬೇಡ್ತಿ ಸತ್ಯಾಗ್ರಹವು ಸುಪ್ರಸಿದ್ಧವಾಗಿ ಸರ್ಕಾರದ ಮೇಲೆ ಪ್ರಭಾವವನ್ನು ಬೀರಿದೆ. ಬಹುಧನವ್ಯಯದಿಂದ ವಿಸ್ತಾರವಾದ ಗೋಶಾಲೆ, ಭೋಜನಶಾಲೆಗಳ ನಿರ್ಮಾಣವಾದವು.

ವಿದ್ಯಾಪ್ರಸಾರವೇ ಪ್ರಧಾನೋದ್ದೇಶವಾಗಿದ್ದು ಶ್ರೀ ಶ್ರೀಗಳವರ ನೇತೃತ್ವದಲ್ಲಿ ಶ್ರೀರಾಜರಾಜೇಶ್ವರೀ ಮಹಾಪಾಠಶಾಲೆಗೆ ನೂತನ ಚೈತನ್ಯವು ಪ್ರಾಪ್ತವಾಯಿತು. ವಿವಿಧ ಶಾಸ್ತ್ರಗಳ ಮತ್ತು ವೇದದ ಅಧ್ಯಯನಕ್ಕೆ ಪುಷ್ಟಿಯುಂಟಾಗಿದೆ. ಸಂಸ್ಕೃತ-ಭಾಷೆಯ ಕಠಿಣವಾದ್ದಲ್ಲ, ಎಲ್ಲರಿಗೂ ಇದರಲ್ಲಿ ಸಾಕಷ್ಟು ಜ್ಞಾನವಿರಲೇಬೇಕೆಂಬ ಧ್ಯೇಯದಿಂದ ಪ್ರತಿವರ್ಷವೂ ಅಲ್ಲಲ್ಲಿ ಸಂಭಾಷಣ ಶಿಬಿರಗಳನ್ನು ನಡೆಸುತ್ತಿದ್ದಾರೆ. ಅಪೂರ್ವಗ್ರಂಥಗಳ ಮುದ್ರಣಕಾರ್ಯಕ್ರಮವೂ ನಡೆಯುತ್ತಿದೆ.

ಹೀಗೆ ಶ್ರೀ ಶ್ರೀಗಳವರು ಅನವರತವೂ ವಿದ್ಯಾಪ್ರಸಾರಕ್ಕಾಗಿ ಸಮಾಜದ ಕಲ್ಯಾಣಕ್ಕಾಗಿ ದುಡಿಯುತ್ತಲೇ ಇದ್ದಾರೆ. ಇದು ಸಮೀಚೀನವಾದ ವಿದ್ಯಾರ್ಜನೆಯ ಫಲ. ವಿದ್ವಾಂಸನು ಯಥಾಶಕ್ತಿಯಾಗಿ ಜನಕಲ್ಯಾಣಕ್ಕಾಗಿ ಪ್ರಯತ್ನಿಸದಿದ್ದರೆ, ಆ ಕಾರ್ಯವನ್ನು ನಡೆಸತಕ್ಕವರು ಯಾರು? ಶ್ರೀಶಂಕರಭಗವತ್ಪಾದರು ಮಠವೆಂಬ ಸಂಸ್ಥೆಯನ್ನು ನಿರ್ಮಿಸಿರುವುದೇ ಧರ್ಮದ ರಕ್ಷಣೆಗಾಗಿ. ಧರ್ಮದ ವಿಶಾಲಾರ್ಥ-ವನ್ನು ಜನತೆಯು ಅರಿತುಕೊಂಡಾಗ, ಜನತೆಯ ಕಲ್ಯಾಣವು ಸ್ವತಃ ಸಿದ್ಧವಾಗಿ

ಬಿಡುತ್ತದೆ. ಇದನ್ನು ಮನಗಾಣಿಸುವುದಕ್ಕಾಗಿ ಶ್ರೀಗಳವರು ಸತತವೂ ಉದ್ಯುಕ್ತ-ರಾಗಿದ್ದಾರೆ.

ಈ ಕಾರಣಗಳಿಂದ ಶಿಷ್ಯವೃಂದದವರಿಗೆ ಶ್ರೀಗಂಗಾಧರೇಂದ್ರ ಮಹಾಸ್ವಾಮಿಗಳ ವಿಷಯವಾಗಿ ಅಪಾರವಾದ ಭಕ್ತಿವಿಶ್ವಾಸ ಗೌರವಗಳು ದಿನದಿನಕ್ಕೂ ವೃದ್ಧಿ ಹೊಂದುತ್ತಲೇ ಇವೆ. ಶ್ರೀಮಠಕ್ಕೆ ಸಲ್ಲಿಸುವ ಕಾಣಿಕೆಯು, ಒಂದಕ್ಕೆ ನೂರರಷ್ಟು ಫಲವನ್ನು ನೀಡುತ್ತದೆಯೆಂಬುದನ್ನು ಶಿಷ್ಯವೃಂದವು ಕಂಡುಕೊಂಡಿರುವುದರಿಂದ ಶ್ರೀ ಶ್ರೀಗಳವರ ಕಾರ್ಯಯೋಜನೆಗೆ ಧನದ ಕೊರತೆಯಾಗಲೇ ಇಲ್ಲ.

''ಸಹಸ್ರಗುಣಮುತ್ಸ್ರಷ್ಟುಮಾದತ್ತೇ ಹಿ ರಸಂ ರವಿಃ'' -ಎಂಬ ಕಾಳಿದಾಸ ಮಹಾಕವಿಯ ಉದ್ಗಾರವು ಇಲ್ಲಿ ಯಥಾರ್ಥವಾಗಿದೆ. ಸೂರ್ಯನು ಸಮುದ್ರದಿಂದ ಹೀರಿಕೊಳ್ಳುವ ನೀರು ತನಗಾಗಿ ಅಲ್ಲ. ದೇಶದೇಶದಲ್ಲಿ ಸಾವಿರ ಪಟ್ಟಾಗಿ ಮಳೆ ಸುರಿಸುವುದಕ್ಕೋಸ್ಕರ ಆ ನೀರು.

ವಿಗಲಿತಭವಬಂಧಂ ಜ್ಞಾತವೇದಾಂತಸಾರಂ
ಜನಹಿತಕೃತಿದಕ್ಷಂ ದೀಪ್ತಿಮಂತಂಯುವಾನಮ್,
ಯತಿವರಮನುವೀಕ್ಷ್ಯ ಸ್ವರ್ಣವಲ್ಲೀ ಮಠೇಶಂ
ಸ್ಮರತಿ ಸಪದಿ ಚಿತ್ತಂ ಶಂಕರಾಚಾರ್ಯಮಾದ್ಯಮ್ ॥

ಶ್ರೀಮಚ್ಛಂಕರದೇಶಿಕೇಂದ್ರ ಕೃಪಯಾ ಸಂಸ್ಥಾಪಿತೇ ಶ್ರೀಮಠೇ
ರಾಜಂತಂ ಯಶಸೋಜ್ವಲೇನ ತಪಸಾ ಶಾಂತಂ ಮಹಾಂತಂ ಗುರುಮ್ ।
ಶ್ರೀಗಂಗಾಧರವಾಮಪಾರ್ಶ್ವವಿಲಸತ್‌ಸ್ವರ್ಣಪ್ರಭಾಭಾಸ್ವರಂ
ಜ್ಯೋತಿಃ ಕಿಂಚನ ಪಾಲಯತ್ವವಿರತಂ ಕಾರುಣ್ಯಪೂರ್ಣೇಕ್ಷಣಮ್ ॥

ಸೋಂದಾ ಶ್ರೀಸ್ವರ್ಣವಲ್ಲೀ ಪ್ರಯತಮಠವರಾಧೀಶ್ವರಂ ಧೀನಿವಾಸಂ
ಪ್ರಾಚೀನಾಚಾರ್ಯವರ್ಯೈಃ ಪ್ರಚಿತಶಮಧನೈರ್ದರ್ಶಿತೇ ಶಿಷ್ಟಮಾರ್ಗೇ ।
ಅಧ್ವನ್ಯಂ ಲೋಕಮಾನ್ಯಂ ಶ್ರಿತಹಿತಕರಣೇ ನಿತ್ಯಮುನ್ನಿದ್ರಚಿತ್ತಂ
ದೇವೀ ಗಂಗಾಧರೇಂದ್ರಂ ಗುರುವರಮವತಾದ್ ರಾಜರಾಜೇಶ್ವರೀ ನಃ ॥

❋❋❋

ಪೀಠಾರೋಹಣದ ಹಿಂದೆ

-ಜಿ.ಎಸ್. ಹೆಗಡೆ ಅಜ್ಜಿಬಳ್
ಮಾಜಿ ಉಪಾಧ್ಯಕ್ಷರು, ಶ್ರೀ ಸ್ವರ್ಣವಲ್ಲೀ ಸಂಸ್ಥಾನ

ಪರಮಪೂಜ್ಯ ಶ್ರೀ ಶ್ರೀ ಸರ್ವಜ್ಞೇಂದ್ರ ಸ್ವಾಮೀಜೀವರು ಬಹಳ ಒತ್ತಡ ಹಾಕಿ ಯೋಗ್ಯವಾದ ಶಿಷ್ಯರ ಆಯ್ಕೆ ಬಗ್ಗೆ ಜಾತಕ ತಕ್ಕೊಳ್ಳಲಿಕ್ಕೆ ಸಮ್ಮತಿಕೊಟ್ಟ ನಂತರ ಅಂತಹ ಜಾತಕ ಶೋಧಿಸುತ್ತಿರುವಾಗ ಹುಳಗೋಳ ವೆಂಕಟರಮಣ ಮಹಾಬಳೇಶ್ವರ ಹೆಗಡೆಯವರು, ಬೈರುಂಬೆ ಹೆಗಡೆಯವರು ನಮ್ಮ ಮನೆಗೆ ಬಂದು ನಿಡಗೋಡಿನ ಶಿವರಾಮ ಭಟ್ಟರ ಪುತ್ರರಾದ ವೇದಮೂರ್ತಿ ಶ್ರೀ ಪರಮೇಶ್ವರ ಭಟ್ಟರ ಜಾತಕವನ್ನು ಕೊಟ್ಟು ಹೋದರು. ಯಾವುದೇ ವಿಳಂಬಮಾಡದೇ ಆ ಜಾತಕದ ಬಗ್ಗೆ ಹಿತ್ಲಳ್ಳಿ ನಾಗೇಂದ್ರಭಟ್ಟರ ಅಭಿಪ್ರಾಯವನ್ನು ಪಡೆಯಲಾಯಿತು. ಜಾತಕದಲ್ಲಿ ಸನ್ಯಾಸಾಶ್ರಮದ ಯೋಗವಿದೆ ಎಂದು ಹೇಳಿದ್ದಲ್ಲದೇ ಎಲ್ಲಾ ದೃಷ್ಟಿಯಿಂದಲೂ ಯೋಗ್ಯವಿದೆ ಎಂದು ಅಭಿಪ್ರಾಯ ಪಟ್ಟರು. ಆದಾಗ್ಯೂ ಈ ವಿಷಯದಲ್ಲಿ ನನಗಿಂತಲೂ ಹೆಚ್ಚಿಗೆ ಪ್ರವೀಣರಾದ ತರೀಕೇರಿ ಶಾಸ್ತ್ರಿಯವರನ್ನು ವಿಚಾರಿಸಿದರೆ ಒಳ್ಳೆಯದು ಎಂದು ಸಲಹೆ ಕೊಟ್ಟರು. ಕೂಡಲೇ ಸರ್ವಶ್ರೀ ವಿ.ಟಿ. ಹೆಗಡೆ, ಜಾನ್ಮನೆ ಹಾರುಗಾರ ಪಟೇಲರ ಜೊತೆಗೆ ಅವರನ್ನು ಭೇಟಿಯಾಗಲಿಕ್ಕೆ ಮೈಸೂರಿಗೆ ಹೋದೆವು. ಆದರೆ ಅವರು ಮೈಸೂರಿನಲ್ಲಿ ಇಲ್ಲದೇ ಬೆಂಗಳೂರಿನಲ್ಲಿ ಮನೆ ಕಟ್ಟುವ ದೇಖರೇಕ್ ನೋಡಲು ಬೆಂಗಳೂರಿನಲ್ಲಿಯೇ ಇದ್ದಾರೆಂತಾ ತಿಳಿದು ಬಂದು ಬೆಂಗಳೂರಿಗೆ ಬಂದು ಅವರನ್ನು ಭೇಟಿ ಆದಾಗ ಅವರು ''ಜಾತಕವನ್ನು ನೋಡುವುದು ಬಿಟ್ಟಿದ್ದೇನೆ. ಆದರೆ ನೀವೆಲ್ಲರೂ ಸ್ವರ್ಣವಲ್ಲೀ ಮಠದಿಂದ ಬಂದಿದ್ದೀರಿ ಹಾಗೂ ಸ್ವಾಮಿಗಳ ಅಪ್ಪಣೆ ಆಗಿದೆಯೆಂದು ತಿಳಿದು ಒಂದು ದಿನದ ಅಭ್ಯಾಸ ಮಾಡಿ ಹೇಳುತ್ತೇನೆ'' ಎಂದು ಹೇಳಿ ಮರುದಿನ ಹೋದಾಗ ಸನ್ಯಾಸಯೋಗವಿದೆ ಮತ್ತು ಎಲ್ಲಾ ಫಲವು ಚೆನ್ನಾಗಿದೆಯೆಂದು ಹೇಳಿ ನಮ್ಮ ಮನಸ್ಸನ್ನು ತೃಪ್ತಿ ಪಡಿಸಿದರು. ಎಷ್ಟೋ ಒಜ್ಜೆ ಹಗುರವಾದ ಹಾಗೆ ಆಯಿತು.

ಮೈಸೂರಿನಿಂದ ಬೆಂಗಳೂರಿಗೆ ಹೊರಡುವ ಪೂರ್ವದಲ್ಲಿ ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಿರುವ ಶ್ರೀ ಪರಮೇಶ್ವರ ಭಟ್ಟರನ್ನು ಭೇಟಿ ಮಾಡಿದೆವು. ಆಗ ಅವರ ಎತ್ತರದ ನಿಲುವು ತೇಜೋಭರಿತ ಹಸನ್ಮುಖ ನಮ್ಮನ್ನು ಆಕರ್ಷಿಸಿತು. ನಾವು ಕೆಲವೊಂದು ಕುಶಲೋಪರಿ ಆದ ಮೇಲೆ ನೇರವಾಗಿ ''ತಾವು ಮಠದ ಚುಕ್ಕಾಣಿಯನ್ನು ಹಿಡಿಯಲಿಕ್ಕೆ ಮತ್ತು ಅದರ ಕಠೋರ ವ್ರತವನ್ನು ಪಾಲಿಸಲಿಕ್ಕೆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಸಿದ್ಧರಿರುವಿರಾ'' ಎಂತಾ ಕೇಳಿದ್ದಕ್ಕೆ ಅವರ ನೇರ ನುಡಿ ಅಷ್ಟೇ ಚುರುಕಾಗಿತ್ತು. ''ಮಠದ ಯಾವತ್ತೂ ಪರಂಪರೆಗೆ ಧಕ್ಕೆ ಆಗದಂತೆ ತಾನು ನಡೆದುಕೊಳ್ಳುತ್ತೇನೆ ಎಂದು ದೇವರ ಮುಂದೆ ನಿಂತು ನನ್ನ ತಂದೆ-ತಾಯಿಯವರಿಗೆ ಮಾತು ಕೊಟ್ಟಿದ್ದೇನೆ. ಅದನ್ನೇ ನಾನು ಪುನರುಚ್ಚರಿಸುತ್ತೇನೆ'' ಎಂತಾ ಹೇಳಿದ ಮಾತು ಈ ಹೊತ್ತಿಗೂ ನಮ್ಮ ಸ್ಮೃತಿಪಟಲದ ಮೇಲೆ ಅಚ್ಚಾಗಿ ಉಳಿದಿದೆ.

ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತಿ ಸ್ವಾಮೀಜಿಯವರನ್ನು ಉಪಚಾರಕ್ಕಾಗಿ ಹುಬ್ಬಳ್ಳಿಯ ಡಾ. ಜೋಶಿಯವರ ಆಸ್ಪತ್ರೆಗೆ ಸೇರಿಸಿದ್ದು ಹಾಗೂ ಶಸ್ತ್ರಚಿಕಿತ್ಸೆ ಮಾಡಲು ನನ್ನ ಲೇಖಿ ಅನುಮತಿ ಕಾಯಲಾಗುತ್ತದೆ ಎಂತಾ ಸಂದೇಶ ಬಂದ ನಂತರ ಹುಬ್ಬಳ್ಳಿಗೆ ನೇರವಾಗಿ ಹೋಗಿ ನಡೆದ ಘಟನೆಯನ್ನು ಸ್ವಾಮೀಜೀವರಿಗೆ ವಿವರಿಸಿದೆನು. ಆಗ ಅವರಿಗೆ ತುಂಬಾ ಎಚ್ಚರವಿತ್ತು. ಮತ್ತು ಕೈಎತ್ತಿ ''ತಥಾಸ್ತು'' ಎಂಬಂತೆ ಆಶೀರ್ವದಿಸಿದರು. ತದನಂತರ ಅದೇ ದಿನ ಮಧ್ಯಾಹ್ನದಿಂದ ಅವರ ಸ್ವಾಸ್ಥ್ಯ ಕೆಡುತ್ತಾ ಹೋಯಿತು ಮತ್ತು ಡಾಕ್ಟರರ ಸಲಹೆ ಪ್ರಕಾರ ಸ್ವಾಮೀಜಿಯವರ ವೈಯಕ್ತಿಕ ವೈದ್ಯರಾದ ಡಾ. ಪಟವರ್ಧನ್ ಅವರು ಹೇಳಿದಂತೆ ಅವರನ್ನು ಆಸ್ಪತ್ರೆಯಿಂದ ಮಠಕ್ಕೆ ಕರೆತರಲಾಯಿತು. ಸುಮಾರು ಮಧ್ಯರಾತ್ರಿ ವೇಳೆಗೆ ಮಠಕ್ಕೆ ತಲುಪಿದೆವು. ಕ್ಷಣಾರ್ಧದಲ್ಲಿ ಬ್ರಹ್ಮೀಭೂತರಾದರು. ಸಂಸ್ಕಾರದ ಎಲ್ಲ ಕಾರ್ಯಕ್ರಮಗಳು ಮುಗಿದ ನಂತರ ವಿಶೇಷ ಸರ್ವಸಾಧಾರಣ ಮಹಾಸಭೆಯನ್ನು ಕರೆದು ಪರಿಸ್ಥಿತಿಯನ್ನು ವಿವರಿಸಲಾಯಿತು. ಸಭೆಯು ಮ್ಯಾನೇಜಿಂಗ್ ಕಮೀಟಿಗೆ ಹಾಗೂ ಅಧ್ಯಕ್ಷರಿಗೆ ಸರ್ವಾಧಿಕಾರವನ್ನು ಕೊಟ್ಟಿತ್ತಲ್ಲದೇ ಶ್ರೀ ಪರಮೇಶ್ವರ ಭಟ್ಟರನ್ನು ನಿಯೋಜಿತ ಶ್ರೀಗಳವರುಯೆಂತಾ ನೇಮಿಸಲಿಕ್ಕೆ ಅನುಮತಿ ಕೊಟ್ಟಿತು. ನಿಯೋಜಿತ ಶ್ರೀಗಳವರ ಇಚ್ಛೆ ಪ್ರಕಾರ ಕಾಂಚಿ ಕಾಮಕೋಟಿ ಗುರುಗಳಿಂದಲೇ ಪೀಠಾರೋಹಣ ಮಾಡಿಸಬೇಕೆಂದು ನಿರ್ಧರಿಸಿ ಮುಂದಿನ ಕ್ರಮವನ್ನು ಕೈಗೊಳ್ಳಲು ಕಾರ್ಯಪ್ರವೃತ್ತರಾದೆವು. ಈ ಪ್ರಸಂಗದಲ್ಲಿ ಶ್ರೀ ಗಜಾನನ ಹೆಗಡೆ, ಹುಳಗೋಳ ಅವರು ಕೊಟ್ಟ ಸ್ಫೂರ್ತಿ ಹಾಗೂ ನಿಶ್ಚಯ ಮಾಡಿ ಮುಂದಿನ ಕೆಲಸದ ಭಾರವನ್ನು

ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿದರಲ್ಲದೇ ಅದರಂತೆ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ನನ್ನ ಹಿಂದೆ ನಿಂತು ಪೀಠಾರೋಹಣ ಸಮಾರಂಭವನ್ನು ಯಶಸ್ವಿಗೊಳಿಸಲು ಸಹಕಾರ ನೀಡಿದರು.

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರು ಪೀಠಾರೋಹಣ ಪೂರ್ವದಲ್ಲಿ ಹಾಗೂ ತದನಂತರ ಅವರ ಸ್ವಭಾವದ ಸರಳತೆಯನ್ನು ಉಲ್ಲೇಖ ಮಾಡಲು ಸಂತೋಷವಾಗುತ್ತದೆ. ಅವರು ನಮ್ಮೊಡನೆ ಬೆರತು ಸ್ವಯಂಸೇವಕರ ಹಾಗೆ ನಮ್ಮೊಡನೆ ಕೂಡಾ ಕಾಂಚಿಗೆ ಬಂದು ಪರಮಾಚಾರ್ಯರ ಆಶೀರ್ವಾದವನ್ನು ಪಡೆದರು. ಆಗಲೇ ಶ್ರೀ ಪರಮಾಚಾರ್ಯರು ಅವರಿಗೆ ಶಾಲನ್ನು ಹೊದಿಸಿ ಶಿಷ್ಯರನ್ನಾಗಿ ಮಾಡಲು ಅನುಮತಿ ಕೊಟ್ಟರೆಂತಾ ಹೇಳಿದರೂ ತಪ್ಪಾಗಲಾರದು. ಮತ್ತು ಅಲ್ಲಿಂದ ಬೆಂಗಳೂರಿಗೆ ಬಂದಾಗಲೂ ಕೂಡಾ ನಾನು ವಾಸಿಸುತ್ತಿರುವ ಸಾಮಾನ್ಯ ಮನೆಗೂ ಕೂಡಾ ಭೇಟಿ ಕೊಟ್ಟು ಯಾವುದೇ ಭೇದ ಭಾವವಿಲ್ಲದೇ ನಮ್ಮೊಡನೆ ಇರುತ್ತಿದ್ದುದನ್ನು ಅವರ ಸರಳ ಸ್ವಭಾವ ಎತ್ತಿ ತೋರುತ್ತದೆ.

ನಾನು ಅವರಲ್ಲಿ ಕಂಡದ್ದು ಶಿಷ್ಯರ ಬಗ್ಗೆ ಇರುವ ಕಾಳಜಿ. ಆಗ ಬೇಡ್ತಿ ಯೋಜನೆ ಬಗ್ಗೆ ತೀವ್ರ ಚರ್ಚೆ ಆಗುತ್ತಿತ್ತು. ಬೇಡ್ತಿ ಯೋಜನೆ ಅಮಲಿನಲ್ಲಿ ತರಲು ಆಗಿನ ಸರಕಾರ ಎಲ್ಲ ಸಿದ್ಧತೆಗಳನ್ನು ನಡೆಸಿತ್ತು. ಅದರಿಂದ ಮಠ ಒಂದೇ ಅಲ್ಲದೇ ಅನೇಕ ಭಾಗಾಯತ ಜಮೀನುಗಳು ಮುಳುಗಿ ಹೋಗಲಿದ್ದವು. ಶಿಷ್ಯರು ನಿರಾಶೆಯಿಂದ ಹತಾಶರಾಗಿದ್ದರು. ಆದರೆ ಶ್ರೀಗಳವರು ಪಾದಯಾತ್ರೆಯನ್ನು ತಕ್ಕೊಂಡು ಜನರನ್ನು ಹುರುದುಂಬಿಸಿದರಲ್ಲದೇ, ಅವರ ಪಾದಯಾತ್ರೆ ದಿನಾಲು ದೇಶದ ಪರಿಸರದ ಬಗ್ಗೆ ತಿಳುವಳಿಕೆಗೆ ಹಚ್ಚಿತು ಮತ್ತು ''ಹಸಿರು ಸ್ವಾಮಿ'' ಎಂತಾ ದೇಶದ ತುಂಬಾ ಅವರು ಹೆಸರು ಪಡೆದರು.

ಯಾವುದೇ ವಿಷಯವನ್ನು ತಿಳಿದುಕೊಳ್ಳಲು ಮತ್ತು ಅಭ್ಯಸಿಸಲು ಹಿಂಜರಿಯುತ್ತಿದ್ದಿಲ್ಲ. ಶ್ರೀಚಕ್ರ ಪೂಜೆಯನ್ನು ತಿಂಗಳಗಟ್ಟಲೇ ಅಭ್ಯಾಸ ಮಾಡಿ ಕಲಿತರು. ಮತ್ತು ಇಂದಿಗೂ ಶ್ರೀ ಚಕ್ರ ಪೂಜೆಯ ಪರಂಪರೆಯನ್ನು ಮುಂದುವರೆಸುತ್ತಾ ಬಂದಿರುತ್ತಾರೆ. ಮತ್ತೊಂದು ವಿಷಯವೇನೆಂದರೆ ಅವರಲ್ಲಿ ನಾವು ಕಂಡುಕೊಂಡಿದ್ದು, ಪರಂಪರೆಯಿಂದ ಬಂದಂಥ ರೂಢಿ ಮತ್ತು ಆಧುನಿಕತೆಯ ಸಮ್ಮಿಶ್ರಣ. ಮಠದಲ್ಲಿ ಹಿಂದಿನಿಂದಲೂ ಬಂದಂತಹ ಯಾವುದೇ ರೂಢಿಯನ್ನು ಬದಲಾಯಿಸಿಲ್ಲ. ಹಾಗೆಂದು ಹೊಸದನ್ನು, ಯೋಗ್ಯವಾದುದನ್ನು ಅಳವಡಿಸಲು ಹಿಂಜರಿದಿಲ್ಲ.

ಅವರು ಬಂದ ನಂತರ ಅನೇಕ ಸಮಿತಿಗಳಾದವು. ಆ ಸಮಿತಿಗಳ ಮುಖಾಂತರ ಮಠದ ಎಲ್ಲ ಭಾಗಗಳಲ್ಲಿಯೂ ಹಾಗೂ ದಿಕ್ಕುಗಳಲ್ಲಿಯೂ ನಿರಂತರ ಚಟುವಟಿಕೆಗಳು ಪ್ರಾರಂಭಗೊಂಡವು. ವೈದಿಕರಿಗೆ ಯೋಗ್ಯ ಸ್ಥಾನಮಾನ ಸಿಗಲು ಆರಂಭವಾಯಿತು. ವೈದಿಕ ಅಭ್ಯಾಸಕ್ಕೆ ಹೆಚ್ಚು ಚಾಲನೆ ಸಿಕ್ಕಿತು. ಸಂಸ್ಕೃತ ಭಾಷೆ ಅಭ್ಯಾಸಕ್ಕಾಗಿ ಪ್ರಾಶಸ್ತ್ಯ ಸಿಕ್ಕಿತು. ಸೋಂದಾ ಊರಿನ ಬಗ್ಗೆಯೂ ಹೆಚ್ಚಿಗೆ ಅಭ್ಯಾಸ ಮಾಡಲು ಇತಿಹಾಸಕಾರರು ಮುಂದಾದರು ಮತ್ತು ಇತಿಹಾಸ-ಕಾರರ ಸಮ್ಮೇಳನ ಜರುಗಿತು. ಅಖಿಲ ಭಾರತ ಸಂಸ್ಕೃತ ಸಮ್ಮೇಳನ ಹಾಗೂ ಅಧ್ಯಾತ್ಮಕತೆಗೆ ಹೆಚ್ಚು ಒತ್ತುಕೊಟ್ಟು ಕೆಲಸ ಆರಂಭಗೊಂಡವು. ಮಠದ ಆಗು ಹೋಗುಗಳಲ್ಲಿಯೂ ಕೂಡಾ ಆಸ್ತೆಯನ್ನು ವಹಿಸಿ ಮಠದ ಜಮೀನುಗಳ ಸುಧಾರಣೆ ಬಗ್ಗೆ ಲಕ್ಷ ಕೊಟ್ಟು ಆ ಬಗ್ಗೆಯೇ ಪ್ರತ್ಯೇಕ ಸಮಿತಿಯನ್ನು ನೇಮಿಸಿ ಉತ್ಪನ್ನ ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ''ಪರಿಸರವಾದಿಗಳೂ, ಜಿಲ್ಲೆಯ ಔದ್ಯೋಗಿಕರಣಕ್ಕೆ ಹಾಗೂ ಪ್ರಗತಿಗೆ ವಿರೋಧಕರು ಅಲ್ಲ'' ಎಂಬುದನ್ನು ಎತ್ತಿ ತೋರಿಸಲು, ಪರಿಸರ ನಾಶವಿಲ್ಲದೇ ಉದ್ಯೋಗಾವಕಾಶವನ್ನು ಹೇಗೆ ಹೆಚ್ಚಿಸಬೇಕು ಎಂಬುದರ ಬಗ್ಗೆ ತಜ್ಞರ ಸೆಮಿನಾರನ್ನು ಏರ್ಪಡಿಸಿದರು.

ಪಶ್ಚಿಮವಾಹಿನಿ ನದಿಗಳ ನೀರನ್ನು ಕುಡಿಯುವ ನೀರಿನ ವ್ಯವಸ್ಥೆಗೆ ಹಾಗೂ ನೀರಾವರಿ ಬಗ್ಗೆ ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ಸರಕಾರವು ಸಮಿತಿ-ಯನ್ನು ನೇಮಿಸಿತು. ಅಂತಹ ಸಮಿತಿ ನೇಮಕಾತಿ ಮಾಡುವುದರ ಬಗ್ಗೆ ಸ್ವಾಮೀಜಿ-ಯವರ ಪ್ರೇರಣೆಯೇ ಮೂಲವಾದದ್ದು.

ಹೀಗಾಗಿ ಪರಿಸರ ರಕ್ಷಣೆ, ಪರಿಸರ ನಾಶವಿಲ್ಲದೇ ಉದ್ಯೋಗಾವಕಾಶ ಹೆಚ್ಚಿಸುವುದು ಇವುಗಳ ಬಗ್ಗೆ ಜಿಲ್ಲೆಯವರು ಯೋಚಿಸುವಂತಾಯಿತು. ತಮಗೆ ಮನಬಂದಂತೆ ಯೋಜನೆಗಳನ್ನು ಈ ಜಿಲ್ಲೆಯ ಮೇಲೆ ಹೇರಿ ಪರಿಸರ ನಾಶ ಮಾಡುವ ಯೋಜನೆಯು ನಿಲ್ಲುವಂತಾಯಿತು.

ಅವರು ಇಂದು ವಿದ್ವತ್ತಿನಲ್ಲಿಯೂ ಕೂಡಾ ಮಠದ ಕೀರ್ತಿಯನ್ನು ಎಲ್ಲಾ ಕಡೆಗೂ ಹಬ್ಬಿಸಿದ್ದು, ಬೆಂಗಳೂರಿನ ಹತ್ತಿರ ಇರುವ ಅರಿಶಿನಕುಂಟೆಯಲ್ಲಿ ಕೀರ್ತನ ಮಹರ್ಷಿಗಳಾದ ಶ್ರೀ ಕೇಶವದಾಸರು - ಎಲ್ಲ ಮಠದ ಸ್ವಾಮಿಗಳ ಪರಿಷತ್ತನ್ನು ಕರೆದಾಗ ಅತ್ಯಂತ ಕಿರಿಯ ಸ್ವಾಮಿಗಳೆನಿಸಿದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರು ಮಾಡಿದ ಭಾಷಣ ಎಲ್ಲರ ಲಕ್ಷ್ಯವನ್ನು ಸೆಳೆದಿತ್ತು.

ತಮ್ಮ ಪ್ರವಾಸದಲ್ಲಿ ಶಿಷ್ಯರ ಬಗ್ಗೆ ಅತ್ಯಂತ ಕಾಳಜಿಯನ್ನು ವಹಿಸುತ್ತಾರೆ ಎಂಬುದು ಸೋದಾಹರಣವಾಗಿ ತಿಳಿದು ಬಂದಿತು. ಒಂದೆರಡು ಸಲ ಅವರೊಡನೆ ಕಾಂಚಿಗೆ ಹೋಗುವ ಸುಯೋಗ ಒದಗಿತು. ಆಗ ಪಾಠ ಶಾಲೆ ವಿದ್ಯಾರ್ಥಿಯೊಬ್ಬರು ಜ್ವರದಿಂದ ಬಳಲುತ್ತಿದ್ದರು. ಅವರ ಯೋಗ ಕ್ಷೇಮವನ್ನು ಅವರು ಆಗಾಗ ವಿಚಾರಿಸುತ್ತಿದ್ದರು ಹಾಗೂ ಪ್ರವಾಸದಲ್ಲಿ ನಮ್ಮ ಸೌಕರ್ಯದ ಬಗ್ಗೆ ಕಾಳಜಿಯನ್ನು ವಹಿಸುತ್ತಿದ್ದರು. ಹೀಗೆ ಎಲ್ಲ ರೀತಿಯಿಂದಲೂ ಅವರ ಗುಣಗಳು ಮೆಚ್ಚತಕ್ಕಂತಹುದು.

ಪೀಠಾರೋಹಣ ಕಾಲದಿಂದ ಈವರೆಗೂ ಮಠ ಮಾಡಿದ ಪ್ರಗತಿ ನೋಡಿದರೆ ಅಬ್ಬಾ! ಎನಿಸುತ್ತದೆ. ಯಾವುದೇ ದೊಡ್ಡ ಹಣದ ಸಂಪತ್ತು ಇಲ್ಲದೇ ಇಂದು ಮಠ ಎಲ್ಲ ರೀತಿಯಲ್ಲಿಯೂ ತನ್ನ ಭವ್ಯತೆಯನ್ನೇ ಹೊಂದಿದೆ. ಅದಕ್ಕೆ ಅವರ ಪ್ರೇರಣೆಯೇ ಮುಖ್ಯ ಕಾರಣವಾಗಿದೆ. ಶಿಷ್ಯರ ನಿತ್ಯ ಜೀವನದಲ್ಲಿಯೂ ಅವರು ಕ್ರಾಂತಿಯನ್ನು ಮಾಡಿದ್ದಾರೆ. ಗಾಯತ್ರೀ ಜಪಯಜ್ಞವೇ ಇದಕ್ಕೆ ನಿದರ್ಶನ. ಈ ಹೊತ್ತು ಹಳ್ಳಿ ಹಳ್ಳಿಗಳಲ್ಲಿ ಮನೆ ಮನೆಯಲ್ಲಿ ತಪ್ಪದೇ ಗಾಯತ್ರೀ ಜಪ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಹಾಗೆಯೇ ವ್ಯಸನರಹಿತ ಸಮಾಜದ ಬಗ್ಗೆ ಚಳುವಳಿಯನ್ನು ಆರಂಭಿಸಿ ಸಮಾಜವನ್ನು ವ್ಯಸನದಿಂದ ದೂರು ಮಾಡಲಿಕ್ಕೆ ಸಹಾಯ ಮಾಡಿದ್ದಾರೆ. ಅದರಂತೆಯೇ ಅಡಿಕೆದರ ಬಿದ್ದು ಶಿಷ್ಯರು ಕಂಗಾಲಾದಾಗ ಶ್ರೀ ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಪ್ರಾರಂಭಿಸಿ ಧೈರ್ಯವನ್ನು ತುಂಬುತ್ತಿದ್ದರಲ್ಲದೇ ಪರಮಾತ್ಮನ ಕೃಪೆಯೂ ಬೇಕು ಎಂಬುದರ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಿದ್ದಾರೆ.

ಶ್ರೀ ಗಂಗಾಧರೇಂದ್ರ ಸ್ವಾಮೀಜಿಯವರು ಪೀಠಕ್ಕೆ ಬಂದ ನಂತರ ಶ್ರೀಮಠದಲ್ಲಿ ಎಡೆಬಿಡದ ಕಾರ್ಯಕ್ರಮ ಆರಂಭವಾಗಿದೆ. ವೈದಿಕ ಕಾರ್ಯ-ಗಳಲ್ಲದೇ ಸಾಮಾಜಿಕ ಚಟುವಟಿಕೆಗಳನ್ನು ಕೈಕೊಂಡು ಸಮಾಜವನ್ನು ಜಾಗ್ರತ-ಗೊಳಿಸಿದೆ. ಗಾಯತ್ರೀ ಜಪಯಜ್ಞ ಉಲ್ಲೇಖವನ್ನು ಈಗಾಗಲೇ ಮಾಡಲಾಗಿದೆ. ಅದಲ್ಲದೇ ಸ್ತ್ರೀಭ್ರೂಣ ಹತ್ಯೆಯ ಬಗ್ಗೆ ಆಂದೋಲನ ಆರಂಭಮಾಡಿದ್ದು ಸಮಾಜದಲ್ಲಿ ಇರುವ ಸ್ತ್ರೀ ಪುರುಷರ ಸಂಖ್ಯೆಯ ಅಸಮತೋಲನ ಹೋಗ-ಲಾಡಿಸಲು ಮತ್ತು ಅಸಮತೋಲನದಿಂದ ಆಗಬಹುದಾದ ಅನಾಹುತಗಳ ಬಗ್ಗೆ ಸಮಾಜವನ್ನು ಎಚ್ಚರಿಸುವ ಕಾರ್ಯ ನಡೆದಿದೆ.

ಹಿಂದೆ ಕೆಲವರು ಮಠ ಏತಕ್ಕೆ ಎಂದು ಕೇಳುತ್ತಿದ್ದರು. ಆದರೆ ಈಗ ಮಠ ಇಲ್ಲದಿದ್ದರೆ ಏನಾಗುತ್ತಿತ್ತು ಎಂದು ಕೇಳಲಾರಂಭಿಸಿದ್ದಾರೆ. ಅನೇಕ ಸಂಕಟಗಳ

ನಿವಾರಣೆ ಆಗಿದ್ದಲ್ಲದೇ ವ್ಯಸನ ರಹಿತ ಸಮಾಜ ನಿರ್ಮಾಣ ಮಾಡುವುದರ ಬಗ್ಗೆ ಮತ್ತು ದೈವೀ ಹಾಗೂ ಸ್ವಚ್ಛ ಜೀವನ ನಡೆಸುವ ಬಗ್ಗೆ ಜನ ಜಾಗ್ರತಿ ಆಗಿದ್ದು ಸಮಾಜ ಒಳ್ಳೆಯ ರೂಢಿ ಸಂಪ್ರದಾಯಗಳನ್ನು ಬೆಳೆಸಿಕೊಳ್ಳಬಹುದೆಂದು ಆಶಿಸಲಾಗಿದೆ. ಶ್ರೀಮಠದ ಕಾರ್ಯ ಚಟುವಟಿಕೆಗಳನ್ನು ವಿವರಿಸುವ ಹಾಗೂ ಆಧ್ಯಾತ್ಮಿಕ ಚಿಂತನೆ ಮಾಡುವ ಲೇಖನಗಳುಳ್ಳ ಮಾಸ ಪತ್ರಿಕೆ ಸ್ವರ್ಣವಲ್ಲಿ ಪ್ರಭಾ ಕೂಡಾ ಆರಂಭಿಸಿದ್ದಾರೆ.

ನಾನು ವೈಯಕ್ತಿಕವಾಗಿ ಹೇಳುವುದಾದರೆ ಕಳೆದ ನಲ್ವತ್ತೈದು ವರ್ಷಗಳಿಂದ ಮಠದ ಸಂಪರ್ಕವನ್ನು ಹೊಂದಿದವನಾಗಿದ್ದು ಹಿಂದೆಂದೂ ಕಾಣದ ಚಟುವಟಿಕೆಗಳನ್ನು ಕಾಣುತ್ತಿದ್ದೇನೆ. ಇದಕ್ಕೆಲ್ಲಾ ಚೈತನ್ಯ ಶಕ್ತಿಯಾಗಿ ಮಠದ ಶಿಷ್ಯರಿಗೆ ಲಭಿಸಿರುವ ಎಳೆಯ ವಯಸ್ಸಿನ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿಯವರನ್ನು ಪಡೆದಿದ್ದು ಶಿಷ್ಯರ ಪುಣ್ಯ. ಮತ್ತು ಹಿಂದಿನ ಸ್ವಾಮೀಜಿಯವರು ಕೂಡಾ ತನ್ನ ನಂತರ ಒಳ್ಳೆಯ ಗುರುಗಳೆ ಸಿಗುತ್ತಾರೆ ಎಂದು ನೀಡಿದ ಆಶ್ವಾಸನೆ ನಿಜವಾಗಿದೆ. ಶ್ರೀ ಮಠದ ಕೀರ್ತಿ ಬರುವ ವರ್ಷಗಳಲ್ಲಿ ಮತ್ತೂ ಉತ್ತುಂಗಕ್ಕೇರಿ ಮುಟ್ಟುತ್ತದೆ ಎಂದು ಶಿಷ್ಯರು ಭರವಸೆ ಇಟ್ಟುಕೊಂಡಿದ್ದಾರೆ.

❁❁❁

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀಯವರ ಪೀಠಾರೋಹಣಕಾಲದಲ್ಲಿ
ಶ್ರೀ ಶ್ರೀ ಜಯೇಂದ್ರ ಸರಸ್ವತೀ ಅವರು.

ಶ್ರೀ ವೀರೇಂದ್ರ ಹೆಗಡೆಯವರು, ಯತಿವರೇಣ್ಯರನ್ನು ವಂದಿಸುತ್ತಿರುವುದು.

ಶ್ರೀ ಶ್ರೀಗಳು ಶ್ರೀ ಪೇಜಾವರ ಸ್ವಾಮಿಗಳನ್ನು ಶಾಲು ಹೊದೆಸಿ ಸನ್ಮಾನಿಸುತ್ತಿರುವುದು.

ಸಮ್ಮೇಲನದಲ್ಲಿ ಶ್ರೀಶ್ರೀಗಳು ಭಾಷಣ ಮಾಡುತ್ತಿರುವುದು. ಕೇಂದ್ರದ ಮಂತ್ರಿಗಳಾದ ಶ್ರೀ ಅನಂತಕುಮಾರ್, ಶ್ರೀ ಕಲ್ಮಣ್‌ಕರ್‌ರವರು, ಶ್ರೀ ಶಾಮರಾವ್ ಅವರು.

ಗಾಯತ್ರಿಜಪಯಜ್ಞ ಸಂದರ್ಭದಲ್ಲಿ ಶ್ರೀಮಠಕ್ಕೆ ಭೇಟಿ ನೀಡಿದ
ಪ್ರಧಾನಿ ಅಟಲ್ ಬಿಹಾರೀ ವಾಜಪೇಯಿಯವರನ್ನು ಗೌರವಿಸುತ್ತಿರುವುದು.

ಶಾಲ್ಮಲಾ ನದಿಯಲ್ಲಿ ಸನ್ಯಾಸ ಸ್ವೀಕಾರ ಸಂದರ್ಭದಲ್ಲಿ ಶ್ರೀ ಶ್ರೀಗಳವರು. ಸನ್ಯಾಸದೀಕ್ಷೆ ನೀಡಿದ ಶ್ರೀ ಶ್ರೀ ಜಯೇಂದ್ರ ಸರಸ್ವತೀ ಸ್ವಾಮಿಯವರು.

''ಸಂವಿಧಾನದಲ್ಲಿ ಆಧ್ಯಾತ್ಮಿಕತೆ'' ವಿಚಾರಗೋಷ್ಠಿಯಲ್ಲಿ ಶ್ರೀಶ್ರೀಗಳೊಂದಿಗೆ, ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು, ಶ್ರೀ ಶ್ರೀ ಶಿವರುದ್ರಸ್ವಾಮಿಗಳು, ಬೇಲಿಮಠ, ಶ್ರೀ ರಂಗಪ್ರಿಯ ಸ್ವಾಮಿಗಳು, ಶ್ರೀ ಶ್ರೀ ಪುತ್ತಿಗೆಮಠ ಸ್ವಾಮಿಗಳು, ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರು, ಶ್ರೀ ರಾಮಕೃಷ್ಣ ಹೆಗಡೆಯವರು, ಶ್ರೀ ರಾಮಾಜೋಯಿಸ್ ಅವರು.

ಅಭಯ ಪ್ರದಾನ

(ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಯವರು ಸನ್ಯಾಸವನ್ನು ಸ್ವೀಕರಿಸಿ ಪೀಠಾರೋಹಣ ಮಾಡಿದ ಸಂದರ್ಭದಲ್ಲಿ ಶಿಷ್ಯರಿಗೆ ಆಶ್ವಾಸನಾರೂಪವಾಗಿ ಮಾಡಿದ ಭಾಷಣ)

ಜ್ಯೋತಿಯು ಬೆಳಗುತ್ತಿರುವಂಥ ಶುಭಸಂದರ್ಭದಲ್ಲಿ ಅಭಯವನ್ನು ಕೊಡಿ ಎಂದು ಪ್ರಾರ್ಥನೆ ಮಾಡುತ್ತಿರುವಂಥ ಸಮಸ್ತ ಶಿಷ್ಯ ಮಹಾಜನರೆ! ವೇದಿಕೆಯ ಮೇಲೆ ಮಂಡಿಸಿದಂಥ ಎಲ್ಲ ಅತಿಥಿಗಳೇ! ಸ್ವಾಗತಸಮಿತಿಯ ಪದಾಧಿಕಾರಿಗಳೇ! ಹಾಗೂ ಎಲ್ಲ ಶ್ರದ್ಧಾಳುಗಳೆ!

ಸುಂದರವಾದಂಥ ಸಸ್ಯಶ್ಯಾಮಲವಾದ ಶಾಲ್ಮಲೀ ತಟದಲ್ಲಿ, ಇಷ್ಟು ರಮಣೀಯ-ವಾದ ವಾತಾವರಣದಲ್ಲಿ, ತಪೋವನದಲ್ಲಿ, ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಯವರ ತಪೋಭೂಮಿಕೆಯಲ್ಲಿ ತಾವೆಲ್ಲ ಸೇರಿದ್ದೀರಿ.

ಇಂಥ ತಪೋಭೂಮಿಕೆ ಹೇಗೆ ನಿರ್ಮಾಣವಾಯಿತು? ಕಾರಣವೇನು? ಇಂಥ ಸಸ್ಯಶ್ಯಾಮಲತೆ ಏಕೆ ಬಂತು? ನಾವು ಪುರಾಣಗಳಲ್ಲಿರಲಿ, ಇತಿಹಾಸದಲ್ಲಿರಲಿ ತಪೋಭೂಮಿ ಎಂದು ನಮ್ಮ ಮನಸ್ಸಿಗೆ ಬಂದಾಗ ಸುಂದರ ಹೂಗಿಡಗಳು, ವೃಕ್ಷಗಳು ಲತೆಗಳೂ ನಿರ್ಭಯವಾಗಿ ಸಂಚರಿಸುವ ಪ್ರಾಣಿಗಳು, ಸದಾ ಅಧ್ಯಯನ-ಅಧ್ಯಾಪನ, ಯಜನ-ಯಾಜನ ನಡೆಯುತ್ತಿರುವುದು. ಮನೋಗೋಚರವಾಗುತ್ತದೆ. ಅದೇ ರೀತಿ ಇಂದಿನ ವಾತಾವರಣವಿದೆ. ಅದೇ ತಪೋಭೂಮಿ ಇದೆ. ಅದಕ್ಕೆ ಸುಂದರ ಪರಿಸರವು ಮೆರಗು ಕೊಟ್ಟಿದೆ.

ಈ ಶುಭ ಸಮಾರಂಭದಲ್ಲಿ ಶ್ರೀ ಗುರುಗಳು ಹೇಳಿದ ಹಾಗೆ ಈ ಪರಂಪರೆಗೆ ಹೊಸ ಜ್ಯೋತಿಯನ್ನು ಸೇರಿಸಿ, ಆ ಜ್ಯೋತಿಯಲ್ಲಿ ಅಭಯವನ್ನು ಕೇಳುತ್ತಿದ್ದೀರಿ.

ಈಗ ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ಈ ರೀತಿಯಾದ ಪರಂಪರೆ ವಿಚ್ಛಿನ್ನವಾಗದಂತೆ ಏಕೆ ನಾವು ಈ ರೀತಿ ಮುಂದುವರಿಸುತ್ತ ಹೋಗುತ್ತಿರುತ್ತೇವೆ?

ಈ ದೇಶದಲ್ಲಿ ಅನೂಚಾನವಾಗಿ ತಪಸ್ಸು ನಡೆಯುತ್ತಿರಲಿ. ಈ ಪ್ರದೇಶದಲ್ಲಿ ಆರಂಭವಾದ, ನಡೆದುಕೊಂಡು ಬಂದ ತಪೋನುಷ್ಠಾನ ಪದ್ಧತಿಯು ಉತ್ತರೋತ್ತರವಾಗಿ ಅಭಿವೃದ್ಧಿಯಾಗಲಿ ಎಂದಲ್ಲವೆ ನೀವು ಎಲ್ಲಾ ಮಹಾಜನಗಳು ಸೇರಿ ಬಿನ್ನವತ್ತಳೆಯನ್ನು ಸಮರ್ಪಿಸಿದ್ದೀರಿ! ಇಂಥ ಶುಭ ಸಂದರ್ಭದಲ್ಲಿ ಅಭಯವನ್ನು ಯಾವ ರೀತಿ ಕೊಡಬೇಕು. ಈ ರೀತಿಯ ಪರಂಪರೆ, ಆ ಪರಂಪರೆಯ ರಕ್ಷಣೆ, ಪರಂಪರೆಯ ರಕ್ಷಣೆಯ ಮೂಲಕ ಎಲ್ಲ ಭಕ್ತಾದಿಗಳ ಶ್ರೀರಕ್ಷೆ, ಹಾಗೂ ಸನಾತನ ಧರ್ಮದ ಸಂರಕ್ಷಣೆ ಈ ಎಲ್ಲವೂ ಕೂಡ ದೃಷ್ಟಿಯಲ್ಲಿ ಇರಬೇಕಾಗುತ್ತದೆ. ನಮ್ಮ ಸನಾತನ ಸದ್ಧರ್ಮದ ಸಂರಕ್ಷಣೆ ಏಕೆ? ಈಗಾಗಲೇ ವೇದಿಕೆಯ ಮೇಲೆ ಭಾಷಣ ಮಾಡಿದಂಥ ಮಹನೀಯರೆಲ್ಲ ಹೇಳಿದರು. ''ಶಾಂತಿ ಬೇಕು'' ಶಾಂತಿಯನ್ನು ಅದರಲ್ಲೂ ಇವತ್ತಿನ ದಿನಗಳಲ್ಲಿ ಪಶ್ಚಿಮ ದೇಶಗಳಲ್ಲಿ ಅರಬದೇಶಗಳಲ್ಲಿ ಆಗುತ್ತಿರುವ ಅಶಾಂತಿ ವಿಚಾರ ಇರಲಿ. ಆದರೆ ನಮ್ಮಲ್ಲೇ ಅಶಾಂತಿ ಇದೆ. ನಮ್ಮ ದೇಶದ ಒಂದೊಂದು ರಾಜ್ಯದಲ್ಲಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕುಗಳಲ್ಲಿ, ಒಂದೊಂದು ವ್ಯಕ್ತಿಯಲ್ಲೂ ಅಶಾಂತಿ ಇದೆ. ಪ್ರತಿವ್ಯಕ್ತಿಯಲ್ಲಿ ತುಂಬಿದ ಈ ಎಲ್ಲ ಅಶಾಂತಿಯನ್ನು ಶಮನ ಮಾಡಿದರೆ, ದೇಶಕ್ಕೆ ಶಾಂತಿಯನ್ನು ಉಂಟುಮಾಡುವುದು ಬೇರೆ ಏನೂ ಉಳಿಯುವುದಿಲ್ಲ. ಪ್ರತ್ಯೇಕ ವ್ಯಕ್ತಿಗೂ ಕೂಡ ಸನಾತನ ಧರ್ಮದ ಸೊಂಪು, ಇಂಪು ಮುಟ್ಟಿದರೆ ತಟ್ಟಿದರೆ ಅವನ ಮನಸ್ಸು ನೆಮ್ಮದಿಯಿಂದ ಬಾಳುತ್ತದೆ. ಆದ್ದರಿಂದ ಸನಾತನ ಧರ್ಮದ ರಕ್ಷಣೆ ಅಗತ್ಯ. ಈ ರಕ್ಷಣೆಗೋಸ್ಕರ ಶ್ರೀ ಶಂಕರಭಗವತ್ಪಾದರು ಮಠಾಮ್ನಾಯವನ್ನು ಸ್ಥಾಪನೆ ಮಾಡಿದರು. ಅದೇ ರೀತಿ ಮುಂದಿನ ಎಲ್ಲ ಯತಿವರ್ಯರೂ ಕೂಡ ಆ ಪರಂಪರೆಯನ್ನು ಮುಂದುವರಿಸಿ-ಕೊಂಡು ಬಂದರು. ಆ ಪರಂಪರೆಯನ್ನು ಒಂದು ಕಡೆ ನಿಲ್ಲಿಸಿ, ಮಠಗಳು ಎಂದು ವಿಶೇಷ ನಾಮಧೇಯದಿಂದ ಕರೆಯುತ್ತೇವೆ. ಇಂಥ ಮಠಗಳನ್ನೆಲ್ಲ ರಕ್ಷಣೆ ಮಾಡುವುದು ಅಗತ್ಯ. ತತ್ರಾಪಿ ನಾವು ಇಲ್ಲಿ ಸೇರಿದ್ದು ನಮ್ಮ ಮಠದ ವಿಚಾರವನ್ನು ಮಾಡಲಿಕ್ಕೆ. ಮೊದಲು ಮನೆಯನ್ನು ಗೆಲ್ಲಬೇಕಂತೆ. ಆಮೇಲೆ ಮಾರನ್ನು ಗೆಲ್ಲುವುದು. ಈ ದಿನಗಳಲ್ಲಿ ಕೇಳಿ ಬರುತ್ತಿದೆ. ''ಮಠವನ್ನು ಮುಳುಗಿಸಿ ಬಿಡಬೇಕು'' ಎಂದು. ಬೇಡ್ತಿಯೋಜನೆಯನ್ನು ನಾವು ಕೇಳುತ್ತಿದ್ದೇವೆ. ನಮ್ಮ ಕಿವಿಗೆ ಬಂದು ಕುಕ್ಕುತ್ತಾ ಇದೆ. ಹೌದು ಸನಾತನ ಧರ್ಮ ಸಂರಕ್ಷಣೆಗೆ ಎಂದೇ ನಮ್ಮನ್ನು ಕುಳ್ಳಿರಿಸಿದ್ದೀರಿ. ಆದರೂ ಕೂಡ ಸನಾತನ ಧರ್ಮದ ರಕ್ಷಣೆ ಎನ್ನುವುದು ಇಲ್ಲಿಯ ಪರಿಸರ ರಕ್ಷಣೆ, ಶ್ರೀಮಠದ ರಕ್ಷಣೆ ಸಮಸ್ತ ಶಿಷ್ಯ ಜನರ ರಕ್ಷಣೆಯಲ್ಲೂ ಅಡಕವಾಗಿದೆ. ಆದ್ದರಿಂದ ಈ ಬೇಡ್ತಿಯೋಜನೆಯನ್ನು ನೆಚ್ಚಿಕೊಂಡು ಅನ್ಯಾಯವಾಗುತ್ತಿದೆ. ಯಾವುದೋ

ಯುವಕ ಸಂಘದವರು ಆ ವಿಷಯವನ್ನು ನಮ್ಮಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ಯುಕ್ತವೇ ಆಗಿದೆ. ಯಾವ ವಿಧದಲ್ಲೂ ಶ್ರೀಮಠವನ್ನು ರಕ್ಷಣೆ ಮಾಡಲಿಕ್ಕೆ ನಾವೆಲ್ಲರೂ ಕಟಿಬದ್ಧರಾಗಿರಬೇಕು. ಆಗ ಕೇವಲ ನಮ್ಮ ರಕ್ಷಣೆ ಮಾತ್ರವಲ್ಲ. ಸನಾತನ ಧರ್ಮ ಪರಂಪರೆಯ ಈ ತಪೋಭೂಮಿಯೂ ರಕ್ಷಿತವಾಗುತ್ತದೆ. ನಮ್ಮೆಲ್ಲರ ರಕ್ಷಣೆಯೂ ಆಗುತ್ತದೆ. ಈ ಸಂರಕ್ಷಣಾಭಾವನೆ ನಮ್ಮ ಮನಸ್ಸಿನಲ್ಲಿ ಯಾವತ್ತೂ ಇರಬೇಕು.

ಇನ್ನು ಶ್ರೀ ಮಠದ ಸಂಪ್ರದಾಯಗಳನ್ನು ಉತ್ತರೋತ್ತರವಾಗಿ ಅಭಿವೃದ್ಧಿ ಪಡಿಸಬೇಕು. ಈ ಮಠದಲ್ಲಿ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಉಪಾಸನೆಗಳನ್ನು ಅರ್ಚನೆಗಳನ್ನು ಅನುಷ್ಠಾನಗಳನ್ನು ಇನ್ನೂ ಬೆಳೆಸಬೇಕು ಎಂದು ವಿನಂತಿಸಿದ್ದೀರಿ. ಇನ್ನು ಮುಂದೆ ಶ್ರೀ ಮಠದಲ್ಲಿ ನಡೆದುಕೊಂಡು ಬರುತ್ತಿರುವ ಯಾವ ಅರ್ಚನೆಗೂ ಉಪಾಸನೆಗೂ ನ್ಯೂನತೆ ಬರುವುದಿಲ್ಲ. ಇತೋಪ್ಯತಿಶಯವಾಗಿ ವರ್ಧಿಸುತ್ತವೆ ಎಂದು ಧೈರ್ಯವಾಗಿ ಹೇಳುತ್ತೇವೆ. ಇದರಲ್ಲಿ ಸಂಶಯಬೇಡ. ಭಯಬೇಡ. ಶ್ರೀ ಮಠದ ಎಲ್ಲ ಶಿಷ್ಯರು ಅತಿಶಯಭಕ್ತಿಯಿಂದ ಮಠದ ಸೇವೆ ಮಾಡುತ್ತಿದ್ದಾರೆ. ಶ್ರೀ ಗುರುಚರಣರು ಆ ರೀತಿಯ ಉಪಾಸನೆಯ ಪದ್ಧತಿಯನ್ನು ಇಟ್ಟುಕೊಂಡಿದ್ದರಿಂದ. ಆದ್ದರಿಂದ ಅವುಗಳನ್ನು ಬೆಳೆಸುವುದು ಅತ್ಯಗತ್ಯ. ಅವುಗಳನ್ನು ಬೆಳೆಸುವುದರ ಜೊತೆಯಲ್ಲಿಯೇ ವೈದಿಕ-ಪ್ರೋತ್ಸಾಹವೂ ಅಗತ್ಯ. ವೇದಗಳಿಗೆ ಶಾಸ್ತ್ರಗಳಿಗೆ ಅತ್ಯಗತ್ಯ ಪ್ರೋತ್ಸಾಹವನ್ನು ಕೊಡಲೇ ಬೇಕಾಗುತ್ತದೆ. ಯಾಕೆ? ''ಮಠ'' ಎಂದರೆ ಏನು ? ಸಂಸ್ಕೃತದ ಶ್ಲೋಕ ಒಂದು ಹೇಳುತ್ತದೆ. ಮಠವೆಂದರೆ ಅಧ್ಯಯನಶೀಲಛಾತ್ರರು ಅಲ್ಲಿ ಇರಲೇಬೇಕು. ಆದ್ದರಿಂದ ಮಠಶಬ್ದವು ಸಾರ್ಥಕವಾಗಬೇಕಾದರೆ ಇಲ್ಲಿ ವೇದಾಧ್ಯಯನ ಶಾಸ್ತ್ರಾಧ್ಯಯನ ನಡೆಯಲೇಬೇಕು. ಇನ್ನೂ ಒಂದು ಕಾರಣ. ಮಠದಲ್ಲಿ ನಾವು ಯಾವ ರೀತಿ ವಾತಾವರಣವನ್ನು ಬಯಸಬೇಕು? ಯಾವ ರೀತಿ ಪರಿಸರವನ್ನು ನಾವು ಕಾಣಲು ಬಯಸುತ್ತೇವೆ. ಒಂದು ಶಾಂತವಾದ, ಹೊರಗಿನ ಲೌಕಿಕ ಪ್ರಪಂಚಕ್ಕೆ ಭಿನ್ನವಾದಂಥ, ತಪೋಮಯವಾದಂಥ ವಾತಾವರಣವನ್ನು ನೋಡಲು ಬಯಸುತ್ತೇವೆ. ಅಂಥ ವಾತಾವರಣಕ್ಕೆ ಸಾಧನಗಳು ಎರಡೇ. ಒಂದು ತಪೋನುಷ್ಠಾನ, ಇನ್ನೊಂದು ಅಧ್ಯಯನ-ಅಧ್ಯಾಪನ. ತಪೋನುಷ್ಠಾನವು ದೈವಾನುಗ್ರಹ ಸಾಧ್ಯವಾದದ್ದು. ಆದರೆ ಅಧ್ಯಯನ-ಅಧ್ಯಾಪನ ನಮ್ಮ ಪ್ರಯತ್ನದಿಂದಲೇ ಸಾಧ್ಯ. ಎಲ್ಲ ಶಿಷ್ಯಜನರ ಪ್ರಯತ್ನ ಅದರಲ್ಲಿ ಒಡಗೂಡಿದರೆ ಇನ್ನೂ ಹೆಚ್ಚು ಸಫಲವಾಗುತ್ತದೆ. ಅಧ್ಯಯನ-ಅಧ್ಯಾಪನವೆಂಬ ತಪೋನುಷ್ಠಾನವನ್ನು ಇತೋಪ್ಯತಿಶಯವಾಗಿ ಬೆಳೆಸಬೇಕು. ಸ್ವಾಮಿಗಳೊಬ್ಬರೇ ಇಲ್ಲಿ ತಪಸ್ಸು

ಮಾಡುವವರಲ್ಲ. ತಪಸ್ಸು ಮಾಡುವ ಅನೇಕ ಶಾಸ್ತ್ರಾಧ್ಯಯನ ಶೀಲರು ಇಲ್ಲಿ ಇದ್ದಾರೆ ಎಂದಾಗಬೇಕು. ಅಂಥ ವಾತಾವರಣದ ಸೃಷ್ಟಿಯಾದಾಗ ಸನಾತನ ಧರ್ಮದ ಬೆನ್ನೆಲುಬು ಇನ್ನೂ ಘಟ್ಟಿಯಾಗುತ್ತದೆ. ಹವ್ಯಕ ಸಮಾಜದಲ್ಲಿ ಇಂದು ಸಂಸ್ಕೃತಾಭಿಮಾನ ಹೆಚ್ಚಾಗುತ್ತಿದೆ. ಆದರೆ ವೇದಾಧ್ಯಯನ ಶಾಸ್ತ್ರಾಧ್ಯಯನಗಳು ಇಲ್ಲಿ ಹೆಚ್ಚು ಬೆಲೆಯನ್ನು ಪಡೆಯುತ್ತಿಲ್ಲ. ಈ ಬೆಲೆಯನ್ನು ನಾವು ಇಲ್ಲಿ ತೋರಿಸದೇ ಇನ್ನೆಲ್ಲಿ ತೋರಿಸೋಣ? ಇಷ್ಟು ಅಭಿಮಾನವಿರುವ ಈ ಸ್ಥಳದಲ್ಲಿ ವೇದಕ್ಕೆ ಶಾಸ್ತ್ರಕ್ಕೆ ಯೋಗ್ಯ ಸನ್ಮಾನವನ್ನು ನೀಡದಿದ್ದರೆ ಇನ್ನೆಲ್ಲಿ ನಿರೀಕ್ಷಿಸೋಣ? ಆದ್ದರಿಂದ ಈ ವಿಚಾರವೂ ಕೂಡ ನಮ್ಮ ಮನಸ್ಸಿನಲ್ಲಿ ಇದೆ.

ಇನ್ನು ಈ ದೇಶದ ಸಕಲ ವಿಧ ಶ್ರೇಯಸ್ಸಿಗೂ ಕೂಡ ನಮ್ಮ ಪ್ರಾರ್ಥನೆ ಸಲ್ಲಬೇಕಾಗುತ್ತದೆ. ಈ ದೇಶದ ಸಕಲ ಪ್ರಜೆಗಳ ಮೇಲೂ ನಮ್ಮ ಆಶೀರ್ವಾದ-ವಿರಬೇಕಾಗುತ್ತದೆ. ''ಹವ್ಯಕರು ಮಾತ್ರ ಈ ಮಠದ ಶಿಷ್ಯರು'' ಎಂಬ ಭಾವನೆ ನಮಗೆ ಖಂಡಿತ ಇಲ್ಲ. ಹವ್ಯಕರು ಈ ಮಠಕ್ಕೆ ವಿಶೇಷವಾಗಿ ಸೇವೆ ಸಲ್ಲಿಸುತ್ತಾರೆ. ಅಷ್ಟೆ. ಶ್ರೀ ಶ್ರೀ ಶಂಕರಾಚಾರ್ಯರ ಪರಂಪರೆಯ ಪ್ರತಿಯೊಬ್ಬ ಯತಿಯೂ ಕೂಡ ಈ ದೇಶದ ಈ ಪ್ರಪಂಚದ ಸಕಲ ಭೂತಗ್ರಾಮಗಳಿಗೂ ನೆಮ್ಮದಿ ಸಿಗಲಿ ಎಂದು ಪ್ರತಿಕ್ಷಣದಲ್ಲೂ ಪ್ರತಿ ಉಸಿರಾಟವನ್ನೂ ಮಾಡುತ್ತಾರೆ. ಆದ್ದರಿಂದ ಸಮಸ್ತ ಭಾರತ ಪ್ರಜೆಗಳೂ ಶಿಷ್ಯರೆ. ಅವರೆಲ್ಲರೂ ಉದ್ಧಾರ್ಯರೇ. ಅವರೆಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ನಮ್ಮ ಕರ್ತವ್ಯವೇ.

ಈ ದೇಶ ಸುಶಾಂತವಾಗಿ ನಡೆಯಬೇಕೆಂದರೆ ಎಲ್ಲ ಕಡೆಯಲ್ಲೂ ದೃಷ್ಟಿಹರಿಸ-ಬೇಕಾದದ್ದು ಅಗತ್ಯ. ಅಂದರೆ ಈ ದೇಶದ ರಾಜಕೀಯಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿಗಳ ಬದಲಾವಣೆಗಳನ್ನು ಗಮನಿಸಬೇಕಾಗುತ್ತದೆ. ಇವುಗಳ ಎಲ್ಲಕಡೆ ಸಂಪರ್ಕವನ್ನೂ ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಈ ರೀತಿಯ ಸರ್ವತೋಮುಖ ಅಭಿವೃದ್ಧಿಯನ್ನು ಯತಿಗಳಿಂದ ಒಮ್ಮೆಲೆ ಬಯಸುವುದು ಸರಿಯಲ್ಲ ಎನ್ನಿಸುತ್ತದೆ. ಹೌದು ರಾಜಕೀಯ ಅಭಿವೃದ್ಧಿಯಾಗಬೇಕು. ಸಾಮಾಜಿಕ-ಬದಲಾವಣೆಗಳೂ, ಅಭಿವೃದ್ಧಿಗಳೂ ಆಗಬೇಕು. ಅವು ಯತಿವರ್ಯರು ನೀಡುವ ಆಶೀರ್ವಾದದ ನಂತರದ ಬೆಳವಣಿಗೆಗಳು. ಅವರು ಆಶೀರ್ವಾದವನ್ನು ಕೊಡುತ್ತಾರೆ. ಅಷ್ಟೆ. ಆ ಮೇಲೆ ಶ್ರೇಯೋಮಾರ್ಗದಲ್ಲಿ ಅಭಿವೃದ್ಧಿಯಾಗಬೇಕು. ನೇರವಾಗಿ ರಾಜಕೀಯವನ್ನು ಪ್ರವೇಶಿಸುವುದು ಉಚಿತವಲ್ಲ. ಬಯಸುವುದೂ ಅಲ್ಲ.

ಇಂಥ ಅಭಯ ಪ್ರದಾನ ಸಮಾರಂಭದಲ್ಲಿ ಇನ್ನೊಂದು ಮಾತನ್ನು ಅವಶ್ಯವಾಗಿ ಹೇಳಬೇಕೆಂದು ಮನಸ್ಸು ಬಯಸುತ್ತಿದೆ. ತಮಗೆಲ್ಲ ಗೊತ್ತಿರುವಂತೆ ಇನ್ನು ಹತ್ತು

ವರ್ಷಗಳಲ್ಲಿ ಈ ಶತಮಾನ ಮುಗಿದು ಹೋಗುತ್ತದೆ. ಶತಮಾನವು ಕಳೆದು ಹೋಗುವ ಈ ಸಂದರ್ಭವನ್ನು ಹಲವು ಮುಖಗಳು, ಹಲವು ವಿಧದಿಂದ ವೀಕ್ಷಿಸುತ್ತಿದ್ದಾರೆ. ಅನೇಕ ವಿದ್ವಾಂಸರು ವಿಚಿತ್ರ ದೃಷ್ಟಿಯಿಂದ ನೋಡಿದ್ದಾರೆ. ಪಶ್ಚಿಮದ ವಿದ್ವಾಂಸ ನಾರ್ಸ್ಲೊಡಾಮಾ ಆ ಕಾಲವನ್ನು ''ಸಂದಿಗ್ಧ ಪರಿಸ್ಥಿತಿ. ಸಂಧಿಕಾಲವೆಂದು ವಿವರಿಸಿದ್ದಾನೆ. ''ವಿಚಿತ್ರ ಬದಲಾವಣೆ. ಹೊಸಯುಗ ಆರಂಭವಾಗುತ್ತದೆ'' ಎಂದಿದ್ದಾನೆ. ಆ ಕಾಲ ಬಹಳ ದೂರವಿಲ್ಲ. ಆ ಕಾಲದಲ್ಲಿ ಯಾವ ರೀತಿ ಬದಲಾವಣೆ-ಯಾಗುತ್ತದೆಯೋ ನಾವು ಕಂಡಿಲ್ಲ. ದೇವರಿಗೆ ಗೊತ್ತು. ಪರಂಪರೆಯಿಂದ ನಡೆದುಬಂದ ವರ್ಣಾಶ್ರಮ ಧರ್ಮಗಳು ಪುನಃ ಪ್ರತಿಷ್ಠಿತವಾಗಬಹುದು. ಇನ್ನೂ ಬಲವತ್ತರವಾಗಿ ರೂಢ ಮೂಲವಾಗಬಹುದು. ಅಥವಾ ಋಷಿ-ಮುನಿಗಳ ಕಾಲದ ಸನಾತನ ಸಂಸ್ಕೃತಿ ಹೊಸ ವೇಷವನ್ನು ಕಟ್ಟಿಕೊಂಡು ಪುನಃ ಪ್ರತಿಷ್ಠಾಪಿತ-ವಾಗಬಹುದು. ಆದರೆ ನಾವು ಯಾವುದೇ ವಿಧವಾದ ಬದಲಾವಣೆಗೂ ಸನ್ನದ್ಧರಾಗಿ ಇರಬೇಕಾಗುತ್ತದೆ. ಆ ದಿಶೆಯಲ್ಲಿ ಮಠದ ವತಿಯಿಂದ ಎಲ್ಲ ಶಿಷ್ಯರೂ ಸಿದ್ಧರಾಗಿ ಇರಬೇಕಾಗುತ್ತದೆ. ಇವತ್ತು ಆ ಬದಲಾವಣೆಯ ಸೂಚನೆಗಳು ಕಾಣುತ್ತಿದೆ. ಜಗತ್ತಿನಲ್ಲಿ ಅಶಾಂತಿ ತಲೆ ದೋರುತ್ತಿದೆ. ಆ ಅಶಾಂತಿಯನ್ನು ಸಹಿಸುವ ಶಕ್ತಿಯನ್ನು ನಾವು ಪಡೆದುಕೊಳ್ಳಬೇಕಾಗುತ್ತದೆ.

ಶ್ರೀ ಮಠದ ಉತ್ತರೋತ್ತರ ಅಭಿವೃದ್ಧಿ ನಮ್ಮ ದೃಷ್ಟಿಯಲ್ಲಿ ಇದೆ. ಎಲ್ಲ ಜನರು ಎಲ್ಲ ಶಿಷ್ಯರು ಎಲ್ಲ ಶ್ರದ್ಧಾಳುಗಳು ನಿನ್ನೆ, ಈ ದಿನ ನಡೆದ ಎಲ್ಲ ಕಾರ್ಯಕ್ರಮಗಳಲ್ಲಿ ಶ್ರದ್ಧೆಯಿಂದ ಭಾಗವಹಿಸಿದ್ದಾರೆ. ಆ ಶ್ರದ್ಧೆಯ ಫಲ ಎಲ್ಲರಿಗೂ ದೊರಕುವಂತೆ ಆಗಲಿ. ಸಮಸ್ತ ಶಿಷ್ಯರೂ ಶ್ರೇಯಸ್ಸಿನ ಮತ್ತು ಪ್ರೇಯಸ್ಸಿನ ಮಾರ್ಗದಲ್ಲಿ ಸುಗಮವಾಗಿ ಗಮಿಸುವಂತೆ ಆಗಲಿ. ಇಡೀ ಭಾರತದೇಶದ ಎಲ್ಲ ಪ್ರಜೆಗಳಿಗೂ ಸನ್ಮಂಗಳ ಉಂಟಾಗಲಿ ಎಲ್ಲ ಭೂತಗ್ರಾಮಗಳಿಗೂ ಆರಾಧ್ಯ ದೇವತೆಯಾದ ಲಕ್ಷ್ಮೀನರಸಿಂಹ ಹಾಗೂ ರಾಜರಾಜೇಶ್ವರಿ ಸನ್ಮಂಗಳವನ್ನು ಉಂಟು ಮಾಡಲಿ.

ನಾರಾಯಣ ನಾರಾಯಣ ನಾರಾಯಣ

ಹತ್ತು ವರ್ಷಗಳ ಸಂನ್ಯಾಸ ಪೀಠಾಧಿಪತಿತ್ವ ಕುರಿತು ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳೊಡನೆ ಸಂದರ್ಶನ

- ಡಾ. ಜಿ.ಎನ್. ಭಟ್ಟ

ಹನ್ನೊಂದು ವರುಷಳ ಹಿಂದೆ ಇದೇ ಮಾಘ ಬಹುಳದಲ್ಲಿ (ಚತುರ್ಥೀ ಶನಿವಾರ 2-2-1991) ಪೂಜ್ಯ ಗಂಗಾಧರೇಂದ್ರರೆಂಬ ಅಭಿಧಾನದಿಂದ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಪೀಠಾಧಿಪತಿಗಳಾಗಿ ಪೀಠಾರೋಹಣಮಾಡಿದ ಓರ್ವ ಯುವ ಸಂನ್ಯಾಸಿಗಳಿವರು. ಅಂದು ಪೀಠವೇರಿದ ಸಮಯದಲ್ಲಿ ಅವರಿಗೊಂದು ಪತ್ರ ಬರೆದಿದ್ದೆ. ಆಧುನಿಕ ಯುವ ಜನತೆಯನ್ನು ಸ್ಪಂದಿಸುವಂತಹ ಸಂಸ್ಕೃತ ಶಿಕ್ಷಣದ ಬಗೆಗೆ ಯೋಜನೆಯಿರಬೇಕೆಂಬುದು ಆ ಪತ್ರದ ಪ್ರಮುಖ ವಿಷಯವಾಗಿತ್ತು. ಆದರೆ ಅದಕ್ಕೆ ಉತ್ತರ ಬಂದಿರಲಿಲ್ಲ. ಮರೆತಿರಬಹುದೆಂದು ತಿಳಿದಿದ್ದೆ. ಒಂದೆರಡು ವರುಷಗಳ ನಂತರ ಕಾರ್ಯಾರ್ಥವಾಗಿ ಸ್ವರ್ಣವಲ್ಲಿಗೆ ಹೋದಾಗ ಈ ವಿಷಯವನ್ನು ಸ್ವಾಮಿಗಳೇ ಪ್ರಸ್ತಾಪಿಸಿದ್ದು ನನ್ನ ಪತ್ರದ ವಿಷಯವನ್ನು ಅವರು ಗಂಭೀರವಾಗಿ ಪರಿಗಣಿಸಿದ ವಿಷಯ ತಿಳಿದು ಆಶ್ಚರ್ಯವಾಯಿತು! ಶ್ರೀಮಠದ ಆಶ್ರಯದಲ್ಲಿ ಸಂಸ್ಕೃತಾಧ್ಯಯನ ಹಾಗೂ ಸಂಶೋಧನೆಗಾಗಿ ಪ್ರತಿಷ್ಠಾನವನ್ನು ಪ್ರಾರಂಭಿಸಲು ಯೋಜನೆ ತಯಾರಿಸಲೋಸುಗ ನನ್ನ ಸಂಚಾಲಕತ್ವದಲ್ಲೇ ಒಂದು ಸಮಿತಿಯ ರಚನೆಯಾದುದು ನನ್ನ ಸಲಹೆಗೆ ನನ್ನನ್ನೇ ಕಾರ್ಯರೂಪಕ್ಕಿಳಿಸಿದುದು ಚಾತುರ್ಯಪೂರ್ಣವೆಂದೆನಿಸಿತು. ನನ್ನ ಪ್ರಾರ್ಥನೆಯಂತೇ ಶ್ರೀಮಠದಲ್ಲಿ ''ಸಂಸ್ಕೃತ ಸಾಹಿತ್ಯಕ್ಕೆ ಉತ್ತರ ಕನ್ನಡ ಜಿಲ್ಲೆಯ ಕೊಡುಗೆ'' ಕುರಿತು ರಾಜ್ಯಸ್ತರದ ದ್ವಿದಿನಗಳ ವಿಚಾರಗೋಷ್ಠಿಯೊಂದನ್ನು ಏರ್ಪಡಿಸುವ ಅವಕಾಶ ಲಭಿಸಿತು. ನಾನಾಗ ಕಟೀಲು ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲನಾಗಿದ್ದು ಹಾಗೂ ಸಂಸ್ಕೃತ ಸ್ನಾತಕೋತ್ತರ ಕೇಂದ್ರದ ನಿರ್ದೇಶಕನೂ ಆಗಿರುವ ನೆಲೆಯಲ್ಲಿ ಈ ಗೋಷ್ಠಿಯು ಎರಡೂ

ಸಂಸ್ಥೆಗಳ ಸಹಯೋಗದಲ್ಲಿ ಸ್ವಾಮಿಗಳ ಕೃಪಾಶೀರ್ವಾದದಿಂದ ಯಶಸ್ವಿಯಾಗಿ ನಡೆಯಿತು. ಅನಂತರ 1998ರಲ್ಲಿ ಶ್ರೀಗಳು ಮಂಗಳೂರಿಗೆ ಪ್ರಪ್ರಥಮವಾಗಿ ಆಗಮಿಸಿದಾಗಿನ ಯಶಸ್ವೀ ಕಾರ್ಯಕ್ರಮಗಳಿಂದ ಸಂಪರ್ಕ ಬೆಳೆದು ಮುಕ್ತವಾಗಿ ಪ್ರಶ್ನಿಸಿ ಸಂದರ್ಶನ ನಡೆಸುವವರೆಗೂ ಪೂಜ್ಯ ಗಂಗಾಧರೇಂದ್ರರೊಡನೆ ಸಂದರ್ಭ ಸಾಧಿಸಿ ಸಂದರ್ಶನ ನಡೆಸಿದ ಪೂರ್ಣ ಪಾಠವಿಂತಿದೆ.

ಪ್ರಶ್ನೆ : ತಮಗೆ ಸಂನ್ಯಾಸ ಸ್ವೀಕರಿಸಬೇಕೆಂಬ ಯೋಚನೆಗೆ ಯಾವಾಗ ಮೊಳಕೆಯೊಡೆಯಲು ಆಸ್ಪದವಾಯಿತು?

ಸ್ವಾಮಿಗಳು : ಬಾಲ್ಯಕಾಲದಲ್ಲಿಯೇ ಸಂಸಾರಕ್ಕಿಂತ ಸಂನ್ಯಾಸದ ಮೇಲೆ ತೀವ್ರವಾದ ಮನಸ್ಸಿತ್ತು. ಆದರೆ ನಿಶ್ಚಿತವಾಗಿ ಯಾವಾಗ ಈ ಯೋಚನೆ ಬಂದಿತು ಎನ್ನುವುದು ನೆನಪಿಲ್ಲ.

ಪ್ರಶ್ನೆ : ಪೂರ್ವಾಶ್ರಮದ ಸಂಸ್ಕಾರ ಸಂನ್ಯಾಸ ಸ್ವೀಕರಿಸಿದ ನಂತರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುವುದುಂಟೆ? ಇದ್ದರೆ ಯಾವ ರೀತಿಯಲ್ಲಿ?

ಉತ್ತರ : ಪೂರ್ವಾಶ್ರಮದ ಸಂಸ್ಕಾರವೆಂದರೆ ಗುರುಹಿರಿಯರಲ್ಲಿ ಶ್ರದ್ಧೆ, ಮಠ-ಮಂದಿರಗಳ ಬಗೆಗೆ ಪರಿಜ್ಞಾನ, ಧಾರ್ಮಿಕ ಸಾಮಾಜಿಕ ಕ್ಷೇತ್ರಗಳ ಪರಿಚಯ, ಇವುಗಳೆಲ್ಲ ಬರುವುದರಿಂದ ಆ ಪ್ರಭಾವ ಇದ್ದೇ ಇರುತ್ತದೆ. ಅಂತಹ ಸತ್ವಭಾವದ ಸಂಗಡ ಸಂನ್ಯಾಸ ಸ್ವೀಕರಿಸಿ ಶ್ರೀಮಠಕ್ಕೆ ಆಗಮಿಸಿದ ನಂತರವೂ ಕೆಲವು ವಿಶಿಷ್ಟ ಸಂಸ್ಕಾರಗಳ ಪ್ರಭಾವದ ಅನುಭವವಾಗುತ್ತದೆ.

ಪ್ರಶ್ನೆ : ವಿರಕ್ತರಾಗಿದ್ದರೂ ಪೀಠಾಧಿಪತಿಗಳಾಗಿರುವುದರಿಂದ ಪ್ರಾಪಂಚಿಕ ಜವಾಬ್ದಾರಿಯ ಹೊಣೆಯನ್ನು ಹೊತ್ತ ಅನುಭವವಾಗುವುದಿಲ್ಲವೆ?

ಉತ್ತರ : ನಿಜ ಹಾಗಾಗುತ್ತದೆ. ಆದರೆ ವಿರಕ್ತಿ ಹಿನ್ನೆಲೆಯಲ್ಲಿ ಗಟ್ಟಿಯಾಗಿರಬೇಕು. ಅವರ ಮುಂದೆ ಪೀಠಾಧಿಪತ್ಯದ ಜವಾಬ್ದಾರಿ ಇರಬೇಕು. ಹಾಗಿದ್ದಲ್ಲಿ ಇದನ್ನು ಸಂತುಲನದಿಂದ ನಡೆಸಿಕೊಂಡು ಹೋಗಬಹುದು. ಮತ್ತು ವಿರಕ್ತಿ ಕಡಿಮೆಯಾಗಿ ಪೀಠಾಧಿಪತಿತ್ವವೇ ಹೆಚ್ಚಾದಲ್ಲಿ ಅಂಥವನಿಗೆ ತುಂಬ ಕಷ್ಟ ಬರುವುದು. ಹಾಗಾಗಿ ಯಾವಾಗಲೂ ವಿರಕ್ತಿಗೇ ಪ್ರಾಧಾನ್ಯ. ಪೀಠಾಧಿಪತಿತ್ವಕ್ಕೆ ಗೌಣ ಸ್ಥಾನವೇ.

ಪ್ರಶ್ನೆ : ಇತ್ತೀಚೆಗೆ ವಿರಕ್ತಿಗಿಂತ ಸ್ವಾಮಿಗಳಲ್ಲಿ ಪೀಠಾಧಿಪತ್ಯವನ್ನೇ ವಿಶೇಷವಾಗಿ ಬಯಸುವ ಜನ ಹೆಚ್ಚಾಗಿದ್ದಾರೆ. ಅಂತಹವರು ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಪೀಠಾಧಿಪತಿಗಳಿಂದ ಹೆಚ್ಚು ಬಯಸುತ್ತಾರೆ. ಅಂತಹ ಜನರಿಗೆ ತಿಳಿ ಹೇಳುವ ಬಗೆ ಹೇಗೆ?

ಉತ್ತರ : ಈ ವಿಷಯದಲ್ಲಿ ಜನರಿಗೆ ತಿಳುವಳಿಕೆ ಕೊಡುವ ಬದಲು ಪೀಠಾಧಿಪತಿಗಳೇ ಹೆಚ್ಚು ತಿಳಿದುಕೊಳ್ಳುವುದು ಒಳ್ಳೆಯದು. ಜನರು ಒಂದೊಂದು ಕಾಲಕ್ಕೆ ಅನುಸಾರವಾಗಿ ಒಂದೊಂದು ಮನೋಭೂಮಿಕೆಯಲ್ಲಿ ಇರುತ್ತಾರೆ. ಆದರೆ ಪೀಠಾಧಿಪತಿಯಾದವನು ತನಗೆ ವಿರಕ್ತಿಯೇ ಪ್ರಧಾನ ಎನ್ನುವುದನ್ನು ಅರಿತು-ಕೊಳ್ಳಬೇಕು. ಶಿಕ್ಷಣ ಮತ್ತು ಸಾಮಾಜಿಕ ಕಾರ್ಯ ಅನಂತರ ಎಂಬುದನ್ನು ತಮ್ಮ ಆಚರಣೆಯಿಂದಲೇ ತೋರಿಸುವುದು ಸೂಕ್ತ.

ಪ್ರಶ್ನೆ : ಖಾಕಿ, ಖಾವಿ, ಖಾದಿ ಇವುಗಳಿಂದ ತುಂಬ ದೂರವೂ ಇರಬಾರದು ಹತ್ತಿರವೂ ಇರಬಾರದು ಎನ್ನುವ ಒಂದು ಅಭಿಪ್ರಾಯವಿದೆ. ಅದಕ್ಕೆ ನಿಮ್ಮ ಅನಿಸಿಕೆಯೇನು?

ಉತ್ತರ : ಅಪ್ರಾಮಾಣಿಕತೆ ಅತಿಯಾದಾಗ ಇಂತಹ ಮಾತುಗಳು ಬರುತ್ತವೆ. ಇಲ್ಲಿಯೂ ಅಪ್ರಾಮಾಣಿಕತೆ ಇದ್ದಲ್ಲಿ ಅಂತಹವರಿಂದ ದೂರವಿರುವುದೇ ಲೇಸು. ಆದರೆ ಈ ಮೂರೂ ಕ್ಷೇತ್ರಗಳಲ್ಲಿ ಒಳ್ಳೆಯವರೂ ಇದ್ದಾರೆ ಎಂಬುದನ್ನು ನೆನಪಿಡಬೇಕು.

ಪ್ರಶ್ನೆ : ಪೀಠಾಧಿಪತಿಯಾಗಿ ಹತ್ತು ವರ್ಷಗಳಾದವು. ಈ ಅವಧಿಯಲ್ಲಿ ತಮಗನಿಸಿದಂತೆ ಪರಿಣಾಮಕಾರಿ ಆದ ಕಾರ್ಯ ಯಾವುದು? ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಪರಿಸರ ಕ್ಷೇತ್ರಗಳಲ್ಲಿ ತಾವು ತೊಡಗಿಸಿಕೊಂಡಿರುವುದರಿಂದ ಅದರಲ್ಲಿ ಮಠದ ಪ್ರಮುಖ ಕೊಡಿಗೆಯೇನು? ಎಂಬುದನ್ನು ತಿಳಿಸುವಿರಾ?

ಉತ್ತರ : ಜನರಿಗೆ ಹೆಚ್ಚು ಪ್ರಭಾವ ಮುಟ್ಟಿದ್ದು ಸಾರ್ವಜನಿಕ ಕ್ಷೇತ್ರದಲ್ಲಿ ವಿಶೇಷವಾಗಿ ಸ್ವಾಗತಿಸಲ್ಪಟ್ಟಿದ್ದು ನಮ್ಮ ಪರಿಸರ ಆಂದೋಲಯನವೇ ಆಗಿದೆ. ಆದರೆ ಮಠದ ಶಿಷ್ಯರು ಮತ್ತು ಹೆಚ್ಚು ಆಧ್ಯಾತ್ಮಿಕ ಚಿಂತನೆ ಒಲವು ಇರುವಂಥವರು ಹೆಚ್ಚು ಮೆಚ್ಚಿಕೊಂಡಿರುವುದು ನಾವು ನಡೆಸಿದ ಗಾಯತ್ರೀ ಜಪಯಜ್ಞವನ್ನು. (ಗಾಯತ್ರೀ ಜಪಯಜ್ಞದ ಕುರಿತು ಪ್ರತ್ಯೇಕ ಲೇಖನವಿದೆ.) ಇಂತಹ ಕಾರ್ಯಕ್ರಮ ಹಿಂದೆ ಎಲ್ಲೂ ನಡೆದಿರಲಿಲ್ಲ. ಅದರಿಂದಲೇ ವೈಯಕ್ತಿಕ ಪ್ರಭಾವವೂ ಆಗಿದೆ. ಈಗಲೂ ಅದರ ಪ್ರಭಾವವಿದ್ದು ಪ್ರತಿವರ್ಷವೂ ವಾರ್ಷಿಕ ಕಾರ್ಯಕ್ರಮವಾಗಿ ನಡೆಯುತ್ತಿದೆ. ಇನ್ನು ಅನೇಕ ಕಾರ್ಯಕ್ರಮಗಳು ನಡೆದಿವೆ. ಉದಾ: ಪ್ರತಿವರ್ಷ ನಡೆಯುವ ವಟುಶಿಕ್ಷಣ, ಹೆಣ್ಣು ಮಕ್ಕಳಿಗಾಗಿ ಕುಮಾರಿ ಸಂಸ್ಕೃತ ಶಿಕ್ಷಣ, ವ್ಯಸನರಹಿತ ಸಮಾಜ ಶಿಕ್ಷಣ, ಪುಸ್ತಕ ಪ್ರಕಾಶನಗಳು ಇತ್ಯಾದಿಗಳು ನಡೆಯುತ್ತಿದ್ದು ಅನೇಕರು ತುಂಬಾ ಮೆಚ್ಚಿಕೊಂಡಿದ್ದಾರೆ.

ನಮಗೂ ಸಂತೋಷವಾಗಿದೆ. ಇತ್ತೀಚೆಗೆ ಶಿರಸಿಯಲ್ಲಿ ಯೋಗಮಂದಿರ ನಿರ್ಮಾಣ ಮಾಡಲಾಗಿದೆ. ಅದು ಇನ್ನೂ ಪ್ರಗತಿಯ ಹಂತದಲ್ಲಿದೆ. ಹಾಗೆಯೇ ಹುಲೇಕಲ್ಲಿನಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ. ಅದರಲ್ಲಿ ಯೋಜನೆಗಳು ಕಾರ್ಯರೂಪಕ್ಕೆ ಬರಬೇಕಾಗಿದ್ದು, ಕಂಪ್ಯೂಟರ್ ಶಿಕ್ಷಣವನ್ನು ಅಲ್ಲಿ ನೀಡಲಿದ್ದೇವೆ. ವ್ಯಸನರಹಿತ ಸಮಾಜ ಶಿಕ್ಷಣವನ್ನು ಹತ್ತನೆಯ ತರಗತಿಯ ಹಂತಕ್ಕೆ ನಿಲ್ಲಿಸಿದ್ದೇವೆ. ಯಾಕೆಂದರೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇದು ಪ್ರಭಾವಿಯಲ್ಲ. ಇದು ನಮ್ಮ ಅನುಭವಕ್ಕೂ ಬಂದಿದ್ದು ಮನೋವಿಜ್ಞಾನಿಗಳು ಅದಕ್ಕೆ ಪೂರಕವಾಗಿ ಪ್ರತಿಕ್ರಯಿಸಿದ್ದಾರೆ.

ಪ್ರಶ್ನೆ : ತಮಗೂ ಶಿಷ್ಯರಿಗೂ ತೃಪ್ತಿ ನೀಡಿದ ಗಾಯತ್ರೀ ಜಪಯಜ್ಞದ ಯೋಚನೆ ಹೇಗೆ ಬಂತು? ಇಂದು ಅದೆಷ್ಟು ಪ್ರಭಾವಿಯಾಗಿದೆ?

ಉತ್ತರ : ಹೇಗೋ ಬಂತು. ಎಲ್ಲರೂ ಪ್ರತಿನಿತ್ಯ ಗಾಯತ್ರೀ ಜಪ ಮಾಡುವವರು ಮಾಡಲೇಬೇಕೆಂದು, ಅದಕ್ಕೊಂದು ಕಾರ್ಯಕ್ರಮ ರೂಪಿಸಿಕೊಳ್ಳಬೇಕೆಂದು ಮನಸ್ಸಿನಲ್ಲಿ ಪ್ರೇರಣೆಯೊಂದು ಬಂತು. ಅದನ್ನು ಕಾರ್ಯರೂಪಕ್ಕಿಳಿಸಲು ಸುಮಾರು ಒಂದು ವರ್ಷ ತೆಗೆದುಕೊಂಡಿದ್ದೇವೆ. ಇದನ್ನು ಎಲ್ಲಿಂದಲೋ ತೆಗೆದುಕೊಂಡಿದ್ದಲ್ಲ. ಯಾಕೆಂದರೆ ಈ ರೀತಿಯಾಗಿ ಹಿಂದೆಂದೂ ನಡೆದಿರಲಿಲ್ಲ. ಇದರ ಪ್ರಭಾವದಿಂದ ಈಗಲೂ ಹಿಂದೆ ಯಾವ ಯಾವ ಕೇಂದ್ರಗಳಲ್ಲಿ ಜಪವಾಗಿತ್ತೋ ಆ ಕೇಂದ್ರಗಳಲ್ಲಿ ಹಿಂದಿನ ಜಪಯಜ್ಞದ ದಿವಸವೇ ಒಟ್ಟಾಗಿ ಸೇರಿ ವರ್ಷಕ್ಕೊಮ್ಮೆ ಕಾರ್ಯಕ್ರಮ ಮಾಡುತ್ತಾರೆ. ಪ್ರತಿದಿನ ಈ ಹಿಂದೆ ಗಾಯತ್ರೀ ಮಾಡದವರೂ ಇಂದು ಗಾಯತ್ರೀ ಜಪ ಮಾಡುತ್ತಿರುವುದೇ ಇದು ಪ್ರಭಾವಿಯಾಗಿದೆ ಎಂಬುದನ್ನು ಹೇಳುತ್ತದೆ.

ಪ್ರಶ್ನೆ : ಶ್ರೀಮಠದ ಸಂಸ್ಕೃತಾಧ್ಯಯನದ ವ್ಯವಸ್ಥೆಯಲ್ಲಿ ತಮ್ಮ ಪಾತ್ರವೇನು?

ಉತ್ತರ : ನೀವು ಅಂದುಕೊಂಡಂತೆ ಮಾರ್ಗದರ್ಶನ ಮಾಡುವುದಲ್ಲದೇ ವಿದ್ಯಾರ್ಥಿಗಳಿಗೆ ಸ್ವತಃ ಪಾಠವನ್ನು ಮಾಡುತ್ತೇವೆ. ಹಾಗೂ ಪ್ರತೀ ಅಷ್ಟಮಿಯಂದು ಅಂದರೆ ತಿಂಗಳಿಗೆ ಎರಡು ಸಲ ಚರ್ಚೆ, ಗೋಷ್ಠಿಗಳು ನಡೆಯುತ್ತವೆ. ಅದರಲ್ಲಿ ನಾವೂ ಸ್ವತಃ ಭಾಗಿಗಳಾಗುತ್ತೇವೆ. ನಮ್ಮಲ್ಲಿ ಪಾಠಶಾಲೆ ಬೇರೆಯಲ್ಲ, ಮಠ ಬೇರೆಯಲ್ಲ; ಮಠದಿಂದಲೇ ಅನ್ನ ವಸತಿಗಳನ್ನು ನೀಡಿ ವಿದ್ಯೆ ನೀಡುವ ಕ್ರಮದಲ್ಲಿ ನಾವು ನಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದೇವೆ.

ಪ್ರಶ್ನೆ : ಈ ಪಾಠಶಾಲೆಯಲ್ಲಿ ವಿದ್ಯಾರ್ಜನೆ ಮಾಡಿದ ನಂತರ ಸಮಾಜದಲ್ಲಿ ಹೇಗಿದ್ದಾರೆ? ಮುಂದೆ ಅವರ ವೃತ್ತಿ, ಪ್ರವೃತ್ತಿಗಳು ಹೇಗಿರಬೇಕೆಂಬುದರ ಬಗ್ಗೆ ನಿಮ್ಮ ಅಪೇಕ್ಷೆ ಏನು?

ಉತ್ತರ : ನಾವು ಇಲ್ಲಿಗೆ ಬಂದು 10 ವರ್ಷಗಳಾದವು. ಆದರೆ ಇಲ್ಲಿಂದ ಪೂರ್ತಿ ಪಾಠವನ್ನು ಮುಗಿಸಿ ಹೋದವರು ವಿರಳ. ಇಲ್ಲಿಯೇ ಪೂರ್ತಿ ಓದಿದವನು ಒಬ್ಬ ಈ ವರ್ಷ ಪರೀಕ್ಷೆಗೆ ಕುಳಿತಿದ್ದಾನೆ. ಆದರೆ ಇಲ್ಲಿಂದ ಕೆಲವು ವರ್ಷಗಳ ಅಧ್ಯಯನದ ನಂತರ ಬೇರೆ ಸಂಸ್ಥೆಗಳಿಗೆ ಹೋಗಿ ಕೋರ್ಸುಗಳನ್ನು ಮುಗಿಸಿ ಒಳ್ಳೆಯ ಸ್ಥಾನವನ್ನು ಸೇರಿದವರಿದ್ದಾರೆ. ಈ ಪಾಠಶಾಲೆ ಪ್ರಾರಂಭವಾಗಿ 50 ವರ್ಷಗಳ ಮೇಲಾಯಿತು. ಈ ಅವಧಿಯಲ್ಲಿ ಇಲ್ಲಿಯೇ ವಿದ್ಯಾರ್ಜನೆಯನ್ನು ಮುಗಿಸಿ ಸಮಾಜದಲ್ಲಿ ಒಳ್ಳೆಯ ಸ್ಥಾನ ಮಾನ ಪಡೆದವರಿದ್ದಾರೆ. ವಿಶೇಷವಾಗಿ ನಾನೇ ಈ ಪಾಠಶಾಲೆಯ ಹಳೆ ವಿದ್ಯಾರ್ಥಿ. ಹಿಂದಿನ ಇಲ್ಲಿಯ 2, 3 ಹಳೆಯ ವಿದ್ಯಾರ್ಥಿಗಳೇ ಈಗ ಇಲ್ಲಿ ಅಧ್ಯಾಪಕರಾಗಿ ಮುಂದುವರಿದಿದ್ದಾರೆ.

ಪ್ರಶ್ನೆ : ಸಂಸ್ಕೃತಾಧ್ಯಯನಕ್ಕೆ ಬರುವವರು ಪ್ರತಿಭಾಸಂಪನ್ನರಲ್ಲ. (ಈಗಿನ ಪದವೀ ತರಗತಿಗಳಿಗೆ ಬರುವವರಂತೆ) ಉಳಿದ ಕಡೆ ಪ್ರವೇಶ ಸಿಕ್ಕದ ಸಾಮಾನ್ಯ ಬುದ್ಧಿಯವರು ಅಥವಾ ಮನೆಯವರ ಒತ್ತಡಕ್ಕೆ ಒಳಗಾಗಿ ಬರುವವರು ಎಂಬ ಅಭಿಪ್ರಾಯವಿದೆ. ಅದು ಎಷ್ಟರ ಮಟ್ಟಿಗೆ ನಿಜ?

ಉತ್ತರ : ಆರಂಭದ ದಿವಸಗಳಲ್ಲಿ ಇಲ್ಲಿಯೂ ನೀವು ಹೇಳಿದ ಹಾಗೆ ಇತ್ತು. ಆದರೆ ಈತ್ತೀಚೆಗೆ ಐದಾರು ವರ್ಷಗಳಿಂದ ಸ್ವಯಂ, ಪ್ರತಿಭಾವಂತ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿಯೇ ಪಾಸಾದವರು ಇಲ್ಲಿ ಅಧ್ಯಯನಕ್ಕಾಗಿ ಬರುತ್ತಿದ್ದಾರೆ. ಈ ರೀತಿ ಬದಲಾವಣೆ ಆಗಲಿಕ್ಕೆ ಕಾರಣ ಬಹುಶಃ ವೇದಗಳ ವ್ಯಾಪಕ ಪ್ರಚಾರವಾಗಿದ್ದು ಅವುಗಳಲ್ಲಿ ಆಧುನಿಕ ಕಾಲಕ್ಕೆ ಬೇಕಾದ ವಿಷಯಗಳು ಇವೆ ಎಂಬ ತಿಳುವಳಿಕೆ ಬಂದಿರುವುದೇ ಆಗಿದೆ.

ಪ್ರಶ್ನೆ : ಉಳಿದ ಮಠಗಳ ಸಂಗಡ ಅಥವಾ ಪೀಠಾಧಿಪತಿಗಳೊಡನೆ ಸೇರಿ ಸಹಮತವಿರುವ ವಿಶಿಷ್ಟ ಕಾರ್ಯಕ್ರಮಗಳನ್ನು ಸಹಯೋಜನೆಯಾಗಿ ಹಮ್ಮಿಕೊಳ್ಳುವ ಯೋಜನೆ ಇದೆಯೇ?

ಉತ್ತರ : ಈ ಪ್ರಶ್ನೆಗೆ ಉಳಿದ ಮಠಾಧಿಪತಿಗಳೂ ಉತ್ತರಿಸಬೇಕಾದುದು. ನಾವಂತೂ ಅಂತಹದನ್ನು ಪ್ರಾರಂಭಿಸಿದ್ದೇವೆ. ''ವೇದಸಂಗಮ'' ಕಾರ್ಯಕ್ರಮ ಅಂತಹದೊಂದರ ಪರಿಕಲ್ಪನೆಯಾಗಿದೆ. ಶ್ರೀರಾಮಚಂದ್ರಾಪುರ ಮಠದ ಸ್ವಾಮಿಗಳು

ಇದರಲ್ಲಿ ಪೂರ್ಣ ಸಹಕರಿಸುತ್ತಿದ್ದಾರೆ. ಎರಡೂ ಮಠಕ್ಕೆ ಹವ್ಯಕ ಶಿಷ್ಯರ ಸಮುದಾಯವೇ ಹೆಚ್ಚಿನದಾಗಿದ್ದರಿಂದ ಇದು ಸಾಧ್ಯವಾಗಿರಲೂಬಹುದು. ಇನ್ನು ಕೊಯಮತ್ತೂರಿನ ಶ್ರೀ ದಯಾನಂದ ಸ್ವಾಮಿಗಳು ರಾಷ್ಟ್ರಮಟ್ಟದಲ್ಲಿ ಆಚಾರ್ಯ ಸಭಾ ಎಂಬ ಒಂದು ಸಂಘಟನೆಯನ್ನು ಪ್ರಾರಂಭಿಸಿದ್ದಾರೆ. ಅದರಲ್ಲಿ ಹೆಚ್ಚಿನೆಲ್ಲಾ ಸ್ವಾಮಿಗಳು, ಪೀಠಾಧಿಪತಿಗಳೂ ಇದ್ದಾರೆ. ಅದರಲ್ಲಿ ನಾವೂ ಓರ್ವ ಸದಸ್ಯ-ರಾಗಿದ್ದೇವೆ. ಕೃಷಿ, ಗ್ರಾಮೀಣ ಅಭಿವೃದ್ಧಿ, ಉಪೇಕ್ಷಿತರ ಏಳಿಗೆ ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ.

ಪ್ರಶ್ನೆ : ಕುಂಭಮೇಳಕ್ಕೆ ದಕ್ಷಿಣಭಾರತದ ಕಡೆಯಿಂದ ಹೆಚ್ಚಿನ ಪೀಠಾಧಿಪತಿಗಳು ಹೋಗುತ್ತಿದ್ದ ಹಾಗೆ ಕಾಣುವುದಿಲ್ಲವಲ್ಲಾ? (ಈ ಪ್ರಶ್ನೆ ಕೇಳುವಾಗ 12 ವರ್ಷಕ್ಕೊಮ್ಮೆ ನಡೆಯುವ ಕುಂಭಮೇಳವು ಪ್ರಯಾಗದಲ್ಲಿ ನಡೆಯುತ್ತಿತ್ತು)

ಉತ್ತರ : ಅನೇಕ ಜನ ಹೋಗಿದ್ದಾರೆ. ಆದರೆ ಪ್ರತಿಸಲ ಅಲ್ಲಿಗೆ ಹೋಗ-ಬೇಕಾದರೆ ವ್ಯವಸ್ಥೆಯಾಗುವುದು ದುಸ್ತರ. ಕೋಟಿಗಟ್ಟಲೆ ಜನ ಅಲ್ಲಿ ಸೇರುತ್ತಾರೆ.

ಪ್ರಶ್ನೆ : ಶ್ರೀಮಠದ ಸಂಗಡ ಶಿಷ್ಯರು ಹಾಗೂ ಅಭಿಮಾನಿಗಳು ನಿರಂತರವಾಗಿ ಸಂಪರ್ಕವಿರಿಸಿಕೊಳ್ಳಲು ಹಾಗೂ ತಮ್ಮ ಮಾರ್ಗದರ್ಶನ ಪಡೆಯಲು ನಿಶ್ಚಿತ ಕಾರ್ಯಯೋಜನೆ ಇಲ್ಲಿ ಇದೆಯೇ?

ಉತ್ತರ : ಅನೇಕ ಶತಕ-ದಶಕಗಳಿಂದಲೇ ಇಲ್ಲಿ ಒಂದು ವಿಶಿಷ್ಟ ಸಂಪರ್ಕ ಜಾಲವೇ ಇದೆ. ಸೀಮಾಸಭೆ, ಸೀಮಾ ಪ್ರತಿನಿಧಿಗಳು, ಗ್ರಾಮಸ್ಥರೂ, ಆಚಾರ್ಯ ಭಟ್ಟರೂ ಇದ್ದಾರೆ. ಅವರವರ ಕಾರ್ಯಕ್ಷೇತ್ರಗಳೂ ವಿಶಿಷ್ಟವಾಗಿವೆ. ಮೊದಲಿಗಿಂತ ಇತ್ತೀಚೆಗೆ ಹೆಚ್ಚು ಕ್ರಿಯಾಶೀಲವಾಗಿವೆ ಎನ್ನಬಹುದು. ಆಧುನಿಕವಾಗಿ ಸಂಪರ್ಕ ಮಾಧ್ಯಮವಾಗಿ ಸ್ವರ್ಣವಲ್ಲೀ ಪ್ರಭಾ ಎಂಬ ಮಾಸಪತ್ರಿಕೆಯನ್ನು ಪ್ರಕಟಣೆ ಮಾಡುತ್ತಿದ್ದೇವೆ. ಸದ್ಯದಲ್ಲಿಯೇ ಶ್ರೀಮಠದ ವೆಬ್‌ಸೈಟ್ ಬರಲಿದೆ.

ಪ್ರಶ್ನೆ : ಇಲ್ಲಿಯವರೆಗೆ ಎಷ್ಟು ಸಲ ತೀರ್ಥಯಾತ್ರೆ-ಪ್ರವಾಸಗಳಿಗೆ ಹೋಗಿದ್ದೀರಿ? ಮತ್ತು ಯಾವುದು ಹೆಚ್ಚು ಪ್ರಭಾವಿಯಾಗಿ ನಿಮ್ಮ ಮನದಲ್ಲಿದೆ?

ಉತ್ತರ : ಎಷ್ಟು ಸಲವೆಂಬುದು ಈ 10 ವರ್ಷಗಳಲ್ಲಿ ಲೆಕ್ಕವಿಡಲಿಲ್ಲ. ವರ್ಷದಲ್ಲಿ 2-3 ಸಲ ಹೋಗಿದ್ದೂ ಉಂಟು. ಆದರೆ ಧಾರ್ಮಿಕ ಕ್ಷೇತ್ರಗಳಿಗೆ ಹೋದಾಗ ಪ್ರಭಾವವಾಗುವುದು ನಾವು ಸಂದರ್ಶಿಸುವ ವೇಳೆ ನಮ್ಮ ಮನೋಭಾವ ಅಲ್ಲಿಯ ಅರ್ಚಕರು, ಮೊದಲಾದವರ ಆಚಾರ, ಮಾತು ಇವೆಲ್ಲವೂ ಪರಿಗಣಿತವಾಗುತ್ತದೆ.

ನನಗೆ ಹೆಚ್ಚು ಪ್ರಭಾವವಾದದು ಕಾಶೀಕ್ಷೇತ್ರ. ಮೇಲ್ನೋಟಕ್ಕೆ ಕಾಶಿಯ ಜನಜಂಜಾಟ, ಗಲೀಜು, ಅವ್ಯವಸ್ಥೆಗಳು ಕಂಡುಬಂದರೂ ಅದರ ಇಡೀ ವಲಯ ತುಂಬಾ ದಿವ್ಯತೆಯ ಸಾನ್ನಿಧ್ಯತೆ ಇರುವಂತೆ ಅನುಭವವಾಗುತ್ತದೆ. ಧ್ಯಾನ, ಜಪಗಳಲ್ಲಿ ಇದು ವಿಶೇಷವಾಗಿ ಅನುಭವಕ್ಕೆ ಬರುತ್ತದೆ. ಇನ್ನೊಂದು ನನ್ನ ಗಾಢವಾದ ನೆನಪಿನಿಂದ ಬರುವುದು ಸಜ್ಜನಗಡಕ್ಷೇತ್ರ. ಸಮರ್ಥರಾಮದಾಸರು ತಪಸ್ಸು ಮಾಡಿ ಸಿದ್ಧಿಹೊಂದಿದ ಸ್ಥಳ. ಶ್ರೀಧರ ಸ್ವಾಮಿಗಳು ಅಲ್ಲಿ ತಪಸ್ಸು ಮಾಡಿದ್ದಾರೆ.

ಪ್ರಶ್ನೆ : ಶ್ರೀಮಠದ ಪ್ರಕಾಶನ ಹಾಗೂ ವ್ಯವಸ್ಥೆಗೊಳಿಸಿದ ಶೈಕ್ಷಣಿಕ ಗೋಷ್ಠಿಗಳು, ಶಿಬಿರಗಳು - ಇವುಗಳೆಲ್ಲವುಗಳ ಒಟ್ಟು ಪರಿಣಾಮವೇನು? ಆ ಕುರಿತು ತಮಗೆ ತೃಪ್ತಿ ಇದೆಯೇ?

ಉತ್ತರ : 10 ವರ್ಷಗಳ ಕಾಲಮಿತಿಯಲ್ಲಿ ಇವೆಲ್ಲವುಗಳನ್ನು ಒಟ್ಟಾಗಿ ಪರಿಗಣಿಸಿದಾಗ ತೃಪ್ತಿಯಿದೆ. ಆದರೆ ಪರಿಣಾಮದ ದೃಷ್ಟಿಯಿಂದ ಹೆಚ್ಚಿನದು ಇನ್ನೂ ಆಗಬೇಕಿದೆ. ಉದಾಹರಣೆಗೆ ಶ್ರೀಮಠದಿಂದ ಹೋಗುವ ಪ್ರಕಾಶನಗಳನ್ನು, ಪುಸ್ತಕಗಳನ್ನು, ಮಠದ ಮೇಲಿನ ಗೌರವದಿಂದ ಮನೆಯವರು ಸ್ವೀಕರಿಸುತ್ತಾರೆ. ಪುಟಗಳನ್ನು ತಿರುಗಿಸುತ್ತಾರೆ. ಆದರೆ ಓದುವ, ಅಧ್ಯಯನ ಮಾಡುವ, ಹವ್ಯಾಸ ಇನ್ನೂ ಮೂಡಿ ಬರಲಿಲ್ಲ. ಆ ದೃಷ್ಟಿಯಲ್ಲಿ ಅಗಾಧಕಾರ್ಯ ಮುಂದಿದೆ.

ಪ್ರಶ್ನೆ : ತಾವು ಸಂನ್ಯಾಸಿಯಾಗಿ, ಪೀಠಾಧಿಪತಿಯಾಗಿ ಎದುರಿಸಿದ ಗಂಭೀರ ಸವಾಲು ಹಾಗೂ ಅದನ್ನು ಪರಿಹರಿಸಿಕೊಂಡ ಬಗೆ ತಿಳಿಸುವಿರಾ?

ಉತ್ತರ : ಅನೇಕ ಸಮಸ್ಯೆಗಳು ಬಂದಿವೆ. ಅದರಲ್ಲಿ ಪ್ರಮುಖವಾದದ್ದು ರಾಜಕೀಯ ಸಮಸ್ಯೆ. ಜಾತೀಯತೆ, ಜನರನ್ನು, ಸಮಾಜವನ್ನು ಒಡೆಯುತ್ತಾ ಬಂದಿದೆ. ಎಂದು ಹಲವು ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ. ಆದರೆ ನನ್ನ ದೃಷ್ಟಿಯಲ್ಲಿ ಅದಕ್ಕಿಂತ ಹೆಚ್ಚು ಅಪಾಯಕಾರಿ ರಾಜಕೀಯ. ಅವರಲ್ಲಿರುವ ಭಿನ್ನಾಭಿಪ್ರಾಯ ನಮಗೂ ಮಠಕ್ಕೂ, ತೊಂದರೆ ನೀಡಿದ್ದುಂಟು. ಅದನ್ನು ನಾನು ಪರಿಹರಿಸಿ-ಕೊಂಡಿದ್ದು ಸಹನೆಯಿಂದ. ನನಗೆ ಬೇಸರವಾದರೂ ಮುನಿಸಿಕೊಂಡವರನ್ನು ತಾಳ್ಮೆಯಿಂದ ಪುನಃ ಅವರನ್ನು ಅರ್ಥೈಸಿಕೊಂಡು ಸಹಕರಿಸುವಂತೆ ಪ್ರಯತ್ನಿಸಿದ್ದೇನೆ. ಆದುದರಿಂದ ನಾವು ಎಲ್ಲಾ ರಾಜಕೀಯ ಪಕ್ಷಗಳ ಸಂಗಡವೂ ಸಾಮಾನ್ಯವಾಗಿ ವ್ಯವಹರಿಸುತ್ತೇವೆಂದು ಜನರಿಗೂ ತಿಳುವಳಿಕೆ ಬಂದಿದೆ. ಆದುದರಿಂದ ಹಿಂದೆ ಬಂದಷ್ಟು ದೊಡ್ಡ ಸಮಸ್ಯೆ ಬರಲಿಕ್ಕಿಲ್ಲ ಎಂಬ ವಿಶ್ವಾಸವಿದೆ.

ಪ್ರಶ್ನೆ : ರಾಜಕಾರಣಿಗಳು ಬೋಧಿಸುವ ಜಾತ್ಯತೀತತೆ ಆದರೆ ಅವರ ಜಾತೀಯತೆ ಹಾಗೂ ಧರ್ಮ ನಿರಪೇಕ್ಷ ಸಂವಿಧಾನ (ಇತ್ತೀಚೆಗೆ ಸಂವಿಧಾನದ ಪರಾಮರ್ಶೆ

ಕುರಿತು ಚರ್ಚೆ ಹಾಗೂ ಸಂವಿಧಾನದಲ್ಲಿ ಅಧ್ಯಾತ್ಮ ಸೇರಿಸಬೇಕೆಂಬ ತಮ್ಮ ನಿಲುವು.) ಈ ಹಿನ್ನೆಲೆಯಲ್ಲಿ ರಾಷ್ಟ್ರದ ಭವಿಷ್ಯದ ಕುರಿತು ತಮ್ಮ ಅನಿಸಿಕೆ ಏನು?

ಉತ್ತರ : ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ನೋಡಿದಾಗ ಅನೇಕ ಜನರು ಈ ಕುರಿತು ಗಂಭೀರ ಚಿಂತನೆ ಮಾಡುತ್ತಿರುವುದೇ ಸಂತಸದ ವಿಷಯ. ಆದರೆ ಈಗ ನಡೆಯುತ್ತಿರುವ ನೈತಿಕ ಅಧಃಪತನವು ತುಂಬಾ ಚಿಂತೆಗೆ ಎಡೆಮಾಡಿಕೊಟ್ಟಿದೆ. ಧರ್ಮನಿರಪೇಕ್ಷತೆ, ಜಾತೀಯತೆ, ಜಾತ್ಯತೀತತೆ ಇವುಗಳಲ್ಲಿ ಗೊಂದಲವಿದೆ. ಸೆಕ್ಯುಲಾರಿಸಂ ಎಂಬ ಶಬ್ದಕ್ಕೆ ಧರ್ಮನಿರಪೇಕ್ಷಾ ಎಂಬ ಅನುವಾದವನ್ನು ಕೈಬಿಡಬೇಕು. ಇದನ್ನು ಇನ್ನೂ ಹಲವರು ಹೇಳಿದ್ದಾರೆ. ಸಂಪ್ರದಾಯ ನಿರಪೇಕ್ಷೆ ಎಂದು ಇದನ್ನು ಬದಲಾಯಿಸಿಕೊಳ್ಳಬಹುದು. ಧರ್ಮದಲ್ಲಿ ಆಧ್ಯಾತ್ಮಿಕತೆ ಕಡಿಮೆಯಾದಾಗ ನೈತಿಕತೆಯ ಕೊರತೆಯೂ ಬರುತ್ತದೆ. ನಿಜವಾದ ಧರ್ಮ ಆಧ್ಯಾತ್ಮಿಕತೆಯಲ್ಲಿದೆ. ಆದುದರಿಂದ ನಮ್ಮ ಸಂವಿಧಾನ ಆಧ್ಯಾತ್ಮಿಕತೆಯನ್ನು ಎತ್ತಿ ಹಿಡಿಯಬೇಕು. ಅದಕ್ಕಾಗಿ ಸಂವಿಧಾನದಲ್ಲಿ ಆಧ್ಯಾತ್ಮಿಕ ಪದವನ್ನು ಅಳವಡಿಸಿ ವಿವರಿಸಬೇಕು. ಧರ್ಮದಲ್ಲಿ ಆಧ್ಯಾತ್ಮಿಕ ಕೊರತೆಯಾದಾಗೆಲ್ಲ ಋಷಿಮುನಿಗಳು ಎಚ್ಚರಿಸಿದ್ದಾರೆ. ಈ ಹಿಂದೆ ರಾಜರಿಗೆ ಆಧ್ಯಾತ್ಮಿಕ ಮಾರ್ಗದರ್ಶನವಿದ್ದಾಗಲೆಲ್ಲ ಅವರು ಆಳಿದ ರಾಜ್ಯವು ಚೆನ್ನಾಗಿ ಸಾಗಿತ್ತು. ಉತ್ತರದ ಸಮುದ್ರಗುಪ್ತ ವಿಜಯನಗರ ಸಾಮ್ರಾಜ್ಯಗಳು, ಅದಕ್ಕಿಂತ ಹಿಂದೆ ರಾಮರಾಜ್ಯ ಇವೆಲ್ಲವೂ ಆಧ್ಯಾತ್ಮಿಕ ಮಾರ್ಗದರ್ಶನದಿಂದಲೇ ಸುವರ್ಣಯುಗಗಳಾಗಿದ್ದವು. ಅವತರಿಸಿದ ಆಚಾರ ಪುರುಷರೆಲ್ಲರೂ ಆಧ್ಯಾತ್ಮಿಕತೆಯೇ ಧರ್ಮದಸಾರ ಎಂದು ಘೋಷಿಸಿದ್ದಾರೆ. ಆದ್ದರಿಂದ ಸಂವಿಧಾನದ ಪೀಠಿಕೆಯಲ್ಲಿಯೇ ಸೋಷಿಯಲ್ ಮುಂತಾದ ಪದಗಳೊಡನೆಯೇ ಸ್ಪಿರಿಚುಯಲ್ (ಆಧ್ಯಾತ್ಮಿಕ) ಎಂಬ ಪದವನ್ನು ಸೇರಿಸಿ ಅದಕ್ಕೆ ವಿವರಣೆ ನೀಡಬೇಕು. ಇನ್ನು ಇಂದಿನ ರಾಜಕಾರಿಣಿಗಳ ವಿಷಯ. ಅವರಲ್ಲಿ ಹೆಚ್ಚಿನವರಿಗೆ ಆಧ್ಯಾತ್ಮಿಕ ಶಿಕ್ಷಣದ ಕೊರತೆ ಇರುವುದರಿಂದ ಈ ಸ್ಥಿತಿಗೆ ಬಂದಿದ್ದಾರೆ. ಈಗೇನೂ ಮಾಡುವಂತಿಲ್ಲ. ಭವಿಷ್ಯದ ಬಗೆಗೆ ಯೋಚಿಸಬೇಕು. ಧರ್ಮನಿರಪೇಕ್ಷ ಎನ್ನುವ ಬದಲು ಸರ್ವಧರ್ಮ ಸಮಭಾವ ಎಂದು ಹೇಳುವುದು ಸೂಕ್ತ.

ಪ್ರಶ್ನೆ : ಮಠಾಧಿಪತಿಗಳು ಮತ್ತು ಮಠಗಳು ಮೇಲ್ವರ್ಗಗಳಿಗೆ ಮಾತ್ರ ಇವೆ. ಕೆಳವರ್ಗಗಳಿಗೆ ಅವುಗಳಿಂದ ಯಾವ ಪ್ರಯೋಜನವೂ ಇಲ್ಲ ಎಂಬ ಆರೋಪ ಅನಿಸಿಕೆಗಳು ಇವೆಯಲ್ಲಾ?

ಉತ್ತರ : ಎಲ್ಲಾ ಜನಸಾಮಾನ್ಯರ ಮನ-ಮನೆಗಳಿಗೆ ಮಠಗಳು ನೀಡುವ ಸಂದೇಶಗಳನ್ನು ಕೊಂಡುಹೋಗುವುದು ಜೀವನ ಶಿಕ್ಷಣವನ್ನು ನೀಡುವುದೇ

ಅದಕ್ಕಿರುವ ಉಪಾಯ. ಇಂತಹ ಮಠಗಳ ಬಗೆಗಿನ ಅನಿಸಿಕೆಗಳು ಇಂದು ನಿನ್ನೆಯದಲ್ಲ. ಹಾಗಾಗಿ ವಿಶೇಷ ಚಿಂತನೆ ನಡೆದು ಸರ್ವಸ್ಪರ್ಶಿ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಕಹಿ ಭಾವನೆಗಳು ಸಾವಕಾಶವಾಗಿ ದೂರವಾದಾವು.

ಪ್ರಶ್ನೆ : ''ಕೌಪೀನವಂತಃ ಖಲು ಭಾಗ್ಯವಂತಃ'' ಹಾಗೂ ''ಧನ್ಯೋ ಗೃಹಸ್ಥಾಶ್ರಮಃ'' ಈ ಮಾತುಗಳ ತಾತ್ವಿಕ ಹಿನ್ನೆಲೆಯ ಕುರಿತು ಹೇಳುವಿರಾ?

ಉತ್ತರ : ಮೊದಲಿನದು ಸಂನ್ಯಾಸಿಗಳಿಗೆ ಹೇಳಿದ ಮಾತು. ಎರಡನೆಯದು ಗೃಹಸ್ಥರಿಗೆ ಹೇಳಿದ ಮಾತು. ಎರಡನ್ನೂ ಪ್ರಾರಂಭದಲ್ಲೇ ಸಮನ್ವಯ ಮಾಡಬಾರದು. ಗೃಹಸ್ಥ ಎಲ್ಲ ರೀತಿಯಿಂದಲೂ ಸಮೃದ್ಧಿಯನ್ನು ಹೊಂದಿ ಲೌಕಿಕ-ವಾಗಿ ತೃಪ್ತಿಹೊಂದುತ್ತಾನೆ. ಸಂನ್ಯಾಸಿಯ ಕೌಪೀನ ಭಾಗ್ಯ ಕಠಿಣ ಬ್ರಹ್ಮಚರ್ಯವನ್ನು ಸೂಚಿಸುತ್ತದೆ. ಅವನು ಲೌಕಿಕ ವೇಷಭೂಷಣಗಳನ್ನು ಧರಿಸುವಂತಿಲ್ಲವೆಂದೂ ಸೂಚಿಸುತ್ತದೆ. ಕಠಿಣ ವ್ರತಗಳಿಂದ ಪಡೆದ ಯಮನಿಯಮಗಳೇ ಅವನಿಗೆ ಅಲೌಕಿಕ ಆನಂದಭಾಗ್ಯ ಕೊಡುತ್ತದೆ.

ಪ್ರಶ್ನೆ : ಸಂನ್ಯಾಸಿಗಳ ಪೀಠತ್ಯಾಗ, ಧನಾಕರ್ಷಣೆ, ಪ್ರಾಪಂಚಿಕ ಕಾರ್ಯಕ್ರಮ-ಗಳಲ್ಲಿಯೂ ಭಾಗವಹಿಸುವುದು ಒಂದು ಕಡೆಯಾದರೆ ಇನ್ನೊಂದು ಕಡೆ ಅತಿಮಡಿವಂತಿಕೆ, ಲೌಕಿಕ ವಿಷಯಗಳಲ್ಲಿ ತೀವ್ರ ಅನಾಸಕ್ತಿ ಸಾಮಾಜಿಕ ಸಮಸ್ಯೆಗಳ ಬಗೆಗೆ ಉದಾಸೀನತೆ ಹೀಗೆ ಈ ಎರಡೂ ಭಾಗಗಳಲ್ಲಿ ಪೀಠಾಧಿಪತಿಗಳ ಕುರಿತು ಟೀಕೆ ಟಿಪ್ಪಣಿಗಳು ಬರುತ್ತಿವೆ. ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಉತ್ತರ : ಎಲ್ಲರದೂ ಪ್ರಾಮಾಣಿಕ ಟೀಕೆಗಳೇನೂ ಅಲ್ಲ. ಆದರೂ ಪರಿಶೀಲಿಸುವ. ಸಂನ್ಯಾಸಿಗಳ ಪೀಠತ್ಯಾಗದ ವಿಷಯದಲ್ಲಿ ಹೇಳುವುದಾದರೆ ಎಳೆಯ ವಯಸ್ಸಿನಲ್ಲಿಯೇ ಸಂನ್ಯಾಸಿಯಾಗಿದ್ದರೆ ಅವನಿಗೆ ಪ್ರಾಪಂಚಿಕ ವಿಷಯಗಳೇ ತಿಳಿಯುವುದಿಲ್ಲ. ಪ್ರೌಢನಾದ ನಂತರ ಮುಂದಿನ ಬದುಕಿನ ಸ್ಥಿತಿಗತಿಗಳ ಪರಿಚಯವಾದಾಗ ಸಂನ್ಯಾಸ ತನ್ನಿಂದ ಸಾಧ್ಯವಿಲ್ಲ. ಇದರಿಂದ ತನಗೂ ಪೀಠಕ್ಕೂ ದ್ರೋಹ ಬಗೆದಂತಾದೀತು. ಹಾಗಾಗಿ ಸಂನ್ಯಾಸ ತ್ಯಾಗ ಮಾಡುವುದೇ ಲೇಸು ಎಂದು ಪ್ರಾಮಾಣಿಕವಾಗಿ ಎನಿಸಿದ್ದಲ್ಲಿ ಅವನು ಪೀಠತ್ಯಾಗ ಮಾಡುವುದು ಒಳ್ಳೆಯದು. ಇದು ಸಮಾಜಕ್ಕೆ ಕೆಟ್ಟ ಪರಂಪರೆ ನೀಡುತ್ತಿದೆ ಎಂದೂ 'ಪತಿತ''-ನಾಗುತ್ತಾನೆಂದೂ ಇದ್ದರೂ ಕೂಡ ಪೀಠದಲ್ಲೇ ಇದ್ದುಕೊಂಡು ಪತಿತ ಪ್ರವೃತ್ತಿಯಲ್ಲಿರುವುದಕ್ಕಿಂತ ಪೀಠತ್ಯಾಗ ಮಾಡಿ ಮನಃ ಸಾಕ್ಷಿಯಂತೇ ವರ್ತಿಸುವುದೇ ಒಳ್ಳೆಯದು. ಆದರೆ ಯಾವುದೇ ಆಕರ್ಷಣೆಗಾಗಿ ಈ ರೀತಿ ಮಾರ್ಪಾಡು ಸಲ್ಲ.

ಇನ್ನು ಆಸಕ್ತಿ ಅನಾಸಕ್ತಿ ವಿಷಯ. ಸಾಮಾಜಿಕ ವಿಷಯಗಳಲ್ಲಿ ''ತೀವ್ರ'' ಅನಾಸಕ್ತಿಯೂ ಸಲ್ಲ. ''ಅತೀ'' ಮಡಿವಂತಿಕೆಯೂ ಸಲ್ಲ. ಹೀಗೆಯೇ ಮಡಿವಂತಿಕೆ ಅಗತ್ಯವೆಂಬುದು ಪ್ರಶ್ನೆಯಿಂದಲೇ ವೇದ್ಯವಾಗುತ್ತದೆ. ಅದೇ ಸರಿ ಎನ್ನಬಹುದು.

ಪ್ರಶ್ನೆ : ಜನರಲ್ಲಿಂದು ಧಾರ್ಮಿಕ ಶ್ರದ್ಧೆಯಿದೆ. ಆದರೆ ಆಚಾರ ಹಾಗೂ ಶಾಸ್ತ್ರಗಳ ಬಗೆಗೆ ಮೌಢ್ಯವಿದೆ. ವಿದ್ಯಾವಂತರಲ್ಲೂ ಇದು ಗೋಚರಿಸುತ್ತಿದೆ. ಇದನ್ನು ಸರಿಪಡಿಸಲು ತಮ್ಮಲ್ಲಿ ಕಾರ್ಯಯೋಜನೆಯಿದೆಯೇ?

ಉತ್ತರ : ಇದೊಂದೇ ಉದ್ದೇಶಕ್ಕಾಗಿ ಪ್ರತ್ಯೇಕ ಕಾರ್ಯಯೋಜನೆ ನಮ್ಮಲ್ಲಿಲ್ಲ. ಆದರೆ ಜನರಿಗೆ ಆಚರಣೆಗಳ ಬಗೆಗೆ ಶಾಸ್ತ್ರಗಳ ಬಗೆಗೆ ತಿಳಿಸಿಕೊಡಲು ಚಿಂತನೆಗಳು ಗೋಷ್ಠಿಗಳ, ನಮ್ಮಲ್ಲಿ ಆಧುನಿಕ ಹಾಗೂ ಪ್ರಾಚೀನ ಸಂಪ್ರದಾಯಗಳ ಜನರನ್ನು ಸೇರಿಸಿ ನಡೆಯುತ್ತಿದೆ. ಉಳಿದ ಮಠಗಳಲ್ಲೂ ಇವು ನಡೆದರೆ ಹೆಚ್ಚು ಸ್ವಾಗತಾರ್ಹ. ಮಠ ಮಂದಿರಗಳಲ್ಲಿ ಹೇಗೆ ವ್ಯವಹರಿಸಬೇಕು ಎಂದು ಇಂದಿನ ಯುವ ಪೀಳಿಗೆಗೆ ತಿಳಿಸುವಂತಹ ಶಿಬಿರಗಳನ್ನು ಮಾಡಬೇಕೆಂಬ ಅಪೇಕ್ಷೆ ಪಟ್ಟಲ್ಲಿ ಅದನ್ನು ನಾವು ಕೈಗೊಳ್ಳಬಹುದು.

ಪ್ರಶ್ನೆ : ಸಂನ್ಯಾಸಗಳಲ್ಲಿ ಪೀಠಾಧಿಪತಿಗಳಲ್ಲಿ ಸಂಪ್ರದಾಯ ಭೇದಗಳಿವೆ. ಸಾಮಾಜಿಕವಾಗಿಯೂ ಆಚರಣೆಯಲ್ಲಿ ಭಿನ್ನರೀತಿಯಿದೆ. ಅದರಿಂದ ಲೌಕಿಕರಲ್ಲಿ ವಿಶೇಷವಾಗಿ ಪಟ್ಟಣ-ನಗರಗಳಲ್ಲಿ ವ್ಯವಹರಿಸುವಾಗ ತೊಂದರೆಯಾಗುತ್ತದೆ. ಇದನ್ನು ಪರಿಹರಿಸುವುದು ಹೇಗೆ?

ಉತ್ತರ : ಇದಕ್ಕೆ ಉತ್ತರ ಕೊಡುವುದು ಕಷ್ಟ. ಸಂನ್ಯಾಸ ಸ್ವೀಕಾರದಲ್ಲಿಯೂ ಮಠಗಳ ಸಂಪ್ರದಾಯ ಪದ್ಧತಿಗಳಲ್ಲೂ ತುಂಬಾ ಭಿನ್ನತೆಯಿದೆ. ಆದರೂ ವ್ಯಾವಹಾರಿಕವಾಗಿ ಸಾಮಾಜಿಕ ದೃಷ್ಟಿಯಿಂದ ಸಾಮಾನ್ಯ ಸೂತ್ರವೊಂದನ್ನು ಸಂನ್ಯಾಸಕ್ಕೆ ಪ್ರತಿಕೂಲವಾಗದ ಹಾಗೆ ಯೋಚಿಸಬಹುದು.

ಪ್ರಶ್ನೆ : ಶಾಂಕರ ಸಂದೇಶವನ್ನು ವ್ಯಾಪಕಗೊಳಿಸುವುದರಲ್ಲಿ ನಿಮ್ಮ ಕಾರ್ಯಯೋಜನೆ ಇದೆಯೇ?

ಉತ್ತರ : ಸಮಾಜಕ್ಕೆ ಮಠಗಳು ಹಿತವನ್ನು ಮಾಡುತ್ತಿವೆ ಎಂಬ ಭಾವನೆ ಜನರಿಗೆ ಬರುವಂತೆ ಮೊದಲು ಮಾಡಬೇಕಾಗಿದೆ. ಅನಂತರ ನಮ್ಮ ಮಠದ ವತಿಯಿಂದಲು ಬೇರೆ ಮಠಗಳ ಸಹಯೋಗದಿಂದಲೂ ಮನೆ ಮನೆಗಳಿಗೂ ಶೈಕ್ಷಣಿಕ ಸಂಸ್ಥೆಗಳಿಗೂ ಶಾಂಕರಸಂದೇಶ ತಲುಪಿಸುವ ಯೋಜನೆಯಿದೆ.

ಪ್ರಶ್ನೆ : ತಾವು ವಿರಕ್ತರು, ಪೀಠಾಧಿಪತಿಗಳು ಆದರೆ ಯುವಕರು. ಇಂದಿನ ಯುವ ಜನಾಂಗಕ್ಕೆ ಸಂದೇಶವೇನು?

ಉತ್ತರ : ಯುವಕರು ತುಂಬಾ ವಿವೇಕದಿಂದ ವರ್ತನೆ ಮಾಡಿದ್ದಲ್ಲಿ ಇಡೀ ಜೀವನವನ್ನು ಯಶಸ್ಸಿನಿಂದ ಬದುಕ ಬಹುದು.

ಯೌವನವೇ ಇಡೀ ಜೀವನಕ್ಕೆ ಭದ್ರ ಬುನಾದಿ. ಯೌವನದಲ್ಲಿ ವಿವೇಕವಿದ್ದಲ್ಲಿ ಸಂತೃಪ್ತಿ ಜೀವನ, ಅದಿಲ್ಲವಾದಲ್ಲಿ ಮತ್ತೆ ಪಶ್ಚಾತ್ತಾಪದ ಜೀವನವಾಗುತ್ತದೆ. ಎಲ್ಲ ಮಹಾನುಭಾವರು ತಮ್ಮ ಜೀವನದಲ್ಲಿ ಸಾಧನೆ ಮಾಡಿದ್ದು ಸಾಕ್ಷಾತ್ಕಾರ ಮಾಡಿಕೊಂಡದ್ದು ಯೌವನದಲ್ಲಿಯೇ. ಹಾಗಾಗಿ ಸಾಮಾನ್ಯ ಯುವಕರೂ ಕೂಡ ತಮ್ಮ ಲೌಕಿಕ ಜೀವನಕ್ಕಾಗಿಯಾದರೂ ಯೌವನದಲ್ಲಿಯೇ ಮುಂದಿನ ಜೀವನಕ್ಕಾಗಿ ಸಾಧನೆಗೆ ತೊಡಗಬೇಕು. ಅದರ ಸಂಗಡ ಹಿರಿಯರ ಮಾರ್ಗದರ್ಶನ, ಸಾಮಾಜಿಕ ದೃಷ್ಟಿ ಅಗತ್ಯ. ಇದರಿಂದ ರಾಷ್ಟ್ರದ ಪ್ರಗತಿಗೂ ಒಳಿತಾಗುತ್ತದೆ.

ಪೂಜ್ಯ ಸ್ವಾಮಿಗಳೊಡನೆ ಸಂದರ್ಶನ ಪ್ರಾರಂಭಿಸಿದಾಗ ರಾತ್ರಿ 10ರ ಮೇಲಾಗಿತ್ತು. ಮುಗಿದಾಗ 11 1/2 ಕಳೆದಿತ್ತು. ಆದರೂ ಹಸನ್ಮುಖರಾಗಿಯೇ ಉತ್ತರಿಸುತ್ತಿದ್ದರು. ಹಲವು ಸಲ ಪ್ರಶ್ನೋತ್ತರಗಳು ಚರ್ಚೆ, ಜಿಜ್ಞಾಸೆಗಳಿಗೆ ದಾರಿ ಮಾಡಿಕೊಡುತ್ತಿದ್ದವು. ಪುನಃ ಮರುದಿನ ಬ್ರಾಹ್ಮ ಮುಹೂರ್ತದಲ್ಲಿ ಎದ್ದು ಅವರ ಅನುಷ್ಠಾನಗಳಿಗೆ ಭಂಗ ಬರಬಾರದೆಂದು ನಾವೇ ಮಾತುನಿಲ್ಲಿಸಿದೆವು. ನಮ್ಮ ಪ್ರಶ್ನೆಗಳು ಟೀಕೆಯ ರೂಪದಲ್ಲಿದ್ದರೂ ಪ್ರಶ್ನಿಸುವ ರೀತಿಯಲ್ಲಿದ್ದರೂ ಅತ್ಯಂತ ಸಹನೆಯಿಂದ, ಸಹೃದಯತೆಯಿಂದ ಅವರು ಉತ್ತರಿಸಿದ್ದು ಸಂದರ್ಶನದಲ್ಲಿ ಅವರೇ ಹೇಳಿದ ಸಹನೆ ಹಾಗೂ ಸಂನ್ಯಾಸದ ಧನ್ಯತೆಯ ಆಚರಣೆಯನ್ನು ಸೂಚಿಸುತ್ತದೆ. ಈ ಸಂದರ್ಶನವನ್ನು ವ್ಯವಸ್ಥೆಗೊಳಿಸಿ ಕೊನೆಯತನಕವೂ ನನ್ನೊಡನೆಯಿದ್ದ ಪ್ರೊ. ಪಿ.ಐ. ಹೆಗಡೆಯವರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.

❁❁❁

ಗಾಯತ್ರೀ ಜಪಯಜ್ಞ ಹಾಗೂ ಸಂವಿಧಾನದಲ್ಲಿ ಆಧ್ಯಾತ್ಮಿಕತೆ

ದಶಮಾನದ ದಾಪುಗಾಲಿನ ನಡೆಗೆ ಎರಡು ಕೀರ್ತಿಶೃಂಗಗಳು

ವಿದ್ವಾನ್ ರಾಮಚಂದ್ರ ಶರ್ಮಾ ತ್ಯಾಗಲಿ

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ದಿನಾಂಕ 2-2-95ರಂದು ಸನ್ಯಾಸ ದೀಕ್ಷೆಯನ್ನು ಪಡೆದು ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಧರ್ಮಪೀಠಾರೋಹಣ ಮಾಡಿದರು. ಅಂದು ಪ್ರಪ್ರಥಮವಾಗಿ ಮಾಡಿದ ''ಅಭಯ ಪ್ರದಾನ'' ಭಾಷಣದ ಮೂಲಕ ಶಿಷ್ಯಕೋಟಿಗೆ ಅಭಿಮಾನ ಆನಂದ-ಆಶ್ವಾಸನೆಯ ಅಮೋಘ ವರದಾನವನ್ನೇ ನೀಡಿದರು. ಅದು ಶಿಷ್ಯರಿಗೆ ''ಅಭಯದಾನದ'' ಭಾಷಣವಾದರೆ ತಮ್ಮ ಸ್ವಂತಕ್ಕೆ ಧರ್ಮಪೀಠಾರೋಹಣದ ನೀತಿಸಂಹಿತೆ, ಸಂನ್ಯಾಸಾಶ್ರಮದ ಶ್ರಮದ ಪ್ರಯಾಣದ ದಾರಿಬುತ್ತಿ, ಸಾಗುವ ಶ್ರೇಯೋಮಾರ್ಗದ ಕೈಪಿಡಿ, ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಪ್ರತಿಜ್ಞಾ ವಾಕ್ಯವಾಗಿತ್ತು. ಈ ಮಾತಿನ ಸತ್ಯವನ್ನು ಮನಗಾಣಲು ಹತ್ತುವರ್ಷಗಳಲ್ಲಿ ಅವರು ಹಮ್ಮಿಕೊಂಡ ಕಾರ್ಯಕ್ರಮಗಳು, ಸಾಧಿಸಿದ ಸಾಧನೆಗಳು, ಕಟ್ಟಿದ ಸಂಸ್ಥೆಗಳು, ಸಾರಸ್ವತ ಪ್ರಕಟಣೆಗಳು, ನಾನಾ ಅಭಿಯಾನಗಳು, ಯಾತ್ರೆಗಳು, ಗೋಷ್ಠಿಗಳು, ಸಾಲು ಸಾಲಾಗಿ ಸಾಕ್ಷಿಗಳಾಗುತ್ತವೆ. ನಿಖರತೆಯ ಒರೆಗಲ್ಲಾಗುತ್ತವೆ.

ಇಂಥ ಯುವ ಯತಿಯನ್ನು ಕಂಡು ವಿಚಕ್ಷಣರೂ, ಗುಣೈಕ ಗ್ರಾಹಿಗಳೂ, ವಿದ್ವಾಂಸರೂ ಆದ ಶ್ರೀ ರಂಗನಾಥಶರ್ಮರು ''ಸ್ಮರತಿ ಸಪದಿ ಚಿತ್ತಂ ಶಂಕರಾಚಾರ್ಯ-ಮಾದ್ಯಮ್'' ಎಂದು ಉದ್ಗರಿಸಿದರೆ ಅತಿಶಯೋಕ್ತಿಯಲ್ಲ.

ಶ್ರೀ ಶ್ರೀಗಳ ಅನೇಕ-ಸಾಧನೆಗಳ ಮಧ್ಯದಲ್ಲಿ ಅನನ್ಯವಾಗಿ ಎದ್ದು ನಿಲ್ಲುವ ಎರಡು ಕೀರ್ತಿ ಶಿಖರಗಳೆಂದರೆ ಗಾಯತ್ರೀ ಜಪಯಜ್ಞ ಮತ್ತು ''ಭಾರತದ

ಸಂವಿಧಾನದಲ್ಲಿ ಆಧ್ಯಾತ್ಮಿಕತೆ'' ಈ ಎರಡೂ ಅವರ ಸ್ವೋಪಜ್ಞ ಗಂಭೀರ ಚಿಂತನೆಯ ಫಲಗಳು.

ಒಮ್ಮೆ ಶಿಷ್ಯರೊಬ್ಬರ ಮನೆಗೆ ಭಿಕ್ಷಕ್ಕೆ ಪ್ರಯಾಣಿಸುವ ಸಂದರ್ಭದಲ್ಲಿ ಸದಾ ಜನಹಿತ ಚಿಂತಕರಾದ ಶ್ರೀಗಳ ಮನಸ್ಸಿನಲ್ಲಿ ಗಾಯತ್ರೀಜಪಯಜ್ಞ ಹೊಳೆಯಿತು. ಮಠಕ್ಕೆ ಮರಳಿದವರೇ ಆತ್ಮೀಯ ಶಿಷ್ಯರಲ್ಲಿ ಪ್ರಸ್ತಾಪಿಸಿದರು. ಹದಿನಾರು ಸೀಮೆಯ ಉಪನೀತರೆಲ್ಲರೂ ಭಾಗಿಗಳಾಗಬೇಕು. ವಯಕ್ತಿಕ ಗಾಯತ್ರೀ ಜಪದಿಂದ ಸಮೂಹ ಮಾಂಗಲ್ಯ ಸಾಧ್ಯವಾಗಬೇಕು. ಆತ್ಮ ಶುದ್ಧಿಕರವಾದ, ಬುದ್ಧಿ ಪ್ರಚೋದಕವಾದ, ಮನೋಧಾರಕವಾದ, ವೇದಸಾಧಕವಾದ, ಬ್ರಹ್ಮ-ಬ್ರಾಹ್ಮಣ್ಯ ಪ್ರಾಪಕವಾದ, ಮೇಧಾಶಕ್ತಿ ವರ್ಧಕವಾದ, ಅಜ್ಞಾನನಾಶಕವಾದ, ಸೂಕ್ಷ್ಮಜ್ಞಾನ ಪ್ರೇರಕವಾದ ಆರೋಗ್ಯವರ್ಧಕವಾದ ವಿಚಾರ ಪ್ರಚೋದಕವಾದ, ಸಂಶೋಧಕವಾದ, ಸೂಕ್ಷ್ಮದರ್ಶಕವಾದ, ನಿಶಿತಮತಿಪ್ರದವಾದ ಗಾಯತ್ರೀ ಮಂತ್ರವನ್ನು ಅಧಿಕ ಸಂಖ್ಯೆಯ ಜನ ಮರೆಯುತ್ತಿದ್ದಾರೆ. ಮರೆಯದವರೂ ಅನುಷ್ಠಾನ ಹೀನರಾಗಿದ್ದಾರೆ. ಇದು ಕಾಲಕ್ರಮದಲ್ಲಿ ಸಮಾಜಹ್ರಾಸಕ್ಕೆ ಕಾರಣವಾದೀತು. ಮಹತ್ವಮರೆಯಾದೀತು ಎಂದು ಭಾವಿಸಿ ಮಠದ ಹದಿನಾರು ಸೀಮಾವ್ಯಾಪ್ತಿಯಲ್ಲಿ ಅಧೀತಿಬೋಧಾಚರಣೆಯ ಕಾರ್ಯವನ್ನು ಬಿರುಗಾಳಿಯಂತೆ ಹಬ್ಬಿಸಿದರು.

ಹದಿನಾರು ಸೀಮೆಯ ಶಿಷ್ಯರಿಂದ ಗಾಯತ್ರೀ ಜಪಾನುಷ್ಠಾನ ಮಾಡಿಸಬೇಕು. ಅದು ಶಾಸ್ತ್ರೀಯವಾಗಿ ಇರಬೇಕು. ಅದಕ್ಕಾಗಿ ಪ್ರತಿಗ್ರಾಮದಿಂದ ಒಬ್ಬೊಬ್ಬ ಸಮರ್ಥ ವೈದಿಕನನ್ನು ಆರಿಸಿಕೊಳ್ಳಲಾಯಿತು. ಹೀಗೆ ಸೇರಿದ ಒಟ್ಟೂ 500 ವೈದಿಕರಿಗೆ ಶ್ರೀಮಠದಲ್ಲಿ ವಿಧಿವಿಧಾನಗಳ ತರಬೇತಿಯನ್ನು ನೀಡಲಾಯಿತು. ಶಾಸ್ತ್ರೋಕ್ತ ವಿಧಿವಿಧಾನವುಳ್ಳ ಜಪವಿಧಾನ ಪುಸ್ತಿಕೆಯನ್ನು ಪ್ರಕಟಿಸಿ ಹಂಚಲಾಯಿತು. ಪ್ರತಿಗ್ರಾಮದಲ್ಲಿ ಸಾಮೂಹಿಕವಾಗಿ ಜಪ ಮಾಡಲು ಯೋಗ್ಯವಾದ ದೇವಸ್ಥಾನಾದಿ-ಗಳನ್ನು ಗುರುತಿಸಲಾಯಿತು. 5 ನವೆಂಬರ್ 95 ರಿಂದ 18 ಜನವರಿ 96ರ ಮಧ್ಯದಲ್ಲಿ ಎಲ್ಲ ಗ್ರಾಮಗಳಲ್ಲಿ ಜಪಾನುಷ್ಠಾನವು ಸಾಂಗವಾಗಿ ನೆರವೇರಿತು. ಒಂದು ಕೋಟಿ ಜಪವನ್ನು ಮಾಡಿಸುವ ಗುರಿ ಹೊಂದಿದ ಅಭಿಯಾನ ಮೂರು ಕೋಟಿಗೂ ಮಿಕ್ಕಿ ಜಪಾನುಷ್ಠಾನ ಮಾಡಿಸಿತು. 25-1-96ರಿಂದ 31-1-96ರವರೆಗೆ ಶ್ರೀಮಠದಲ್ಲಿ ಸಂಹಿತಾಹವನಾದಿಗಳೊಂದಿಗೆ ಗಾಯತ್ರೀಜಪಯಜ್ಞವು ಸಾಂಗೋಪಾಂಗವಾಗಿ ಪೂರೈಸಿತು.

ಇದೊಂದು ಅಭೂತಪೂರ್ವ ಕಾರ್ಯಕ್ರಮವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಜನಮನ ರಸನೆಗಳಲ್ಲಿ ಗಾಯತ್ರೀ ಪ್ರತಿಷ್ಠೆಯಾಯಿತು. ಶ್ರೀ ಶ್ರೀಗಳಿಗೆ ತೃಪ್ತಿ ತಂದಿತು.

ಸಂವಿಧಾನ ಎನ್ನುವುದು ರಾಷ್ಟ್ರೀಯ ನೀತಿಸಂಹಿತೆ. ವೈವಿಧ್ಯದಲ್ಲಿ ಏಕತೆ ಎಂಬ ಪ್ರಶಂಸೆ ಹೊತ್ತ ಭಾರತದೇಶದಲ್ಲಿ ನಾನಾ ಮತ-ಜಾತಿಯ ಗೊಂದಲ ರಾಜಕೀಯ ಸೃಷ್ಟಿಯಾಗಿ ಜನಮನವನ್ನು ಘಾಸಿಗೊಳಿಸುತ್ತಿದೆ. ರಾಷ್ಟ್ರದ ಏಳ್ಗೆಗೆ ಮಾರಕವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆಂಗ್ಲಭಾಷೆಯಲ್ಲಿ ಪ್ರಧಾನವಾಗಿ ಇದ್ದ ಸಂವಿಧಾನದಲ್ಲಿ ''ಸೆಕ್ಯುಲರಿಸಂ'' ಎಂಬ ಪದವನ್ನು ಸೇರಿಸಲಾಯಿತು. ಅಪೇಕ್ಷಿತ ಸರಿಯಾದ ಅರ್ಥವನ್ನು ನೀಡದ ಈ ಪದ ಅನೇಕ ಗೊಂದಲಗಳಿಗೆ ಕಾರಣವಾಯಿತು. ಜಾತ್ಯತೀತ ಮತಾತೀತ ಸಂಪ್ರದಾಯಾತೀತ ಮುಂತಾದ ಅರ್ಥದಲ್ಲಿ ಆಂಗ್ಲ ಭಾಷಾ ಪ್ರಧಾನವಾದ ದೇಶದಲ್ಲಿದ್ದ ಈ ಪದಕ್ಕೆ ಧರ್ಮಾತೀತ ಎಂಬ ಅರ್ಥವನ್ನು ಮಾಡಿ ಮಾನವನ ಪರಿಶುದ್ಧ ಬದುಕಿಗೆ ಸಮಾಜದ ನೀತಿಯುಕ್ತ ಬಾಳಿಗೆ ಬುನಾದಿಯಾದ ಸತ್ಯ, ಅಹಿಂಸೆ, ದಯಾ ಮುಂತಾದ ಶ್ರೇಷ್ಠ ಗುಣಗಳನ್ನೇ ಅಪೋಹ ಮಾಡುವ ಮಾರಕ ಪದವಾಗಿ ರೂಪಗೊಂಡು ಬಳಕೆಯಾಗತೊಡಗಿತು. ಮತ-ಜಾತಿ-ಸಂಪ್ರದಾಯ-ಕುಲ ಮುಂತಾದ ಸಂಕುಚಿತಾರ್ಥವು ಧರ್ಮ ಪದಕ್ಕೆ ಅಂಟಿ-ಕೊಂಡಿತು. ಧರ್ಮ, ಧಾರ್ಮಿಕ- ಎಂದರೇ ಭಯಗೊಳ್ಳುವ, ಸಮಾಜ ಬಾಹ್ಯನಾಗುವ ಅಳುಕಿನ ಭಾವನೆ ತಲೆ ದೋರುವಂತಾಯಿತು.

ಈ ಹಿನ್ನೆಲೆಯಲ್ಲಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿಯವರು ಚಿಂತನೆ ಮಾಡಿ, ಈ ಸಂವಿಧಾನದತ್ತ ತಪ್ಪನ್ನು ತಿದ್ದಲು ಯೋಚಿಸಿದರು. ಸ್ಪಿರಿಚ್ಯುಯಾಲಿಟಿ = ಧಾರ್ಮಿಕತೆ. ಈ ಎಲ್ಲ ಅರ್ಥಾಪಾರ್ಥ ಗೊಂದಲಗಳೂ, ಮೂಲ ಮಾನವೀಯ ಗುಣವಾದ ಧರ್ಮಕ್ಕೆ ಹತ್ತುವ ಕಲಂಕವೂ, ನಿವಾರಣೆ-ಯಾಗುವುದೆಂದು ಆಳವಾಗಿ ಚಿಂತನೆ ಮಾಡಿ, ರಾಷ್ಟ್ರಕ್ಕೆ ಒಂದು ಶ್ರೇಷ್ಠ ಕೊಡುಗೆ-ಯನ್ನು ನೀಡಿದ್ದಾರೆ. ಸ್ಪಿರಿಚ್ಯುಯಾಲಿಟಿ - ಧಾರ್ಮಿಕತೆ.

ಪ್ರಕೃತ ಸಂವಿಧಾನ ಪರಾಮರ್ಶೆ ಕಾರ್ಯವು ನಡೆಯುತ್ತಿರುವುದರಿಂದ ಈ ಸಮಯದಲ್ಲೇ ಸಂವಿಧಾನ ಪರಾಮರ್ಶ ಸಮಿತಿಗೆ ಈ ಪದವನ್ನು ಸೇರಿಸುವ ಸಲಹೆಯನ್ನು ಪ್ರಜಾಪ್ರಭುತ್ವಾನುಗುಣವಾಗಿ ಸಲ್ಲಿಸಬೇಕಾಗಿದೆ.

ಅದಕ್ಕೆ ನಾಡಿನ ಮುತ್ಸದ್ದಿಗಳ, ವಿಚಾರ ವಂತರ ಅಭಿಪ್ರಾಯ ಕ್ರೋಢೀಕರಣ ಮಾಡಲಿಕ್ಕಾಗಿಯೂ, ಜನಸಾಮಾನ್ಯರ ಗಮನಕ್ಕೂ ಬರುವಂತೆ ಮಾಡಲೂ ''ಸಂವಿಧಾನದಲ್ಲಿ ಧಾರ್ಮಿಕತೆ'' ವಿಚಾರ ಗೋಷ್ಠಿಗಳನ್ನು ಹಳ್ಳಿಯಿಂದ ದಿಲ್ಲಿಯ-ವರೆಗೂ ಹಮ್ಮಿಕೊಳ್ಳಲಾಗುತ್ತಿದೆ. ಈ ವಿಚಾರದ ಪ್ರಥಮ ಗೋಷ್ಠಿಯು ಬೆಂಗಳೂರಿನ ಭಾರತೀಯ ವಿದ್ಯಾಭವನದ ಜನಭರಿತ-ಸಭಾಭವನದಲ್ಲಿ

ಯಶಸ್ವಿಯಾಗಿ ನೆರವೇರಿತು. ಹಿರಿಯ ರಾಜಕಾರಣಿ ಶ್ರೀ ರಾಮಕೃಷ್ಣ ಹೆಗಡೆ, ನಿವೃತ್ತ ನ್ಯಾಯಾಧೀಶ ಶ್ರೀ ರಾಮಾಜೋಯಿಸ್, ಶ್ರೀರಂಗಪ್ರಿಯ ಸ್ವಾಮೀಜಿಯವರು ಶ್ರೀ ಶ್ರೀ ಶಿವರುದ್ರ ಸ್ವಾಮಿಗಳು ಬೇಲಿಮಠ, ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಮುಂತಾದ ಗಣ್ಯರು ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಎಲ್ಲರೂ ಶ್ರೀ ಶ್ರೀಗಳ ರಾಷ್ಟ್ರಚಿಂತನೆಯ ಫಲವಾದ ಈ ಸಂವಿಧಾನದಲ್ಲಿ ಅಧ್ಯಾತ್ಮಿಕತೆ ಎಂಬ ವಿಚಾರವನ್ನು ಅನುಮೋದಿಸಿದರು.

ಈ ವಿಚಾರಧಾರೆ ಗಂಗೆಯಂತೆ ಗಂಗಾಧರೇಂದ್ರ ಹಿಮಾಲಯದಿಂದ ಜನಜನ್ನುಗಳ ಕಿವಿಗಳಲ್ಲಿ ನುಗ್ಗಿ, ಹೊಮ್ಮಿ ಸಮಾಜ ಶಿವನ ತಲೆಯ ಮೇಲೆ ಹರಿಯುತ್ತ ರಾಷ್ಟ್ರಾದ್ಯಂತ ವ್ಯಾಪಿಸಿ, ಸಂವಿಧಾನವನ್ನು ಪಾವನ ಮಾಡಲು ಭಾರತರಾಷ್ಟ್ರದ ಕೋಟಿ ಜನರನ್ನು ನಿರೀಕ್ಷಿಸುತ್ತಲಿದೆ.

ಗಾಯತ್ರೀ ಜಪಯಜ್ಞ ಮತ್ತು ಸಂವಿಧಾನದಲ್ಲಿ ಆಧ್ಯಾತ್ಮಿಕತೆ ನಮ್ಮ ರಾಷ್ಟ್ರದ ಎರಡು ಮಹಾಶಕ್ತಿಗಳು. ಈ ಎರಡನ್ನೂ ಈ ಬಗೆಯಲ್ಲಿ ಯೋಚಿಸಿ ಪ್ರಪ್ರಥಮವಾಗಿ ಜನಾಂತರಂಗದಲ್ಲಿ ಇಟ್ಟ ಕೀರ್ತಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ-ಯವರಿಗೆ ಅನನ್ಯವಾಗಿ ಸಲ್ಲುತ್ತದೆ.

❀❀❀

ಸಹೃದಯ ಸರಸ್ವತಿ

-ಶತಾವಧಾನಿ ಡಾ|| ಆರ್. ಗಣೇಶ್

ಸುಮಾರು ಒಂಬತ್ತು ವರ್ಷಗಳ ಮುನ್ನ ನಾನು ಸ್ವರ್ಣವಲ್ಲೀ ಮಹಾಸಂಸ್ಥಾನಕ್ಕೆ ಅವಧಾನಿಸಲು ಮೊತ್ತಮೊದಲಿಗೆ ಬಂದೆನು. ಆ ಮುನ್ನ ಶಿರಸಿ-ಸೋಂದಾ-ಸ್ವರ್ಣವಲ್ಲಿಗಳತ್ತ ನಾನು ಬಂದದ್ದೇ ಇಲ್ಲ, ಆ ಬಗೆಗೆ ಹೆಚ್ಚಾಗಿ ತಿಳಿದದ್ದೂ ಇಲ್ಲ. 15-04-1992ರಂದು ಶ್ರೀಮಠದಲ್ಲಿ ಸಂಸ್ಕೃತಾವಧಾನವನ್ನು ನಾನು ಮಾಡಲೆಂದು ಬಂದಾಗ ಆ ಪರಿಸರದ ಸೌಂದರ್ಯ, ಜನಗಳ ಆತ್ಮೀಯತೆ, ಅವಧಾನಾಸಕ್ತಿ ತುಂಬ ಮುದ ತಂದಿತ್ತು. ಆ ದಿನದ ಅವಧಾನದಲ್ಲಿ ಆಶುಕವಿತಾ ಪೃಚ್ಛಕರಾಗಿ ಶ್ರೀಗಳೇ ಕಾರ್ಯನಿರ್ವಾಹ ಮಾಡುವರೆಂದರಿತಾಗ ನನಗೆ ಅವರ ಬಗೆಗೆ ಕುತೂಹಲಾಸಕ್ತಿಗಳು ಮತ್ತಷ್ಟು ಹೆಚ್ಚಿದವು.

ಅಪರಾಹ್ಣದಲ್ಲಿ ಮಠದ ದೇವರುಗಳ ಪೂಜಾನಂತರ ತೀರ್ಥವನ್ನು ಶ್ರೀಗಳೇ ಕೊಡುವಾಗ ಅವರನ್ನು ಕಂಡು ಆ ಕಿರಿಯ ವಯಸ್ಸಿಗೇ ಹಿರಿಯ ಪೀಠಕ್ಕೆ ಅದೆಂಥ ಘನವಾದ ರೀತಿಯಲ್ಲಿ ಒಪ್ಪಿದ್ದಾರೆಂದು ಗೌರವಾಶ್ಚರ್ಯಗಳೂ ಮೂಡಿದವು. ಏನೇ ಆಗಲಿ ಯತಿವರೇಣ್ಯರ ಎದುರು ಅವಧಾನದ ಬಾಧ್ಯತೆ ಕಷ್ಟಕರವೆಂದು ನನ್ನ ಹಿಂದಿನ ಅನುಭವಗಳನ್ನು ನೆನೆದು ಎಚ್ಚರದ ಶ್ರುತಿಯನ್ನು ಮತ್ತಷ್ಟು ಹೆಚ್ಚಿಸಿಕೊಂಡೆನಾದರೂ ಶ್ರೀಗಳ ಸ್ನೇಹಮಯವರ್ತನೆ, ವಿನೋದಶೀಲತೆ ಹಾಗೂ ಎಲ್ಲೆಡೆಯಲ್ಲಿಯೂ ಪಸರಿಸುವ ಅವಧಾನಗಳು ನನಗೆಷ್ಟೋ ನೆಮ್ಮದಿ ತಂದುವು. ನಾನೆಣಿಸಿದುದಕ್ಕಿಂತ ಸರಸವಾಗಿ ಅವಧಾನವು ಸಾಗಿತು. ಆಶುಕವಿತೆಯಲ್ಲಿ ಶ್ರೀಗಳು ಕೇಳಿದ ಪ್ರಶ್ನೆಗಳಾದರೂ ಕೌತುಕಕಾರಿಯಾಗಿಯೇ ಇದ್ದುವು. ಶ್ರೀಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಗಳ ಕೋಪ-ಕಾರುಣ್ಯಗಳ ಬಗೆಗೆ, ನೃಸಿಂಹ ಮತ್ತು ಶ್ರೀಕೃಷ್ಣರ ಬಗೆಗೆ ಪದ್ಯಗಳನ್ನು ಕೋರಿದ್ದಲ್ಲದೆ ಬಾಲಕನೊಬ್ಬನು ಕಲ್ಲು ಹೊಡೆದು ಬೀಳಿಸಿದ ಹಣ್ಣು ಆತನ ಮೂಗಿನ ಮೇಲೆಯೇ ಬಿದ್ದುದನ್ನು ವರ್ಣಿಸಬೇಕೆಂಬ

ಪ್ರಶ್ನೆಯೊಂದನ್ನೂ ಕೊನೆಯ ಸುತ್ತಿನಲ್ಲಿ ಮುಂದಿರಿಸಿದರು. ಅಷ್ಟೇ ಅಲ್ಲ, ನೃಸಿಂಹಸ್ತುತಿಯನ್ನು ತುಂಬ ವಿರಳ ಪ್ರಚುರವಾದ 'ಮಣಿಗಣನಿಕರ' ವೃತ್ತದಲ್ಲಿರಬೇಕೆಂದು ಕೋರಿದ್ದಲ್ಲದೆ ಪ್ರತಿಯೊಂದು ಪಾದದಲ್ಲಿಯೂ ವಿಭಿನ್ನಗತಿಯಿರುವಂತೆ ಛಂದೋಯತಿಯನ್ನು ಅನ್ವಯಿಸಬೇಕೆಂಬ ನಿಯಮವನ್ನೂ ಹಾಕಿದರು! ಮೊದಲೇ ಸರ್ವಲಘು (ಅಂತ್ಯಗುರು)ಮಯವಾದ ಆ ವೃತ್ತದ ತೊಡಕು ಇದರಿಂದ ಮತ್ತೂ ಹೆಚ್ಚಿತು. ಆದರೆ ಶ್ರೀಗಳ ಆರಾಧ್ಯದೈವದ ಕೃಪೆಯಿಂದ ನಾನು ಅದಕ್ಕೆ ತಕ್ಕಂತೆಯೇ ಆಶುಕವಿತೆಯನ್ನು ಹೇಳುವಂತಾಯಿತು. ಆಗ ಶ್ರೀಗಳ ಮುಖದಲ್ಲಿ ಮಿಂಚಿದ ಮೆಚ್ಚುಗೆಯ ನಗೆ ನನ್ನ ಮನದಲ್ಲಿನ್ನೂ ಮಾಸಿಲ್ಲ. ಅಂದಿನಿಂದ ಆ ಮಂದಹಾಸದ ಅನುಗ್ರಹ ನನ್ನನ್ನು ಎಡಬಿಡದೆ ಮುನ್ನಡೆಸಿದೆ.

ಈ ಅವಧಾನದ ಬಳಿಕ ಆಗಾಗ ಶಿರಸಿ-ಸ್ವರ್ಣವಲ್ಲಿಗಳಿಗೆ ಬರುವುದು ನನ್ನ ಬದುಕಿನ ಒಂದು ಭಾಗವೇ ಆಯಿತು.

ಮತ್ತೊಮ್ಮೆ ಶ್ರೀ ಶಂಕರಜಯಂತಿಯ ಸಂದರ್ಭದಲ್ಲಿ (12-05-97) ಇನ್ನೂ ಒಮ್ಮೆ ಅದೇ ಪುಣ್ಯಾವಸರದಲ್ಲಿ (10-05-2000) ಮತ್ತೆ ಮತ್ತೆ ಶ್ರೀಗಳ ಸನ್ನಿಧಾನದಲ್ಲಿ ಅವಧಾನಿಸುವ ಅವಕಾಶಗಳೊದಗಿದವು. ಆಗ ಶ್ರೀಶಂಕರ ಭಗವತ್ಪಾದರನ್ನೂ ಅದ್ವೈತ ಪರಂಪರೆಯನ್ನೂ ವಿಶೇಷವಾಗಿ ಆಧರಿಸಿ ಶಾಂಕರಾವಧಾನ, ಅದ್ವೈತಾವಧಾನಗಳೆಂಬ ಹೊಸ ಬಗೆಯ ಅವಧಾನಗಳನ್ನೇ ಶ್ರೀಗಳು ಏರ್ಪಡಿಸಿದರು. ಈ ಬಗೆಯ ಪ್ರಯೋಗವು ಅವಧಾನಕಲೆಯಲ್ಲಿಯೇ ಹೊಸತು. ಇಂಥ ಅನ್ವೇಷಣ ಪ್ರವೃತ್ತಿಯು ಶ್ರೀಗಳ ಅವಧಾನಕಲಾಸಕ್ತಿಗಲ್ಲದೆ ವೇದಾಂತ ಪ್ರಚಾರೋತ್ಸಾಹವನ್ನೂ ಚೆನ್ನಾಗಿ ಬಿಂಬಿಸುತ್ತದೆ. ಅಷ್ಟೇ ಅಲ್ಲ, ಅವರು ಸಕಲವನ್ನೂ ವೇದಾಂತ ತತ್ತ್ವದ ವಾತಾಯನದ ಮೂಲಕ ಗ್ರಹಿಸುವ ದಿಟವಾದ ಸಂನ್ಯಾಸಿ ಧರ್ಮವನ್ನೂ ನಾವು ಸಾಕ್ಷಾತ್ಕರಿಸಿಕೊಳ್ಳುತ್ತೇವೆ.

ಇಂಥ ಅವಧಾನಗಳಲ್ಲಾಗಲಿ ಇನ್ನಿತರ ಪ್ರವಚನ-ಭಾಷಣಗಳ ವೇಳೆಯಲ್ಲಾಗಲಿ ಶ್ರೀಗಳು ಉಪಸ್ಥಿತರಿದ್ದರೆಂದರೆ ಅದೊಂದು ಪರೀಕ್ಷೆಯೇ ಸರಿ. ಹಾಗೆಂದು ಹೇಳಿದ ಮಾತ್ರಕ್ಕೆ ಅವರು ಪರೀಕ್ಷಕರೆಂದಲ್ಲ. ವಸ್ತುತಃ ಶ್ರೀಗಳು ಪರಿಶುದ್ಧರಾದ ಶ್ರೋತೃಗಳು, ಪ್ರಾಮಾಣಿಕರಾದ ಆಸಕ್ತರು, ಉದಾರಮನೋಧರ್ಮದ ಸಹೃದಯರು. ಆದರೆ ಅವಧಾನ-ಪ್ರವಚನಾದಿಗಳ ಬಳಿಕ ಅವರು ತಮ್ಮ ಪುಟ್ಟ ನೋಟ್‌ಬುಕ್ಕನ್ನು ಹಿಡಿದು ಪ್ರತ್ಯೇಕವಾಗಿ ಕರೆದು ಅನೇಕ ಸಂಗತಿಗಳನ್ನು ಪ್ರಶ್ನಿಸದೆ, ಚರ್ಚಿಸದೆ ಇರುವುದಿಲ್ಲ. ಎಂಥ ಕಾರ್ಯಕ್ರಮದಲ್ಲಿಯೂ ಶ್ರೀಗಳು ತಮಗೆ ಆಸಕ್ತಿ ಕೆರಳಿಸಿದ,

ಪ್ರಶ್ನಿಸಬೇಕಾದ, ಮುಖ್ಯವೆನಿಸದ, ಮೆಚ್ಚುಗೆ ತಂದ ಅಂಶಗಳನ್ನು ಶ್ರದ್ಧೆಯಿಂದ ಗುರುತುಹಾಕಿಕೊಳ್ಳದೆ ಇರುವುದಿಲ್ಲ. ಇಂಥ ಪೀಠಾಧಿಪತಿಗಳನ್ನು ನಾನು ಅನ್ಯತ್ರ ಕಂಡಿಲ್ಲ. ಇದು ಅವರ ಶ್ರವಣಗಾಂಭೀರ್ಯ ಮತ್ತು ಆಸಕ್ತಿಗಳಿಗೊಂದು ನಿರುಪಮ ನಿದರ್ಶನ. ಹಲವು ಬಾರಿ ನನ್ನ ಪ್ರವಚನಗಳ ಬಳಿಕ ಅವರೊಡನೆಯೇ ವಾಹನದಲ್ಲಿ ತೆರಳುವ ಸದವಕಾಶವು ನನಗೊದಗಿದಾಗ ಅಲ್ಲಿಯೇ ಪ್ರಶ್ನೋತ್ತರ- ಚರ್ಚೆ. ಸಮಯವು ಪೋಲಾಗುವುದಕ್ಕೆ ಎಡೆಯೇ ಅವರಲ್ಲಿಲ್ಲವಷ್ಟೆ! ಇಂಥ ಸಂದರ್ಭಗಳಲ್ಲಿ ಅವರ ಟಿಪ್ಪಣಿ ಪುಸ್ತಕಕ್ಕೆ ಮತ್ತಷ್ಟು ಮಾಹಿತಿಯ ಸೇರ್ಪಡೆ. ಆಗ ನಗುನಗುತ್ತಾ ಶ್ರೀಗಳು ಹೇಳುವುದುಂಟು 'ನನಗೆ ಬಸ್‌ಕಂಡಕ್ಟರನ ಕೆಲಸಕ್ಕೆ ಒಳ್ಳೆಯ ಅರ್ಹತೆಯುಂಟು' ಎಂದು. ದಿಟವೇ ವೇದಾಂತ ವಿದ್ಯುತ್ತನ್ನು ಜನತೆಯ ಮನವೆಂಬ ದೀಪದ ಬುರುಡೆಗಳಿಗೆ ಸೋರಿಕೆಯಿಲ್ಲದೆ ಹಾಯಿಸುವ ಸೂಪರ್‌ಕಂಡಕ್ಟರ್ ಅವರು! ಅಧ್ಯಾತ್ಮವಿದ್ಯಾವಾದ್ಯಗೋಷ್ಠಿಯನ್ನು ಅಪಶ್ರುತಿಯ ಅಪಾಯವಿಲ್ಲದೆ ಎಲ್ಲೆಡೆ ನಿರ್ವಹಿಸಬಲ್ಲ ಮಾಸ್ಟರ್ ಕಂಡಕ್ಟರ್ ಅವರು!! ಹಲವು ಬಾರಿ ನನ್ನ ಮಾತುಗಳಲ್ಲಿ ಕೆಲವಂಶಗಳು ಚರ್ಚಾಸ್ಪದವೆನಿಸಿದಾಗಲೂ ಅವರು ಅವನ್ನೆಲ್ಲ ಅದೆಷ್ಟು ಸಹಾನುಭೂತಿಯಿಂದ ಗ್ರಹಿಸುತ್ತಿದ್ದರೆಂದರೆ, ನನಗೆ ನಾನಾಗಿಯೇ ನನ್ನ ಆಲೋಚನೆಗಳನ್ನು ಪುನಃ ಪರೀಕ್ಷಿಸಿಕೊಳ್ಳುವ ಹೃದ್ಯಾವಕಾಶವು ಸಿಗುತ್ತಿತ್ತು.

ವಾಕ್ಯಾರ್ಥ-ವಿದ್ವದ್ಗೋಷ್ಠಿಗಳಲ್ಲಿಯೂ ಶ್ರೀಗಳ ವರ್ತನೆ ಎಲ್ಲರಿಗೂ ಆದರ್ಶಪ್ರಾಯ. ಬಹುಶಃ ಅವರೇ ವಾಕ್ಯಾರ್ಥಗೋಷ್ಠಿಯಲ್ಲಿ ಪಂಡಿತರು ತಮ್ಮ ಪ್ರತಿಪಾದನೆಗಳನ್ನು ಬರೆದು ತಂದು ಮಂಡಿಸಬೇಕೆಂಬ ಶಿಸ್ತನ್ನು ಅಳವಡಿಸಿ ಗೆದ್ದ ಆದ್ಯರೆನಿಸುತ್ತದೆ. ಏಕೆಂದರೆ ಸಾಮಾನ್ಯವಾಗಿ ಪ್ರಾಚೀನ ಪಂಡಿತರ ವಾಕ್ಯಾರ್ಥ-ಗೋಷ್ಠಿಗಳು ಅನಿಯಂತ್ರಿತವಾಕ್ಕಲಹಗೋಷ್ಠಿಗಳಾಗಿ ವಿಷಯಾಂತರಗಳೇ ವಿಜೃಂಭಿಸುವಂತಾಗುವ ಅಪಖ್ಯಾತಿಗೆ ತುತ್ತಾಗುವುದುಂಟು. ಆದರೆ ಶ್ರೀಗಳು ನಿರ್ವಹಿಸುವ ವಾಕ್ಯಾರ್ಥಗೋಷ್ಠಿಯು ಆದರ್ಶ ವಿಚಾರಸಂಕಿರಣವೊಂದರ ಶಿಸ್ತನ್ನು ಮೈಗೂಡಿಸಿಕೊಂಡು ಉಳಿದೆಲ್ಲ ವಾಕ್ಯಾರ್ಥಗೋಷ್ಠಿಗಳಿಗೆ ಮಾದರಿಯೆನಿಸಿದೆ. ಇದನ್ನು ನನ್ನ ಪೂಜ್ಯಗುರುಗಳಾದ ವಿದ್ವಾನ್ ಎನ್. ರಂಗನಾಥಶರ್ಮರೂ ಹಲವು ಬಾರಿ ಮೆಚ್ಚಿ ಸ್ಮರಿಸಿದ್ದಾರೆ. ಇಂಥ ಗೋಷ್ಠಿಗಳಲ್ಲಿ ಸಹ ಅವರು ತೋರುವ ಸಂಯಮ, ನಿಷ್ಪಾಕ್ಷಿಕತೆ, ತತ್ತ್ವಜಿಜ್ಞಾಸೆ, ನಿರ್ಣಯಸಾಮರ್ಥ್ಯ, ತರ್ಕವೈಭವ ಹಾಗೂ ಸತ್ಯಪ್ರಿಯತೆಗಳು ಅನುಕರಣೀಯ. ಅಲ್ಲದೆ ತೀರ್ಮಾನವಾಗದೆ ಉಳಿದ ಸಂಗತಿಗಳ ಬಗೆಗೂ ಇರುವ ವಸ್ತುನಿಷ್ಠತೆ, ಅಂಗೀಕಾರಗಳು ಗಮನಾರ್ಹ. ಒಮ್ಮೆ ಧರ್ಮಶಾಸ್ತ್ರದ ಗೋಷ್ಠಿಯೊಂದರಲ್ಲಿ ಅವರು ಏಕಕಾಲಕ್ಕೆ ತೋರಿದ ಶಾಸ್ತ್ರನಿಷ್ಠೆ, ಸಂಪ್ರದಾಯ-

ಶ್ರದ್ಧೆಗಳೂ ಮಾನವೀಯ ಭಾವನೆ, ಸಾಮಾಜಿಕ ಕಳಕಳಿಗಳೂ ಅವಿಸ್ಮರಣೀಯ. ಮತ್ತೊಮ್ಮೆ ಬೌದ್ಧದರ್ಶನದ ಬಗೆಗೆ ಚರ್ಚೆ ಬಂದಾಗಲೂ ಅವರು ತೋರಿದ ವ್ಯಕ್ತಿಗೌರವ ಅಸ್ವಾದೃಶ. ಹೀಗೆಯೇ ದ್ವೈತಾದ್ವೈತಾದಿ ಚರ್ಚೆಗಳು ಬಂದಾಗಲೂ ಅವರ ಸಾತ್ತ್ವಿಕಮನೋಧರ್ಮ ಚೆನ್ನಾಗಿ ಎದ್ದು ತೋರುತ್ತದೆ.

ಶ್ರೀಗಳವರ ನಿರಂತರ ಜ್ಞಾನದಾಹ ಎಂಥವರಿಗೂ ಆರಾಧ್ಯ. ಒಮ್ಮೆ ಪ್ರಸ್ತಾವ-ವಶಾತ್ ಪಂಡಿತರಾಜ ವಿ.ಎಸ್. ರಾಮಚಂದ್ರಶಾಸ್ತ್ರಿಗಳ 'ಸರ್ವೇಷಾಂ ದರ್ಶನಾನಾಂ ಅದ್ವೈತೇ ತಾತ್ಪರ್ಯಂ' ಎಂಬ ನಿಬಂಧದ ಬಗೆಗೆ ನಾನು ಹೇಳಿದಾಗ ಅದನ್ನು ಕೂಡಲೇ ನನ್ನಿಂದ ತರಿಸಿಕೊಂಡು, ನೆರಳಚ್ಚು (xerox) ಪ್ರತಿ ಮಾಡಿಸಿ ಅಧ್ಯಯನ ಮಾಡಿಯೇ ತಮ್ಮ ಕುತೂಹಲವನ್ನು ತಣಿಸಿಕೊಂಡದ್ದು ನನಗೆ ನೆನಪಿದೆ. ಹೀಗೆಯೇ ಅದೆಷ್ಟೋ ಬಾರಿ ಪುರಾಣೇತಿಹಾಸಗಳ, ಅಪ್ರಸಿದ್ಧ- ಗ್ರಂಥಗಳ, ವಿವಿಧ ಸೂಕ್ತಿಗಳ ಬಗೆಗೆ ಅವರದು ನಿತ್ಯಕುತೂಹಲ.

ಭಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳಲ್ಲದೆ ಅವರಿಗೆ ಶ್ರೀವಿಷ್ಣುಸಹಸ್ರನಾಮ, ಸಂನ್ಯಾಸೋಪನಿಷತ್ತುಗಳು (ಹಾಗೂ ಇವುಗಳಿಗೆ ಶ್ರೀ ಶಂಕರಾನಂದರಂಥವರು ರಚಿಸಿದ ವ್ಯಾಖ್ಯಾನಗಳು), ಪಾತಂಜಲ ಯೋಗಸೂತ್ರ ಹಾಗೂ ವ್ಯಾಸಭಾಷ್ಯ ಮುಂತಾದ ಹಲವು ಮಹಾಗ್ರಂಥಗಳು ನಿತ್ಯವೂ ಅನುಸಂಧೇಯ. ನನಗೊಮ್ಮೆ ಅವರು ಹೇಳಿದ್ದುಂಟು- ಅಪರೋಕ್ಷಾನುಭವವಿರುವ ಜ್ಞಾನಿಗಳ ಮಾತುಗಳು ಬರಿಯ ಶಾಸ್ತ್ರಜ್ಞರಾದ ಪ್ರೌಢಪಂಡಿತರ ಗ್ರಂಥರಾಜಗಳಿಗಿಂತ ಎಷ್ಟೋ ಮಿಗಿಲು. ಅಲ್ಲದೆ ಜ್ಞಾನಿಗಳ ಮಾತು ತುಂಬ ಸರಳ, ಸಹಜ, ಸ್ಪಷ್ಟ.

ಇಂಥವರೊಡನೆ ನನಗೆ ಸುಮಾರು ಒಂದೂವರೆ ತಿಂಗಳಕಾಲ ತೀರ್ಥಯಾತ್ರೆ ಮಾಡುವ ಪುಣ್ಯಾವಕಾಶ ದೊರೆತದ್ದು ದಿಟವಾಗಿ ನನ್ನ ಭಾಗ್ಯ. ಆ ದಿನಗಳ ಕೆಲವು ಘಟನೆಗಳ ಹಿನ್ನೆಲೆಯಲ್ಲಿ ಶ್ರೀಗಳ ವ್ಯಕ್ತಿತ್ವವು ನನಗೆ ಕಂಡ ಬಗೆಯನ್ನು ಸಂಗ್ರಹವಾಗಿ ಹೇಳುವುದಷ್ಟೇ ನನ್ನ ಸದ್ಯದ ಉದ್ದೇಶ.

ಪ್ರಯಾಣದ ಆದಿಯಲ್ಲಿಯೇ ವಿಮಾನವು ತಪ್ಪಿಹೋಗಿ ಎಲ್ಲರಿಗೂ ಒಂದಿಷ್ಟು ಕಳವಳ-ಕಸಿವಿಸಿಗಳಾದುವು. ಆದರೆ ಶ್ರೀಗಳು ಆಗ ನನಗೆ ಹೇಳಿದ್ದು-ಯಾತ್ರಾರಂಭದಲ್ಲಿಯೇ ಇದೆಂಥ ಅಡ್ಡಿಯೆಂಬ ಭಾವವು ಒಂದೇ ಕ್ಷಣ ಮನಸ್ಸಿನಲ್ಲಿ ಸುಳಿಯಿತು. ಅನಂತರ ಎಲ್ಲ ಸಮಾಧಾನ, ಶಾಂತಿ. ಇದಲ್ಲವೇ ಧೀರರ ಲಕ್ಷಣ.

ಯಾತ್ರೆಯಲ್ಲಿ ನಾನು ಸರ್ವದಾ ಶ್ರೀಗಳೊಡನಿದ್ದು 'ಸೌಂದರ್ಯಲಹರೀ' ಗ್ರಂಥದ ಸಹವ್ಯಾಸಂಗವನ್ನು ನಡೆಸಬೇಕೆಂದೂ (ಆ ಬಳಿಕ 'ಯೋಗವಾಸಿಷ್ಠ'

ಕೃತಿಯನ್ನು ಅಭ್ಯಸಿಸಬೇಕೆಂದೂ) ಮೊದಲೇ ತಿಳಿಸಿದ್ದ ಕಾರಣ ಇಡಿಯ ಸಂಚಾರಕಾಲವೆಲ್ಲ ಅವರ ಸಾಂನಿಧ್ಯ ನನಗೊದಗಿತ್ತು. ಆದರೆ ವಾಹನದಲ್ಲಿ ತುರೀಯಾಶ್ರಮದ ಪೀಠಾಧೀಶ್ವರರೊಡನೆ ಹೇಗೆ ನಿಕಟವಾಗಿ ಕುಳಿತು-ಕೊಳ್ಳುವುದು? ಇದು ಪೂಜ್ಯಪೂಜಾವ್ಯತಿಕ್ರಮವಾಗದೇ? ಎಂಬ ಅಳುಕು ನನಗೆ. ಇದನ್ನು ಪರಿಹರಿಸುವಲ್ಲಿ ಶ್ರೀಗಳು ತೋರಿದ ವಾತ್ಸಲ್ಯ ದೊಡ್ಡದು.

ಪ್ರತಿಯೊಂದು ತಂಗುದಾಣದಲ್ಲಿಯೂ ಅವರು ತಂಡದ ಎಲ್ಲರನ್ನೂ ಆಗಿಂದಾಗ ವಿಚಾರಿಸಿ ಯೋಗಕ್ಷೇಮಗಳನ್ನು ತಿಳಿಯುತ್ತಿದ್ದರು. ಹಾದಿಯಲ್ಲಿ ಹಸಿವಾದಾಗ ನನಗೋ ಸಂಕೋಚ; ಭಿಕ್ಷೆಯನ್ನಲ್ಲದೆ ಮತ್ತೇನನ್ನೂ ಸ್ವೀಕರಿಸದ ಶ್ರೀಗಳೆದುರು ನನ್ನ ಜಿಹ್ವಾಚಾಪಲ್ಯವನ್ನೆಂತು ಪ್ರದರ್ಶಿಸಲಿ? ಹಾಗೆಂದು ಅದೆಂತು ಹೊಟ್ಟೆರಾಯನ ನಿತ್ಯದ ಅಟ್ಟಹಾಸವನ್ನು ಅದುಮಿಡಲಿ? ಅವರ ಕರುಣೆ ಹಿರಿದಾದದ್ದು. ವಾಹನದಲ್ಲಿದ್ದ ಎಲ್ಲರಿಗೂ ತಾವೇ ಹಣ್ಣು ಹಂಪಲು, ಕಲ್ಲುಸಕ್ಕರೆ, ಬಾದಾಮಿ, ಗೇರುಬೀಜಗಳನ್ನು ಹಂಚಿ ನಿಸ್ಸಂಕೋಚವಾಗಿ ತಿನ್ನಲು ಉತ್ತೇಜಿಸುತ್ತಿದ್ದರು. ಹಲವು ಬಾರಿ ನಮ್ಮ ಊಟ-ತಿಂಡಿಗಳಿಗಾಗಿಯೇ ಪ್ರಯಾಣದ ಹಾದಿಯಲ್ಲಿ ನಿಲುಗಡೆ ಮಾಡಿಸುತ್ತಿದ್ದುದೂ ಉಂಟು. ಆದರೆ ಗುರುಗಳು ತಾವಾಗಿ ಇಂಥ ನಿಲುಗಡೆಗಳನ್ನೋ ಪ್ರಸ್ಥಾನ ಕಾಲವ್ಯತ್ಯಯಗಳನ್ನೋ ಮಾಡುತ್ತಿದ್ದುದು ಒಂದೇ ಕಾರಣಕ್ಕೆ. ಅದು ಅವರ ದೇವತಾರ್ಚನೆ- ಅನುಷ್ಠಾನಗಳಿಗೆ ಮಾತ್ರ. ಎಂಥ ದುರ್ಗಮ ಮಾರ್ಗಗಳಲ್ಲಿ ಇನ್ನೆಂಥ ಕಠಿನ ಸಂದರ್ಭಗಳಲ್ಲಿಯೂ ಒಮ್ಮೆ ಕೂಡ ಅವರಿಗೆ ಮಾನಸಾನುಷ್ಠಾನ-ದೇವತಾರ್ಚನೆಗಳ ಅನಿವಾರ್ಯತೆ ಒದಗಲಿಲ್ಲ, ಒಮ್ಮೆ ಕೂಡ ನಮ್ಮ ದೀರ್ಘಪ್ರಯಾಣದಲ್ಲಿ ಮೂರು ವಾಹನಗಳ ಪೈಕಿ ಯಾವೊಂದು ವಾಹನಗಳ ಅತ್ಯಲ್ಪಸ್ಥಗನವೂ ಆಗಲಿಲ್ಲ. ಇವೆಲ್ಲ ಅವರ ಸತ್ಸಂಕಲ್ಪಫಲವಲ್ಲದೆ ಮತ್ತೇನು?

ಕೇದಾರದಲ್ಲಿ ಸುಮಾರು ಮೂವತ್ತೈದು ಕಿಲೋಮೀಟರುಗಳ ಪಾದಯಾತ್ರೆ ಅನಿವಾರ್ಯವಾಯಿತು. ಕುದುರೆ, ಅಡ್ಡೆ ಮುಂತಾದ ಇತರ ಸೌಲಭ್ಯಗಳಿದ್ದರೂ 'ಕದಾಪಿ ನ' ಎಂಬ ಮಾತಿನಿಂದ ಶ್ರೀಗಳು ನಮ್ಮೊಡನೆ ನಡಿಗೆಗೇ ಸಿದ್ಧರಾದರು. ಕೊರೆಯುವ ಚಳಿ, ಮೇಲಿಂದ ಮೇಲೆ ಏದುಸಿರು, ದೇಹವೇ ಭಾರವೆನಿಸುವಂಥ ಬಳಲಿಕೆ, ತತ್ತರಿಸುವ ಕಾಲುಗಳು, ನಡುನಡುವೆ ಸುಡುಬಿಸಿಲು -ಹೀಗಾಗಿ ನೀರಡಿಕೆ; ಇದು ನನ್ನ ಪರಿಸ್ಥಿತಿ. ಸಹಯಾತ್ರಿಗಳಲ್ಲಿ ಹಲವರು ದಾಪುಗಾಲಿಟ್ಟು ಮುನ್ನಡೆದಿದ್ದರು. ಆದರೂ ಶ್ರೀಗಳು ಸೋತವರನ್ನೂ ಸುಸ್ತಾದವರನ್ನೂ ಹುರಿದುಂಬಿಸಿ ಚೈತನ್ಯ ತುಂಬಿ ಮುನ್ನಡಸಿದರು. ಅತಿ ಹೆಚ್ಚು ಬಳಲಿದ ನನಗಂತೂ ವಿಪುಲ ನೈವೇದ್ಯ-ಉತ್ತೇಜನಗಳು ಸಂದುವೆಂಬುದು ನಿಸ್ಸಂದೇಹ. ದಿನವಡೀ ಸಾಗಿದ ಆರೋಹಣದ

ಬಳಿಕ ಶ್ರೀಗಳು ಆ ದುಸ್ಸಹಶೀತಲ ವಾತಾವರಣದಲ್ಲಿಯೂ ತಮ್ಮ ಅನುಷ್ಠಾನ-ಅರ್ಚನೆಗಳನ್ನು ಮೊಟಕು ಮಾಡಲಿಲ್ಲ.

ಬದರಿಯಲ್ಲಂತೂ ನಾರಾಯಣನ ದರ್ಶನ ಮಾಡುವಾಗ ಶ್ರೀಗಳ ಕಂಗಳು ಕೋಡಿವರಿದಿದ್ದುವು -ಇಲ್ಲಿ ತುಂಬ ವಿಶೇಷವಾದ ಸಾಂನಿಧ್ಯವಿದೆ. ಮಹಾತ್ಮರ ತಪಸ್ಸು ಪ್ರತಿಷ್ಠಾಪನೆಗಳ ಶಕ್ತಿ ಇಂದೂ ಜಾಗೃತವಿವೆ ಎಂದವರು ನನ್ನಲ್ಲಿ ಹೇಳಿದರು. ರಂಧ್ರಾನ್ವೇಷಿಯಾದ ನಾನು ಉತ್ತರಭಾರತದ ಪೂಜಾವಿಧಾನಗಳ ಅವ್ಯವಸ್ಥೆ ಹಾಗೂ ಅರ್ಚಕರ ಅಶ್ರದ್ಧೆ-ಅಶುಚಿಗಳಿಗೆ ಸಿಡುಕುತ್ತಿದ್ದೆ, ಮಿಡುಕುತ್ತಿದ್ದೆ. ಆದರೆ ಶ್ರೀಗಳು ಸದಾ ನನಗೆ ಗುಣಾಂಶಗಳತ್ತಲೇ ಗಮನ ಸೆಳೆಯುವಂತೆ ಮಾಡುತ್ತಿದ್ದರು. ಬದರಿಯ ದೇವಾಲಯದ ಪ್ರಧಾನಾರ್ಚಕ ರಾವಲರನ್ನು ಕಾಣಲೆಂದು ತೆರಳಿದಾಗ ಅವರು ಸಂನ್ಯಾಸಿಗಳ ಬಗೆಗೇ ಕೆಲವೊಂದು ಹಗುರದ ನುಡಿಗಳನ್ನಾಡಿದರು. ನಾವೆಲ್ಲ ಸಹಜವಾಗಿಯೇ ಕೆರಳಿದೆವಾದರೂ ಶ್ರೀಗಳು ಹಸನ್ಮುಖರಾಗಿ ತುಂಬ ವಿನೋದ-ದಿಂದಲೇ ರಾವಲರಿಗೆ ಉತ್ತರ ನೀಡಿದ್ದಲ್ಲದೆ ಅವರನ್ನು ವಿಶೇಷವಾಗಿ ಸಂಮಾನಿಸಿ-ದರು ಕೂಡ! ಅಲ್ಲದೆ ನಾನು ವೇದಾಂತದ ಬಗೆಗೆ ವಾದದಲ್ಲಿ ತೊಡಗಿದಾಗ ಶ್ರೀಗಳೇ ರಾವಲರನ್ನು ರಕ್ಷಿಸಬೇಕಾಯಿತು!

'ವಸಿಷ್ಠಗುಹೆ'ಯಲ್ಲಿ ಶ್ರೀಗಳು ಧ್ಯಾನಕ್ಕೆ ಕುಳಿತಾಗ ಅವರಿಗೆ ವಿಶಿಷ್ಟಾನುಭವ-ಗಳಾದುವು. ಆ ಸಂದರ್ಭದಲ್ಲಿ ಅವರ ಪಾದುಕೆಗಳನ್ನು ನಾನು ಹಿಡಿದಿದ್ದೆ. ಅದನ್ನರಿತ ಅವರು ತುಂಬ ಕಸಿವಿಸಿಗೊಂಡರಾದರೂ ಶ್ರೀವೇದಾಂತದೇಶಿಕರ 'ಕರ್ಮಾವ-ಲಂಬಕಾಃ ಕೇಚಿತ್ ಕೇಚಿದ್‌ಜ್ಞಾನಾವಲಂಬಕಾಃ । ವಯಂ ತು ಹರಿದಾಸಾನಾಂ ಪಾದರಕ್ಷಾವಲಂಬಕಾಃ ॥' ಎಂಬ ಸೂಕ್ತಿಯನ್ನು 'ವಯಂ ತು ಯತಿವರ್ಯಾಣಾಂ ಶ್ರೀಪಾದುಕಾವಲಂಬಕಾಃ' ಎಂದು ಒಂದಿಷ್ಟು ಬದಲಿಸುವ ಸ್ವಾತಂತ್ರ್ಯ ವಹಿಸಿ ನಾನು ಚಮತ್ಕರಿಸಿದಾಗ ತಾವೂ ನಕ್ಕು ತಲೆದೂಗಿದರು. ಯಾತ್ರೆಯುದ್ದಕ್ಕೂ ಅನೇಕ ಶ್ರದ್ಧಾಳುಗಳು (ಉತ್ತರ ಭಾರತೀಯರು) 'ಯೇ ಮಹಾರಾಜ್ ಕೌನ್ ಹೈ?' ಎಂದು ಪ್ರಶ್ನಿಸುವುದೂ ಶ್ರೀಶಂಕರಭಗವತ್ಪಾದರ ಪರಂಪರೆಯ ಯತಿವರ್ಯರಿವರೆಂದು ನಮ್ಮಿಂದ ಅರಿತ ಬಳಿಕ ಪರಮಭಕ್ತಿಶ್ರದ್ಧೆಗಳಿಂದ ಪಾದಧೂಳಿಯನ್ನು ಅಕ್ಷರಶಃ ತಲೆಗೆ ತಳಿದು- ಕೊಳ್ಳುವುದೂ ಅಡಿಗಡಿಗೆ ಸಂಭವಿಸುವ ಸಂಗತಿಯಾಗಿತ್ತು. ಆಗೆಲ್ಲ ಶ್ರೀಗಳು ತುಂಬ ಭಾವಪರವಶರಾಗಿ ಅಶ್ರುಗದ್ಗದ ಕಂಠದಿಂದ ಹೇಳುತ್ತಿದ್ದುದುಂಟು-'ಶ್ರೀಶಂಕರ ಭಗವತ್ಪಾದರ ಋಣವನ್ನು ನಾವು ತೀರಿಸಲು ಸಾಧ್ಯವೇ? ಆ ಮಹಾನುಭಾವರ ಹೆಸರೇ ನಮಗಿಷ್ಟು ಪ್ರಾಶಸ್ತ್ಯ ತಂದಿದೆಯಲ್ಲ! ಈ ಮನ್ನಣೆಯೆಲ್ಲ ಅವರಿಗೇ ಸಲ್ಲುವಂಥದ್ದು. ಖಂಡಿತ ನಮಗೀ ಆದರ ಸಲ್ಲುವಂತಿಲ್ಲ.... ಶ್ರದ್ಧಾಳುಗಳ

ಪ್ರಣಾಮಗಳಿಗೆ ಅರ್ಹರಾಗುವಂತೆ ಭಗವತ್ಪಾದರೇ ನಮ್ಮನ್ನು ಹರಸಬೇಕು....' ಎಂಥ ಆತ್ಮಪರೀಕ್ಷಣವಾಕ್ಯಗಳು! ಶ್ರೀಗಳು ಭಗವತ್ಪಾದರ ಬಗೆಗಿರಿಸಿದ ಗೌರವ ಮತ್ತು ಸ್ವಾಭಿಮಾನ ನಿರಾಸಗಳಿಗಿವು ಸುಂದರ ಸಾಕ್ಷಿಗಳು. ಇಂಥ ಶ್ರದ್ಧಾಲುಗಳ ಸಂತೋಷಕ್ಕಾಗಿಯೇ ಬರೇಲಿಯಲ್ಲಿ ತಂಗಿದಾಗ ಒಂದು ಸಂಜೆಯಿಂದ ನಡುರಾತ್ರಿಯವರೆಗೆ ಶ್ರೀಗಳು ಆ ಊರಿನ ಎಲ್ಲ ದೇವಾಲಯಗಳನ್ನು ಸಂದರ್ಶಿಸಿ ಜನತೆಯ ಪ್ರೀತಿ-ಗೌರವಗಳನ್ನು ಸ್ವೀಕರಿಸಿದ್ದಲ್ಲದೆ ಪ್ರತಿಯೊಂದು ತಾಣದಲ್ಲಿಯೂ ಉದ್ಬೋಧಕವಾದ ಆಶುಭಾಷಣಗಳನ್ನು ಹಿಂದಿಯಲ್ಲಿ ಮಾಡಿ ಎಲ್ಲರಿಗೆ ಹೊಸಬೆಳಕಿತ್ತರು.

ವಾರಣಾಸಿಯಲ್ಲಿ ಐದು ದಿನಗಳು ತಂಗುವ ಸುಯೋಗ ನಮ್ಮದಾಗಿತ್ತು. ಆಗ ಮಣಿಕರ್ಣಿಕಾಘಟ್ಟ, ದಶಾಶ್ವಮೇಧಘಟ್ಟ ಮತ್ತು ಪಂಚಗಂಗಾಘಟ್ಟಗಳಲ್ಲಿ ಸ್ನಾನಮಾಡುವಾಗ ಭೌತಿಕ ಶುಚಿತ್ವದ ದೃಷ್ಟಿಯಿಂದ ಅಳುಕುತ್ತಿದ್ದ ನನ್ನನ್ನು ತೀರ್ಥಸ್ನಾನದ ಅಭೌತಿಕ ಭಾವಕ್ಕೆ ಪ್ರೇರಿಸಿದ ಶ್ರೀಗಳು ಇಡಿಯ ಗಂಗಾತೀರದ ದರ್ಶನವನ್ನು ದೋಣಿಯಲ್ಲಿ ಮಾಡುವಾಗಲೂ ಆಡಿಗಡಿಗೆ ವಿಚಾರಿಸಿ-ಕೊಳ್ಳುತ್ತಿದ್ದರು. ತೀವ್ರವಾದ ಚಳಿಯ ಕಾರಣ ಶ್ರೀಗಳ ತುಟಿ, ಕಾಲು, ಕೈ, ಮುಖ ಹಾಗೂ ಭುಜಗಳಲ್ಲಿ ಚರ್ಮ ಸೀಳಿ ರಕ್ತವೇ ಒಸರುತ್ತಿದ್ದರೂ ಅವರು ತಣ್ಣೀರಿನ ಸ್ನಾನವನ್ನಾಗಲಿ ಅವೇಳೆಗಳಲ್ಲಿ ಎದ್ದು ಅನುಷ್ಠಾನಾದಿಗಳಿಗೆ ತೊಡಗುತ್ತಿದುದನ್ನಾಗಲಿ ಮೊಟಕಿಸಲಿಲ್ಲ.

ಯಾತ್ರಾಕಾಲದಲ್ಲಿ ನಾನೆಷ್ಟೋ ವಿಷಯಗಳನ್ನು ಪ್ರಶ್ನಿಸುತ್ತಿದ್ದೆ. ಅದು ಜೀವನ್ಮುಕ್ತಿಯ ಬಗೆಗಿರಬಹುದು. ಶ್ರೀವಿದ್ಯಾರಹಸ್ಯಗಳ ಬಗೆಗಿರಬಹುದು, ಯತಿಧರ್ಮದ ಬಗೆಗಿರಬಹುದು; ಎಲ್ಲವನ್ನೂ ಶ್ರೀಗಳು ಸಮಾಧಾನದಿಂದ ಉತ್ತರಿಸುತ್ತಿದ್ದರು. ಅಷ್ಟೇ ಅಲ್ಲ, ನಾನು ಹಲವು ಬಾರಿ ಸಾಮಾನ್ಯವಾಗಿ ಇಂದು ಪ್ರಚಲಿತವಿರುವ 'ಸಾಂಪ್ರದಾಯಿಕ' ವಿಷಯಗಳ ಓರೆ-ಕೋರೆಗಳ ಬಗೆಗೋ ನಂಬುಗೆಗಳ ಬಗೆಗೋ ಚರ್ಚಿಸುತ್ತಿದ್ದುದೂ ಉಂಟು. ಆಗ ಬಹುಮಟ್ಟಿಗೆ ನನ್ನೆಲ್ಲ ಅಭಿಪ್ರಾಯಗಳಿಗೂ ಸಹಾನುಭೂತಿಯ ತಾತ್ತ್ವಿಕ ಸಂಮತಿಯನ್ನು ನೀಡುತ್ತಿದ್ದ ಶ್ರೀಗಳು ಅವುಗಳ ಹಿಂದಿನ ವ್ಯಾವಹಾರಿಕ ಅನಿವಾರ್ಯತೆ, ಶ್ರದ್ಧಾಭಂಗದ ಅಪಾಯ, ಅಧಿಕಾರಿಭೇದ ಮುಂತಾದುವುಗಳತ್ತ ನನ್ನ ಗಮನವನ್ನು ಸೆಳೆಯುತ್ತಿದ್ದರು. ಆಚಾರ್ಯ ಶ್ರೀಶಂಕರರ ವಸ್ತುತಂತ್ರ ಮತ್ತು ಪುರುಷತಂತ್ರಗಳೆಂಬ ಪರಿಕಲ್ಪನೆಗಳನ್ನು ನಾನು ಪ್ರಸ್ತಾವಿಸಿದಾಗಲೆಲ್ಲ ಅವರು ಸಾಧುವಾದದಿಂದ ಅನುಮೋದಿಸುತ್ತಿದ್ದರು. ಇಂಥ ಸಂದರ್ಭಗಳಲ್ಲಿಯೇ ನಾನು ಅವರ ಸ್ಫೂರ್ತಿಸ್ಥಾನಗಳಾದ ಮಹನೀಯರ ಬಗೆಗೂ

ಆದರ್ಶಗಳ ಬಗೆಗೂ ಪ್ರಶ್ನಿಸುತ್ತಿದ್ದೆ. ಆಗ ಅವರು ವಿವರಿಸುತ್ತಿದ್ದ ಸಂಗತಿಗಳನ್ನು ಕೇಳುವಾಗ ಶ್ರೀಗಳ ವ್ಯಕ್ತಿತ್ವದರ್ಶನ ತಾನಾಗಿ ಒಡಮೂಡುತ್ತಿತ್ತು. ಕಾಳಿದಾಸ ಮಹಾಕವಿಯ ರಘುವಂಶದಂಥ ಕಾವ್ಯವನ್ನವರು ಮೆಚ್ಚುವ ಬಗೆಯನ್ನರಿತಾಗ ಮೌಲ್ಯಗಳ ಬಗೆಗೆ ಅವರಿಗಿರುವ ಪ್ರಜ್ಞೆ ಸ್ವಯಂ ಸ್ಫುಟವಾಗುತ್ತಿತ್ತು.

ಸಾರನಾಥ ಹಾಗೂ ಬುದ್ಧಗಯೆಗಳನ್ನು ಕಂಡಾಗ- ವಿಶೇಷತಃ ಬುದ್ಧಗಯೆಯ ಬೋಧಿವೃಕ್ಷ, ಅಜಪಾಲವೃಕ್ಷ, ಮುಚಲಿಂದನಾಗ ಮುಂತಾದ ಸ್ಮಾರಕಗಳನ್ನು ಕಾಣುವಾಗ ಅವರು ಭಾವಪರವಶರಾಗಿ ನನ್ನಲ್ಲಿ ಹೇಳಿದ್ದರು 'ಬುದ್ಧನು ನೈರಾತ್ಮ್ಯವಾದಿಯಲ್ಲ. ತತ್ತ್ವತಃ ಆತ್ಮಾನುಭವವಿದ್ದಾತನೇ ಹೌದು.... ಆತನ ಅನುಯಾಯಿಗಳು ಅವನನ್ನು ಶೂನ್ಯವಾದಿಯೆಂದು ಚಿತ್ರಿಸಿದ್ದಾರೆ, ಅಷ್ಟೆ.' ಇದು ನನ್ನದೂ ನಿಲವಾಗಿತ್ತು. ಇಂಥ ಅಂತರ್ದೃಷ್ಟಿಯ ಔದಾರ್ಯ ಶ್ರೀಗಳ ವಿಶೇಷತೆ.

ನಮ್ಮ ಯಾತ್ರಾಕಾಲದಲ್ಲಿ ಯಾವ ಪಂಡಿತರ, ಸಾಧು-ಸಂತರ ದರ್ಶನ ದೊರೆತಾಗಲೂ ನಮ್ಮಲ್ಲಿಯ ಆಯಾ ವರ್ಗದವರನ್ನು ಅವರಿಗೆ ಶ್ರೀಗಳು ತಪ್ಪದೆ ಪರಿಚಯಿಸಿ ಒಳ್ಳೆಯ ಮಾತುಗಳನ್ನಾಡುತ್ತಿದ್ದರು. ಹೀಗಾಗಿ ನಾನೂ ವಿದ್ವಾಂಸರ ಸಾಲಿಗೆ ಸೇರುವಂತಾದೆ! ಅಷ್ಟೇಕೆ ಯಾತ್ರೆಯ ಬಳಿಕ ಶ್ರೀಮಠದಲ್ಲಿ ಗಂಗಾ ಸಮಾರಾಧನೆ ನಡಸಿ ಆಶೀರ್ವಚನವನ್ನು ನೀಡುವಾಗಲೂ 'ಯಾತ್ರೆಯಲ್ಲಿ ವಿದ್ವಾಂಸರ ಸಮಾಗಮ ಹಾಗೂ ಸಾಧುಗಳ ಸಹವಾಸ ಹಿರಿಯ ಲಾಭವೆನ್ನುತ್ತಾರೆ.... ನಮಗಿವು ಯಾತ್ರೆಯ ಆದ್ಯಂತ ದೊರೆತವು....' ಎನ್ನುತ್ತಾ ನನ್ನಂಥ 'ಸ್ವಯಮಾಚಾರ್ಯ'ನನ್ನೂ ಹೆಸರಿಸುವ ಹೃದಯವೈಶಾಲ್ಯ ತೋರಿದರು. ಅವರ ಹರಕೆಯೇ ಸಲ್ಲಲೆಂದು ಆಶಿಸಿ ಅಭಿವಂದಿಸಬಲ್ಲೆನಲ್ಲದೆ ಮತ್ತೇನನ್ನಲಿ?

ಶ್ರೀಗಳು ತಮ್ಮ ವಿದ್ಯಾಗುರುಗಳ ಬಗೆಗಾಗಲಿ ಇನ್ನಿತರ ಹಿರಿಯ ಪಂಡಿತರ ಬಗೆಗಾಗಲಿ ತೋರುತ್ತಿದ್ದ ಪರೋಕ್ಷಾದರವೂ ಗಮನಾರ್ಹ. ವಿಶೇಷತಃ ವಿದ್ವಾನ್ ಶ್ರೀ ನಾರಾಯಣಭಟ್ಟರು, ವಿದ್ವಾನ್ ಶ್ರೀ ಕೆ.ಎಸ್. ವರದಾಚಾರ್ಯರು, ವಿದ್ವಾನ್ ಶ್ರೀ ಎನ್. ರಂಗನಾಥಶರ್ಮರೇ ಮುಂತಾದವರ ಬಗೆಗೆ ಪ್ರಸ್ತಾವ ಬಂದಾಗ ಅವರುಗಳ ಸಜ್ಜನಿಕೆ, ಋಜುತ್ವ, ಅಂತರ್ದೃಷ್ಟಿಗಳನ್ನು ಪ್ರಧಾನವಾಗಿ ನೆನೆದು ಆದರಿಸುತ್ತಿದ್ದರು. ಇದೇ ರೀತಿ ಆಧುನಿಕ ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಬಂದವರನ್ನೂ ಹೃದಯಸಂಪನ್ನರಾದ ಲೌಕಿಕರನ್ನೂ ಯಾವುದೇ ಅಪವಾದವಿಲ್ಲದೆ ಮೆಚ್ಚುತ್ತಿದ್ದರು. ಇದು ತತ್ತ್ವದರ್ಶಿಗಳ ಹಾದಿ. ಬರಿಯ ಶುಷ್ಕಶಾಸ್ತ್ರಜ್ಞರಿಗೆ ಈ ಪಥ ಅರಿದು.

ಒಮ್ಮೆ ನಾನು ಅಲಂಕಾರ ಶಾಸ್ತ್ರವನ್ನೇಕೆ ಶ್ರೀಮಠದ ವಾರ್ಷಿಕ ವಾಕ್ಯಾರ್ಥಗಳಲ್ಲಿ ಸೇರಿಸಿಕೊಳ್ಳುವುದಿಲ್ಲವೆಂದು ತಗಾದೆ ಹೂಡಿದೆ. ಶ್ರೀಗಳು ಅದನ್ನು ವಿನೋದದಿಂದ

ಎದುರಿಸಿದರು. ನಾನಾದರೋ ಹಠದಿಂದ ಅಲಂಕಾರಶಾಸ್ತ್ರವೇ ವೇದಾಂತಕ್ಕೆ ಅತಿ ನಿಕಟವೆಂದೂ ಇದು ವೇದಾಂತದಂತೆಯೇ ಕಾರಕಸ್ತರದ ಶಾಸ್ತ್ರವಲ್ಲದೆ ಉಳಿದ ಅನೇಕ ವಿದ್ಯೆಗಳಂತೆ ಕೇವಲ ಜ್ಞಾಪಕವಲ್ಲವೆಂದು ವಾದಿಸಿದೆ. ಶ್ರೀಗಳು ತುಂಬ ಸಮಾಧಾನದಿಂದ ನನ್ನ ಮಾತುಗಳನ್ನು ಆಲಿಸಿದ್ದಲ್ಲದೆ ಕೆಲವು ವ್ಯಾವಹಾರಿಕವಾದ ತೊಡಕುಗಳನ್ನು ಈ ಬಗೆಗೆ ಪ್ರಸ್ತಾವಿಸಿದರು. ಅವುಗಳ ಪರಿಹಾರಕ್ಕೂ ಕೂಡಲೇ ಉಪಾಯಗಳು ಮಿಂಚಿದುವು. ಇದರ ಫಲವಾಗಿ ಶ್ರೀಮಠದ ವಾಕ್ಯಾರ್ಥಗೋಷ್ಠಿ-ಗಳಲ್ಲೀಗ ಅಲಂಕಾರ ಶಾಸ್ತ್ರಕ್ಕೆ ಅವಕಾಶ ದೊರೆತಿದೆ. ನಾನು ಇದನ್ನು ನಿರೀಕ್ಷಿಸಿಯೇ ಇರಲಿಲ್ಲ. ನನ್ನ ಪೂಜ್ಯಗುರುಗಳಾದ ಶ್ರೀ ರಂಗನಾಥ ಶರ್ಮರು ಸದಾ ಹೇಳುತ್ತಿರುತ್ತಾರೆ 'ಅನಧಿಕಾರಿಗಳ ಕೈಗೆ ಬಿದ್ದ ಅಲಂಕಾರ ಶಾಸ್ತ್ರ ಹಾಳಾಯಿತಲ್ಲದೆ ಅದು ಸಕಲ ಶಾಸ್ತ್ರಗಳ ಸತ್ತ್ವಸಮಾಹಾರ' ಎಂದು. ಶ್ರೀಗಳ ಆದರದಿಂದ ಅಲಂಕಾರಶಾಸ್ತ್ರ ವಾಕ್ಯಾರ್ಥಗೋಷ್ಠಿಯು ಮತ್ತೆ ಗುರುಮನೆಗಳ ಪೋಷಣೆ ಪಡೆದು ಬಲಗೊಳ್ಳಲೆಂದು ಆಶಿಸುವೆ.

ನಾವೆಲ್ಲ ಚಿತ್ರಕೂಟದಲ್ಲಿರುವಾಗ ಉತ್ಥಾನದ್ವಾದಶೀಪರ್ವ ಆಗಮಿಸಿತು. ಧಾತ್ರೀವೃಕ್ಷಗಳು (ನೆಲ್ಲಿಯ ಗಿಡಗಳು) ಕಿತ್ತಳೆಹಣ್ಣಿನ ಗಾತ್ರದ ಕಾಯಿಗಳನ್ನು ಹೇರಳವಾಗಿ ತಳೆದ ತಾಣದಲ್ಲಿಯೇ ನಮ್ಮ ಬಿಡಾರವಿದ್ದುದೊಂದು ಯೋಗಾ-ಯೋಗ! ತುಲಸೀವಿವಾಹವನ್ನು ಶ್ರೀಗಳು ವೈದಿಕ ವೈಭವದಿಂದ ನಿರ್ವಹಿಸಿದರು. ಅನಂತರ ಮರುದಿನ ಚಿತ್ರಕೂಟ ಪರ್ವತದ ಪರಿಕ್ರಮವನ್ನೂ ನಾವೆಲ್ಲ ಮಾಡಲು ಶ್ರೀಗಳೇ ನೇತೃತ್ವ ವಹಿಸಿದರು. ಬಳಿಕ ಹತ್ತಿರದ (ತೀರ ಹದಗೆಟ್ಟ ಹಾದಿಯಾದ ಕಾರಣ ಸಾಕಷ್ಟು ಹೊತ್ತು, ಶ್ರಮಗಳನ್ನು ಬಯಸುವ) ಗುಪ್ತಗೋದಾವರಿಯನ್ನು ನೋಡಲು ನಾವೆಲ್ಲ ಹೊರಟೆವು. ಆದರೆ ಶ್ರೀಮಠದ ಪೂಜಾಸಾಮಗ್ರಿಗಳ, ದೇವತಾಸಂಪುಟದ ರಕ್ಷಣೆಗಾಗಿ ಮಠದ ವಿದ್ಯಾರ್ಥಿಯೊಬ್ಬ ನಮ್ಮ ಬಿಡದಿ-ಯಲ್ಲಿಯೇ ಉಳಿಯಬೇಕಾಯಿತು. ನಮಗಾರಿಗೂ ಗುಪ್ತಗೋದಾವರಿ ಹೇಗಿರು-ವುದೆಂಬ ಕಲ್ಪನೆಯೇ ಇರಲಿಲ್ಲ. ಯಾವುದೋ ಒಂದು ಸರೋವರ ಅಥವಾ ಝರಿಯಷ್ಟೇ ಅದೆಂದು ತಿಳಿದಿದ್ದೆವು. ಆದರೆ ಬೆಟ್ಟದ ವಿಶಾಲವಾದ ಗುಹೆಗಳೊಳಗೆ ಜುಳುಜಳನೆ ಹರಿದು ಹೊಮ್ಮುವ ಆ ತೀರ್ಥದ ಸೊಗಸು ಊಹಾತೀತವಾಗಿ ನಮಗೆ ಸಾಕ್ಷಾತ್ಕರಿಸಿತು. ಅದನ್ನು ಕಾಣುವ ಒಂದೊಂದು ಕ್ಷಣವೂ ಶ್ರೀಗಳು 'ಪಾಪ.... ಶ್ರೀಪತಿ ಇರಬೇಕಿತ್ತು ಆತನಿಗೆ ಈ ಸುಂದರದೃಶ್ಯ ನಷ್ಟವಾಯಿತಲ್ಲಾ' ಎಂದು ಕಳವಳಿಸುತ್ತಿದ್ದರು. ಕಡೆಗೆ ಮರುದಿನ ನಾವು ಚಿತ್ರಕೂಟದಿಂದ ಮತ್ತೊಂದು ಕ್ಷೇತ್ರಕ್ಕೆ ತೆರಳಲಿರುವಾಗ ಅದೆಷ್ಟೇ ಸಮಯಾಭಾವವಿದ್ದರೂ ಹಲವರು ಬೇಡವೆಂದು ಸಲಹೆ

ನೀಡಿದರೂ ಒಪ್ಪದೆ ಶ್ರೀಮಠದ ಆ ವಿದ್ಯಾರ್ಥಿಯೊಬ್ಬನಿಗಾಗಿ ವಾಹನವೊಂದನ್ನು ಏರ್ಪಡಿಸಿ ಗುಪ್ತಗೋದಾವರಿಯ ದರ್ಶನವನ್ನು ಮಾಡಿಸಿದರು. ಇಂಥ ಹಲವು ಹತ್ತು ಘಟನೆಗಳ ಮೂಲಕ ಶ್ರೀಗಳ ಹೃದಯವನ್ನರಿಯುವ ಅವಕಾಶ ನನಗಾಯಿತು.

ಶ್ರೀಗಳು ಪರಿಸರ ಸಂರಕ್ಷಣಾಂದೋಲನ, ವ್ಯಸನಮುಕ್ತ ಸಮಾಜ ನಿರ್ಮಾಣ, ಯಕ್ಷಗಾನಾದಿ ಕಲಾಪೋಷಣೆ, ಸಾಂಸ್ಕೃತಿಕ ಜನಜಾಗರಣ ಮುಂತಾದ ಹಲವು ಹತ್ತು ಚಟುವಟಿಕೆಗಳನ್ನು ಬೇರೆ ಬೇರೆ ಸ್ತರಗಳಲ್ಲಿ ನಿರ್ವಹಿಸುವುದನ್ನಾಗಲಿ, ಶ್ರೀಮಠದ ಪಾಠಶಾಲೆಯಲ್ಲಿ ತಾವೇ ತರ್ಕ, ಮೀಮಾಂಸಾ, ವೇದಾಂತ ಶಾಸ್ತ್ರಗಳ ಪಾಠವನ್ನು ಹೇಳುವ ಪರಿಯನ್ನಾಗಲಿ ನಾನಿಲ್ಲಿ ವಿಸ್ತರಿಸಲು ಎಡೆಯಿಲ್ಲ. ಅನುಭಾವಿಗಳನ್ನೂ ಯೋಗಿ-ಸಿದ್ಧರನ್ನೂ ಅವರು ಕಾಣಲು ಎಲ್ಲೆಲ್ಲಿಗೂ ಧಾವಿಸುವ ಆಧ್ಯಾತ್ಮಿಕ ಪ್ರೀತಿಯನ್ನು ವಿವರಿಸಲೂ ಸ್ಥಳವಿಲ್ಲ. ಹೀಗಾಗಿ ಈಗಲೇ ಸಾಕಷ್ಟು ದೀರ್ಘವಾಗಿರುವ ಅವರ ಬಗೆಗೆ ನಾನೊಮ್ಮೆ ಅವಧಾನದಲ್ಲಿ ಹೇಳಿದ್ದ ಆಶುಕವಿತೆಯೊಂದರ ಉದ್ಧರಣದ ಮೂಲಕ ಈ ಬರೆಹವನ್ನು ಮುಗಿಸುತ್ತೇನೆ.

ತತ್ರ ಗುಪ್ತಗಮನಾ ನು ದೂಯತೇ
ತೀರ್ಥರಾಜಸವಿಧೇ ಸರಸ್ವತೀ ।
ಅತ್ರ ಭಾತಿ ವಿಪುಲಾ ನಿರಂತರಂ
ತೀರ್ಥರಾಜ ಸವಿಧೇ ಸರಸ್ವತೀ ॥

(ಅಲ್ಲಿ, ಆ ಪ್ರಯಾಗದಲ್ಲಿ ಸರಸ್ವತಿಯು ಗುಪ್ತಗಾಮಿನಿಯೆಂದು ನಮ್ಮ ದುಃಖ. ಆದರೆ ಇಲ್ಲಿ ಯತಿಶ್ರೇಷ್ಠರಾದ ನಮ್ಮ ಶ್ರೀಗಳಲ್ಲಿ- ಅವರು ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿಗಳೇ ಆದ ಕಾರಣ-ಸರಸ್ವತಿಯು ಪ್ರಕಟವಾಗಿ, ವಿಪುಲವಾಗಿ ಸದಾ ಪ್ರವಹಿಸುತ್ತಿದ್ದಾಳೆ.)

ವಿ.ಸೂ.:- ಶ್ರೀಗಳ ವ್ಯಕ್ತಿತ್ವವನ್ನು ನಾನರಿತ ಬಗೆಯಲ್ಲಿ ಕೆಲವೊಂದು ಘಟನೆಗಳ ಮೂಲಕ ನಿರೂಪಿಸುವಾಗ ಅನಿವಾರ್ಯವಾಗಿ ನುಸುಳಿರುವ ನನ್ನ ಬಗೆಗಿನ ಪ್ರಸ್ತಾವಗಳನ್ನು ಯಾರೂ ಅನ್ಯಥಾ ಗ್ರಹಿಸಬಾರದೆಂದು ವಿನಂತಿ.

ಯುವಯತಿ - ಅಲೆ ಅಲೆ ಸರೋವರ

ಡಾ. ಶ್ರೀರಾಮಭಟ್ಟ

ನನ್ನ ಊರು ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಒಂದು ಹಳ್ಳಿ. ಉನ್ನತ ವಿದ್ಯಾಭ್ಯಾಸ, ತದನಂತರ ಹೊಟ್ಟೆಪಾಡಿನ ಕೆಲಸದ ಕಾರಣವಾಗಿ ಮೈಸೂರು-ಬೆಂಗಳೂರು ಸೇರಿದ ನನಗೆ ಶಿರಸಿ ಸೀಮೆಯ ಸಂಪರ್ಕ ಅಷ್ಟಾಗಿ ಇರಲಿಲ್ಲ. ತಂದೆ ತಾಯಿಯರನ್ನು, ವಿಶೇಷ ಸಂದರ್ಭದಲ್ಲಿ ಬಂಧು-ಬಾಂಧವರನ್ನು ಹೋಗಿ ನೋಡಿಕೊಂಡು ಬರುವಷ್ಟರಮಟ್ಟಿಗೆ ಉಳಿದಿತ್ತು. ಈ ನಡುವೆ ಬೆಂಗಳೂರಿನಲ್ಲಿ ನನ್ನ ಸ್ನೇಹಿತರಾಗಿದ್ದ ಬಾಲಿಗದ್ದೆ ಶಂಕರಭಟ್ಟರು ಬೆಂಗಳೂರು ಬಿಟ್ಟು ಸ್ವರ್ಣವಲ್ಲೀಮಠಕ್ಕೆ ಹೋಗಿ ನೆಲೆಸಿದ್ದರು. ಸ್ವರ್ಣವಲ್ಲಿಗೆ ಬರುವಂತೆ ಸ್ವಾಮಿಗಳ ದರ್ಶನ ಮಾಡುವಂತೆ ಅಗಾಗ ಒತ್ತಾಯಿಸುತ್ತಿದ್ದರು. ಸ್ವರ್ಣವಲ್ಲಿಯ ಯುವಸನ್ಯಾಸಿಯ ಬಗ್ಗೆ, ಅವರ ಸಂಘಟನಾ ಶಕ್ತಿಯ ಬಗ್ಗೆ ಅಷ್ಟಿಷ್ಟು ಕೇಳಿದ್ದೆ. ಅವರ ಪರಿಸರ ಆಂದೋಲನರ ಸಾಹಸ ಸುದ್ದಿಯನ್ನು ಸಚಿತ್ರವಾಗಿ ಪತ್ರಿಕೆಗಳಲ್ಲಿ ನೋಡಿದ್ದೆ. ಆದರೂ ಮಠಕ್ಕೆ ಹೋಗುವ ಒತ್ತಾಸೆ ನನ್ನಲ್ಲಿ ಏಕೋ ಮನೆಮಾಡಿರಲಿಲ್ಲ. ಪೂರ್ಣವಾಗಿ ಪ್ರಾಚೀನ ಸಂಪ್ರದಾಯನಿಷ್ಠನೂ ಅಲ್ಲದೆ ಇತ್ತ ಅತ್ಯಂತ ಅಧುನಿಕವಾದಿಯೂ ಆಗದೇ ಎಡಬಿಡಂಗಿಯಾಗಿದ್ದ ನನಗೆ ಮಠಮಾನ್ಯಗಳಿಗೆ ಹೋಗಲು ಬಯಸದಿರುವುದಕ್ಕೆ ನನ್ನದೇ ಕಾರಣಗಳಿದ್ದವು.

ಈಗ ಐದಾರು ವರ್ಷಗಳ ಹಿಂದೆ ವೈಶಾಖ ವಸಂತದ ಒಂದು ದಿನ ಯಲ್ಲಾಪುರದ ಬಳಿ ಕವಡಿಕೆರೆಗೆ ಹೋಗಬೇಕಾಗಿ ಬಂತು. ಅದೂ ಮಿತ್ರರಾದ ಗುಂಜಗೋಡ ಶೇಷಗಿರಿ ಹಾಗೂ ಶಂಕರ ಭಟ್ಟರ ಸ್ನೇಹದ ಕರೆಯ ಮೇರೆಗೆ. ಪ್ರತಿವರ್ಷ ಸಿದ್ಧಾಪುರದ ಬಾನ್ಕುಳಿ ಮಠದಲ್ಲಿ ನಡೆಯುತ್ತಿರುವ ವಟುವೇದಶಿಕ್ಷಣ ಶಿಬಿರ ಆ ವರ್ಷ ಕವಡಿಕೆರೆಯಲ್ಲಿ ಆಯೋಜಿತವಾಗಿತ್ತು. ಶಿಬಿರದ ಸಮಾರೋಪ ಸಮಾರಂಭಕ್ಕೆಂದು ಒಂದು ದಿನ ಮುಂಚಿತವಾಗೇ ಕವಡಿಕೆರೆಗೆ ಹೋದೆ. ನಾನು ಅದೇ ಮೊದಲು

ಅಲ್ಲಿಗೆ ಹೋದದ್ದು, ಎಂಥ ಪ್ರಶಾಂತ ಬಂಧುರ ಪರಿಸರ! ನನ್ನ ಮನಸ್ಸಿನಲ್ಲಿ ಇಂದಿಗೂ ಎಂದಿಗೂ ಹಚ್ಚಹಸುರು, ದೇವಸ್ಥಾನದ ಬಲಕ್ಕೆ ಹಸಿರು ತೂಗಿ ತೊನೆಯುವ ಅಡಿಕೆತೋಟ, ಅಲೆಅಲೆಯಾಗಿ ಅರಳುವ ಆಕಾಶನೀಲಿಯ ವಿಶಾಲ ಸರೋವರ. ಬಾನಂಚಿನ ಬಿಳಿಮೋಡದ ತುಣುಕುಗಳಂತೆ ಸರೋವರದಂಚಿನಲ್ಲಿ ಬಿಳಿ ತಾವರೆಗಳ ಪುಟ್ಟ ಪುಟ್ಟ ಸಂಸಾರ. ಅಲೆಗಳ ನೂಕಾಟಕ್ಕೆ ಕುಳಿರ್ಗಾಳಿಯ ತಾಕಾಟಕ್ಕೆ ಪಲಕುವ ಕಿಶೋರ ಕುಸುಮಗಳ ಒಯ್ಯಾರ. ನಡುವೆ ಆಧುನಿಕ ರೀತಿಯಲ್ಲಿ ಕಟ್ಟಲಾದ ವಾಗ್ದೇವಿ ದೇವಾಲಯದ ಒಳಶಾಲೆಯಿಂದ ಸಸ್ವರ ವೇದಘೋಷ ಅಲೆ ಅಲೆಯಾಗಿ ತೇಲಿಬರುತ್ತಿತ್ತು. ಕೋಮಲಕಂಠದ ವಟುಗಳು ವೇದಮಂತ್ರಗಳನ್ನು ಕಂಠಸ್ಥ ಮಾಡುವುದರಲ್ಲಿ ಮಗ್ನರಾಗಿದ್ದರು. ಅಭ್ಯಾಸಾವಸ್ಥೆಯಾದುದರಿಂದ ಸ್ವರಗಳು ಅಲ್ಲಲ್ಲಿ ಅಂಕುಡೊಂಕಾಗುತ್ತಿದ್ದವು. ಗಾಳಿಯ ಹೊಡೆತಕ್ಕೆ ಕೆರೆಯ ಅಲೆಗಳೂ ಅಂಕುಡೊಂಕಿಗೆ ಕೈಕೂಡಿಸುತ್ತಿದ್ದವು. ದೇವಾಲಯದ ಎಡಗಡೆಯ ಮಂಟಪಶಾಲೆಯಲ್ಲಿ ಕುಳಿತ ನನಗೆ ಕಣ್ಣಿಗೂ ಕಿವಿಗೂ ಒಟ್ಟಿಗೆ ಮುದ ಉಂಟಾದ ಅನುಭವ. ಮಂಟಪಶಾಲೆ ಶಿರಸ್ಸಿಗೆ ಅಭಿಮುಖವಾಗಿದ್ದುದರಿಂದ ಮೈಗೂ ಮನಕ್ಕೂ ಹಿತ ನೀಡುವ ಪರಿಸರ. ಬೆಂಗಳೂರಿನ ಬಿಜಿಯಿಂದ ಬಂದ ನನಗೆ ಈ ವಿಭಿನ್ನ ವಾತಾವರಣ ಮೂಡಿಸಿದ ಭಾವ ಅವರ್ಣನೀಯ - ಅನಿರ್ವಾಚ್ಯ.

ಸಮಾರೋಪ ಸಮಾರಂಭ ಮುಗಿಸಿ ಹೊರಟಾಗ ಶಂಕರ ಭಟ್ಟರು ಸ್ವರ್ಣವಲ್ಲಿಗೆ ಹೋಗೋಣವೆಂದು ಒತ್ತಾಯಿಸಿದರು. ಇನ್ನೊಮ್ಮೆ ಬಂದಾಗ ನೋಡೋಣ ಎಂದೆ. ಇಲ್ಲ ಬರಬೇಕು, ನಿಮ್ಮನ್ನು ಕರೆದುಕೊಂಡು ಬರುವುದಾಗಿ ಶ್ರೀಗಳವರಿಗೆ ಹೇಳಿದ್ದೇನೆ. ಶ್ರೀಗಳವರೇ ಈ ಶಿಬಿರವನ್ನು ಉದ್ಘಾಟಿಸಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಈ ಶಿಬಿರ ನಡೆದಿದೆ. ಸಮಾರೋಪಕ್ಕೆ ಬರುವ ನಿಮ್ಮನ್ನು ಮಠಕ್ಕೆ ಕರೆದುಕೊಂಡುಬರಬೇಕೆಂದು ಆಗಲೇ ಹೇಳಿಹೋಗಿದ್ದಾರೆ ಎಂದರು. ಕೊಂಚ ಮುಜುಗರದಿಂದಲೇ ಹೋದೆ.

ಸ್ವರ್ಣವಲ್ಲಿಯಲ್ಲಿ ವೈಶಾಖದ ವಸಂತಗೋಷ್ಠಿ ನಡೆಯುತ್ತಿತ್ತು. ಶಾಸ್ತ್ರ ವಾಕ್ಯಾರ್ಥಗೋಷ್ಠಿ ಆಗ ತಾನೆ ಮುಗಿದು ಅಂದು ವಿಚಾರಗೋಷ್ಠಿ ನಡೆಯುತ್ತಿತ್ತು. ಅಂಗಳದಲ್ಲಿ ಮುಕ್ಕಾಲು ಪಾಲು ಶ್ರೋತೃವರ್ಗ ವೇದಿಕೆಯ ಮೇಲೆ ಕೆಳಗೆ ಸುತ್ತ ಮುತ್ತ ಪರಿಚಿತ ವಿದ್ವಾಂಸರು. ರಾಮನು ಮರೆಯಲ್ಲಿ ನಿಂತು ವಾಲಿಯನ್ನು ವಧಿಸಿದ್ದರ ಔಚಿತ್ಯ-ಅನೌಚಿತ್ಯಗಳ ಬಗ್ಗೆ ಚರ್ಚೆ ನಡೆದಿತ್ತು. 'ಇದೇನು! ಕಾವ್ಯ ಸಂಸಾರಕ್ಕೆ ಕವಿಯೇ ಸೃಷ್ಟಿಕರ್ತ. ಅವನ ಸೃಷ್ಟಿಯಲ್ಲಿ ಹಾಗೆ ನಡೆದಿದೆ: ನಡೆದಿದೆ ಅಷ್ಟೇ. ಅದನ್ನು ಬದಲಾಯಿಸಲು ಯಾವ ಬ್ರಹ್ಮನಿಗೂ ಆಗದು. ಸರಿಯೋ ತಪ್ಪೋ! ತಪ್ಪೇ

ಅಂದುಕೊಂಡರೂ ಅದರಿಂದ ಕಾವ್ಯದಲ್ಲಿ ಬಹಳ ದೊಡ್ಡ ಸಾಧನೆಗೆ ರಸಾನುಭವಕ್ಕೆ ಅವಕಾಶ ಕಲ್ಪಿತವಾಗುತ್ತದೆ. ಆ ಅವಕಾಶವನ್ನು ನೋಡಿಯೇ ಔಚಿತ್ಯ-ಅನೌಚಿತ್ಯಗಳ ನಿರ್ಧಾರ. ಲೋಕದ ನ್ಯಾಯ ಎಲ್ಲ ಕಡೆ ಕಾವ್ಯದ ನ್ಯಾಯ ಅಲ್ಲ. ವಾಲಿಯ ವಧಾಪ್ರಸಂಗವೂ ಅದಕ್ಕೆ ಉತ್ತಮ ನಿದರ್ಶನ, ಶತಶತಮಾನಗಳ ನಂತರವೂ ಅದು ಇಂಥ ಒಂದು ಗಂಭೀರ ಚರ್ಚೆಯನ್ನು ತನ್ನ ಒಡಲೊಳಗೆ ಇಟ್ಟುಕೊಂಡಿದೆಯಲ್ಲ. ಮಹಾಕವಿಗಳು ಮೇಲ್ನೋಟಕ್ಕೆ ಅನೌಚಿತ್ಯವೆಂದು ತೋರುವಲ್ಲೇ ಬಹುದೊಡ್ಡ ಔಚಿತ್ಯವನ್ನು ಸಾಧಿಸುತ್ತಾರೆ. ಅಂಥದು ಮಹಾಕವಿಗೆ ಮಾತ್ರ ಸಾಧ್ಯ -ಎಂದು ಮುಂತಾಗಿ ಯೋಚಿಸುತ್ತಾ ವಿದ್ವಾಂಸರ ಚರ್ಚೆಯನ್ನು ಆಲಿಸುತ್ತಿದ್ದೆ. ಈ ನೆಪದಲ್ಲಿ ಧರ್ಮ-ಅಧರ್ಮ, ಕಾವ್ಯ ಸ್ವರೂಪ-ರಹಸ್ಯ ಮುಂತಾದ ವಿಷಯಗಳನ್ನು ಕುರಿತ ಉತ್ತಮ ವಿಚಾರಗಳು ಉಲ್ಲೇಖಗಳು ವಿದ್ವಾಂಸರಿಂದ ಪ್ರಕಟವಾಗುತ್ತಿದ್ದವು, ನನ್ನ ಕಲ್ಪನೆಯಲ್ಲಿ ಈವರೆಗೆ ಇದ್ದ 'ಶ್ರೀಮಠ'ಗಳಿಗಿಂತ ಭಿನ್ನವಾದ ವಾತಾವರಣವೊಂದು ಇಲ್ಲಿ ನಿರ್ಮಾಣವಾಗುತ್ತಿದೆಯೇನೋ ಅನ್ನಿಸತೊಡಗಿತು.

ಶ್ರೀಗಳವರು ಅನುಷ್ಠಾನ ಮುಗಿಸಿ ಮಹಡಿಗೆ ಆಗಮಿಸಿದ್ದಾರೆ. ಬನ್ನಿ ದರ್ಶನ ಮಾಡೋಣ ಎಂದ ಶಂಕರ ಭಟ್ಟರೊಡನೆ ಹೋಗಿ ಸ್ವಾಮಿಗಳನ್ನು ಕಂಡು ನಮಸ್ಕರಿಸಿ ಕುಳಿತುಕೊಂಡೆ. ತುಂಬ ಲವಲವಿಕೆಯ ಮನುಷ್ಯ. ಕಣ್ಣಿನಲ್ಲಿ ಹರಿತವಾದ ಹೊಳಪು. ಏನೆಲ್ಲ ಸಾಧಿಸಬೇಕೆಂಬ ಹಂಬಲದ ಕ್ರಿಯಾಶೀಲ ಮನಸ್ಸು ತೇಜಸ್ಸಾಗಿ ಮೂಡಿದ ಮುಖಮುದ್ರೆ. ಈವರೆಗೆ ನನ್ನ ಮನಸ್ಸಿನಲ್ಲಿ ನಾನು ಊಹಿಸಿಕೊಂಡಿದ್ದ ಚಿತ್ರವೇ ಬೇರೆ. ರಾಜಗಾಂಭೀರ್ಯ ವಯಸ್ಸಿಗೆ ಸಹಜವಲ್ಲದ ಸನ್ಯಾಸದಿಂದಾಗಿ ಮತ್ತಷ್ಟು ಗಾಂಭೀರ್ಯವನ್ನು ಆವಾಹಿಸಿಕೊಂಡ ಪೆದ್ದು ಕಳೆಯ ಮೊದ್ದುಮುಖವನ್ನು ಇಂದು ನೋಡಬೇಕಾಗಿದೆ ಅಂದುಕೊಂಡಿದ್ದೆ. ನಾನು ಅಂದುಕೊಂಡಿದ್ದಕ್ಕಿಂತ ಸಂಪೂರ್ಣ ವಿರುದ್ಧವಾದ ಚಿತ್ರ. 'ಶ್ರೀರಾಮಭಟ್ಟರು......, ನೀವು ಬಂದಿದ್ದು ಸಂತೋಷ.' ಆಪ್ತವಾದ ನೋಟ ಬೀರಿ ಶ್ರೀಗಳು ಸಹಜವಾಗಿ ಹೇಳಿದರು. ಶಂಕರ ಭಟ್ಟರ ಜೊತೆಯಲ್ಲಿ ಬಂದಿದ್ದರಿಂದ ನನ್ನನ್ನು ಊಹಿಸಿರಬೇಕು ಅಂದುಕೊಂಡೆ. 'ಶಂಕರ ಭಟ್ಟರ ಜೊತೆ ಬಂದಿದ್ದರಿಂದ ಗೊತ್ತಾಯ್ತು. ನಾನು ನಿಮ್ಮನ್ನು ನೋಡಿರಲಿಲ್ಲ. ನಿಮ್ಮ ಬಗ್ಗೆ ಕೇಳಿದ್ದೆ. ಶ್ರೀಗಳ ಮಾತಿನಲ್ಲಿ ಈವರೆಗೆ ಯಾಕೆ ಒಮ್ಮೆಯೂ ಬರಲಿಲ್ಲ ಎನ್ನುವ ಇಂಗಿತ ಇದ್ದಂತೆ ತೋರಿತು. 'ಬರಬಾರದೆಂದಲ್ಲ. ಕಾರಣಾಂತರದಿಂದ ಬರಲಿಕ್ಕಾಗಲಿಲ್ಲ. ಎಂದೆ ನೀವು ನಮ್ಮ ಮಠಕ್ಕೇ ಸೇರಿದವರು. ವಿದ್ವಾಂಸರ ಪಟ್ಟಿಯಲ್ಲೂ ನಿಮ್ಮ ಹೆಸರಿದೆ. ಮತ್ತೆಮತ್ತೆ ಮಠಕ್ಕೆ ಬರುತ್ತಿರಬೇಕು. ಸಹಜ ನಡಿಗೆಯ ಹಿತ-ಮಿತವಾದ ಮಾತು. ಪ್ರಸನ್ನವಾದ ಮುಖಭಾವ.

ಒಂದೆರಡು ನಿಮಿಷಗಳ ಕಾಲ ಉಭಯಕುಶಲೋಪರಿಯಾದ ಬಳಿಕ ಎದ್ದೆ, ನೀವು ಸಂಜೆಯವರೆಗೂ ಇದ್ದು ಹೋಗಬೇಕು. ಆಗಲೇ ನಿಮಗೆ ಮಂತ್ರಾಕ್ಷತೆ ಕೊಡ್ತೇನೆ ಎಂದರು. ಅರ್ಥವಾಯಿತು, ವಾಸ್ತವಿಕವಾಗಿ ನಾನು ಅಂದು ಮಧ್ಯಾಹ್ನ ಸಂಬಂಧಿಕರೊಬ್ಬರ ಮನೆಗೆ ಹೋಗಬೇಕಿತ್ತು, ಶ್ರೀಗಳವರ ಮಾತನ್ನು ಮೀರುವುದಕ್ಕಾಗಲಿಲ್ಲ. ಶ್ರೀಗಳವರೂ ಗೋಷ್ಠಿಗೆ ಆಗಮಿಸಿದರು. ವಿದ್ವಾಂಸರ ವಿವೇಕದ ಮಾತುಗಳು, ಚರ್ಚೆ ಸಾಗುತ್ತಿದ್ದ ರೀತಿ, ಸಭಿಕರು ಎತ್ತುವ ಪ್ರಶ್ನೆಗಳು ತುಂಬ ಉಪಯುಕ್ತವಾಗಿದ್ದವು. ನಡುವೆ ಶ್ರೀಗಳವರು ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳು ಅವರ ಆಳವಾದ ಓದಿಗೆ ಶಾಸ್ತ್ರ-ಕಾವ್ಯ ವಿದ್ವತ್ತಿಗೆ, ವಿವೇಕದ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದ್ದವು. ಮುಖ್ಯವಾಗಿ ವಿಚಾರ ಚಿಂತನೆಗಳ ಬಗ್ಗೆ ಜ್ಞಾನಸಾಧನೆಯ ಹಾಗೂ ವಿತರಣೆಯ ಬಗ್ಗೆ ಶ್ರೀಗಳವರಿಗೆ ಇದ್ದ ಕಳಕಳಿ ಅವರ ನಡೆ-ನುಡಿಗಳಲ್ಲಿ ಸ್ಪಷ್ಟವಾಗುತ್ತಿತ್ತು. ವೈಶಾಖದುದ್ದಕ್ಕೂ ಹಾಕಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಶ್ರೀಗಳವರ ಕ್ರಿಯಾಶೀಲತೆ ಎದ್ದು ತೋರುತ್ತಿತ್ತು. ಅನಗತ್ಯ ಸಂಪ್ರದಾಯ ಶಿಷ್ಟಾಚಾರಗಳಿಂದ ಜಡ್ಡುಗಟ್ಟಿಹೋದ ಮಠಗಳಿಗೆ ಇಂಥ ಅದಮ್ಯ ಉತ್ಸಾಹದ, ವಿದ್ಯಾವಂತ, ಕ್ರಿಯಾಶೀಲ ವಿವೇಕಿ, ಕರ್ಮ-ಜ್ಞಾನ ದಕ್ಷ ಸನ್ಯಾಸಿಗಳ ಅಗತ್ಯ ಇದೆ. ಪ್ರಸನ್ನ ಗಂಭೀರ ಪ್ರಶಾಂತ ತೇಜಸ್ಸಿನ ಈ ಯುವ ಯತಿಯನ್ನು ಜ್ಞಾನಿಸುತ್ತಿದ್ದಾಗ ನನ್ನ ಮನಸ್ಸು ಇನ್ನೂ ಕವಡಿಕೆರೆಯ ಸರೋವರದ ಸಮ್ಮೋಹದಿಂದ ಹೊರಬಂದಿರಲಿಲ್ಲ.

ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ!
ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯ ಮನೋಯಥಾ!

ಈ ಐದಾರು ವರ್ಷಗಳಲ್ಲಿ ಹತ್ತಾರು ಬಾರಿ ಮಠಕ್ಕೆ ಹೋಗಿದ್ದೇನೆ. ಮತ್ತೆ ಮತ್ತೆ ಬರಬೇಕು ಎನ್ನುವ ಶ್ರೀಗಳ ಮಾತನ್ನು ಪಾಲಿಸಿದ್ದೇನೆ. ರಾಷ್ಟ್ರೀಯ ಮಟ್ಟದ ವೇದಸಮ್ಮೇಳನ, ಕಾಲಿದಾಸ ಸಮಾರೋಹ, ಸಂಸ್ಕೃತವರ್ಷ, ವೇದಶಿಬಿರ, ಉತ್ತರಕನ್ನಡ ಜಿಲ್ಲಾ ವೇದಸಂಗಮ ಮುಂತಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೇನೆ. ಈ ಎಲ್ಲ ಸಂದರ್ಭಗಳಲ್ಲೂ ಶ್ರೀಗಳ ಆತ್ಮೀಯ ಕೃಪೆಗೆ ಪಾತ್ರನಾಗಿದ್ದೇನೆ. ಅದೇ ಪ್ರಸನ್ನತೆ, ಅದೇ ಪ್ರಶಾಂತತೆ, ಅದೇ ಕ್ರಿಯಾಶೀಲತೆ, ಅದೇ ವಿವೇಕ ಶ್ರೀಗಳವರ ನಡೆ-ನುಡಿಯಲ್ಲಿ ತುಂಬಿ ತುಳುಕುತ್ತಿದೆ. ಬೆಂಗಳೂರಿಗೆ ಆಗಮಿಸಿ ಶ್ರೀಗಳವರು ನಡೆಸಿಕೊಡುವ ಶಾಸ್ತ್ರ ಚರ್ಚೆಯನ್ನು ಕಂಡು ಕಲಿತಿದ್ದೇನೆ. ಹಿರಿಯ ವಿದ್ವಾಂಸರು, ಹಿರಿಯ ಯತಿಶ್ರೇಷ್ಠರು ಎಳೆಯ ವಯಸ್ಸಿನ ಈ ಯತಿಯಲ್ಲಿ ತೋರುವ ಆದರ-ಅಭಿಮಾನಗಳನ್ನು ಕಣ್ಣಾರೆ ಕಂಡಿದ್ದೇನೆ. ಅದಕ್ಕೆ ಕಾರಣ ಜ್ಞಾನಮೀಮಾಂಸೆಯಲ್ಲಿ ಆಧ್ಯಾತ್ಮಶಾಸ್ತ್ರದಲ್ಲಿ ಶ್ರೀಗಳಿಗಿರುವ ವಿನಮ್ರ ಪಾಂಡಿತ್ಯ,

ಆಳವಾದ ಶಾಸ್ತ್ರಜ್ಞಾನ, ಅನುಷ್ಠಾನ ಹಾಗೂ ಆ ಪರಂಪರೆಯನ್ನು ಕಾಪಾಡಿಕೊಂಡು ಬರಬೇಕೆಂಬ ಶ್ರದ್ಧೆ-ಕಾಳಜಿ.

ಇದೇ ಸಂದರ್ಭದಲ್ಲಿ ಶ್ರೀಗಳವರು ಗಳಿಸಿದ ಜನಮನ್ನಣೆ, ಪ್ರೀತಿ, ಗೌರವಗಳೂ ನನ್ನ ಅನುಭವಕ್ಕೆ ಬಂದಿದೆ. ಜ್ಞಾನ ಪಿಪಾಸುಗಳಾದ ಜನ ಜ್ಞಾನಸಿಂಧುವಿನೆಡೆಗೆ ಬರುವುದು ಸಹಜ. ಇಂಥ ಗೋಷ್ಠಿಗಳು, ಸ್ವರ್ಣವಲ್ಲೀ ಪ್ರಭಾವದಂಥ ಅತ್ಯುಪಯುಕ್ತ ಪತ್ರಿಕೆಗಳು, ಪುಸ್ತಕಪ್ರಕಟಣೆಗಳು ಈ ದಿಶೆಯಲ್ಲಿ ತುಂಬ ಸಹಾಯಕ. ಸ್ವರ್ಣವಲ್ಲೀ ಪ್ರಭಾವದಲ್ಲಿ ಶ್ರೀಗಳವರ ಲೇಖನಮಾಲೆ ಅವರು ಜನಮಾನಸವನ್ನು ತಲುಪುವಲ್ಲಿ ನಡೆಸಿದ ಸಫಲಪ್ರಯತ್ನ ಎಂದು ತೋರುತ್ತದೆ. ಲೇಖನಗಳಲ್ಲೂ, ಉಪನ್ಯಾಸ, ಆಶೀರ್ವಚನಗಳಲ್ಲೂ ಆಧುನಿಕಚಿಂತನೆ, ಸಮಕಾಲೀನ ಸಮಸ್ಯೆಗಳ ಪರಿಹಾರ ಸ್ಪರ್ಶ ಕಂಡುಬರುವುದು ಮಹತ್ವದ ಸಂಗತಿ. ಸಮಕಾಲೀನಕ್ಕೆ ಸ್ಪಂದಿಸದಿದ್ದಲ್ಲಿ ಸಾರ್ವಕಾಲಿಕತೆಯು ದಕ್ಕಲಾರದು. ಅಲ್ಲದೆ ಆಧುನಿಕತೆಯ ಅರಿವಿಲ್ಲದೆ ಸಾಮಾಜಿಕ ಸುಧಾರಣೆಗೆ ಹೊರಡಲಾಗದು. ಸಂಪ್ರದಾಯ ನಿಂತನೀರಾಗದೆ ಇರುವುದು ಆಧುನಿಕ ಚಿಂತನೆಗಳ ಅರಿವು ಇದ್ದಾಗ ಮಾತ್ರ. ಆರಾಧನೆಯಷ್ಟೇ ಅನ್ವೇಷಣೆಯೂ ಮುಖ್ಯವಾದದ್ದು. ಜಾತಿ, ಭಾಷೆ, ಮತ, ಧರ್ಮ, ಆಸ್ತಿ, ಅಂತಸ್ತುಗಳ ತಾರತಮ್ಯದಲ್ಲಿ ತೊಳಲಾಡುವ ಸಮಾಜಕ್ಕೆ ಬಿಡುಗಡೆಯನ್ನು ನೀಡುವಲ್ಲಿ ಸಂಪ್ರದಾಯ-ಆಧುನಿಕತೆಗಳ, ಪ್ರಾಚೀನ-ಅರ್ವಾಚೀನತೆಗಳ ಅರಿವು-ಅನುಷ್ಠಾನ ತುಂಬ ಅಗತ್ಯವಾದದ್ದು. ಆ ದಿಶೆಯಲ್ಲಿ ಈ ಸಂತ ಯುವ ಯತಿ ದಾಪುಗಾಲಿಟ್ಟಿದ್ದಾರೆ.

ಶಾಂತಾ ಮಹಾಂತೋ ನಿವಸಂತಿ ಸಂತೋ
ವಸಂತವಲ್ಲೋಕಹಿತಂ ಚರಂತಃ

ಅದಕ್ಕೆ ಹವ್ಯಕಸಮಾಜ ಜನಬಲವನ್ನು ಬೆಂಬಲವನ್ನೂ ಹೆಚ್ಚು ಹೆಚ್ಚು ನೀಡಬೇಕಾಗಿದೆ. ದೈವಬಲವನ್ನು ಪಡೆಯಲು ಬೇಕಾದ ಅನುಷ್ಠಾನ-ತಪೋಯೋಗಗಳು ಶ್ರೀಗಳವರಿಗೆ ಇದೆ. ಕವಡಿಕೆರೆಯ ಸರೋವರ ಎಷ್ಟೊಂದು ಮನಸ್ಸುಗಳಿಗೆ ಬೇಗೆಯ ಬಿಡುಗಡೆಯನ್ನು ನೀಡುತ್ತದೆ. ಒಬ್ಬ ಸಮರ್ಥ ಯತಿಯೂ ಹಾಗೆ. ಸರೋವರದ ತುಂಬ ತಣ್ಣನೆಯ ನೀರು. ಯತಿಯ ಮನದ ತುಂಬ ಭವದಲ್ಲಿ ಬೆಂದವರ ಬಗ್ಗೆ ಅಪಾರ ಕರುಣೆ. ಆಚಾರ್ಯ ಶಂಕರರು ಹೇಳುವಂತೆ ಗುರು 'ಪರಮ ಕಾರುಣಿಕ.'

ಸ್ವರ್ಣವಲ್ಲಿಯ ಶಾಸ್ತ್ರಚಿಂತನ ಗೋಷ್ಠಿ

-ಹಿತ್ಲಳ್ಳಿ ಸೂರ್ಯನಾರಾಯಣ ನಾಗೇಂದ್ರಭಟ್ಟ, ಮೈಸೂರು.

ಪ್ರಾಚೀನ ಭಾರತೀಯ ಸಾರಸ್ವತ ಸಾಧನೆ ವೈದಿಕ ಮತ್ತು ಲೌಕಿಕ ಸಂಸ್ಕೃತ ಸಾಹಿತ್ಯದಲ್ಲಿ ಗೂಢವಾಗಿದೆ. ಅದರ ಅಧ್ಯಯನ ಮತ್ತು ಅಧ್ಯಾಪನವಿಲ್ಲದೆ ಆ ಸಾಧನೆಯ ಫಲವನ್ನು ಸಂರಕ್ಷಿಸುವುದಿರಲಿ, ಅರ್ಥ ಮಾಡಿಕೊಳ್ಳುವುದೂ ಆಗದ ಮಾತು. ಆ ಕಾರಣದಿಂದಲೇ ಅದನ್ನು ಗುರುಮುಖವಾಗಿ ತಿಳಿದುಕೊಳ್ಳುವುದೂ, ತಿಳಿದುಕೊಂಡಿರುವುದನ್ನು ಉಚಿತವಾಗಿ ಯೋಗ್ಯರಿಗೆ ವಿತರಿಸುವುದೂ ಒಂದು ವ್ರತವೆಂದು ನಡೆಸಿಕೊಂಡು ಬರುತ್ತಿರುವ ಮಹನೀಯರು ನಮ್ಮ ದೇಶದಲ್ಲಿ ಕಡಿಮೆಯಾದರೂ ಅಲ್ಲಲ್ಲಿ ಇದ್ದಾರೆ. ಪರತಂತ್ರ ಭಾರತದಲ್ಲಿಯೂ ಬಡತನದ ಬವಣೆಯಲ್ಲಿ ಬೆಂದು ನೊಂದು ಮಣ್ಣಾದರೂ ಭಾರತೀಯರು ಅದನ್ನು ಬಿಡದೆ ತಮ್ಮ ಮಕ್ಕಳಿಗೆ ಮೊಮ್ಮಕ್ಕಳಿಗೆ ಅದನ್ನು ಉಪದೇಶಿಸಿ ರತ್ನದಂತೆ ಸಂರಕ್ಷಿಸಿದರು. ಆದರೆ ಸ್ವತಂತ್ರ ಭಾರತದಲ್ಲಿ ಸಂಸ್ಕೃತದ ಸ್ಥಾನ ಮೊದಲಿನಂತೆ ಇರುವುದು ಕಾಣುತ್ತಿಲ್ಲ ಎಂದು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ವಿದ್ಯಾವಂತರು ಜೀವನ ಮಾಡುವುದಕ್ಕಾಗಿ ಬೇರೆಯ ಉದ್ಯೋಗ ಮಾಡಬೇಕಾಗಿ ಬಂದಿದೆ. ದೇಶೀಯ ಭಾಷೆಗಳೂ ತಮ್ಮತನವನ್ನು ಕಳೆದುಕೊಳ್ಳುತ್ತಿರುವ ಈ ಸಮಯದಲ್ಲಿ ಸಂಸ್ಕೃತದ ಅಧ್ಯಯನ ಮತ್ತು ಅಧ್ಯಾಪನ ಸಾಕಷ್ಟು ವಿಕಾರವನ್ನು ಹೊಂದಿ ಕ್ಷೀಣಿಸಿದೆ. ಸರಕಾರಗಳೂ ವಿಶ್ವವಿದ್ಯಾಲಯಗಳೂ ಈ ದಿಶೆಯಲ್ಲಿ ಮುಂದುವರೆದು ಅಪಾರ ಧನವ್ಯಯವನ್ನು ಮಾಡಿಯೂ ನಿರೀಕ್ಷಿತ ಪ್ರಯೋಜನ ಕಾಣದಾಗಿದೆ. ಹಾಗಾದರೂ ಸೂರ್ಯೋದಯ ಕಾಲದ ನಕ್ಷತ್ರಗಳಂತೆ ಅಲ್ಲಲ್ಲಿ ವೃದ್ಧವಿದ್ವಾಂಸರು ಅಸ್ಪಷ್ಟವಾಗಿ-ಯಾದರೂ ಗೋಚರಿಸುತ್ತಿದ್ದು, ಅವರ ಮಾರ್ಗದರ್ಶನದಲ್ಲಿ ಮುಂದುವರೆದ ಯುವಕರಲ್ಲಿ ಕೆಲವರಾದರೂ ಪರಂಪರೆಯ ಸಂರಕ್ಷಣೆಯ ಮಹಾಕಾರ್ಯದಲ್ಲಿ ಸಮರ್ಥರಾಗಬಹುದು ಎಂಬ ಸದುದ್ದೇಶದಿಂದ ಚಿಂತನಗೋಷ್ಠಿಗಳನ್ನು ಸ್ವರ್ಣವಲ್ಲಿಯ ಮಹಾಸಂಸ್ಥಾನದಲ್ಲಿ ಏರ್ಪಡಿಸಲಾಗುತ್ತಿದೆ.

ಇದನ್ನು ಕೆಲವರು ಆಕ್ಷೇಪಿಸುತ್ತಾರೆ. ಇಂತಹ ಗೋಷ್ಠಿಗಳಿಂದ ಏನನ್ನು ಸಾಧಿಸಬಹುದು? ಜೀರ್ಣವಾಗಿರುವ ಗ್ರಂಥಗಳಲ್ಲಿ ಯಾರಿಗೂ ತಿಳಿಯದ ಭಾಷೆಯಲ್ಲಿರುವ ವಿಷಯಗಳನ್ನು ೧೦-೧೫ ಜನರು ನಾಲ್ಕಾರು ದಿವಸಗಳ ಕಾಲ ಯಾರಿಗೂ ತಿಳಿಯದಂತೆ ಚರ್ಚಿಸಿದರೆ ಯಾವಪುರುಷಾರ್ಥವು ಸಿದ್ಧಿಸುತ್ತದೆ? ಇದಕ್ಕೆ ಬದಲಾಗಿ ಎಲ್ಲರಿಗೂ ತಿಳಿಯುವಂತೆ ಮಾತನಾಡಿ, ಎಲ್ಲರಿಗೂ ಬೇಕಾದ ವಿಷಯಗಳನ್ನು ಚರ್ಚಿಸಿ, ಕೊನೆಯ ದಿವಸ ಗೋಷ್ಠಿಯ ಫಲಿತಾಂಶವನ್ನು ಎಲ್ಲರಿಗೂ ತಿಳಿಸಬಾರದೇಕೆ? ಬೇಸಿಗೆಯ ಬಿಡುವಿನ ದಿನಗಳಲ್ಲಿ ಬೆಂಗಳೂರಿನ ಕಡೆಯಿಂದ ಕೆಲವರನ್ನು ಕರೆಯಿಸಿ ಚರ್ಚೆಯನ್ನು ಮಾಡುತ್ತಿರುವಾಗ ಸ್ವಾಮಿಗಳ ಜೊತೆಗೆ ಮಾತನಾಡಲೂ ಸಾಧ್ಯವಿಲ್ಲದ ಪರಿಸ್ಥಿತಿಯುಂಟಾಗುತ್ತದೆ, ಹಣವೂ ವೆಚ್ಚವಾಗುತ್ತದೆ ಇತ್ಯಾದಿ, ಇತ್ಯಾದಿ.

ಹೀಗೆ ಆಕ್ಷೇಪ ಮಾಡುವವರಿರುವಂತೆ, ಅದನ್ನು ಪರಿಹರಿಸಿ ಗೋಷ್ಠಿಯ ಲಾಭವನ್ನು ವಿವರಿಸಿ ಹೇಳುವವರೂ ಇದ್ದಾರೆ. ಆಕ್ಷೇಪವು ಅವರವರ ಸಂಸ್ಕಾರಗಳಿಂದ ಹಲವು ಬಗೆಯಲ್ಲಿ ವ್ಯಕ್ತವಾಗುವಂತೆ ಅವುಗಳ ಸಮಾಧಾನ-ವಾದರೂ ಹಲವು ರೀತಿಯಲ್ಲಿ ಇರುತ್ತದೆ. ಸಮಾಧಾನವನ್ನು ಹೇಳಿದ ಮೇಲೆಯೂ ಆಕ್ಷೇಪವನ್ನು ಮುಂದುವರೆಸುವ ಸಂಭವವೂ ಇಲ್ಲದಿಲ್ಲ. ಅಂತಹ ಸಂದರ್ಭದಲ್ಲಿ ಆಕ್ಷೇಪಿಸುವವರೇ ಒಂದು ಗುಂಪು, ಉತ್ತರಿಸುವವರದೇ ಒಂದು ಗುಂಪು ಹಾಗೂ ತಟಸ್ಥವಾಗಿ ಕೇಳುವವರದೇ ಇನ್ನೊಂದು ಗುಂಪು! ಆಕ್ಷೇಪವೂ ಇದೆ ಎಂಬುದನ್ನು ತಿಳಿಸಲು ಅದನ್ನು ಸೂಚಿಸಿದೆಯಲ್ಲದೆ, ಅದಕ್ಕೆ ಉತ್ತರಿಸುವುದಾಗಲೀ ಅಥವಾ ಅದನ್ನು ಸ್ವೀಕರಿಸುವುದಾಗಲೀ ನಮ್ಮ ಉದ್ದೇಶವೇನೂ ಅಲ್ಲ. ಹೊಲದ ಬೇಸಾಯ ಮಾಡುವವರು ಇರುವಂತೆ ಅದನ್ನು ನಾಶಮಾಡುವ ಪ್ರಾಣಿಗಳೂ ಇರುವದೇ ದೈವಸಂಕಲ್ಪವಾಗಿರುವುದರಿಂದ ಆ ಕುರಿತು ಯೋಚಿಸದೆ ಶಾಸ್ತ್ರಗಳ ಚಿಂತನೆ ನಡೆಯಲಿ, ಅವುಗಳ ಅಧ್ಯಯನ ಮತ್ತು ಅಧ್ಯಾಪನ ಆಚಂದ್ರಾರ್ಕವಾಗಿ ಭಾರತದಲ್ಲಿ ಮುನ್ನಡೆಯಲಿ ಎಂದು ಹಾರೈಸಿ ಗೋಷ್ಠಿಯ ವಿವರಗಳನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಲು ಪ್ರಯತ್ನಿಸಲಾಗಿದೆ

ಗೋಷ್ಠಿಯ ಅವಧಿ:

ಸ್ವರ್ಣವಲ್ಲಿಯ ಶಾಸ್ತ್ರಚಿಂತನ ಪ್ರತಿವರ್ಷವೂ ವೈಶಾಖ ಬಹುಳ ಬಿದಿಗೆಯಿಂದ ಆರಂಭವಾಗಿ ಸಂಜೆ ಮುಗಿಯುತ್ತದೆ. ತಿಥಿಯ ವೃದ್ಧಿ-ಕ್ಷಯಗಳ ಕಾರಣದಿಂದಾಗಿ ಐದು, ಆರು ಅಥವಾ ಏಳು ದಿನಗಳ ಕಾಲ ಈ ಗೋಷ್ಠಿಯು ನಡೆಯುವುದುಂಟು.

ಆ ಬಿದಿಗೆಯಿಂದ ಸಪ್ತಮಿಯವರೆಗೆ ಒಂದು ತಿಥಿಯು ಲುಪ್ತವಾದರೆ ಐದು ದಿನಗಳೂ, ಒಂದು ತಿಥಿಯ ತ್ರಿದಿನಸ್ಪೃಕ್ ಆದರೆ ಏಳು ದಿನಗಳೂ, ಇವೆರಡೂ ಇಲ್ಲದೆ ಇರುವಾಗ ಆರು ದಿನಗಳೂ ಶಾಸ್ತ್ರಚಿಂತನೆಯ ಅವಧಿಯಾಗಿರುತ್ತದೆ. ಇದರಿಂದ ಅನಿವಾರ್ಯ ಕಾರಣದಿಂದಾಗಿ ಆಮಂತ್ರಣವು ತಲುಪದಿದ್ದರೂ ಆಸಕ್ತರಾದವರು ದೂರವಾಣಿಯ ಮೂಲಕವೋ ಪತ್ರವ್ಯವಹಾರ ಮಾಡಿಯೋ ವ್ಯವಸ್ಥಾಪಕರನ್ನು ಸಂಪರ್ಕಿಸಿ ಗೋಷ್ಠಿಯ ಪ್ರಯೋಜನವನ್ನು ಪಡೆಯಬಹುದು. ಪ್ರತಿವರ್ಷವೂ ಈ ದಿನಗಳಲ್ಲಿಯೇ ಗೋಷ್ಠಿಯು ನಡೆಯುವುದರಿಂದ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಳ್ಳಬಹುದು. ಅಥವಾ ಪ್ರತಿವರ್ಷವೂ ಭಾಗವಹಿಸುವ ರೂಢಿಯನ್ನು ಮಾಡಿಕೊಳ್ಳಬಹುದು.

ಚಿಂತನೆಯ ಅವಧಿ:

ಗೋಷ್ಠಿಯಲ್ಲಿ ಪ್ರತಿದಿನವೂ ಮೂರು ವಿಭಾಗಗಳಲ್ಲಿ ಚಿಂತನೆ ನಡೆಯುತ್ತದೆ. ಪೂರ್ವಾಹ್ಣದಲ್ಲಿ ನಿತ್ಯಕರ್ಮಗಳು ಮುಗಿದ ಮೇಲೆ ಮಧ್ಯಾಹ್ನದವರೆಗೆ ಮೊದಲನೆಯ ಅವಧಿ. ಮಾಧ್ಯಾಹ್ನಿಕ ಮತ್ತು ಭೋಜನವಾದ ಮೇಲೆ ಸಂಜೆಯವರೆಗೆ ಎರಡನೆಯ ಅವಧಿ. ರಾತ್ರಿ ಊಟವಾದ ಮೇಲೆ ಮೂರನೆಯ ಅವಧಿ. ಇದಕ್ಕೆ ಹೊರತಾಗಿಯೂ ವಿದ್ವಾಂಸರು ಸಂಧ್ಯಾದಿಗಳನ್ನು ಪೂರೈಸಿ ಪ್ರತ್ಯೇಕವಾಗಿ ಚರ್ಚೆಗಳನ್ನು ನಡೆಸುವುದುಂಟು. ಇದರಿಂದ ಶಾಸ್ತ್ರಗೋಷ್ಠಿಯ ಆರಂಭದಿಂದ ಕೊನೆಯವರೆಗೂ ಭಾಗವಹಿಸುವ ಶಾಸ್ತ್ರಗಳಿಗೆ ಗೋಷ್ಠಿಯ ಪೂರ್ಣಪ್ರಯೋಜನ ದೊರೆಯುತ್ತದೆ. ಎಲ್ಲಾ ದಿವಸಗಳ ಎಲ್ಲಾ ಅವಧಿಗಳಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ ಸಾಧ್ಯವಾದಷ್ಟು ಕಾಲ ಮಾತ್ರ ಗೋಷ್ಠಿಯಲ್ಲಿದ್ದು ಹೋಗುವವರೂ ಇದ್ದಾರೆ. ಇದಕ್ಕೆ ಯಾರ ವಿರೋಧವಾಗಲಿ, ಆಕ್ಷೇಪವಾಗಲಿ, ಅಭ್ಯಂತರವಾಗಲೀ ಇಲ್ಲದಿದ್ದರೂ ಎಲ್ಲಾ ದಿವಸವೂ ಪೂರ್ಣವಾಗಿ ಇದ್ದು ಚರ್ಚೆಯಲ್ಲಿ ವಿದ್ವಾಂಸರು ಪಾಲ್ಗೊಳ್ಳಬೇಕೆಂದು ವ್ಯವಸ್ಥಾಪಕರ ಅಪೇಕ್ಷೆ ಹಾಗೂ ನಿರೀಕ್ಷೆಯಾಗಿದೆ. ಇದರಿಂದ ಗೋಷ್ಠಿಯು ಎಲ್ಲಾ ವಿದ್ವಾಂಸರಿಂದ ಹಾಗೂ ಆಸಕ್ತರಿಂದ ಪೂರ್ಣವಾಗಿ ಹೆಚ್ಚಿನ ಸಾರ್ಥಕತೆಯನ್ನು ಪಡೆಯುತ್ತದೆ.

ಭಾಗವಹಿಸುವ ವಿದ್ವಾಂಸರು:

ಈ ಗೋಷ್ಠಿಯ ವಿಶೇಷತೆಯೆಂದರೆ, ಸ್ವರ್ಣವಲ್ಲಿಯ ಪರಮಪೂಜ್ಯ ಶ್ರೀಗಳವರೂ ವೃದ್ಧ ಪಂಡಿತರೂ ಉಪಸ್ಥಿತರಿರುವುದೇ ಆಗಿದೆ. ಶ್ರೀಗಳವರು ಅತ್ಯಂತ ಆಸಕ್ತಿಯಿಂದ ಎಲ್ಲಾ ಶಾಸ್ತ್ರಗಳ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ವೃದ್ಧ

ಪಂಡಿತರು ಕಿರಿಯ ವಿದ್ವಾಂಸರಿಗೆ ಮಾರ್ಗದರ್ಶನ ಮಾಡುವರಲ್ಲದೆ, ಅವಶ್ಯವೆನಿಸಿದರೆ ಪಾಠ ಮಾಡುವುದೂ ಉಂಟು. ಚರ್ಚೆಯ ಸಂದರ್ಭದಲ್ಲಿ ಏಳುವ ಪ್ರಶ್ನೆಗಳಿಗೆ ಪ್ರಾಮಾಣಿಕವಾದ ಉತ್ತರವನ್ನು ಅವರು ಕೊಡುತ್ತಾರೆ. ಮೈಸೂರಿನಲ್ಲಿರುವ ಪಾಠಶಾಲೆಯಲ್ಲಿ ವೇದಾಂತ ಪಾಠಮಾಡಿದ ಪಂಡಿತರಾದ ಶ್ರೀ ನಾರಾಯಣ ಭಟ್ಟರೂ, ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ತರ್ಕಶಾಸ್ತ್ರ ಪಂಡಿತರಾದ ಶ್ರೀ ವರದಾಚಾರ್ಯರೂ ಬೆಂಗಳೂರಿನಲ್ಲಿರುವ ಪಾಠಶಾಲೆಯಲ್ಲಿ ವ್ಯಾಕರಣ ಪಾಠಮಾಡಿದ ಪಂಡಿತರಾದ ಶ್ರೀರಂಗನಾಥ ಶರ್ಮರೂ ಸೇರಿದಂತೆ ಹಲವಾರು ವೃದ್ಧ ಪಂಡಿತರು ಈ ಗೋಷ್ಠಿಗಳಲ್ಲಿ ಭಾಗವಹಿಸಿರುತ್ತಾರೆ. ಅವರಲ್ಲಿ ಕೆಲವರನ್ನು ಆಯ್ಕೆಮಾಡಿ ಪರಮಪೂಜ್ಯ ಶ್ರೀಗಳವರು ಪ್ರತಿವರ್ಷವೂ ಶಾಲು ಹೊದೆಸಿ ಸನ್ಮಾನಿಸುತ್ತಿದ್ದಾರೆ. ಅವರಲ್ಲಿ ಬೆಂಗಳೂರಿನ ಪಂಡಿತ ದಿವಂಗತ ಕೆ.ಪಿ. ಶಂಕರಶಾಸ್ತ್ರಿಗಳೂ, ಮೈಸೂರಿನ ಪಂಡಿತ ಎಸ್.ಎಂ.ಎಸ್. ವರದಾಚಾರ್ಯರೂ, ಮೈಸೂರಿನ ಪಂಡಿತ ಶ್ರೀ ವೆಂಕಣ್ಣಾ-ಚಾರ್ಯರೂ, ತಿರುಚ್ಚಿಯ ಪಂಡಿತ ಶ್ರೀಸ್ವಾಮಿನಾಥ ಶಾಸ್ತ್ರಿಗಳೂ, ಮದರಾಸಿನ ಪಂಡಿತ ಶ್ರೀ ಕೃಷ್ಣಮೂರ್ತಿ ಶಾಸ್ತ್ರಿಗಳೂ ಮತ್ತು ಅನೇಕರೂ ಸೇರಿದ್ದಾರೆ. ಈ ಪಂಡಿತರಲ್ಲಿ ಯಾರೂ ಸನ್ಮಾನವನ್ನು ಪಡೆಯುವುದಕ್ಕಾಗಿ ಬಂದವರಲ್ಲ. ಅವರ ಪಾಂಡಿತ್ಯವನ್ನು ಮೆಚ್ಚಿ ಅವರನ್ನು ಪುರಸ್ಕರಿಸುವ ಮೂಲಕ ವಿದ್ವತ್ತನ್ನು ಪ್ರೋತ್ಸಾಹಿಸುವ ಮಹತ್ಕಾರ್ಯವನ್ನು ಶ್ರೀಗಳವರು ಮಾಡುತ್ತಿದ್ದಾರೆ. ಎಲ್ಲಾ ವಿದ್ವಾಂಸರಿಗೂ ಮಾರ್ಗವ್ಯಯವನ್ನಷ್ಟೇ ಅಲ್ಲದೆ, ಹೆಚ್ಚಿನ ಮೊತ್ತವನ್ನೂ ನೀಡಿ ಆಶೀರ್ವದಿಸುವುದು ಪರಮಪೂಜ್ಯ ಶ್ರೀಗಳವರ ರೂಢಿಯಾಗಿದ್ದು, ಯಾರೇ ಆಗಲೀ ಅದನ್ನು ಪ್ರಶ್ನಿಸುವಂತಿಲ್ಲ. ಪ್ರಥಮ ಶಾಸ್ತ್ರಗೋಷ್ಠಿಯ ಸಂದರ್ಭದಲ್ಲಿಯೇ ಹಣವನ್ನು ನೀಡಬಾರದೆಂಬ ವಿದ್ವಾಂಸರ ಪ್ರಾರ್ಥನೆಯನ್ನು ಶ್ರೀಗಳವರು ನಿರಾಕರಿಸಿ ಅದಕ್ಕಾಗಿ ಒಂದು ವ್ಯವಸ್ಥೆಯನ್ನು ಮಾಡಿಸುತ್ತಾರೆ. ಜ್ಞಾನಸತ್ರವು ತಾಮಸವಾಗಬಾರದೆಂಬುದು ಅವರ ಇಂಗಿತವೆನ್ನಬಹುದು.

ಭಾಗವಹಿಸುವ ವಿದ್ವಾಂಸರು ನಮ್ಮ ರಾಜ್ಯದ ಬೆಂಗಳೂರು, ಮೈಸೂರು, ಗೋಕರ್ಣ, ಉಡುಪಿ, ಸಿದ್ಧಗಂಗೆ, ಚುಂಚನಗಿರಿ ಮುಂತಾದ ಕಡೆಗಳಲ್ಲಿ ಪಾಠ ಪ್ರವಚನ ಮಾಡುವವರು. ಕೇರಳ, ತಮಿಳ್ನಾಡು, ಪುಣೆ, ವಾರಣಾಸಿ ಮುಂತಾದ ಕಡೆಗಳಿಂದಲೂ ವಿದ್ವಾಂಸರು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾರೆ. ಚರ್ಚೆಗಾಗಿ ವಿಷಯಗಳನ್ನು ಸಾಕಷ್ಟು ಮೊದಲೇ ಅಂದರೆ ಸುಮಾರು ಮೂರು ತಿಂಗಳು ಮುಂಚೆಯೇ ತಿಳಿಸುತ್ತಿದ್ದು, ಆ ವಿಷಯಗಳಲ್ಲಿ

ಪರಿಣತರಾದವರು ಪ್ರಬಂಧಗಳನ್ನು ಬರೆದು ನಿರೂಪಿಸುವ ರೂಡಿಯೂ ಬೆಳೆದು ಬಂದಿದೆ. ಸ್ವತಂತ್ರವಾಗಿ ಹೇಳುವವರು ಪ್ರಬಂಧವಿಲ್ಲದೇ ಹೇಳುವುದಾದರೆ ಅದಕ್ಕೂ ಅವಕಾಶವಿದೆ. ಇದರಿಂದ ಈ ಗೋಷ್ಠಿಯಲ್ಲಿ ಪ್ರಾಚೀನ ವಾಕ್ಯಾರ್ಥ-ಸಭೆಯಂತೆ ಪ್ರೌಢವಾಗಿ ಪ್ರಮೇಯ ಪರಿಶೋಧನೆಯಾಗುವುದರೊಂದಿಗೆ, ಆಧುನಿಕ ಚರ್ಚಾಗೋಷ್ಠಿಗಳಂತೆ ಪ್ರಬಂಧ ಮಂಡನೆ ಮತ್ತು ಪ್ರಶ್ನೋತ್ತರಗಳ ಮೂಲಕ ಕಿರಿಯ ವಿದ್ವಾಂಸರಿಗೆ ಪ್ರೋತ್ಸಾಹ ದೊರೆಯುತ್ತದೆ.

೧೯೯೨ರಲ್ಲಿ ಆರಂಭವಾದ ಚಿಂತನಗೋಷ್ಠಿಯು ೨೦೦೧ರವರೆಗೂ ತಪ್ಪದೇ ನಡೆದಿದ್ದು ಇದೀಗ ೨೦೦೨ರ ಗೋಷ್ಠಿಗೆ ವಿದ್ವಾಂಸರು ಸಜ್ಜಾಗುತ್ತಿದ್ದಾರೆ. ವೇದಾಂತ, ಧರ್ಮಶಾಸ್ತ್ರ, ನ್ಯಾಯ, ಜ್ಯೋತಿಃಶಾಸ್ತ್ರ, ಸಾಂಖ್ಯಯೋಗ, ವ್ಯಾಕರಣ, ಶ್ರೌತ, ಮೀಮಾಂಸಾ ಮತ್ತು ಅಲಂಕಾರ ಈ ವಿಷಯಗಳಲ್ಲಿ ಯಾವುದಾದರೂ ಒಂದೊಂದು ಮುಖ್ಯವಾದ ಭಾಗವನ್ನು ಚಿಂತನೆಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ವ್ಯಾಕರಣದಿಂದ ಚಿಂತನೆಯು ಆರಂಭವಾಗಿ ವೇದಾಂತದಲ್ಲಿ ಕೊನೆಗೊಳ್ಳುತ್ತದೆ. ಇದು ಒಂದು ದೃಷ್ಟಿಯಲ್ಲಿ ಸಮಂಜಸವೂ ಆಗಿದೆ. ಶಾಸ್ತ್ರಗಳ ಅಧ್ಯಯನವು ವ್ಯಾಕರಣದಿಂದಲೇ ಆರಂಭವಾಗುತ್ತದೆ. ಅದು ವೇದಾಂತವನ್ನು ಶ್ರವಣ ಮಾಡುವುದರೊಂದಿಗೆ ಮುಗಿಯಬೇಕೆಂಬುದು ನಿಜವಾದರೂ ಎಲ್ಲರಿಗೂ ಅಂತಹ ಸೌಕರ್ಯವಿಲ್ಲವಾದುದರಿಂದ ಯಾವುದೋ ಒಂದು, ಎರಡು ಮೂರು ಅಥವಾ ನಾಲ್ಕು ಶಾಸ್ತ್ರಗಳನ್ನು ಅಧ್ಯಯನ ಮಾಡಿ ಅಷ್ಟಕ್ಕೆ ನಿಲ್ಲಿಸಬೇಕಾಗುತ್ತದೆ. ಆದರೆ ಶಾಸ್ತ್ರದ ಆದೇಶವು ಅಧ್ಯಯನವನ್ನು ನಿಲ್ಲಿಸಬೇಕೆಂದಿಲ್ಲ. ಅದಕ್ಕೆ ಬದಲಾಗಿ ಆಯುಷ್ಯದ ಕೊನೆಯವರೆಗೂ ಯಾವ ಕಾರಣವೂ ಇಲ್ಲದೆ ವೇದಶಾಸ್ತ್ರಗಳನ್ನು ಅಧ್ಯಯನ ಮಾಡುವ ಮೂಲಕ ಅವುಗಳ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದು ಶಾಸ್ತ್ರವು ಆದೇಶಿಸುತ್ತದೆ. ಎಲ್ಲರೂ ಎಲ್ಲಾ ಶಾಸ್ತ್ರಗಳನ್ನು ಸಾಧ್ಯವಾದಷ್ಟು ತಿಳಿದುಕೊಳ್ಳ-ಬೇಕೆಂಬುದೇ ಸರಿಯಾದುದು. ಒಂದು ಶಾಸ್ತ್ರವು ಪೂರ್ಣವಾಗಿ ಅದರ ಪ್ರಮೇಯಗಳನ್ನೇ ಒಳಗೊಂಡಿರುವುದಿಲ್ಲ. ಉದಾಹರಣೆಗೆ ವ್ಯಾಕರಣವನ್ನು ಓದುವವನಿಗೂ ಪಾಠಮಾಡುವವನಿಗೂ ನ್ಯಾಯ-ಮೀಮಾಂಸಾ ಜ್ಞಾನವಿರಲೇ-ಬೇಕು. ಈ ದೃಷ್ಟಿಯಿಂದ ವಿದ್ವಾಂಸರ ವಿದ್ಯೆಯ ಅಭಿವೃದ್ಧಿಗಾಗಿ ಶ್ರೀಮಠದ ಚಿಂತನಗೋಷ್ಠಿಯಲ್ಲಿ ಎಲ್ಲಾ ಶಾಸ್ತ್ರಗಳ ಚಿಂತನ ನಡೆಯುತ್ತದೆ.

ವ್ಯಾಕರಣಶಾಸ್ತ್ರ :

ಸಂಸ್ಕೃತದಲ್ಲಿ ವ್ಯಾಕರಣವೆಂದರೆ ಬೇರೆಯ ಭಾಷೆಗಳ ವ್ಯಾಕರಣದಂತೆ, ಭಾಷೆಯ ರಚನೆಯನ್ನು ತಿಳಿಸುವುದಕ್ಕಾಗಿ ಮಾತ್ರವೇ ಇರುವುದಿಲ್ಲ. ಹದಿನಾಲ್ಕು ವಿದ್ಯೆಗಳಲ್ಲಿ

ಒಂದು ವಿದ್ಯೆಯಾಗಿ ಅದು ೧-೨ ವರ್ಷಗಳಲ್ಲಿ ತಿಳಿಯಬಹುದಾದ ಲಘು ವಿಷಯವೂ ಅಲ್ಲ. ಐದು ವರ್ಷಗಳ ಕಾಲ ಮುಖ್ಯವಾಗಿ ಅದನ್ನು ಓದಿ ವಿದ್ವಾಂಸರಾದರೂ ಮುಂದೆ ತಮ್ಮ ಜೀವಮಾನವನ್ನೆಲ್ಲಾ ಅದಕ್ಕಾಗಿ ವಿನಿಯೋಗಿ-ಸಿರುವ ಮಹನೀಯರಿಗೂ ಅದು ಪೂರ್ಣವಾಗಿ ತಿಳಿದಿರುವ ಸಂಭವ ಕಡಿಮೆ. ಈ ಮಾತು ವ್ಯಾಕರಣಕ್ಕೆ ಮಾತ್ರವಲ್ಲ, ಎಲ್ಲಾ ಶಾಸ್ತ್ರಗಳಿಗೂ ಅನ್ವಯಿಸುತ್ತದೆ. ಶಾಸ್ತ್ರಗಳನ್ನು ಸಮುದ್ರಗಳಿಗೆ ಹೋಲಿಸುವುದುಂಟು. ಸಮುದ್ರವನ್ನು ದಾಟುವ ಸಾಮರ್ಥ್ಯ ಯಾರಿಗೋ ಒಬ್ಬಿಬ್ಬರಿಗೆ ಇರಬಹುದು. ಉಳಿದವರು ಅದನ್ನು ದಾಟಲು ಶ್ರೀರಾಮನಂತೆ ಸೇತುವೆಯನ್ನು ನಿರ್ಮಿಸಬೇಕಾಗುತ್ತದೆ. ಪ್ರಾಚೀನರು ಅಂತಹ ಸೇತುವೆಗಳನ್ನು, ಪ್ರಕೃತದಲ್ಲಿ ಗ್ರಂಥಗಳನ್ನು ನಿರ್ಮಿಸಿದ್ದಾರೆ. ಅವುಗಳ ಮೂಲಕ ಎಲ್ಲರೂ ಶಾಸ್ತ್ರಗಳನ್ನು ಅರಿತುಕೊಳ್ಳಬಹುದು.

ಸುಮಾರು ೨೫೦೦ ವರ್ಷಗಳ ಹಿಂದೆಯೇ ಪಾಣಿನಿಯು ಅಷ್ಟಾಧ್ಯಾಯೀ ಎಂಬ ಸೂತ್ರಗ್ರಂಥವನ್ನು ರಚಿಸಿದ್ದಾನೆ, ಎಂದು ಹೇಳುತ್ತಾರೆ. ಅದೇ ಸಮಯದಲ್ಲಿ ಕಾತ್ಯಾಯನನು ಆ ಸೂತ್ರಗಳನ್ನು ವಿಮರ್ಶಿಸಿ ಅಲ್ಲಿ ಹೇಳಿರುವುದನ್ನೂ, ಹೇಳದೇ ಇರುವುದನ್ನೂ, ಆಕಸ್ಮಿಕವಾಗಿ ತಪ್ಪಾಗಿ ಹೇಳಿರುವುದನ್ನೂ ತನ್ನ ವಾರ್ತಿಕದಲ್ಲಿ ಸಂಗ್ರಹಿಸಿದ್ದಾನೆ. ಆಮೇಲೆ ನೂರಾರು ವರ್ಷಗಳು ಕಳೆದ ಮೇಲೆ ಪತಂಜಲಿಯು ಸೂತ್ರಗ್ರಂಥವನ್ನೂ, ವಾರ್ತಿಕವನ್ನೂ ತನ್ನ ಭಾಷ್ಯವೆಂಬ ಗ್ರಂಥದಲ್ಲಿ ಸರಳ-ವಾಗಿಯೂ ಪ್ರೌಢವಾಗಿಯೂ ವಿವರಿಸಿರುತ್ತಾನೆ. ವ್ಯಾಕರಣಶಾಸ್ತ್ರವೆಂದರೆ, ಮುಖ್ಯವಾಗಿ ಈ ಮೂರು ಮುನಿಗಳು ಬರೆದ ಗ್ರಂಥಗಳ ಆಧಾರದ ಮೇಲಿರುವ ನೂರಾರು ಗ್ರಂಥಗಳೇ ಆಗಿವೆ. ಇಂತಹ ಗ್ರಂಥಗಳಲ್ಲಿ ಸುಮಾರು ೧೬-೧೭ನೇ ಶತಮಾನದ ಭಟ್ಟೋಜಿ ದೀಕ್ಷಿತರು ರಚಿಸಿರುವ ಸಿದ್ಧಾಂತ ಕೌಮುದಿಯು ಅತ್ಯಂತ ಮಹತ್ವವನ್ನು ಪಡೆದಿದೆ. ಅದನ್ನು ಓದಿದರೆ, ಪತಂಜಲಿಯ ಭಾಷ್ಯವೆಲ್ಲವನ್ನೂ ಓದಿದಂತೆಯೇ. ಅದನ್ನು ಓದದಿದ್ದರೆ ಮಹಾಭಾಷ್ಯವನ್ನು ಓದಿಯೂ ಪ್ರಯೋಜನ-ವಿಲ್ಲ. ಈ ಕಾರಣದಿಂದ ವ್ಯಾಕರಣದ ಜಿಜ್ಞಾಸುಗಳು ಕೌಮುದಿಯನ್ನು ಗೀತೆಯಂತೆ ಪಾರಾಯಣ ಮಾಡುತ್ತಾರೆ. ಅದರ ಅರ್ಥವನ್ನು ವ್ಯಾಖ್ಯಾನಗಳ ಮೂಲಕ ಮತ್ತೆ ಮತ್ತೆ ತಿಳಿದು ಪ್ರಕ್ರಿಯೆಯನ್ನು ರೂಢಿಸಿಕೊಳ್ಳುತ್ತಾರೆ. ಚಿಂತನ ಗೋಷ್ಠಿಯು ಈ ಗ್ರಂಥಗಳ ಆಧಾರದ ಮೇಲೆ ನಡೆಯುತ್ತದೆ.

ಈವರೆಗೆ ವ್ಯಾಕರಣಶಾಸ್ತ್ರದಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗಿದೆ : (೧) ಷಷ್ಠ್ಯರ್ಥಃ (೧೯೯೨) (೨) ತಸ್ಯ ಭಾವಸ್ತ್ವತಲೌ (೧೯೯೩) (೩)

ತದಾಸ್ಯಾಸ್ತ್ಯಸ್ಮಿನ್ನಿತಿ ಮತುಪ್ (೧೯೯೪) (೪) ಸಮರ್ಥಃಪದವಿಧಿಃ (೧೯೯೫) (೫) ಅರ್ಥವದಧಾತುರಪ್ರತ್ಯಯಃ ಪ್ರಾತಿಪದಿಕಮ್ (೧೯೯೬) (೬) ಸರೂಪಾಣಾಮೇಕಶೇಷ ಏಕವಿಭಕ್ತೌ (೧೯೯೭) (೭) ಪ್ರಾತಿಪದಿಕಾರ್ಥಃ (೧೯೯೮) (೮) ಅನಭಿಹಿತೇ (೧೯೯೯) (೯) ಕಾರಕೇ (೨೦೦೦).

ಈ ವರ್ಷ ವೈಶಾಖಮಾಸದಲ್ಲಿ ಕರ್ತೃಕರ್ಮಣೋಃ ಕೃತಿ ಎಂಬ ವಿಷಯವನ್ನು ಚಿಂತನೆಗೆ ಆಯ್ದುಕೊಳ್ಳಬೇಕೆಂದು ನಿಶ್ಚಯಿಸಿದೆ. ಈ ವಿಷಯಗಳನ್ನು ಈ ಕೆಳಗೆ ಸಂಕ್ಷೇಪವಾಗಿ ಪರಿಚಯಿಸಿದೆ.

(೧) ಷಷ್ಠ್ಯರ್ಥಃ (೧೯೯೨)

ಪ್ರಥಮಾ ದ್ವಿತೀಯಾ ಮುಂತಾದ ವಿಭಕ್ತಿಗಳಲ್ಲಿ ಷಷ್ಠೀ ವಿಭಕ್ತಿಯೂ ಒಂದು. ಷಷ್ಠೀ ಶೇಷೇ (ಪಾ.ಸೂ.೨.೩.೫೦) ಎಂದು ಪಾಣಿನಿಯು ಶೇಷಾರ್ಥದಲ್ಲಿ ಷಷ್ಠೀ ವಿಭಕ್ತಿಯು ಬರುವುದೆಂದು ತಿಳಿಸುತ್ತಾನೆ. ಶೇಷ ಎಂದರೆ ಕಾರಕ ಮತ್ತು ಪ್ರಾತಿಪದಿಕದ ಅರ್ಥದಿಂದ ಭಿನ್ನವಾದ ಸ್ವಸ್ವಾಮಿಭಾವ ಮುಂತಾದ ಸಂಬಂಧ. ಉದಾ- ರಾಜ್ಞಃ ಪುರುಷಃ. ಇಲ್ಲಿ ರಾಜನಿಗೂ ಪುರುಷನಿಗೂ ಇರುವ ಸಂಬಂಧವನ್ನು ಷಷ್ಠೀ ವಿಭಕ್ತಿಯು ತಿಳಿಸುತ್ತದೆ. ಶೇಷ ಎಂದರೆ ಉಕ್ತಾದನ್ಯಃ ಎಂದೂ ಉಪಯುಕ್ತಾದನ್ಯಃ ಎಂದೂ ಹೇಳುತ್ತಾರೆ. ಹಿಂದೆ ಹೇಳಿದ ಅಥವಾ ವಿಧಿಸಿದ ಕರ್ಮ, ಕರ್ತೃ ಮುಂತಾದ ಅರ್ಥಕ್ಕಿಂತ ಬೇರೆಯಾದುದು ಶೇಷ. ಕರ್ಮಾದಿಭ್ಯೋ ಯೇ ಅನ್ಯೇ ಅರ್ಥಾಃ ಸ ಶೇಷಃ ಎಂದು ಮಹಾಭಾಷ್ಯದಲ್ಲಿದೆ. ಅಲ್ಲಿಯೇ ಕರ್ಮಾದೀನಾಮವಿವಕ್ಷಾ ಶೇಷಃ ಎಂದು ಹೇಳಿದೆ. ಅನ್ಯೇ ಅರ್ಥಾಃ ಎಂಬುದಕ್ಕೆ ಕೈಯಟನು ಸ್ವಸ್ವಾಮಿಭಾವಾದಯಃ ಸಂಬಂಧಾಃ ಇತ್ಯರ್ಥಃ ಎಂದು ವಿವರಿಸುತ್ತಾನೆ. ಕ್ರಿಯಾಕಾರಾಕತ್ವರೂಪಸಂಬಂಧವು ಎಲ್ಲೆಡೆಯೂ ವಸ್ತುಸ್ಥಿತಿಯನ್ನು ಅನುಸರಿಸಿ ಇರುತ್ತದೆ. ಅದರಂತೆ ಸ್ವಸ್ವಾಮಿಭಾವ ಸಂಬಂಧವೂ ಇರುತ್ತದೆ. ಹೀಗಿರುವಾಗ ಸ್ವಸ್ವಾಮಿಭಾವ ಮುಂತಾದ ಸಂಬಂಧವನ್ನು ವಿವಕ್ಷೆ ಮಾಡಿದಾಗ ಕ್ರಿಯಾಕಾರಕತ್ವ ಸಂಬಂಧವು ಇದ್ದರೂ ವಿವಕ್ಷೆ ಮಾಡಲಾಗುವುದಿಲ್ಲ ಎಂದೂ ಕೈಯಟನು ಹೇಳುತ್ತಾನೆ.

೨. ತಸ್ಯ ಭಾವಸ್ತ್ವತಲೌ ಪಾ.ಸೂ.೫.೧.೧೧೯ (೧೯೯೩)

ಭಾವ ಶಬ್ಧವು ಸತ್ತಾ ಅಥವಾ ಸದ್ಭಾವ ಅಥವಾ ಧರ್ಮ ಎಂಬ ಅರ್ಥದಲ್ಲಿದೆ. ಧಾತ್ವರ್ಥಃ ಕೇವಲಃ ಶುದ್ಧೋ ಭಾವ ಇತ್ಯಭಿಧೀಯತೇ ಎಂಬುದು ಇಲ್ಲಿ ಸರಿಹೊಂದುವುದಿಲ್ಲ. ಪ್ರಕೃತಿಜನ್ಯ ಬೋಧದಲ್ಲಿ ಪ್ರಕಾರವು ಭಾವವೆನ್ನಲಾಗಿದೆ. ಉದಾಹರಣೆಗಾಗಿ ಘಟ ಎಂದರೆ ಕಂಬುಗ್ರೀವಾದಿಮಾನ್ ಎಂಬ ಬೋಧ-ವುಂಟಾಗುತ್ತದೆ. ಈ ಬೋಧದಲ್ಲಿ ಪ್ರಕಾರವಾಗಿರುವುದು ಕಂಬುಗ್ರೀವಾದಿಮತ್ತ್ವ.

ಇದನ್ನು ಸೂಚಿಸಿಲು ಷಷ್ಠ್ಯಂತವಾದುದಕ್ಕೆ ತ್ವ ಮತ್ತು ತಲ್ ಎರಡು ಪ್ರತ್ಯಯಗಳು ವಿಕಲ್ಪದಿಂದ ಬರುತ್ತವೆ ಎಂದು ಸೂತ್ರಾರ್ಥ. ಉದಾ- ಮನುಷ್ಯತ್ವ, ಮುಮುಕ್ಷತ್ವ ಮುಂ. ಮತ್ತು ಚಾರುತಾ, ಸಾಧುತಾ, ಉದಾರತಾ ಮುಂ.

(೩) ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್ ಪಾ.ಸೂ.೫.೨.೯೪. (೧೯೯೪)

ಮತುಪ್ ಎಂಬ ತದ್ಧಿತ ಪ್ರತ್ಯಯವು ವೈಶಿಷ್ಟ್ಯಾರ್ಥದಲ್ಲಿ ಬರುತ್ತದೆ. ಉದಾ- ಗಾವಃ ಅಸ್ಯ ಅಸ್ಮಿನ್ ವಾ ಸಂತೀತಿ ಗೋಮಾನ್. ಗೋವುಗಳು ಯಾವನಿಗೆ ಅಥವಾ ಯಾವನಲ್ಲಿ ಇವೆಯೋ ಅವನು ಗೋಮಾನ್. ಇಲ್ಲಿ ಒಂದು ಕಾರಿಕೆ ಪ್ರಸಿದ್ಧವಾಗಿದೆ.

ಭೂಮನಿಂದಾಪ್ರಶಂಸಾಸುನಿತ್ಯಯೋಗೇತಿಶಾಯನೇ!
ಸಂಬಂಧೇಸ್ತಿವಿವಕ್ಷಾಯಾಂ ಭವಂತಿ ಮತುಬಾದಯಃ

ಯವಮಾನ್ ಎಂಬಲ್ಲಿ ಭೂಮಾರ್ಥದಲ್ಲಿದೆ. ಬಹಳ ಜವೆಗೋಧಿಯುಳ್ಳವನು ಎಂದರ್ಥ. ನಿಂದಾರ್ಥದಲ್ಲಿ ಕಕುದಾವರ್ತಿನೀ ಕನ್ಯಾ (ಕತ್ತು ತಿರುಗಿಸುವ ಕನ್ಯೆ) ಎಂದು ಉದಾಹರಿಸಬಹುದು. ಉದರಿಣೀ ಕನ್ಯಾ (ಹೊಟ್ಟೆಯುಳ್ಳ ಕನ್ಯೆ) ಎಂಬಲ್ಲಿ ಅತಿಶಾಯನ (ಹೆಚ್ಚುಗಾರಿಕೆ) ಎಂಬರ್ಥವಿದೆ. ದಂಡೀ (ಕೋಲು ಹಿಡಿದು ಕೊಂಡಿರುವವನು) ಎಂಬಲ್ಲಿ ಸಂಬಂಧಾರ್ಥದಲ್ಲಿ ಇದೆ.

(೪) ಸಮರ್ಥಃ ಪದವಿಧಿಃ ಪಾ.ಸೂ.೧.೧ (೧೯೯೫)

ಪದಸಂಬಂಧವಾದ ವಿಧಿಯು ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಸಾಮರ್ಥ್ಯವು ವ್ಯಪೇಕ್ಷಾ ಮತ್ತು ಏಕಾರ್ಥೀಭಾವ ಎಂದು ಎರಡು ವಿಧವಾಗಿದೆ. ಸಮಾಸದ ಸ್ಥಳದಲ್ಲಿ ಏಕಾರ್ಥಿಭಾವವೂ, ವಾಕ್ಯದಲ್ಲಿ ಅಪೇಕ್ಷಾ ಸಾಮರ್ಥ್ಯವೂ ಇರುತ್ತದೆ. ಸಂಸ್ಕೃತದಲ್ಲಿ ಹಾಗೂ ಅದನ್ನು ಆಶ್ರಯಿಸಿರುವ ಭಾರತೀಯ ಭಾಷೆಗಳಲ್ಲಿ ಸಮಾಸ ಎಂಬುದು ಒಂದು ವಿಶೇಷವಾಗಿದೆ. ಎರಡು ಅಥವಾ ಹೆಚ್ಚು ಶಬ್ದಗಳು ಸೇರಿ ಸಮಸ್ತ ಶಬ್ದವಾಗುವುದೇ ಸಮಾಸ. ಆ ಶಬ್ದವು ಒಟ್ಟಿನಲ್ಲಿ ಒಂದೇ ಅರ್ಥವನ್ನು ಹೇಳುತ್ತವೆ. ಉದಾ- ರಾಜಪುರುಷಃ.

(೫) ಅರ್ಥವದಧಾತುರಪ್ರತ್ಯಯಃ ಪ್ರಾತಿಪದಿಕಮ್ ಪಾ.ಸೂ ೧.೨.೪೫ (೧೯೯೬)

ಪ್ರಕೃತಿ, ಪ್ರತ್ಯಯ ಎಂದು ನಾಮಪದವನ್ನು ವಿಗ್ರಹಿಸಬಹುದು. ಪ್ರಕೃತಿಯನ್ನು ಪ್ರಾತಿಪದಿಕವೆಂದೂ ಹೇಳುತ್ತಾರೆ. ಅದು ಧಾತು-ಪ್ರತ್ಯಯಗಳಿಂದ ಭಿನ್ನವಾಗಿ

ಸಾರ್ಥಕ ಶಬ್ದವಾಗಿರುತ್ತದೆ ಎಂದು ಪ್ರಾತಿಪದಿಕ ಎಂಬ ಸಂಜ್ಞೆಯನ್ನು ಈ ಸೂತ್ರವು ಹೇಳುತ್ತದೆ. ಈ ಸೂತ್ರಕ್ಕೆ ಒಂದು ಒಗಟು ಪ್ರಸಿದ್ಧವಾಗಿದೆ.

ಕೀದೃಗ್ ವಿದ್ವಾನ್ ಬ್ರೂತೇ ಕೋ ರೋಗೀ ಕಶ್ಚ ನಾಸ್ತಿಕಃ! ಕೀದೃಕ್ಚಂದ್ರಂ ನ ಪಶ್ಯಂತಿ ಸೂತ್ರಂ ತತ್ ಪಾಣಿನೇರ್ವದ!!

(ವಿದ್ವಾಂಸನು ಎಂತು ಮಾತನಾಡುತ್ತಾನೆ? ಯಾವನು ರೋಗಿ? ನಾಸ್ತಿಕನು ಯಾವನು? ಯಾವ ಚಂದ್ರನನ್ನು ಕಾಣಲಾಗದು? ಆ ಪಾಣಿನಿ ಸೂತ್ರವನ್ನು ಹೇಳು) ಇದಕ್ಕೆ ಉತ್ತರವಾಗಿ ವಿದ್ವಾಂಸನು ಅರ್ಥವನ್ನು ಮಾಡುತ್ತಾನೆ, ಧಾತುಬಲವಿಲ್ಲದವನು ರೋಗಿ, ನಂಬಿಕೆಯಿಲ್ಲದನು ನಾಸ್ತಿಕನು, ಪ್ರತಿಪದೆಯ ಚಂದ್ರನನ್ನು ನೋಡುವುದಿಲ್ಲ ಎಂದು ಈ ಸೂತ್ರದ ಒಂದೊಂದು ಶಬ್ದವನ್ನು ಹೇಳಬಹುದು.

(೬) ಸರೂಪಾಣಾಮೇಕಶೇಷ ಏಕ ವಿಭಕ್ತೌ ಪಾ.ಸೂ. ೨.೨.೬೪ (೧೯೬೭)

ಒಂದು ವಿಭಕ್ತಿಯಲ್ಲಿ ಸಮಾನ ರೂಪಗಳೇ ಕಾಣುತ್ತಿರುವವುಗಳ ನಡುವೆ ಒಂದೇ ಉಳಿಯುತ್ತದೆ ಹಾಗೂ ಬೇರೆಯದು ಲೋಪವಾಗುತ್ತದೆ. ಯಾವುದು ಉಳಿದಿರುವುದೋ ಅದು ಲೋಪವಾದುದರ ಅರ್ಥವೆಂದು ಹೇಳುತ್ತದೆ. ಉದಾಹರಣೆಗಾಗಿ (ಶ್ರೀ) ರಾಮ ಮತ್ತು (ಪರಶು) ರಾಮ=ಇಬ್ಬರು ರಾಮರು (ರಾಮೌ) ಅಥವಾ ಶ್ರೀ ರಾಮ, (ಪರಶು) ರಾಮ ಮತ್ತು (ಬಲ) ರಾಮ=ರಾಮರು ಎಂಬಲ್ಲಿ ಒಂದೇ ಪ್ರಥಮಾ ವಿಭಕ್ತಿಯಿದೆ ಹಾಗೂ ಅವುಗಳು ಒಂದೇ ಶಬ್ದರೂಪವನ್ನು ಹೊಂದಿವೆ. ಆದ್ದರಿಂದ ಒಂದೇ ಉಳಿಯುವುದಲ್ಲದೇ ಉಳಿದುದು ಲೋಪವಾದುದರ ಅರ್ಥವನ್ನೂ ತಿಳಿಸುತ್ತದೆ. ಈ ಉದಾಹರಣೆಗಳಲ್ಲಿ ಇಬ್ಬರು ರಾಮರು (ರಾಮೌ) ಎಂದರೆ, ಶ್ರೀರಾಮಪರಶುರಾಮರು ಎಂದರ್ಥ. ರಾಮರು (ರಾಮಾಃ) ಎಂದರೆ ಶ್ರೀರಾಮ ಪರಶುರಾಮ ಬಲರಾಮರು ಎಂದರ್ಥ.

(೭) ಪ್ರಾತಿಪದಿಕಾರ್ಥಃ(೧೯೬೮)

ಪ್ರಾತಿಪದಿಕಾರ್ಥಲಿಂಗಪರಿಮಾಣವಚನಮಾತ್ರೇ ಪ್ರಥಮಾ (೨.೩.೪೬) ಎಂಬ ಪಾಣಿನಿಯ ಸೂತ್ರದಲ್ಲಿರುವ ಪ್ರಾತಿಪದಿಕಾರ್ಥ ಎಂಬುದಕ್ಕೆ ನಿಯತೋಪಸ್ಥಿತಿಕ ಎಂದರ್ಥ. ಯಾವ ಪ್ರಾತಿಪದಿಕವನ್ನು ಉಚ್ಚರಿಸುವಾಗ ಯಾವ ಅರ್ಥವು ನಿಯಮದಿಂದ (ಅವ್ಯಭಿಚರಿತವಾಗಿ) ಬರುವುದೋ ಅದು ಪ್ರಾತಿಪದಿಕಾರ್ಥ. ಲಿಂಗರಹಿತವಾದ ಅವ್ಯಯ ಶಬ್ದಗಳೂ, ಒಂದೇ ಲಿಂಗದ ಶಬ್ದಗಳೂ ಕೇವಲ ಪ್ರಾತಿಪದಿಕಾರ್ಥದಲ್ಲಿ ಪ್ರಥಮಾ ವಿಭಕ್ತಿಯು ಬರುವುದೆಂಬುದಕ್ಕೆ ಉದಾಹರಣೆಗಳು.

ಪ್ರಾತಿಪದಿಕಾರ್ಥ ಅನೇಕ ವಿಧವಾಗಿದೆ- (೧) ಜಾತಿ ಅಥವಾ ವಿಶೇಷಣ (೨) ದ್ರವ್ಯ ಅಥವಾ ವ್ಯಕ್ತಿ (೩) ಸ್ತ್ರೀಪುಂನಪುಂಸಕ ಲಿಂಗ (೪) ಒಂದು ಎರಡು ಮುಂತಾದ ಸಂಖ್ಯೆ ಮತ್ತು (೫) ಕರ್ತೃ, ಕರ್ಮ ಕರಣ ಮುಂತಾದ ಕಾರಕ. ಇದು ಮಹಾಭಾಷ್ಯಕಾರ ಪತಂಜಲಿ ಮುನಿಯ ಮತ. ಇದನ್ನು ಸ್ವೀಕರಿಸಿದರೆ, ಸೂತ್ರದಲ್ಲಿ ಲಿಂಗವಚನ(ಸಂಖ್ಯೆ)ಗಳನ್ನು ಪ್ರತ್ಯೇಕವಾಗಿ ಹೇಳಿರುವುದು ವ್ಯರ್ಥವಾಗುತ್ತದೆ. ಈ ಕಾರಣದಿಂದ ಭಟ್ಟೋಜಿ ದೀಕ್ಷಿತರು ನಿಯತೋಪಸ್ಥಿತಿಕಃ ಪ್ರಾತಿಪದಿಕಾರ್ಥಃ ಎಂದು ವ್ಯಾಖ್ಯಾನಿಸುತ್ತಾರೆ. ಹಾಗಾದರೆ ಜಾತಿ ಮತ್ತು ವ್ಯಕ್ತಿ ಪ್ರಾತಿಪದಿಕಾರ್ಥ-ಗಳೆಂದಾಗುವುದು.

ವೈಯಾಕರಣ ಭೂಷಣಸಾರದಲ್ಲಿ ಕೌಂಡಭಟ್ಟನು ಹೇಳುತ್ತಾನೆ.

ಏಕಂ ದ್ವಿಕಂ ತ್ರಿಕಂಚೈವಚತುಷ್ಕಂ ಪಂಚಕಂ ತಥಾ । ನಾಮಾರ್ಥ ಇತಿ ಸರ್ವೇಽಮೀ ಪಕ್ಷಾಃ ಶಾಸ್ತ್ರೇ ನಿರೂಪಿತಾಃ!! ವೈ.ಭೂ.ಸಾ.ಕಾರಿಕೆ ೨೫

ಜಾತಿಯೊಂದೇ ಪ್ರಾತಿಪದಿಕಾರ್ಥವೆಂದು ವಾಜಪ್ಯಾಯನ ಎಂಬ ಆಚಾರ್ಯನು ಹೇಳುತ್ತಾನೆ. ಇದು ಸರೂಪಾಣಾಮೇಕಶೇಷ ಏಕವಿಭಕ್ತೌ ಎಂಬ ಸೂತ್ರದ ಭಾಷ್ಯದಲ್ಲಿ ಸ್ಪಷ್ಟವಾಗಿದೆ. ಆಕೃತಿಂ ವಾಜಪ್ಯಾಯನೋ ಜಾತಿರೇವ ಪ್ರಾತಿಪದಿಕಾರ್ಥಃ । ಲಾಘವೇನ ತಸ್ಯಾ ಏವ ವಾಚ್ಯತ್ವೌಚಿತ್ವಾತ್ ।

ಆದರೆ ವ್ಯಕ್ತಿಯೇ ಪ್ರಾತಿಪದಿಕಾರ್ಥವೆಂದು ವ್ಯಾಡಿ ಎಂಬ ಆಚಾರ್ಯನು ಹೇಳುತ್ತಾನೆ. ಈ ಮತದಲ್ಲಿ ಜಾತಿವಿಶಿಷ್ಟ ವ್ಯಕ್ತಿಯ ಬೋಧವು ಪ್ರಾತಿಪದಿಕದಿಂದ ಆಗುತ್ತದೆ. ಜಾತಿ, ವ್ಯಕ್ತಿ ಮತ್ತು ಲಿಂಗ ಪ್ರಾತಿಪದಿಕಾರ್ಥವೆಂದು ವೃತ್ತಿಕಾರ ಕಾತ್ಯಾಯನ ಮುನಿಯು ಹೇಳುತ್ತಾನೆ.

ಭಾಷ್ಯಕಾರ ಪತಂಜಲಿಮುನಿಯು ಸ್ವಾರ್ಥ, ದ್ರವ್ಯ, ಲಿಂಗ, ಸಂಖ್ಯೆ, ಮತ್ತು ಕಾರಕ ಪ್ರಾತಿಪದಿಕಾರ್ಥ ಎಂದು ಹೇಳುತ್ತಾನೆ. ಸ್ವಾರ್ಥೋ ದ್ರವ್ಯಂ ಚ ಲಿಂಗಂ ಚ ಸಂಖ್ಯಾ ಕರ್ಮಾದಿರೇವ ಚ । ಅಮೀ ಪಂಚೈವ ನಾಮಾರ್ಥಾಸ್ತ್ರಯಃ ಕೇಷಾಂಚಿದಗ್ರಿಮಃ ॥

(೮) ಅನಭಿಹಿತೇ ಪಾ.ಸೂ.೨.೩.೧. (೧೯೯)

ಇದು ಅಧಿಕಾರ ಸೂತ್ರ. ಅದು ತನ್ನ ವ್ಯಾಪ್ತಿಯಲ್ಲಿ ಬರುವ ಮುಂದಿನ ಸೂತ್ರದ ಅರ್ಥಗಳನ್ನು ನಿಯಂತ್ರಿಸುತ್ತದೆ. ಉದಾಹರಣೆಗಾಗಿ ಕರ್ಮಣಿ ದ್ವಿತೀಯಾ ಎಂಬ ಸೂತ್ರದಲ್ಲಿ, ಕರ್ಮಣಿ ಅನಭಿಹಿತೇ (ಕರ್ಮವು ಅನುಕ್ತವಾದಾಗ ಅಥವಾ ಹೇಳಲ್ಪಡದಿರುವಾಗ) ದ್ವಿತೀಯಾ ವಿಭಕ್ತಿ ಬರುತ್ತದೆ ಎಂದರ್ಥವಾಗುತ್ತದೆ. ಉದಾ:

ಹರಿಂ ಸೇವತೇ. ಕರ್ಮವು ಆಖ್ಯಾತ ಮುಂತಾದ ಪ್ರತ್ಯಯದಿಂದಲೂ ಹೇಳಲ್ಪಡುವು-ದುಂಟು. ಹಾಗಾದರೆ ಅಲ್ಲಿ ಪ್ರಥಮಾವಿಭಕ್ತಿ ಬರುತ್ತದೆ, ಉದಾ- ಹರಿಃ ಸೇವ್ಯತೇ.

(೯) ಕಾರಕೇ ಪಾ.ಸೂ.೧.೪..೨೩. (೨೦೦೦)

ಇದೂ ಅಧಿಕಾರ ಸೂತ್ರ. ತನ್ನ ಸ್ಥಳದಲ್ಲಿ ವಾಕ್ಯಾರ್ಥವಿಲ್ಲದೆ ಬೇರೆಯ ಸ್ಥಳದಲ್ಲಿ ವಾಕ್ಯಾರ್ಥಜ್ಞಾನವನ್ನುಂಟುಮಾಡುವುದು ಅಧಿಕಾರ. ಸ್ವದೇಶೇ ವಾಕ್ಯಾರ್ಥ-ಬೋಧಕತ್ವಶೂನ್ಯತ್ವೇ ಸತಿ ಪರದೇಶೇ ವಾಕ್ಯಾರ್ಥಬೋಧಜನಕತ್ವಂ ಎಂದು ಲಕ್ಷಣ. ಸೂತ್ರಗಳು ಆರುವಿಧ- ಸಂಜ್ಞಾ ಚ ಸೂತ್ರಮುಚ್ಯತೇ. ಸಂಜ್ಞಾ, ಪರಿಭಾಷಾ, ವಿಧಿ, ನಿಯಮ, ಅತಿದೇಶ ಮತ್ತು ಅಧಿಕಾರ ಇವು ಆರು ಬಗೆಯ ಸೂತ್ರಗಳು. ಇವುಗಳಲ್ಲಿ ಕಾರಕೇ ಎಂಬುದು ಅಧಿಕಾರ ಸೂತ್ರ. ಇಲ್ಲಿ ಶಬ್ದದಲ್ಲಿ ಇರುವ ಸಪ್ತಮೀ ವಿಭಕ್ತಿಯು ಪ್ರಥಮಾ ವಿಭಕ್ತಿಯ ಅರ್ಥವನ್ನು ಪ್ರತಿಪಾದಿಸುತ್ತದೆ. ತತ್ರಹಿ ವ್ಯತ್ಯಾಸೇನ ಪ್ರಥಮಾರ್ಥೇ ಸಪ್ತಮೀ ಎಂದು ತತ್ತ್ವಬೋಧಿನಿಯಲ್ಲಿದೆ. ಅಥವಾ ಕಾರಕೇ ಎಂಬಲ್ಲಿರುವ ಸಪ್ತಮೀ ವಿಭಕ್ತಿಯನ್ನು ಪ್ರಥಮಾ ವಿಭಕ್ತಿಯಾಗಿ ಪರಿವರ್ತಿಸಿ ಮುಂದಿನ ಸೂತ್ರಗಳಲ್ಲಿ ಅನ್ವಯವನ್ನು ಮಾಡಲಾಗುತ್ತದೆ. ಉದಾಹರಣೆಗಾಗಿ ಕರ್ತುರೀಪ್ಸಿತತಮಂ ಕರ್ಮ ಎಂಬಲ್ಲಿ ಕರ್ತುಃ ಈಪ್ಸಿತತಮಂ ಕಾರಕಂ ಕರ್ಮಸಂಜ್ಞಂಸ್ಯಾತ್ ಎಂದು ಅರ್ಥೈಸಲಾಗುತ್ತದೆ.

ಕಾರಕವೆಂದರೆ ಕ್ರಿಯೇಷು ಜನಕ ಅಥವಾ ನಿಷ್ಪಾದಕ. ಕ್ರಿಯಾಜನಕತ್ವ ಅಥವಾ ಕ್ರಿಯಾನಿಷ್ಪಾದಕತ್ವವು ಕಾರಕದ ಲಕ್ಷಣ. ಮಹಾಭಾಷ್ಯದಲ್ಲಿ ಕರೋತಿ ಕ್ರಿಯಾಂ ನಿರ್ವರ್ತಯತಿ ಎಂದು ಕಾರಕಶಬ್ದದ ವ್ಯುತ್ಪತ್ತಿಯನ್ನು ತಿಳಿಸಲಾಗಿದೆ. ಬ್ರಾಹ್ಮಣಸ್ಯ ಪುತ್ರಂ ಪಂಥಾನಂ ಪೃಚ್ಛತಿ (ಬ್ರಾಹ್ಮಣನ ಮಗನ ಹತ್ತಿರ ದಾರಿಯನ್ನು ಕೇಳುತ್ತಾನೆ ಎಂಬಲ್ಲಿ ಬ್ರಾಹ್ಮಣನು ಕಾರಕವಲ್ಲ, ಬ್ರಾಹ್ಮಣನ ಪುತ್ರ ಕಾರಕ. ನ್ಯಾಯಶಾಸ್ತ್ರದಲ್ಲಿ ಹೇಳುವಂತೆ ಬ್ರಾಹ್ಮಣನು ಅನ್ಯಥಾಸಿದ್ಧನಾಗುತ್ತಾನೆ.

(೧೦) ಕರ್ತೃಕರ್ಮಣೋಃ ಕೃತಿ ಪಾ.ಸೂ.೨.೩.೬೫ (೨೦೦೧)

ಕೃದ್‌ಯೋಗವಿರುವಾಗ ಕರ್ತೃ ಮತ್ತು ಕರ್ಮ ಎಂಬ ಅರ್ಥದಲ್ಲಿ ಷಷ್ಠೀ ವಿಭಕ್ತಿಯು ಬರುತ್ತದೆ. ಉದಾ- ಕೃಷ್ಣಸ್ಯ ಕೃತಿಃ, ಜಗತಃ ಕರ್ತಾ. ವಾರ್ತಿಕಕಾರರು ಕರ್ಮ ಎಂಬರ್ಥದಲ್ಲಿ ಎಂಬುದನ್ನು ಸ್ವಲ್ಪ ಪರಿಷ್ಕರಿಸುತ್ತಾರೆ. ಗುಣಕರ್ಮ ಎಂಬರ್ಥದಲ್ಲಿ ಷಷ್ಠೀ ವಿಭಕ್ತಿಯು ವಿಕಲ್ಪವಾಗಿ ಬರುತ್ತದೆ. ಉದಾ- ನೇತಾ ಅಶ್ವಸ್ಯ ಸ್ರುಘ್ನಸ್ಯ ಎಂದು ಪ್ರಯೋಗಿಸಿರುವಂತೆ, ನೇತಾ ಅಶ್ವಸ್ಯ ಸ್ರುಘ್ನಂ ಎಂದೂ ಪ್ರಯೋಗ ಮಾಡಬಹುದು.

ಸೂತ್ರದಲ್ಲಿ ಕೃತಿ (ಕೃದ್ಯೋಗವಿರುವಾಗ) ಎಂದು ಹೇಳಿರುವುದರಿಂದ ತದ್ಧಿತ ಯೋಗವಿರುವಾಗ ಷಷ್ಠೀವಿಭಕ್ತಿಯು ಬರುವುದಿಲ್ಲ. ಉದಾ- ಕೃತಪೂರ್ವೀ ಕಟಂ.

ಮೀಮಾಂಸಾ ಶಾಸ್ತ್ರ

ವ್ಯಾಕರಣವು ಪದಶಾಸ್ತ್ರವಾಗಿ ಮೀಮಾಂಸೆಯು ವಾಕ್ಯಶಾಸ್ತ್ರವಾಗಿರುತ್ತದೆ. ಮೀಮಾಂಸಾ ಎಂದರೆ ಪೂಜ್ಯವಿಚಾರ ಎಂದರ್ಥ. ವೇದವಾಕ್ಯಗಳ ಅರ್ಥವನ್ನು ನಿರ್ಣಯ ಮಾಡುವುದರಿಂದ ಮೀಮಾಂಸೆಯು ಪೂರ್ಣ ವಿಚಾರವನ್ನು ಮಾಡುವ ಶಾಸ್ತ್ರವಾಗಿರುತ್ತದೆ. ಇಲ್ಲಿ ಹನ್ನೆರಡು ಅಧ್ಯಾಯಗಳಿರುವ ಸೂತ್ರಗ್ರಂಥವಿದೆ. ಜೈಮಿನಿ ಮುನಿಯು ರಚಿಸಿರುವ ಆ ಗ್ರಂಥವನ್ನು ದ್ವಾದಶಲಕ್ಷಣೀ ಎನ್ನುತ್ತಾರೆ. ಶಬರಸ್ವಾಮಿ ಎಂದು ಪ್ರಸಿದ್ಧನಾದ ಆದಿತ್ಯದಾಸನು ಸೂತ್ರಗಳಿಗೆ ಬರೆದ ವಿಸ್ತೃತವಾದ ಭಾಷ್ಯವಿದೆ. ಕುಮಾರಿಲ ಭಟ್ಟರು ಭಾಷ್ಯವನ್ನು ಶ್ಲೋಕವಾರ್ತಿಕ, ತಂತ್ರವಾರ್ತಿಕ ಮತ್ತು ಟುಪ್‌ಟೀಕಾ ಎಂಬ ಮೂರು ಗ್ರಂಥಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಅವರ ಶಿಷ್ಯನಾದರೂ ಗುರುವೆಂದು ಪ್ರಖ್ಯಾತನಾದ ಪ್ರಭಾಕರ ಮಿಶ್ರನು ಬೃಹತೀ ಮತ್ತು ಲಘ್ವೀ ಎಂಬ ಟೀಕೆಗಳನ್ನು ಭಾಷ್ಯದ ಮೇಲೆ ಬರೆದಿದ್ದಾನೆ. ಮುರಾರಿ ಮಿಶ್ರನು ಬರೆದ ವ್ಯಾಖ್ಯಾನ ಪೂರ್ಣವಾಗಿ ಲುಪ್ತವಾಗಿದೆ. ಗುರುಮತವೂ ಅಧ್ಯಯನ ಪರಂಪರೆಯಲ್ಲಿಲ್ಲ. ಭಾಟ್ಟಮತವೊಂದೇ ವ್ಯವಹಾರೇ ಭಾಟ್ಟನಯಃ ಎಂದು ಶಾಸ್ತ್ರವಿದರ ಆದರಕ್ಕೆ ಪಾತ್ರವಾಗಿ ಬೆಳೆದು ಬಂದಿದೆ. ಪಾರ್ಥಸಾರಥಿ ಮಿಶ್ರ, ಖಂಡದೇವ ಮುಂತಾದ ಪಂಡಿತರ ಸಂಗ್ರಹ ಗ್ರಂಥಗಳಾದ ಶಾಸ್ತ್ರದೀಪಿಕೆ, ಭಾಟ್ಟದೀಪಿಕೆ, ಭಾಟ್ಟರಹಸ್ಯ ಮುಂತಾದವು ಈ ಶಾಸ್ತ್ರದಲ್ಲಿ ಪ್ರಸಿದ್ಧವಾಗಿದ್ದು ಅವುಗಳ ಆಧಾರದ ಮೇಲೆ ಚಿಂತನೆ ನಡೆಯುತ್ತದೆ.

(೧) ಆರ್ಥೀಭಾವನಾಯಾ ಮುಖ್ಯವಿಶೇಷತ್ವವಿಚಾರಃ (೧೯೯೨)

ಒಂದು ವಾಕ್ಯದಲ್ಲಿರುವ ಅನೇಕ ಶಬ್ದಗಳಲ್ಲಿ ಒಂದು ಶಬ್ದವು ಪ್ರಧಾನ ಅರ್ಥವನ್ನು ಭೋಧಿಸುತ್ತದೆ. ಉಳಿದ ಶಬ್ದಗಳು ಅದಕ್ಕೆ ಸಾಕ್ಷಾತ್ತಾಗಿಯೋ ಪರಂಪರೆಯಾಗಿಯೋ ವಿಶೇಷಣವಾಗಿರುವ ಅರ್ಥವನ್ನು ಬೋಧಿಸುತ್ತವೆ. ಪ್ರಧಾನವಾದ ಅರ್ಥವು ಯಾವುದು ಎಂಬ ವಿಷಯದಲ್ಲಿ ವೈಯಾಕರಣರು ಧಾತ್ವರ್ಥವೆಂದೂ, ನೈಯಾಯಿಕರು ಕರ್ತೃ ಎಂದೂ ಮೀಮಾಂಸಕರು ಭಾವನಾ(ಕೃತಿ)ಎಂದು ಹೇಳುತ್ತಾರೆ. ಭಾವನಾ ಎಂದರೆ ಇಲ್ಲಿ ಪ್ರವೃತ್ತಿ ಅಥವಾ ಆರ್ಥೀಭಾವನಾ ಎಂದೇ ಅರ್ಥ. ಮೀಮಾಂಸಕರಲ್ಲಿ ಭಾಟ್ಟಮತದಲ್ಲಿ ಮಾತ್ರವೇ ಈ ಅಭಿಪ್ರಾಯವಿದ್ದು, ಗುರುಮತದಲ್ಲಿ ನಿಯೋಗವೇ ಪ್ರಧಾನವೆಂದು ಹೇಳುತ್ತಾರೆ.

ಒಂದು ವಾಕ್ಯದಲ್ಲಿ ಕರ್ತೃ ಮತ್ತು ನಿಯೋಗ ನಿಶ್ಚಿತವಾಗಿರುವ ಬಗ್ಗೆ ಸಂಶಯವಿದೆ. ಪ್ರಕೃತಿ-ಪ್ರತ್ಯಯಗಳ ಅರ್ಥಗಳಲ್ಲಿ ಪ್ರತ್ಯಯಾರ್ಥವೇ ಪ್ರಧಾನವೆಂದು ಹೇಳಬೇಕಾಗಿದೆ. ಆದ್ದರಿಂದ ಎಲ್ಲಾ ವಾಕ್ಯಗಳಲ್ಲಿರುವ ಪ್ರತ್ಯಯಾರ್ಥ ಆಥವಾ ಆರ್ಥೀಭಾವನಾ ಪ್ರಧಾನವಾದುದು ಎಂದು ಕುಮಾರಿಲ ಭಟ್ಟರನ್ನು ಅನುಸರಿಸುವ ಮೀಮಾಂಸಕರು ವಾದಿಸುತ್ತಾರೆ.

(೨) ದೇವತಾ ಸ್ವರೂಪಮ್ (೧೯೯೩)

ವೇದದಲ್ಲಿ ಇಂದ್ರ, ರುದ್ರ ಮುಂತಾದ ಅನೇಕ ದೇವತೆಗಳ ಉಲ್ಲೇಖವಿದೆ. ಆ ದೇವತೆಗಳನ್ನು ಉದ್ದೇಶಿಸಿ ಯಜ್ಞವನ್ನು ಮಾಡುವ ರೂಢಿಯು ಇದೆ. ಆದರೆ ಅಗ್ನಿಯಲ್ಲಿ ಹೋಮ ಮಾಡುವುದು ಕಾಣುವುದೇ ಹೊರತು ದೇವತೆಗಳು ಅಲ್ಲಿಗೆ ಬರುವುದಾಗಲಿ, ಯಜ್ಞದ ಫಲವನ್ನು ಯಜಮಾನನಿಗೆ ನೀಡುವುದಾಗಲೀ ಕಾಣುವುದಿಲ್ಲ. ಹಾಗಾದರೆ ದೇವತೆಗಳ ಸ್ವರೂಪವೇನು ಎಂಬ ಪ್ರಶ್ನೆಗೆ ಮೀಮಾಂಸಕರು ಶಬ್ದವೇ ದೇವತೆಯ ರೂಪವೆನ್ನುತ್ತಾರೆ. ದೇವತೆಗಳ ವರ್ಣನೆ ವೇದ, ಪುರಾಣ ಮುಂತಾದವುಗಳಲ್ಲಿ ಲಭ್ಯವಿದೆಯಾದರೂ ಅದು ಕೇವಲ ಕಲ್ಪನೆ, ದೇವತೆಗಳು ಫಲವನ್ನು ಕೊಡುವುದಿಲ್ಲ. ಯಜಮಾನನಿಗೆ ಕರ್ಮದ ಮಹಾತ್ಮ್ಯದಿಂದ ಈಗಲೋ ಕಾಲಾಂತರದಲ್ಲಿಯೋ ಜನ್ಮಾಂತರದಲ್ಲಿಯೋ ಫಲವು ದೊರೆಯುತ್ತದೆ. ಮೀಮಾಂಸಕರ ಈ ಮತವನ್ನು ವೇದಾಂತಗಳೂ ಇತರರೂ ತಿರಸ್ಕರಿಸುತ್ತಾರೆ. ಅವರು ದೇವತೆಗಳಿಗೆ ವಿಗ್ರಹವಿದೆಯೆಂದೂ ಅವು ಫಲವನ್ನು ಕೊಡುವವೆಂದೂ ವಾದಿಸುತ್ತಾರೆ.

(೩) ಅಧಿಕಾರಃ (೧೯೯೪)

ವೇದದಲ್ಲಿ ಸ್ವರ್ಗ, ಪಶು, ಮಂತ್ರ ಮುಂತಾದ ಫಲಗಳನ್ನು ಪಡೆಯಲು ಅನೇಕ ಕರ್ಮಗಳನ್ನು ನಿರೂಪಿಸಲಾಗಿದೆ. ಇದರಂತೆ ನರಕ, ಹೀನಜನ್ಮ, ದುಃಖ ಮುಂತಾದ ದುಷ್ಫಲಗಳನ್ನು ದೂರಮಾಡಲು ಅನೇಕ ನಿಷೇಧಗಳನ್ನು ಹೇಳಿದೆ. ಅವಶ್ಯವಾಗಿ ಮಾಡಲೇಬೇಕಾದ ನಿತ್ಯಕರ್ಮವೆಂಬ ಕೆಲವು ಕರ್ಮಗಳೂ ಇವೆ. ಈ ಕರ್ಮಗಳನ್ನು ಯಾರು ಮಾಡಬೇಕು ಎಂಬುದನ್ನು ವಿವರಿಸುವುದು ಅಧಿಕಾರಲಕ್ಷಣದ ಉದ್ದೇಶ. ಅಧಿಕಾರವೆಂದರೇನು? ಮನುಷ್ಯರಿಗೆ ಎಲ್ಲರಿಗೂ ಅಧಿಕಾರವಿದೆಯೇ? ದೇವತೆಗಳಿಗೆ ಅಧಿಕಾರವಿದೆಯೇ? ಋಷಿಗಳು ಯಜ್ಞ ಮಾಡಬಹುದೇ? ಎಂದು ಮುಂತಾಗಿ ಅಧಿಕಾರದ ಚರ್ಚೆ ಮುಂದುವರೆಯುತ್ತದೆ.

ಫಲವನ್ನು ಪಡೆಯಲು ಬಯಸುವವನು, ಶರೀರದಾರ್ಢ್ಯವಿರುವವನು, ಯಜ್ಞವನ್ನು ತಿಳಿದವನು ಹಾಗೂ ಶಾಸ್ತ್ರದಲ್ಲಿ ನಿಷಿದ್ಧನಾಗಿಲ್ಲದಿರುವವನು ಕರ್ಮವನ್ನು ಅನುಷ್ಠಾನ ಮಾಡಬೇಕು ಎಂದು ಸಾರಾಂಶವನ್ನು ಹೇಳಲಾಗಿದೆ. ಜೈಮಿನಿಯ ಸೂತ್ರಗ್ರಂಥದಲ್ಲಿ ೬ನೇ ಅಧ್ಯಾಯದಲ್ಲಿ ಅಧಿಕಾರದ ವಿಚಾರವಿದೆ.

(೪) ಬಲಾಬಲಾಧಿಕರಣಂ (೧೯೫)

ಸಾವಿರ ಅಧಿಕರಣ ಅಥವಾ ನ್ಯಾಯಗಳನ್ನು ಹೊಂದಿರುವ ಜೈಮಿನಿಯ ಮೀಮಾಂಸಾಶಾಸ್ತ್ರದಲ್ಲಿ ಬಲಾಬಲಾಧಿಕರಣ ಮೂರನೆಯ ಅಧ್ಯಾಯದಲ್ಲಿದೆ. ವೈದಿಕ ಕರ್ಮಗಳಲ್ಲಿ ಯಾವುದು ಅಂಗ, ಯಾವುದು ಪ್ರಧಾನ ಎಂಬ ಚರ್ಚೆ ಅಲ್ಲಿ ಪ್ರಧಾನವಾಗಿ ಬರುತ್ತದೆ. ದರ್ಶಪೂರ್ಣಮಾಸಗಳು ಪ್ರಧಾನ, ಪ್ರಯಾಜ-ಅನುಯಾಜ ಮುಂತಾದವು ಅಂಗಗಳು. ಈ ಅಂಗಪ್ರಧಾನಭಾವವನ್ನು ಆರು ಪ್ರಮಾಣಗಳಿಂದ ನಿರ್ಣಯಿಸುತ್ತಾರೆ. ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ ಮತ್ತು ಸಮಾಖ್ಯೆ - ಇವು ಅಲ್ಲಿಯ ಆರು ಪ್ರಮಾಣಗಳು. ಒಂದೇ ವಿಷಯದಲ್ಲಿ ಒಂದಕ್ಕಿಂತ ಹೆಚ್ಚು ಪ್ರಮಾಣಗಳು ಬೇರೆ ಬೇರೆಯಾಗಿ ಬೋಧಿಸುತ್ತಿರುವಾಗ ಯಾವುದನ್ನು ಸ್ವೀಕರಿಸುವುದು? ಯಾವುದನ್ನು ಬಿಡುವುದು? ಎಂಬ ಪ್ರಶ್ನೆ ಏಳುತ್ತದೆ. ಬಲಾಬಲಾಧಿಕರಣವು ಈ ಪ್ರಶ್ನೆಯನ್ನು ಬಗೆಹರಿಸಿ ಪ್ರಮಾಣಗಳ ಪ್ರಾಬಲ್ಯ-ದೌರ್ಬಲ್ಯಗಳನ್ನು ವಿವರಿಸುತ್ತದೆ. ಆರು ಪ್ರಮಾಣಗಳಲ್ಲಿ ವಿರೋಧವಿರುವಾಗ ಶೃತಿ ಯಾವಾಗಲೂ ಬಾಧಕ ಹಾಗೂ ಸಮಾಖ್ಯೆ ಯಾವಾಗಲೂ ಬಾಧ್ಯ, ಉಳಿದ ನಾಲ್ಕು ಪ್ರಮಾಣಗಳಲ್ಲಿ ಮೊದಲಿನದು ಪ್ರಬಲ, ಮುಂದಿನದು ದುರ್ಬಲ ಎಂಬ ಕಾರಣದಿಂದ ಕೆಲವೊಮ್ಮೆ ಬಾಧಕವೂ, ಕೆಲವೊಮ್ಮೆ ಅದು ಬಾಧ್ಯವೂ ಆಗುತ್ತದೆ. ಒಟ್ಟಿನಲ್ಲಿ ಮುಂದಿನದು ದುರ್ಬಲ.

(೫) ವಿಧಿನಾ ತ್ವೇಕವಾಕ್ಯತ್ವಾತ್ ಸ್ತುತ್ಯರ್ಥೇನ ವಿಧೀನಾಂ ಸ್ಯುಃ (೧೯೬)

ವೇದವನ್ನು ವಿಧಿ, ನಿಷೇಧ, ಅರ್ಥವಾದ, ಮಂತ್ರ ಮತ್ತು ನಾಮಧೇಯ ಎಂದು ಐದು ವಿಧವಾಗಿ ವಿಂಗಡಿಸಬಹುದು. ಅವುಗಳಲ್ಲಿ ಅರ್ಥವಾದ ಎಂಬ ವೇದಭಾಗವು ವಿಧಿ ಮುಂತಾದವುಗಳಂತೆ ಸಾರ್ಥಕವೆಂದು ಸಾಧಿಸಬೇಕಾಗಿದೆ. ವಿಧಿಯು ಸಾಧ್ಯ, ಸಾಧನ ಮತ್ತು ಇತಿಕರ್ತವ್ಯತಾ -ಎಂಬ ಮೂರು ಅಂಶಗಳನ್ನು ತಿಳಿಸುವುದರಿಂದ ಸಾರ್ಥಕ ಎಂಬಲ್ಲಿ ಸಂಶಯವಿಲ್ಲ. ಆದರೆ ಅರ್ಥವಾದವು ಕೆಲವೊಮ್ಮೆ ಲೋಕಪ್ರಸಿದ್ಧವಾದ ವಿಷಯವನ್ನು ಹೇಳುತ್ತದೆ. ಉದಾ- ಅಗ್ನಿಯು ಹಿಮಕ್ಕೆ ಔಷಧ. ಇನ್ನು ಕೆಲವೊಮ್ಮೆ ದೇವತೆಗಳು ಮತ್ತು ರಾಕ್ಷಸರು ಹೊಡೆದಾಡಿದ ಕಥೆಯನ್ನು

ವರ್ಣಿಸುವುದುಂಟು. ಅವುಗಳನ್ನೆಲ್ಲಾ ಸಾರ್ಥಕವೆಂದು ಒಪ್ಪುವುದಾದರೂ ಹೇಗೆ ಎಂಬ ಪ್ರಶ್ನೆಗೆ ಮೇಲಿನ ಜೈಮಿನಿ ಸೂತ್ರ(೧.೨.೧.)ವು ಉತ್ತರವನ್ನು ತಿಳಿಸುತ್ತದೆ. ಅರ್ಥವಾದವು ಸಾಧ್ಯವನ್ನಾಗಲಿ, ಸಾಧನವನ್ನಾಗಲಿ ಬೋಧಿಸದಿದ್ದರೂ ವಿಧೇಯದ ಪ್ರಾಶಸ್ತ್ಯ ಮತ್ತು ನಿಷೇಧ್ಯದ ಅಪ್ರಶಸ್ತತೆಯನ್ನು ಬೋಧಿಸುತ್ತದೆ. ಈ ಕಾರಣದಿಂದ ಅದು ಸಾರ್ಥಕವೇ ಆಗಿದೆ.

(೬) ಅರ್ಥೈಕತ್ವಾದೇಕಂ ವಾಕ್ಯಂ ಸಾಕಾಂಕ್ಷಾಚೇದ್ವಿಭಾಗೇ ಸ್ಯಾತ್ (೧೯೯೭)

ವೇದವು ಶಬ್ದಗಳ ಸಮೂಹವಾಗಿದ್ದು, ಅಲ್ಲಿ ಅಸಂಖ್ಯಾತ ವಾಕ್ಯಗಳಿವೆ. ಒಂದೇ ವಿಷಯದ ವಾಕ್ಯಗಳನ್ನು ಸುಲಭವಾಗಿ ವಿಂಗಡಿಸಲು ಸಾಧ್ಯವಾಗುವಂತೆ, ಜೈಮಿನಿಯು ಒಂದು ನಿಯಮವನ್ನು ತೋರಿಸುತ್ತಾನೆ. (೨.೧.೪೬) ಏಕವಾಕ್ಯತಾ ಎಂದರೆ, ಅರ್ಥವು ಸಂಬಂಧಿಸಿರುವುದು ಅಥವಾ ಯಾವುದೋ ಒಂದು ಭಾಗವನ್ನು ಬಿಟ್ಟರೆ, ಉಳಿದ ಭಾಗವು ಅದನ್ನು ಅಪೇಕ್ಷಿಸುವುದು. ಈ ನಿಯಮವನ್ನು ಅನುಸರಿಸಿದರೆ, ವಿಧಿ-ಅರ್ಥವಾದ ಮುಂತಾದ ವೇದವಾಕ್ಯಗಳಿಗೆ ಏಕವಾಕ್ಯತೆ ಎಲ್ಲಿದೆ, ಎಂಬುದು ಸ್ಪಷ್ಟವಾಗುತ್ತದೆ. ಏಕವಾಕ್ಯತೆಯಿಲ್ಲವೆಂದಾದರೆ, ಭಿನ್ನವಾಕ್ಯತೆಯಿದೆ ಎಂಬುದು ತಾನಾಗಿಯೇ ತಿಳಿಯುತ್ತದೆ. ಉದಾ: ಯಜುರ್ವೇದದಲ್ಲಿ ದೇವಸ್ಯ ತ್ವಾ ಸವಿತುಃ ಪ್ರಸವೇ ಎಂದಿದೆ. ಇದು ಪೂರ್ಣವಾಗಿ ನಿರ್ವಾಪವನ್ನು ಹೇಳುತ್ತದೆ. ಇದರಲ್ಲಿ ಯಾವುದೇ ಶಬ್ದ ಅಥವಾ ಪದವನ್ನು ಬಿಡುವಂತಿಲ್ಲ. ಈ ಕಾರಣದಿಂದ ಇದು ನಿರ್ವಾಪವನ್ನು ಪ್ರಕಾಶ ಪಡಿಸುವ ಯಜುರ್ಮಂತ್ರವಾಗಿದೆ.

(೭) ಬಾಧಸ್ವರೂಪಮ್ (೧೯೯೮)

ಯಜ್ಞದಲ್ಲಿ ಪ್ರಕೃತಿಯಂತೆ ವಿಕೃತಿಯನ್ನು ಅನುಷ್ಠಾನ ಮಾಡುವಾಗ ಕೆಲವು ಅಂಗ ಅಥವಾ ಪದಾರ್ಥಗಳನ್ನು ಬಿಡಬೇಕಾಗುತ್ತದೆ. ಉದಾ- ಪ್ರಕೃತಿಯಲ್ಲಿ ಭತ್ತದ ಮೇಲಿನ ಹೊಟ್ಟನ್ನು ತೆಗೆಯಲು ಕುಟ್ಟುತ್ತಾರೆ. ಆದರೆ ವಿಕೃತಿಯಲ್ಲಿ ಚಿನ್ನದ ಅಕ್ಕಿಯನ್ನು ದ್ರವ್ಯವೆಂದು ಸ್ವೀಕರಿಸಿದಾಗ ಅಲ್ಲಿ ಹೊಟ್ಟನ್ನು ತೆಗೆಯುವ ಅವಶ್ಯಕತೆಯೇ ಇಲ್ಲ. ಇದರಂತೆ ವಿಕೃತಿಯಲ್ಲಿ ಚರುವನ್ನು ನೀವಾರದಿಂದ ಮಾಡುವಾಗ ಪ್ರಕೃತಿಯಲ್ಲಿ ಹೇಳಿದ ಭತ್ತ ಅಥವಾ ಯವ ಬಾಧಿತವಾಗುತ್ತದೆ. ಮಹಾಪಿತೃಯಜ್ಞದಲ್ಲಿ ಹೋತೃವರಣವನ್ನು ಮಾಡುವುದಿಲ್ಲ. ಹೀಗೆ ಅರ್ಥಲೋಪದಿಂದಲೂ ಪ್ರತ್ಯಾಖ್ಯಾನದಿಂದಲೂ, ವಿಪ್ರತಿಷೇಧದಿಂದಲೂ, ಬಾಧವು ಮೂರು ವಿಧವಾಗಿದ್ದು, ಅದು ನಿವೃತ್ತಿರೂಪವಾಗಿದೆ. ಜೈಮಿನಿಯ ಸೂತ್ರಗ್ರಂಥವಾದ ದ್ವಾದಶಲಕ್ಷಣಿಯಲ್ಲಿ ಹತ್ತನೆಯ ಅಭ್ಯಾಸವು ಬಾಧವನ್ನೇ ವಿವರಿಸುತ್ತದೆ.

(೮) ದೇವತಾವಿಗ್ರಹಾಧಿಕರಣಮ್ (೧೯೯೯)

ದೇವತೆಗೆ ವಿಗ್ರಹವಿದೆ ಎಂದು ಸ್ಮೃತಿಯಿದೆ. ಇಂದ್ರನನ್ನು ವಜ್ರಪಾಣಿ-ಯಾಗಿಯೂ, ವರುಣನನ್ನು ಪಾಶಧಾರಿಯಾಗಿಯೂ ಚಿತ್ರದಲ್ಲಿ ಬಿಡಿಸುತ್ತಾರೆ. ಅರ್ಥವಾದವೂ ದೇವತೆಯು ಯಾಗದಿಂದ ತೃಪ್ತವಾದ ಪ್ರಜೆ, ಪಶು ಮುಂತಾದ ಫಲಗಳನ್ನು ಯಜಮಾನನಿಗೆ ಕೊಡುವುದೆಂದು ತಿಳಿಸುತ್ತದೆ. ದೇವಗ್ರಾಮ, ದೇವಸ್ಥಾನ ಮುಂತಾದ ವ್ಯವಹಾರವೂ ಇದೆ. ದೇವತೆಯು ಪ್ರಸನ್ನವಾಗಿ ಕೆಲವರಿಗೆ ಮಕ್ಕಳಾಗುವುದು, ಕೆಲವರು ಧನಿಕರಾಗುವುದೂ ಪ್ರಸಿದ್ಧವಾಗಿದೆ.

ಆದರೆ ಮೀಮಾಂಸಕರು ಇದನ್ನು ಒಪ್ಪುವುದಿಲ್ಲ. ವಿಧಿವಾಕ್ಯವು ಕರ್ಮದಿಂದ ಫಲಪ್ರಾಪ್ತಿಯನ್ನು ತಿಳಿಸುತ್ತದೆ. ಹಾಗಾದರೆ ದೇವತೆಯಿಂದ ಫಲವು ದೊರೆಯುವು-ದಾದರೂ ಹೇಗೆ? ದೇವತೆಯು ಯಾಗಕ್ಕೆ ಅರ್ಹವೇ ಹೊರತು ಪ್ರಧಾನವಲ್ಲ. ದೇವತೆಯು ಹವಿಸ್ಸನ್ನು ಸ್ವೀಕರಿಸುವುದು ಯಾರ ಅನುಭವದಲ್ಲಿಯೂ ಇದ್ದಂತಿಲ್ಲ, ಸ್ಮೃತಿಯಾಗಲೀ, ಚಿತ್ರವಾಗಲೀ ದೇವತೆಗಳಿಗೆ ಇಲ್ಲದ ಶರೀರವನ್ನು ಕೊಡಲಾರವು. ಅರ್ಥವಾದವು ವಿಧಿಯ ಅಪೇಕ್ಷೆಯನ್ನು ಪೂರೈಸುವುದಲ್ಲದೆ, ದೇವತೆಗಳಿಗೆ ವಿಗ್ರಹವನ್ನು ಸಾಧಿಸಲಾರದು. ದೇವತೆಯು ಯಾರಿಗೋ ಫಲವನ್ನು ನೀಡುವುದಿಲ್ಲ ಎಂದೇ ಹೇಳಿದರೆ, ಅದಕ್ಕೆ ರಾಗ-ದ್ವೇಷಗಳೂ ಇವೆಯೆಂದಾದೀತು. ಆಗ ಅದು ಸಾಮಾನ್ಯ ಜೀವಿಯ ಮಟ್ಟಕ್ಕೆ ಇಳಿದಂತಾಗುವುದಿಲ್ಲವೇ? ಹೀಗೆ ದೇವತೆಗೆ ಶರೀರವಿಲ್ಲ.

(೯) ನ ಹೋತಾರಂ ವೃಣೀತ ಇತ್ಯತ್ರ ಪ್ರತಿಷೇಧಪರ್ಯುದಾಸವಿಚಾರಃ (೨೦೦೦)

ನ (ಇಲ್ಲ) ಎಂಬ ಅವ್ಯಯವು ಸಾಮಾನ್ಯವಾಗಿ ವಾಕ್ಯದಲ್ಲಿ ಕ್ರಿಯೆಯೊಂದಿಗೆ ಅನ್ವಯವನ್ನು ಹೊಂದುತ್ತದೆ. ಆಗ ಅದಕ್ಕೆ ಪ್ರತಿಷೇಧವು ಅರ್ಥ, ಕೆಲವೊಮ್ಮೆ ಕ್ರಿಯೆಯೊಂದಿಗೆ ಅನ್ವಯವು ಸಂಭವಿಸದೆ ನಾಮಾರ್ಥದೊಂದಿಗೆ ಅನ್ವಯ-ವಾಗುತ್ತದೆ. ಆಗ ನ ಎಂಬ ಅವ್ಯಯಕ್ಕೆ ಪರ್ಯುದಾಸವೇ ಅರ್ಥವಾಗುತ್ತದೆ.

ನ ಹೋತಾರಂ ವೃಣೀತೇ ಎಂಬಲ್ಲಿ ನ ಎಂಬುದು ವೃಣೀತೇ ಎಂಬಲ್ಲಿ ಅನ್ವಯವಾದರೆ ಹೋತೃವರಣ ವಿಧಿಯೇ ಇರುವುದರಿಂದ ವಿಕಲ್ಪವನ್ನು ಸ್ವೀಕರಿಸುವುದು ಅನಿವಾರ್ಯ. ಅದು ಅನೇಕ (೮) ದೋಷಗಳನ್ನು ಹೊಂದಿರು-ವುದರಿಂದ ಪರ್ಯುದಾಸವನ್ನೇ ಹೇಳಬಹುದು. ಹಾಗಾದರೆ ಹೋತೃಭಿನ್ನವರಣವು ಇಲ್ಲಿ ವಾಕ್ಯಾರ್ಥವಾಗುತ್ತದೆ.

(೧೦) ಮಂತ್ರಾಧಿಕರಣಂ (೨೦೦೦)

ವೇದವು ವಿಧಿ, ಮಂತ್ರ, ನಾಮಧೇಯ, ನಿಷೇಧ ಮತ್ತು ಅರ್ಥವಾದ ಎಂದು ಐದು ವಿಭಾಗವಾಗಿದೆ. ಅವುಗಳಲ್ಲಿ ಮಂತ್ರವು ಅದೃಷ್ಟಮಾತ್ರಜನಕವೇ ಅಥವಾ ಅವುಗಳಿಗೆ ಅರ್ಥವಿದೆಯೇ ಎಂಬುದನ್ನು ಮಂತ್ರಾಧಿಕರಣದಲ್ಲಿ ಚರ್ಚಿಸಲಾಗಿದೆ. ಮಂತ್ರವು ಅದೃಷ್ಟಜನಕ ಅಥವಾ ಅವುಗಳಿಗೆ ಅರ್ಥವೇನೂ ಇಲ್ಲ ಎಂದು ಪೂರ್ವಪಕ್ಷಿಯು ಹೇಳುತ್ತಾನೆ. ಮಂತ್ರವು ಅರ್ಥವುಳ್ಳದ್ದಾದರೆ ಬ್ರಾಹ್ಮಣ ಭಾಗದಲ್ಲಿ ಅವುಗಳ ವಿನಿಯೋಗವನ್ನು ಮತ್ತೆ ಹೇಳಬೇಕಾಗಿರಲಿಲ್ಲ. ಈ ಪುನರುಕ್ತಿಯೇ ಮಂತ್ರಗಳು ಕೇವಲ ಉಚ್ಚಾರಣೆಯ ಮೂಲಕ ಪುಣ್ಯವನ್ನು ಉಂಟುಮಾಡುತ್ತವೆ ಎಂದು ಸೂಚಿಸುತ್ತದೆ.

ಮಂತ್ರವು ಸಾರ್ಥಕವಾದ ಶಬ್ದಸಮೂಹವೇ ಆಗಿರುವುದರಿಂದ ಈ ವಾದವು ಸರಿಯಲ್ಲ. ಪುನರುಕ್ತಿಯು ಗುಣವಿಧಿಗಾಗಿಯೋ, ಪರಿಸಂಖ್ಯಾವಿಧಿಗಾಗಿಯೋ ಆಗಬಹುದು. ಉಳಿದ ವಾಕ್ಯಗಳಂತೆ ಮಂತ್ರಗಳ ಅರ್ಥವು ತಿಳಿಯುತ್ತಿರುವಾಗ ಅವುಗಳಿಗೆ ಅರ್ಥವೇ ಇಲ್ಲ ಎಂದು ಹೇಳುವುದು ಅಸಮಂಜಸ ಎಂದು ನಿರ್ಣಯ. ಮಂತ್ರಗಳಿಗೂ ಅರ್ಥವಿದೆ ಹಾಗೂ ಅಗ್ನಿಹೋತ್ರಶಬ್ದವು ನಾಮಧೇಯ ಎಂದು ಮುಂತಾಗಿ ಹೇಳುವಾಗ ಅವುಗಳ ಉಪಯೋಗವಾಗುತ್ತದೆ. ವಿಧಿಗಳ ಲಕ್ಷಣ-ಪರಿಷ್ಕಾರ ಈ ಅಧಿಕರಣದಲ್ಲಿಯೇ ಬರುತ್ತದೆ.

ನ್ಯಾಯವೈಶೇಷಿಕಶಾಸ್ತ್ರ

ಪ್ರಮಾಣಶಾಸ್ತ್ರವೆಂದು ಪ್ರಸಿದ್ಧವಾದ ತರ್ಕಶಾಸ್ತ್ರವು ಸಮಾಜದಲ್ಲಿ ಅಪಾರವಾದ ಮನ್ನಣೆಗಳಿಸಿಕೊಂಡು ಅದು ಸರ್ವಶಾಸ್ತ್ರಗಳಿಗೂ ಉಪಕಾರಕವೆಂದೂ ಸಮಸ್ತ ವಿದ್ಯೆಗಳಿಗೂ ಪ್ರದೀಪದಂತೆ ಪ್ರಕಾಶಕವೆಂದೂ ಎಲ್ಲಾ ಕರ್ಮಗಳಿಗೂ ಉಪಾಯವೆಂದೂ ಪ್ರಶಂಸಿತವಾಗಿದೆ. ಪ್ರಾಚೀನ ನವೀನ ಎಂದು ಎರಡು ಭೇದಗಳಿರುವ ಈ ಶಾಸ್ತ್ರವು ಪ್ರಮೇಯವನ್ನೂ ಪರಿಷ್ಕಾರವನ್ನೂ ಕ್ರಮವಾಗಿ ನಿರೂಪಿಸುತ್ತದೆ. ಪ್ರಾಚೀನ ನ್ಯಾಯ ಪ್ರಮೇಯಪ್ರಧಾನವಾದುದು. ಆದರೆ ನವೀನ ನ್ಯಾಯ ಪರಿಷ್ಕಾರಪ್ರಧಾನವಾದುದು ಹಾಗೂ ಜಟಿಲವಾದುದು. ಅದನ್ನು ಮಂತ್ರದಂತೆ ಕಂಠಪಾಠ ಮಾಡಿ ಸಭೆಯಲ್ಲಿ ಹೇಳುವವರು ಕಡಿಮೆಯಾದರೂ ಅಲ್ಲಲ್ಲಿ ಇದ್ದಾರೆ. ಆಧುನಿಕರು ಪರಿಷ್ಕಾರವನ್ನು ಅಷ್ಟಾಗಿ ಅಪೇಕ್ಷಿಸದಿರುವುದರಿಂದ ಪ್ರಾಚೀನಶೈಲಿಯಲ್ಲಿಯೇ ಚಿಂತನೆ ನಡೆಯುತ್ತದೆ. ಗೋಷ್ಠಿಗೆ ಸ್ವೀಕರಿಸದ ವಿಷಯಗಳನ್ನು ಇಲ್ಲಿ ಸಂಗ್ರಹಿಸಿದೆ.

(೧) ಅಭೇದಾನ್ವಯಬೋಧಃ (೧೧)

ಒಂದು ವಾಕ್ಯದಲ್ಲಿರುವ ಶಬ್ದಗಳಿಗೆ ಕೆಲವೊಮ್ಮೆ ಭೇದಾನ್ವಯವೂ ಇನ್ನು ಕೆಲವೊಮ್ಮೆ ಅಭೇದಾನ್ವಯವೂ ಬರುತ್ತದೆ. ಪ್ರಾತಿಪದಿಕಾರ್ಥವು ಪ್ರತ್ಯಯಾರ್ಥದಲ್ಲಿ ಭೇದದಿಂದ ಅನ್ವಯವಾಗುತ್ತದೆ. ತಂಡುಲಂ ಎಂಬಲ್ಲಿ ತಂಡುಲವು ದ್ವಿತೀಯಾರ್ಥ ಕರ್ಮತ್ವದಲ್ಲಿ ಆಧೇಯತಾಸಂಬಂಧದಿಂದ ಅನ್ವಯವಾಗುತ್ತದೆ. ಆಧೇಯತಾ ಸಂಬಂಧದಿಂದ ಕರ್ಮತ್ವವು ತಂಡುಲವುಳ್ಳದ್ದು ಎಂದು ಬೋಧವುಂಟಾಗುತ್ತದೆ. ಇದರಂತೆ ನಿಪಾತಸ್ಥಳದಲ್ಲಿಯೂ ಭೇದದಿಂದ ಅನ್ವಯವನ್ನು ಮಾಡಬೇಕು. ನಿಪಾತವನ್ನು ಬಿಟ್ಟು ಪ್ರಾತಿಪದಿಕಾರ್ಥವು ಪ್ರಾತಿಪದಿಕಾರ್ಥದೊಂದಿಗೆ ಹಾಗೂ ಧಾತ್ವರ್ಥದೊಂದಿಗೆ ಅಭೇದದಿಂದ ಅನ್ವಯವಾಗುತ್ತದೆ ಎಂದು ಮುಂತಾಗಿ ವ್ಯುತ್ಪತ್ತಿವಾದದಲ್ಲಿ ವಿವರಿಸಿದೆ.

(೨) ಆತ್ಮಸ್ವರೂಪಮ್ (೧೯೩)

ಜ್ಞಾನಕ್ಕೆ ಆಶ್ರಯನಾದ ಆತ್ಮನು ಇಂದ್ರಿಯಾದಿಗಳಿಗೆ ಪ್ರೇರಕನಾಗಿರುತ್ತಾನೆ. ಲೋಕದಲ್ಲಿ ಸಾಧನವೆಲ್ಲವೂ ಸಾಧಕನ ಜೊತೆಗಿರುವಾಗಲೇ ಸಾಧನವಾಗಿರುವುದು ಅನುಭವಸಿದ್ಧವಾಗಿದೆ. ಚಕ್ಷುರಾದಿ ಇಂದ್ರಿಯಗಳು ಜ್ಞಾನಸಾಧನವಾಗಿರುವುದರಿಂದ ಅವುಗಳನ್ನು ಪ್ರಯೋಗಿಸುವವನು ಇರಲೇಬೇಕು. ಶರೀರವೇ ಕರ್ತೃವಾಗಲಿ ಎಂದರೆ ಮೃತಶರೀರವು ಕರ್ತೃವಾಗಬೇಕಾದೀತು. ಇಂದ್ರಿಯಗಳೇ ಕರ್ತೃವೂ, ಕರಣವೂ ಆಗಲಿ ಎಂದರೆ ಇಂದ್ರಿಯಗಳಿಲ್ಲದಿರುವಾಗ ಸ್ಮೃತಿಯು ಹೇಗೆ ಬಂದೀತು? ಹೀಗೆ ಮನಸ್ಸು ಕ್ಷಣಿಕಜ್ಞಾನ ಮುಂತಾದವು ಆತ್ಮನಲ್ಲ ಎಂದು ತೋರಿಸಲಾಗಿದೆ. ನ್ಯಾಯಸಿದ್ಧಾಂತ ಮುಕ್ತಾವಲಿ, ಆತ್ಮತತ್ತ್ವವಿವೇಕ ಮುಂತಾದ ಗ್ರಂಥಗಳಲ್ಲಿ ತಾರ್ಕಿಕರ ಆತ್ಮಸ್ವರೂಪ ನಿರೂಪಣೆಯಿದೆ.

(೩) ಕಾರಣಭಾವಾತ್ ಕಾರ್ಯಭಾವಃ (೧೯೪)

ನ್ಯಾಯ ಮತ್ತು ವೈಶೇಷಿಕ ಸಮಾನತಂತ್ರ ಎಂದು ಪ್ರಸಿದ್ಧವಾಗಿದೆ. ನೈಯಾಯಿಕರ ಪ್ರಮಾಣ ನಿರೂಪಣೆ ಮತ್ತು ವೈಶೇಷಿಕರ ಪ್ರಮೇಯ ಪರಿಶೋಧನೆ ನವೀನ ತಾರ್ಕಿಕರಿಗೆ ಗ್ರಾಹ್ಯವಾಗಿದೆ. ಈ ಕಾರಣದಿಂದಲೇ ನ್ಯಾಯಸೂತ್ರದಂತೆ ವೈಶೇಷಿಕ ಸೂತ್ರವು ತಾರ್ಕಿಕರಿಗೆ ಪ್ರಮಾಣವಾಗಿದೆ. ಕಾರಣದಲ್ಲಿ ಇರುವುದು ಕಾರ್ಯ-ದಲ್ಲಿಯೂ ಇರುವುದು ಎಂದು ವೈಶೇಷಿಕರು ಹೇಳುತ್ತಾರೆ. ರೂಪರಸ ಮುಂತಾದ ಗುಣಗಳು ಕಾರಣದಲ್ಲಿ ಇರುವುದರಿಂದ ಕಾರ್ಯದಲ್ಲಿಯೂ ಇರುತ್ತವೆ.

ಕಾರಣದಲ್ಲಿರುವ ಗುಣಗಳು ಕಾರ್ಯದಲ್ಲಿ ಗುಣಗಳನ್ನು ಉಂಟುಮಾಡುತ್ತವೆ ಎಂದು ಹೇಳುವಾಗ ಸ್ಥೂಲದಿಂದ ಸೂಕ್ಷ್ಮದಿಂದ ಸ್ಥೂಲ ಎಂದು ಎರಡು ಮತಗಳಾಗುತ್ತವೆ. ಅವುಗಳಲ್ಲಿ ವೈಶೇಷಿಕರು ಪೀಲುಪಾಕವಾದವನ್ನು ಸಮರ್ಥಿಸುತ್ತಾರೆ. ಕಾರ್ಯದಿಂದ ಬದಲಾವಣೆ ಆರಂಭವಾಗಿ ಕಾರಣದವರೆಗೆ ಅದು ವ್ಯಾಪಿಸುತ್ತದೆ ಎಂದು ಅವರು ಹೇಳುತ್ತಾರೆ.

(೪) ಈಶ್ವರಸಿದ್ಧಿಃ (೧೯೫)

ಈಶ್ವರನನ್ನು ನೈಯಾಯಿಕರು ಅನುಮಾನದಿಂದ ಸಾಧಿಸುತ್ತಾರೆ. ಕಾರ್ಯರೂಪವಾಗಿರುವ ಈ ಜಗತ್ತು ಒಬ್ಬ ಕರ್ತೃವಿನಿಂದ ಬಂದಿದೆ. ಮಡಿಕೆಯನ್ನು ಕುಂಬಾರನು ಮಾಡುವಂತೆ ಈ ಜಗತ್ತನ್ನು ಈತನು ನಿರ್ಮಿಸಿದ್ದಾನೆ. ಇದನ್ನು ವಿಸ್ತೃತವಾಗಿ ಉದಯನ ಎಂಬ ಸುಪ್ರಸಿದ್ಧ ನೈಯಾಯಿಕನು ನ್ಯಾಯ-ಕುಸುಮಾಂಜಲಿಯ ಐದನೆಯ ಸ್ತಬಕದಲ್ಲಿ ವಿಸ್ತೃತವಾಗಿ ಪ್ರತಿಪಾದಿಸಿರುತ್ತಾನೆ. ಅವನು ಪ್ರತಿಪಾದಿಸಿರುವ ವಿಷಯವು ಅಲ್ಲಿಯೇ ಒಂದು ಕಾರಿಕೆಯಲ್ಲಿ ಸಂಗೃಹೀತವಾಗಿದೆ- ಕಾರ್ಯಯೋಜನಧೃತ್ಯಾದೇಃ ಪದಾತ್ ಪ್ರತ್ಯಯತಃ ಶ್ರುತೇಃ । ವಾಕ್ಯಾತ್ ಸಂಖ್ಯಾವಿಶೇಷಾಚ್ಚ ಸಾಧ್ಯೋ ವಿಶ್ವವಿದವ್ಯಯಃ ॥ ಈ ಕಾರಿಕೆಯ ವಿವರಣೆ ಮುಕ್ತಾವಲ್ಯಾದಿ ಗ್ರಂಥಗಳಲ್ಲಿಯೂ ಇದೆ. ಮೀಮಾಂಸಕರು ಇದನ್ನು ಒಪ್ಪುವುದಿಲ್ಲ.

(೫) ಅಥ ತತ್ಪೂರ್ವಕಂ ತ್ರಿವಿಧಮನುಮಾನಂ (೧೯೬)

ಪ್ರತ್ಯಕ್ಷ ಪ್ರಮಾಣವನ್ನು ನಿರೂಪಿಸಿ ಅಮೇಲೆ ಪ್ರತ್ಯಕ್ಷಪೂರ್ವಕವಾದ ಅನುಮಾನವನ್ನು ನ್ಯಾಯ ಸೂತ್ರದಲ್ಲಿ ಗೌತಮರು ಹೇಳುತ್ತಾರೆ. ಅನುಮಾನವು ಮೂರು ಬಗೆಯಾಗಿದೆ. ಪೂರ್ವವತ್, ಶೇಷವತ್ ಮತ್ತು ಸಾಮಾನ್ಯತೋ ದೃಷ್ಟಮ್, ಪೂರ್ವ ಎಂದರೆ ಕಾರಣ. ಅದು ಉಳ್ಳದ್ದು ಎಂದರೆ ಕಾರ್ಯ. ಕಾರ್ಯದಿಂದ ಕಾರಣವನ್ನು ಅನುಮಾನ ಮಾಡಬಹುದು. ಉದಾಹರಣೆಗೆ ನದಿಯ ಪ್ರವಾಹವನ್ನು ನೋಡಿ ಮೇಲ್ಭಾಗದಲ್ಲಿ ಮಳೆಯಾಯಿತೆಂದು ಹೇಳಬಹುದು. ಶೇಷವತ್ ಎಂದರೆ ಪರಿಶೇಷ. ಮಂಗಳಕ್ಕೆ ಸಮಾಪ್ತಿಯೋ ವಿಘ್ನಧ್ವಂಸವೋ ಫಲವೆಂದು ಇದರಿಂದ ಗೊತ್ತಾಗುತ್ತದೆ. ಮಂಗಳವು ಸಫಲವೆಂದಾದ ಮೇಲೆ ಉಳಿದ ಯಾವ ಫಲವೂ ಸಂಭವಿಸದಿರುವಾಗ ಸಮಾಪ್ತಿ ಅಥವಾ ವಿಘ್ನಧ್ವಂಸವು ಫಲವೆಂದು ನಿರ್ಣಯಿಸಲಾಗುತ್ತದೆ. ಹೊಗೆಯನ್ನು ನೋಡಿ ಬೆಂಕಿಯನ್ನು ಅನುಮಾನ ಮಾಡುವುದು ಸಾಮಾನ್ಯತೋ ದೃಷ್ಟಾನುಮಾನ. ಬಹಳ ಸಾರಿ ವಹ್ನಿಧೂಮಗಳಿಗೆ ಸಹಚಾರದರ್ಶನವಾದ ಮೇಲೆ ಅನುಮಾನವನ್ನು ಸ್ವಾರ್ಥಕ್ಕಾಗಿಯೋ ಪರಾರ್ಥಕ್ಕಾಗಿಯೋ ಮಾಡುವುದುಂಟು.

(೬) ಪರತಃ ಪ್ರಾಮಾಣ್ಯಮ್ (೧೯೬)

ಪ್ರಮಾಣ್ಯವು ಸ್ವತಃ, ಅಪ್ರಾಮಾಣ್ಯವು ಪರತಃ ಎಂದು ಮೀಮಾಂಸಕರು ಹೇಳುತ್ತಾರೆ. ಅಪ್ರಾಮಾಣ್ಯವು ಸ್ವತಃ, ಪ್ರಾಮಾಣ್ಯವು ಪರತಃ -ಎಂದು ಬೌದ್ಧರು ವಾದಿಸುತ್ತಾರೆ. ಇವೆರಡೂ ಸ್ವತಃ ಎಂದು ಸಾಂಖ್ಯರು ಸ್ವೀಕರಿಸುತ್ತಾರೆ. ಇವೆರಡೂ ಪರತಃ ಎಂದು ನೈಯಾಯಿಕರು ಸಾಧಿಸುತ್ತಾರೆ. ದೋಷೋ ಪ್ರಮಾಯಾ ಜನಕಃ ಪ್ರಮಾಯಸ್ತು ಗುಣೋ ಭವೇತ್ ಎಂದು ಅಪ್ರಾಮಾಣ್ಯಕ್ಕೆ ದೋಷವೂ, ಪ್ರಮಾಣ್ಯಕ್ಕೆ ಗುಣವೂ ಪ್ರಯೋಜಕವೆಂದು ಸಂಕ್ಷಿಪ್ತವಾಗಿ ಹೇಳಬಹುದು. ಪ್ರಾಮಾಣ್ಯವು ಸ್ವತಃ ಎಂದರೆ ಆ ವಿಷಯದಲ್ಲಿ ಸಂಶಯವು ಬರುವ ಸಂಭವವೇ ಇಲ್ಲ. ಅಪ್ರಾಮಾಣ್ಯಕ್ಕೆ ಪ್ರಯೋಜಕವಾದ ದೋಷವು ನಾನಾವಿಧವಾಗಿರುತ್ತದೆ.

(೭) ಶಬ್ದಸ್ವರೂಪ ವಿಚಾರಃ (೧೯೮)

ಶಬ್ದವು ಪ್ರಮಾಣ ಮತ್ತು ಗಣನೀಯ ಎಂದು ಎರಡು ವಿಧ. ಪ್ರಮೇಯವಾದ ಶಬ್ದವು ವರ್ಣ ಮತ್ತು ಧ್ವನಿ ಎಂದು ಎರಡು ಬಗೆ. ವರ್ಣಾತ್ಮಕ ಶಬ್ದಗಳು ನಿತ್ಯ ಎಂದು ಮೀಮಾಂಸಕರು ಹೇಳುತ್ತಾರೆ. ವರ್ಣಾತ್ಮಕವಾಗಲೀ ಧ್ವನ್ಯಾತ್ಮಕವಾಗಲೀ, ಶಬ್ದವು ಅನಿತ್ಯ ಎಂದು ನೈಯಾಯಿಕರು ಸಾಧಿಸುತ್ತಾರೆ. ಪ್ರಮಾಣರೂಪವಾದ ಶಬ್ದವು ಆಪ್ತೋಪದೇಶರೂಪವಾಗಿದೆ. ಅದು ದೃಷ್ಟ ಮತ್ತು ಅದೃಷ್ಟ ಎಂದು ಎರಡು ವಿಧವಾಗಿದೆ. ಲೌಕಿಕ ಶಬ್ದವು ದೃಷ್ಟ ಹಾಗೂ ವೈದಿಕ ಶಬ್ದವು ಅದೃಷ್ಟ ಎಂದು ಮುಂತಾಗಿ ನ್ಯಾಯಭಾಷ್ಯದಲ್ಲಿ ವಿವರಿಸಲಾಗಿದೆ.

(೮) ಮಂತ್ರಾಯುರ್ವೇದಪ್ರಾಮಾಣ್ಯವಚ್ಚ ತತ್ಪ್ರಾಮಾಣ್ಯಮಾಪ್ತ-ಪ್ರಾಮಾಣ್ಯಾತ್ (೧೯೯)

ಶಬ್ದವಿಶೇಷದ ಪರೀಕ್ಷೆಯ ಸಂದರ್ಭದಲ್ಲಿ ನ್ಯಾಯಸೂತ್ರಗ್ರಂಥದಲ್ಲಿ ಈ ಸೂತ್ರವಿದೆ. ಮಂತ್ರಗಳು ಪ್ರಮಾಣವೆಂದು ಪ್ರಸಿದ್ಧವಾಗಿವೆ. ಮಂತ್ರಶಕ್ತಿಯು ಜನಸಾಮಾನ್ಯರಿಗೂ ತಿಳಿದಿದೆ. ಇದರಂತೆ ಆಯುರ್ವೇದವು ಪ್ರಮಾಣವೆಂದು ಎಲ್ಲರೂ ಬಲ್ಲರು. ವೈದ್ಯರು ಹೇಳಿದಂತೆ ಪಥ್ಯ, ಔಷಧಸೇವನೆ ಮುಂತಾದವು-ಗಳನ್ನು ಮಾಡಿ ಆರೋಗ್ಯಲಾಭವನ್ನು ಪಡೆದವರು ಎಲ್ಲೆಡೆಯೂ ಎಲ್ಲಾ ಕಾಲ-ದಲ್ಲಿಯೂ ಇದ್ದಾರೆ. ಶಬ್ದವು ಪ್ರಮಾಣ ಎಂಬಲ್ಲಿ ಮಂತ್ರ ಮತ್ತು ಆಯುರ್ವೇದ ಸ್ಪಷ್ಟವಾದ ನಿದರ್ಶನ. ಶಬ್ದವು ಪ್ರಮಾಣವಾಗಲು ಅದು ಆಪ್ತೋಕ್ತವಾಗಿರುವುದೇ ಮುಖ್ಯವಾದ ಕಾರಣವಾಗಿದೆ. ಆಪ್ತನು ಧರ್ಮವನ್ನು ಸಾಕ್ಷಾತ್ಕರಿಸಿಕೊಂಡಿರು-ವವನೂ ಸಮಸ್ತ ಪ್ರಾಣಿಗಳಲ್ಲಿ ದಯೆಯುಳ್ಳವನೂ ಇದ್ದದ್ದನ್ನು ಇದ್ದಹಾಗೆಯೇ ಉಪದೇಶಿಸುವವನೂ ಆಗಿರುತ್ತಾನೆ.

(೯) ನ್ಯಾಯದರ್ಶನಸಮ್ಮತಃ ಅಪವರ್ಗಃ (೧೦೦೦)

ತ್ರಿವರ್ಗ ಎಂದರೆ ಧರ್ಮ, ಅರ್ಥ ಮತ್ತು ಕಾಮ. ಅಪವರ್ಗ ಎಂದರೆ ಈ ಮೂರಕ್ಕಿಂತ ಬೇರೆಯಾದ ಮೋಕ್ಷ. ನೈಯಾಯಿಕರು ಆತ್ಯಂತಿಕೀ ದುಃಖನಿವೃತ್ತಿಃ. ಅಂದರೆ ದುಃಖವು ಪೂರ್ಣವಾಗಿ ಹೊರಟುಹೋಗಿ ಮತ್ತೆ ಬಾರದಿರುವುದು ಮೋಕ್ಷವೆನ್ನುತ್ತಾರೆ. ದುಃಖವು ೨೧ ವಿಧ. ಶರೀರ, ೬ ಇಂದ್ರಿಯಗಳು, ೬ ವಿಷಯಗಳು, ೬ ಜ್ಞಾನಗಳು, ಸುಖ ಮತ್ತು ದುಃಖ. ವಜ್ಜೆಯನ್ನು ಹೊತ್ತಿರುವವನು ಇದನ್ನು ಇಳಿಸಿದಾಗ ಸುಖಿಯಾದೆನೆಂದು ತಿಳಿಯುವಂತೆ ದುಃಖವು ನಿವೃತ್ತವಾದಾಗ ಮುಕ್ತನಾದೆ ಎಂದು ತಿಳಿದುಕೊಳ್ಳುತ್ತಾನೆ. ಆಗ ಸ್ವರೂಪ ಸುಖವೆಂಬುದು ಇದ್ದರೂ ಅನುಭವಕ್ಕೆ ಬರುವುದಿಲ್ಲ.

(೧೦) ಪ್ರತ್ಯಕ್ಷಸೂತ್ರಮ್ (೨೦೦೧)

ಪ್ರತ್ಯಕ್ಷ ಎಂಬುದು ಪ್ರಮಾಣ ಹಾಗೂ ಪ್ರಮಾ ಎಂದು ಎರಡು ವಿಧವಾಗಿದೆ. ಅವುಗಳಲ್ಲಿ ಪ್ರಮಾರೂಪವಾದ ಪ್ರತ್ಯಕ್ಷವು ಇಂದ್ರಿಯಜನ್ಯ ಜ್ಞಾನ. ಈಶ್ವರನ ಪ್ರತ್ಯಕ್ಷವು ಇಂದ್ರಿಯಜನ್ಯವಲ್ಲ. ಜಗತ್ತಿನಲ್ಲಿರುವ ಸಮಸ್ತ ಪದಾರ್ಥಗಳೂ ಅವನಿಗೆ ಪ್ರತ್ಯಕ್ಷವೇ ಆದರೂ ಆ ಜ್ಞಾನವು ನಿತ್ಯವೇ ಆಗಿದೆ. ಈ ಕಾರಣದಿಂದ ಈಶ್ವರ ಪ್ರತ್ಯಕ್ಷವು ಈ ಲಕ್ಷಣದಿಂದ ಸಂಗ್ರಹವಾಗದೇ ಅವ್ಯಾಪ್ತಿಯುಂಟಾಗುತ್ತದೆ. ಅದನ್ನು ಪರಿಹರಿಸಲು ಜ್ಞಾನವು ಕರಣವಾಗದಿರುವ ಜ್ಞಾನವು ಪ್ರತ್ಯಕ್ಷವೆನ್ನಲಾಗಿದೆ. ಆದರೆ ಸೂತ್ರದಲ್ಲಿ ಗೌತಮ ಮಹರ್ಷಿಗಳು ಇಂದ್ರಿಯಾರ್ಥಸನ್ನಿಕರ್ಷೋತ್ಪನ್ನಂ ಜ್ಞಾನಂ ಎಂದೇ ಹೇಳಿದ್ದಾರೆ. ಅಲ್ಲಿ ಜನ್ಯ ಪ್ರತ್ಯಕ್ಷದ ಲಕ್ಷಣವನ್ನೇ ಹೇಳಿದೆ ಎಂದು ತಿಳಿಯಬೇಕು.

ಸಾಂಖ್ಯಯೋಗದರ್ಶನ

ಷಡ್ ದರ್ಶನಗಳಲ್ಲಿ ಸಾಂಖ್ಯ ಮತ್ತು ಯೋಗಗಳಿಗೆ ಉನ್ನತವಾದ ಸ್ಥಾನವಿದೆ. ಆಚಾರ್ಯ ಶಂಕರರು ಸಾಂಖ್ಯರನ್ನು ಪ್ರಧಾನ ಮಲ್ಲರೆಂದು ಹೇಳುತ್ತಾರೆ. ಸಾಂಖ್ಯರನ್ನು ನಿರಾಕರಿಸಿದ ಮಾತ್ರಕ್ಕೆ ಯೋಗ ದರ್ಶಕರನ್ನು ನಿರಾಕರಿಸಿದಂತಾಗುವು-ದೆಂದೂ ಬಾದರಾಯಣರು ತಿಳಿಸುತ್ತಾರೆ. ಸಾಂಖ್ಯ ಮತ್ತು ಯೋಗದರ್ಶನ ಸಮಾನವಾದ ಪ್ರಮೇಯಗಳನ್ನು ಹೊಂದಿರುವುದೇ ಇದಕ್ಕೆ ಕಾರಣ. ಆಚಾರ್ಯ ಶಂಕರರ ಪ್ರಯತ್ನದ ಫಲವಾಗಿ ಸಾಂಖ್ಯದರ್ಶನ ಸಮೂಲವಾಗಿ ಅವನತಿಯನ್ನು ಹೊಂದಿತು. ಈಗ ಪೂರ್ವಪಕ್ಷದಲ್ಲಿ ಮಾತ್ರ ವಿಶೇಷವಾಗಿ ಕಾಣಸಿಗುವ ಸಾಂಖ್ಯದರ್ಶನ ಈಶ್ವರ ಕೃಷ್ಣನ ಸಾಂಖ್ಯಾರಿಕೆ ಮತ್ತು ಅದರ ವ್ಯಾಖ್ಯಾನದ

ಮೂಲಕವೇ ಅರ್ಥವಾಗಬೇಕಾಗಿದೆ. ಯೋಗದರ್ಶನವು ಪತಂಜಲಿಯ ಯೋಗಸೂತ್ರ ಮತ್ತು ಅವುಗಳ ವ್ಯಾಖ್ಯಾನದ ಮೂಲಕ ಸುಪ್ರಸಿದ್ಧವಾಗಿದೆ. ಕರ್ಮಮೀಮಾಂಸಕರು ಯೋಗವನ್ನು ತಿರಸ್ಕರಿಸಿರುವವರಲ್ಲಿ ಅಗ್ರಗಣ್ಯರು. ಅವರ ಪ್ರಯತ್ನದ ಫಲವಾಗಿ ವೈದಿಕಕರ್ಮಗಳು ನಮ್ಮ ದೇಶದಲ್ಲಿ ಇಂದಿಗೂ ಉಳಿದು ಬಂದಿವೆ. ಹಾಗಾದರೂ ಸಾಂಖ್ಯ ಮತ್ತು ಯೋಗ ಉಪೇಕ್ಷಣೀಯ ದರ್ಶನಗಳಲ್ಲ. ಅವು ಜನತೆಗೆ ಅನಗತ್ಯವಾದರೂ, ಸಾಧಕರಿಗೆ ಪೂರ್ವಪಕ್ಷಕ್ಕಾಗಿಯೂ ಕೆಲವೊಮ್ಮೆ ಸಾಧನೆಗಾಗಿಯೂ ಅಗತ್ಯವಾಗಿದೆ. ಅವುಗಳ ಚಿಂತನೆಯ ಸಾರವನ್ನ ಇಲ್ಲಿ ಸಂಗ್ರಹಿಸಿದೆ.

(೧) ಗುಣಮೀಮಾಂಸಾ (೧೯೬೨)

ಗುಣ ಎಂಬ ನಾನಾರ್ಥಶಬ್ದಕ್ಕೆ ಹಗ್ಗ, ಸತ್ವಾದಿಗುಣ ಎಂಬ ಅರ್ಥಗಳಿವೆ. ಹಗ್ಗವು ಒಬ್ಬ ವ್ಯಕ್ತಿಯನ್ನು ಬಂಧಿಸುವಂತೆ ಸತ್ವ, ರಜಸ್ಸು ಮತ್ತು ತಮಸ್ಸು ಪುರುಷನನ್ನು ಬಂಧಿಸುತ್ತವೆ. ಈ ಕಾರಣದಿಂದ ಸತ್ವ ಮುಂತಾದವುಗಳು ಗುಣಗಳೆಂದೇ ಪ್ರಸಿದ್ಧವಾಗಿವೆ. ಸತ್ವಗುಣವು ಸುಖಸಂಗದಿಂದಲೂ ಜ್ಞಾನಸಂಗದಿಂದಲೂ ಬಂಧಿಸುತ್ತದೆ. ರಜೋಗುಣವು ಕರ್ಮಸಂಗದಿಂದ ಬಂಧಿಸುತ್ತದೆ. ತಮೋಗುಣವು ಪ್ರಮಾದ, ಆಲಸ್ಯ, ನಿದ್ರೆಗಳಿಂದ ಬಂಧಿಸುತ್ತದೆ. ಸತ್ವಗುಣವು ಲಘು ಮತ್ತು ಪ್ರಕಾಶಕ. ರಜೋಗುಣವು ಚಂಚಲ ಮತ್ತು ಉಪಷ್ಟಂಭಕ. ತಮೋಗುಣವು ಗುರು ಮತ್ತು ಆವಾರಕ. ದೀಪವು ಬೆಳಗುವಾಗ ಬೆಂಕಿ, ಬತ್ತಿ ಮತ್ತು ಎಣ್ಣೆ ಒಟ್ಟಾಗಿ ಕಾರ್ಯ ಮಾಡುವಂತೆ ಈ ಮೂರು ಗುಣಗಳು ಒಂದಕ್ಕೊಂದು ಪೂರಕವಾಗಿ ಕಾರ್ಯ ಮಾಡುತ್ತವೆ. ಪ್ರಕೃತಿಯಲ್ಲಿ ಈ ಮೂರು ಸಮಾನವಾಗಿರುತ್ತವೆ. ಪ್ರಕೃತಿಯ ಕಾರ್ಯವಾದ ಜಡ ಪ್ರಪಂಚದಲ್ಲಿ ಇವು ವಿಷಮವಾಗಿರುತ್ತವೆ. ಇವುಗಳಿಲ್ಲದ ಯಾವುದೂ ಜಗತ್ತಿನಲ್ಲಿ ಕಾಣುವುದಿಲ್ಲ.

(೨) ಪ್ರಕೃತಿಃ ಕರ್ತ್ರೀ (೧೯೬೩)

ಪ್ರಪಂಚವು ಜಡ ಮತ್ತು ಚೇತನವೆಂದು ವಿಭಕ್ತವಾಗಿದೆ. ಜಡವಾದುದು ಪ್ರಕೃತಿಯಿಂದ ಬಂದಿದೆ. ಹಾಲು ಮೊಸರಾಗುವಂತೆ ಪ್ರಕೃತಿಯು ಮಹತ್, ಅಹಂಕಾರ, ತನ್ಮಾತ್ರೆಗಳು, ಇಂದ್ರಿಯಗಳು ಮತ್ತು ಭೂತಗಳಾಗಿ ಪರಿಣಾಮವನ್ನು ಹೊಂದುತ್ತದೆ. ಪ್ರಕೃತಿಯೊಂದೇ ಏನನ್ನೂ ಮಾಡಲಾರದು. ಅದರಂತೆ ಪುರುಷನೊಬ್ಬನೇ ಏನನ್ನೂ ಮಾಡಲಾರನು. ಪುರುಷನ ಸನ್ನಿಧಾನದಿಂದ ಜಡವಾದ ಪ್ರಕೃತಿಯು ಪ್ರಪಂಚಾಕಾರವಾಗಿ ಅರಳುತ್ತದೆ, ಕರ್ತೃತ್ವವೆಂಬುದು ಪರಿಣಾಮವೇ

ಅಗಿದೆ. ಪರಿಣಾಮವೆಂದರೆ ವಿಕಾರ. ಅವಿಕೃತವಾದ ಪ್ರಕೃತಿಯು ಪ್ರಕೃತಿವಿಕೃತಿ-ಯಾಗಿಯೂ ವಿಕೃತಿಯಾಗಿಯೂ ಕಾಣಿಸಿಕೊಳ್ಳುತ್ತದೆ.

(೩) ಪುರುಷಃ ಪುಷ್ಕರಪಲಾಶವನ್ನಿರ್ಲೇಪಃ (೧೯೪)

ತಾವರೆಯ ದಳವು ನೀರಿನಲ್ಲಿದ್ದರೂ ನೀರು ಅದಕ್ಕೆ ಅಂಟುವುದಿಲ್ಲ. ಅದರಂತೆ ಪುರುಷನು ಪ್ರಕೃತಿಯ ಜೊತೆಗೆ ಇದ್ದರೂ, ಪ್ರಾಕೃತ ಪ್ರಪಂಚದಲ್ಲಿಯೇ ಇದ್ದರೂ ಆವನು ಯಾವುದೇ ವಿಕಾರವನ್ನು ಹೊಂದದೇ ಇದ್ದಂತೆ ಇರುತ್ತಾನೆ. ಅವನು ಯಾವುದಕ್ಕೂ ಪ್ರಕೃತಿ ಅರ್ಥಾತ್ ಕಾರಣನಲ್ಲ. ಅವನು ಯಾವುದರಿಂದಲೂ ಜನಿಸಿದವನೂ ಅಲ್ಲ. ಚೇತನ ಎಂದು ಪ್ರಸಿದ್ಧಯಾದ ಪುರುಷನು ಬಂಧವನ್ನಾಗಲೀ, ಮೋಕ್ಷವನ್ನಾಗಲೀ ನಿಜವಾಗಿ ಹೊಂದುವುದಿಲ್ಲ. ಪ್ರಕೃತಿಯು ತಾನಾಗಿ ಬಂಧನವನ್ನು ಉಂಟುಮಾಡುತ್ತದೆ ಹಾಗೂ ಅದು ತಾನಾಗಿ ಬಿಟ್ಟು ಹೋಗುತ್ತದೆ. ಇದನ್ನೇ ಪುರುಷನಿಗೆ ಆರೋಪಿಸಿ ಪುರುಷನಿಗೆ ಬಂಧವೂ ಮೋಕ್ಷವೂ ಉಂಟಾಗುವುದೆಂದು ಹೇಳಲಾಗಿದೆ.

(೪) ಸಮಾಧಿಃ (೧೯೫)

ಯಮ (ಅಹಿಂಸಾ ಮುಂ), ನಿಯಮ (ಶೌಚ ಮುಂ), ಆಸನ (ಪದ್ಮಾಸನ ಮುಂ) ಪ್ರಾಣಾಯಾಮ (ಶ್ವಾಸೋಚ್ಛ್ವಾಸದ ದೀರ್ಘತೆ), ಪ್ರತ್ಯಾಹಾರ (ಇಂದ್ರಿಯ ನಿಗ್ರಹ), ಧಾರಣಾ (ದೇಶಬಂಧ), ಧ್ಯಾನ (ಸಜಾತೀಯ ಪ್ರತ್ಯಯಪ್ರವಾಹ) ಮತ್ತು ಸಮಾಧಿ (ನಿರಂತರ ಧ್ಯಾನ) ಎಂದು ಯೋಗವು ಎಂಟು ಅಂಗಗಳನ್ನು ಹೊಂದಿದೆ. ಯೋಗವೇ ಸಮಾಧಿಯೆಂದಾದರೆ ಅದೇ ಪ್ರಧಾನವಾಗುತ್ತದೆ. ಹೀಗೆ ಸಮಾಧಿಯು ಅಂಗವಾಗಿಯೂ ಪ್ರಧಾನವಾಗಿಯೂ ಶಾಸ್ತ್ರದಲ್ಲಿ ವರ್ಣಿಸಲ್ಪಟ್ಟಿದೆ. ಸಮಾಧಿಯು ಸಬೀಜವೆಂದೂ ನಿರ್ಬೀಜವೆಂದೂ ಸಂಪ್ರಜ್ಞಾತವೆಂದೂ, ಅಸಂಪ್ರಜ್ಞಾತವೆಂದೂ ನಾನಾವಿಧವಾಗಿದೆ. ಸಂಪ್ರಜ್ಞಾತವು ವಿತರ್ಕಾನುಗತ, ವಿಚಾರಾನುಗತ, ಆನಂದಾನುಗತ ಮತ್ತು ಅಸ್ಮಿತಾನುಗತ ಎಂದು ನಾಲ್ಕು ವಿಧ.

(೫) ಕ್ಲೇಶಕರ್ಮವಿಪಾಕಾಶಯೈರಮಾಮೃಷ್ಟಃ ಪುರುಷವಿಶೇಷ ಈಶ್ವರಃ (೧೯೬)

ಕ್ಲೇಶ ಐದು ವಿಧ- ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ ಮತ್ತು ಅಭಿನಿವೇಶ. ಕರ್ಮವು ಕುಶಲ ಮತ್ತು ಅಕುಶಲ ಎಂದು ದ್ವಿವಿಧ. ಕರ್ಮಫಲವು ವಿಪಾಕ. ಕರ್ಮಕ್ಕೆ ಅನುಗುಣವಾದ ವಾಸನಾ ಅಥವಾ ಸಂಸ್ಕಾರವು ಆಶಯ. ಇವೆಲ್ಲವೂ ನಿಜವಾಗಿ ಮನಸ್ಸಿನಲ್ಲಿ ಇದ್ದರೂ ಪುರುಷನಲ್ಲಿ ಇವೆ ಎಂದು ವ್ಯವಹರಿಸಲಾಗುತ್ತದೆ. ಸೈನಿಕರು

ಯುದ್ಧವನ್ನು ಮಾಡಿ ಜಯವನ್ನೋ ಪರಾಜಯವನ್ನೋ ಪಡೆದರೂ ರಾಜನು ಜಯಪರಾಜಯಭಾಜನನಾಗುವಂತೆ, ಪುರುಷನು ಭೋಗಿಯೆನ್ನಲಾಗಿದೆ. ಆದರೆ ಈ ಭೋಗವು ಯಾವನಿಗೆ ಇಲ್ಲವೋ ಅವನು ಈಶ್ವರನು. ಮುಕ್ತರಿಗೆ ಭೋಗದ ಅತ್ಯಂತಾಭಾವವಿಲ್ಲದಿರುವುದರಿಂದ ಅವರನ್ನು ಈಶ್ವರನೆಂದು ಹೇಳಲಾಗದು. ಸಾಂಖ್ಯರು ಅವಿದ್ಯಾದಿಶೂನ್ಯನಾದ ಈಶ್ವರನನ್ನು ಒಪ್ಪುವುದಿಲ್ಲ ಎಂಬುದು ಪ್ರಸಿದ್ಧವಾಗಿದೆ. ಆದರೆ ಸೇಶ್ವರಸಾಂಖ್ಯರು ಇರುವರೆಂಬುದು ದರ್ಶನಗಳ ಪರಿಶೀಲನೆಯಿಂದ ಸ್ಪಷ್ಟವಾಗುತ್ತದೆ.

(೬) ಸರ್ಗಃ (೧೯೯೭)

ಪ್ರಕೃತಿಯು ಜಡವಾದುದರಿಂದ ಸೃಷ್ಟಿಯನ್ನು ಮಾಡಲಾರದು. ಪುರುಷನು ನಿಷ್ಕ್ರಿಯನಾದುದರಿಂದ ಅವನೂ ಸೃಷ್ಟಿಸಲಾರನು. ಹಾಗಾದರೆ ಎಲ್ಲರಿಗೂ ಕಾಣುವ ಜಗತ್ತು ಹೇಗೆ ಬಂದಿತು, ಎಂಬ ಪ್ರಶ್ನೆಗೆ ಸಾಂಖ್ಯರು ಕುಂಟ ಮತ್ತು ಕುರುಡರ ಕಥೆಯನ್ನು ನಿದರ್ಶನವಾಗಿ ಹೇಳುತ್ತಾರೆ. ಕುಂಟನೊಂದು ಕಡೆ, ಕುರುಡನೊಂದು ಕಡೆ ಇರುವಾಗ ಬಲವಾದ ಬಿರುಗಾಳಿ ಬೀಸಿತು, ಆಗ ಸುದೈವದಿಂದ ಕುರುಡನಿರುವ ಕಡೆಗೆ ಕುಂಟನು ಕುಂಟನಿರುವ ಕಡೆ ಕುರುಡನು ತಳ್ಳಲ್ಪಟ್ಟು ಇಬ್ಬರಿಗೂ ಸಂಯೋಗವುಂಟಾಯಿತು. ಇಬ್ಬರೂ ಮಾತನಾಡಿ ಒಂದು ಒಪ್ಪಂದಕ್ಕೆ ಬಂದರು. ಕುರುಡ ನಡೆಯಬಹುದಾದರೂ ನೋಡಲಾರ. ಕುಂಟನು ನೋಡಬಲ್ಲನಾದರೂ ನಡೆದಾಡಲಾರ. ಆದರೆ ಇಬ್ಬರ ಸಮಾಗಮದಿಂದ ಕುರುಡನು ಕುಂಟನನ್ನು ಹೆಗಲ ಮೇಲೇರಿಸಿ ಕೊಂಡನಂತೆ. ಕುಂಟನು ಕುರುಡನಿಗೆ ದಾರಿಯನ್ನು ಸೂಚಿಸಿದನಂತೆ. ಹೀಗೆ ಪರಸ್ಪರ ಸಹಕಾರದಿಂದ ಇಬ್ಬರೂ ಅಭೀಷ್ಟವನ್ನು ಸಾಧಿಸಿಕೊಂಡರಂತೆ. ಸಾಂಖ್ಯಮತದ ಸೃಷ್ಟಿಯೂ ಹೀಗೆಯೇ. ಪ್ರಕೃತಿಯು ಪುರುಷನಿಲ್ಲದೇ ಏನನ್ನು ಮಾಡಲಾರಳು. ಪುರುಷನು ಪ್ರಕೃತಿಯಿಲ್ಲದೆ ಏನನ್ನು ಪಡೆಯಲಾರನು. ಪ್ರಕೃತಿಪುರುಷರ ಸಮಾಗಮದಿಂದ ಪ್ರಪಂಚವು ಸೃಷ್ಟಿಯಾಗಿದೆ. ಪ್ರಕೃತಿಯು ಕುರುಡಿಯಂತೆ, ಪುರುಷನು ಕುಂಟನಂತೆ, ಕುಂಟನೊಬ್ಬನು ಕುರುಡಿಯನ್ನು ಮದುವೆಯಾಗಿ ಬಂದಂತಿದೆ ಈ ಜಗತ್ತು.

(೭) ಕಾರಣಮಸ್ತ್ಯವ್ಯಕ್ತಮ್ (೧೯)

ಸಾಂಖ್ಯರು ಜಗತ್ಕಾರಣವಾದ ಅವ್ಯಕ್ತವೆಂಬ ಪ್ರಧಾನ ಅಥವಾ ಪ್ರಕೃತಿಯನ್ನು ಅನುಮಾನದಿಂದ ಸಾಧಿಸುತ್ತಾರೆ. ಅನುಮಾನ ಪ್ರಯೋಗದಲ್ಲಿ ಕಾರಣವು ಪಕ್ಷ, ಅವ್ಯಕ್ತವು ಸಾಧ್ಯ. ಭೇದಾನಾಂ ಪರಿಣಾತ್, ಸಮನ್ವಯಾತ್, ಶಕ್ತಿತಃ ಪ್ರವೃತ್ತೇಃ

ಕಾರಣಕಾರ್ಯವಿಭಾಗಾತ್, ವೈಶ್ವರೂಪಸ್ಯ ಅವಿಭಾಗಾದ್ ಎಂಬ ಸಾಧನಗಳನ್ನು ಈಶ್ವರಕೃಷ್ಣನು ಸಂಗ್ರಹಿಸಿದ್ದಾನೆ. ಆಚಾರ್ಯ ವಾಚಸ್ಪತಿ ಮಿಶ್ರರು ತತ್ತ್ವಕೌಮುದಿಯಲ್ಲಿ ಅವುಗಳನ್ನು ವಿವರಿಸುತ್ತಾರೆ. ವೇದಾಂತದಲ್ಲಿ ಈ ಅವ್ಯಕ್ತವಾದವನ್ನು ಪೂರ್ಣವಾಗಿ ನಿರಾಕರಿಸಲಾಗಿದೆ.

(೮) ಏತೇನ ಭೂತೇಂದ್ರಿಯೇಷು ಧರ್ಮಲಕ್ಷಣಾವಸ್ಥಾಪರಿಣಾಮಾ ವ್ಯಾಖ್ಯಾತಾಃ (೧೯೯೯)

ಅತ್ಯಂತ ದುರೂಹವಾದ ಈ ಸೂತ್ರವನ್ನು ಎರಡು ವರ್ಷಗಳ ಕಾಲ ಚಿಂತನೆಗೆ ಸ್ವೀಕರಿಸಲಾಗಿದೆ. ಮೊದಲನೆಯ ವರ್ಷದ ಚಿಂತನೆ ಸಫಲವಾಗದೆ ಮತ್ತೆ ಅದನ್ನೇ ಚಿಂತನೆಗಾಗಿ ಆಯ್ಕೆ ಮಾಡಿಕೊಂಡು ವಿಷಯವನ್ನು ವಿವೇಚಿಸಲಾಗಿದೆ.

(೯) ಏತೇನ.. ವ್ಯಾಖ್ಯಾತಾಃ

ಧರ್ಮ, ಲಕ್ಷಣ, ಅವಸ್ಥಾ ಎಂಬ ಚಿತ್ತಪರಿಣಾಮದಿಂದ ಭೂತೇಂದ್ರಿಯಗಳಲ್ಲಿ ಧರ್ಮಪರಿಣಾಮ, ಲಕ್ಷಣಪರಿಣಾಮ ಮತ್ತು ಅವಸ್ಥಾಪರಿಣಾಮವನ್ನು ಹೇಳಿದಂತಾಯಿತು. ವ್ಯುತ್ಥಾನನಿರೋಧಗಳೆಂಬ ಧರ್ಮಗಳ ಅಭಿಭವವೂ ಪ್ರಾದುರ್ಭಾವವೂ ಧರ್ಮಿಯಲ್ಲಿ ಧರ್ಮಪರಿಣಾಮ ಎಂದು ಮುಂತಾಗಿ ವ್ಯಾಸಭಾಷ್ಯದಲ್ಲಿ ಲಕ್ಷಣವನ್ನು ಹೇಳಿದೆ. ಪೃಥಿವ್ಯಾದಿ ಭೂತಗಳಿಗೆ ಘಟಾದಿಗಳು ಧರ್ಮಪರಿಣಾಮ, ಗವಾದಿ ಧರ್ಮಗಳಿಗೆ ಭೂತತಾ (ಅತೀತತಾ) ವರ್ತಮಾನತಾ ಮತ್ತು ಅನಾಗತತಾ (ಭವಿಷ್ಯತ್ವ) ಲಕ್ಷಣಪರಿಣಾಮ. ಬಾಲ್ಯ, ಕೌಮಾರ ಯೌವನ ಮತ್ತು ವಾರ್ಧಕ್ಯವು ಗವಾದಿಗಳಿಗೆ ಅವಸ್ಥಾ ಪರಿಣಾಮ. ಘಟಾದಿಗಳಿಗೆ ನವೀನತ್ವ ಪುರಾತನತ್ವ ಮುಂತಾದವು. ಭೂತೇಂದ್ರಿಯ ಪರಾಣಾಮ ವಿಭಾಗವು ಪ್ರಾಸಂಗಿಕವಾಗಿದೆ ಹಾಗೂ ಮುಂದೆ ಅದಕ್ಕೆ ಪ್ರಯೋಜನವು ಇದೆ.

(೧೦) ಸಾಂಖ್ಯಸಮ್ಮತಃ ಸತ್ಕಾರ್ಯವಾದಃ (೨೦೦೧)

ಕಾರಕ ವ್ಯಾಪಾರಕ್ಕಿಂತ ಮೊದಲೇ ಕಾರ್ಯವು ಕಾರಣದಲ್ಲಿ ಗೂಢವಾಗಿರುತ್ತದೆ. ಕಾರಕ ವ್ಯಾಪಾರದ ತರುವಾಯ ಕಾರ್ಯವು ಅಭಿವ್ಯಕ್ತವಾಗುತ್ತದೆ. ಅಸತ್ ಎಲ್ಲಿಯೂ ಸಾಧನವಾಗಿರುವುದಿಲ್ಲ. ಕಾರ್ಯತ್ವವನ್ನು ಪಡೆಯಲು ಉಪಾದಾನವನ್ನು ಸ್ವೀಕರಿಸುತ್ತಾರೆ. ಎಲ್ಲದರಿಂದ ಎಲ್ಲವೂ ಹುಟ್ಟುವುದಿಲ್ಲ. ಒಂದು ಉಪಾದಾನವು ಒಂದು ಕಾರ್ಯವನ್ನು ಮಾತ್ರ ಮಾಡಿಕೊಡಬಹುದು. ಕಾರ್ಯಕ್ಕೆ ಕಾರಣವೆಂಬುದು ಪ್ರಸಿದ್ಧವಾಗಿಯೇ ಇದೆ. ಈ ಕಾರಣಗಳಿಂದ ಕಾರ್ಯವು ಸತ್ ಎಂದು ಹೇಳಬೇಕು.

ಹಾಲನ್ನು ಹಿಂಡುವುದಕ್ಕಿಂತ ಮುಂಚೆಯೇ ಅದು ಹಸುವಿನ ಕೆಚ್ಚಲಿನಲ್ಲಿರುತ್ತದೆ. ಹಿಂಡುವುದರಿಂದ ಇರುವ ಹಾಲೇ ಬರುವುದಲ್ಲದೇ ಇಲ್ಲದ ಹಾಲು ಬರುವುದಿಲ್ಲ. ಇದರಂತೆ ತಿಲದಲ್ಲಿ ತೈಲ, ತೆಂಗಿನಲ್ಲಿ ಎಣ್ಣೆ ಮುಂತಾದವುಗಳನ್ನು ಊಹಿಸಬಹುದು.

ಧರ್ಮಶಾಸ್ತ್ರ

ಹದಿನಾಲ್ಕು ವಿದ್ಯೆಗಳೆಂದರೆ ನಾಲ್ಕು ವೇದಗಳು, ಆರು ಅಂಗಗಳು ಮತ್ತು ನಾಲ್ಕು ಉಪಾಂಗಗಳು. ಉಪಾಂಗಗಳಲ್ಲಿ ಧರ್ಮಶಾಸ್ತ್ರವೂ ಒಂದು. ಇದನ್ನು ಮನು, ಯಾಜ್ಞವಲ್ಕ್ಯ ಮುಂತಾದ ಮುನಿಗಳು ವೇದಗಳನ್ನು ಅನುಸರಿಸಿ ತಮ್ಮ ಸ್ಮೃತಿಗಳಲ್ಲಿ ನಿರೂಪಿಸಿದ್ದಾರೆ. ಮೇಧಾತಿಥಿ ಮುಂತಾದ ವ್ಯಾಖ್ಯಾತೃಗಳು ಅದನ್ನು ವಿವರಿಸಿದ್ದಾರೆ. ಮಿತಾಕ್ಷರಾ ಧರ್ಮಶಾಸ್ತ್ರದ ಪ್ರಮಾಣಗ್ರಂಥಗಳಲ್ಲಿ ಪ್ರಮುಖವಾದರೆ, ವೀರಮಿತ್ರೋದಯ ಧರ್ಮದ ಮಾರ್ಗವನ್ನು ಶಾಸ್ತ್ರೀಯವಾಗಿ ವಿಮರ್ಶಿಸುತ್ತದೆ. ಭಾರತೀಯರ ನಿತ್ಯಜೀವನದ ಅವಿಭಾಜ್ಯ ಅಂಗವಾದ ಧರ್ಮವಿಚಾರವನ್ನು ಚಿಂತನೆಯ ಮೂಲಕ ನಿಶ್ಚಯಿಸಿಕೊಳ್ಳುವುದು ಶ್ರೇಯಸ್ಕರವೇ ಸರಿ. ವಾಚಕರ ಉಪಯೋಗಕ್ಕಾಗಿ ಚಿಂತನೆಯ ಸಾರವನ್ನು ಇಲ್ಲಿ ಸಂಗ್ರಹಿಸಿದೆ.

(೧) ಕರ್ಮಭ್ರಷ್ಟಾನಾಂ ಪ್ರಾಯಶ್ಚಿತ್ತವಿಧಾನೇನ ಪುನರುದ್ಧಾರಕ್ರಮಃ(೧೯೯೨)

ಕರ್ಮವು ನಿತ್ಯ ಕಾಮ್ಯವೆಂದು ಎರಡು ವಿಧವಾದರೂ, ನಿತ್ಯ ಮತ್ತು ನಿತ್ಯದಂತೆ ಇರುವ ನೈಮಿತ್ತಿಕ ಅವಶ್ಯವಾಗಿ ಅನುಷ್ಠೇಯವಾದುದು. ನಿಷಿದ್ಧ ಕರ್ಮವನ್ನು ಯತ್ನಪೂರ್ವಕವಾಗಿ ಬಿಡತಕ್ಕದ್ದು. ವಿಹಿತವಾದುದನ್ನು ಮಾಡದೆ ನಿಂದಿತವಾದುದನ್ನು ಬಿಡದೆ ಇದ್ದರೆ ಮಾನವನು ಪತಿತನಾಗುತ್ತಾನೆ. ಅವನು ಪಶ್ಚಾತ್ತಾಪ ಪುರಃಸ್ಸರವಾಗಿ ಪ್ರಾಯಶ್ಚಿತ್ತವನ್ನು ಅನುಷ್ಠಾನ ಮಾಡಿದಲ್ಲಿ ಮತ್ತೆ ಮೊದಲಿನಂತೆ ಶ್ರೌತ-ಸ್ಮಾರ್ತ ಕರ್ಮಗಳಿಗೆ ಅಧಿಕಾರಿಯಾಗುತ್ತಾನೆ. ಪ್ರಾಯಶ್ಚಿತ್ತವೆಂದರೆ ಪಾಪಶೋಧನ ಎಂದೇ ಅರ್ಥ. ಮಹಾಪಾಪವೂ ಪ್ರಾಯಶ್ಚಿತ್ತದಿಂದ ನಾಶವಾಗುತ್ತದೆ ಎಂದು ಸ್ಮೃತಿಯಲ್ಲಿದೆ. ತಂದೆಯಾಗಲಿ, ತಂದೆಯ ತಂದೆಯಾಗಲೀ ಸೋಮಯಾಗವನ್ನು ಮಾಡದಿದ್ದರೆ ಪುತ್ರನಿಗೆ ಸೋಮಯಾಗದಲ್ಲಿ ಅಧಿಕಾರವಿಲ್ಲ. ಇದರಂತೆ ಪಿತೃಪಿತಾಮಹರು ವೇದಾಧ್ಯಯನ, ಪಾಕಯಜ್ಞ ಹವಿರ್ಯಜ್ಞವನ್ನು ಮಾಡದಿದ್ದರೆ, ಅವನು ದುರ್ಬ್ರಾಹ್ಮಣನಾಗುವ ಕಾರಣ ಸೋಮಯಾಗದಲ್ಲಿ ಅಧಿಕಾರವಿಲ್ಲ. ಈ ದೋಷವನ್ನು ಪರಿಹರಿಸಿಕೊಳ್ಳಲು ಐಂದ್ರಾಗ್ನ ಮತ್ತು ಆಶ್ವಿನ ಪಶುಯಾಗಗಳನ್ನು ಮಾಡಬೇಕು. ಆಗ ಸೋಮಯಾಗ ಮಾಡುವ ಯೋಗ್ಯತೆಯುಂಟಾಗುತ್ತದೆ.

(೨) ಕಾರ್ಯಶೋಧನಂ (೧೯೬೩)

ಶರೀರವು ಧರ್ಮದ ಮೊದಲನೆಯ ಸಾಧನ. ಆದರೆ ಅದು ಪ್ರತಿಕ್ಷಣ-ದಲ್ಲಿಯೂ ಮಲವನ್ನು ಹೊರಸೂಸುತ್ತಿರುತ್ತದೆ. ಧರ್ಮದ ಆಚರಣೆ ಮಾಡುವಾಗ ಪರಿಶುದ್ಧವಾದ ಶರೀರ ಅತ್ಯಾವಶ್ಯಕ. ಆದರೆ ಪಾರ್ಥಿವ ಜಲೀಯ ಮುಂತಾದ ಮಲಗಳನ್ನು ಸ್ವಾಭಾವಿಕವಾಗಿಯೇ ವಿಸರ್ಜಿಸುವ ಶರೀರವು ಶುಚಿಯಾಗಿರುವು-ದಾದರೂ ಹೇಗೆ? ದಶವಿಧ ಸ್ನಾನದಿಂದ ಶರೀರವು ಒಮ್ಮೆ ಶುಚಿಯಾಗಿರುವಂತೆ ಕಾಣುವುದಾದರೂ ಅದು ಶುಚಿಯಾಗಿರುವ ಸಂಭವ ತೀರಾ ಕಡಿಮೆ ಎನ್ನಬಹುದು. ಅದಕ್ಕಾಗಿ ಶಾಸ್ತ್ರದಲ್ಲಿ ಸ್ನಾನಮಾತ್ರದಿಂದ ಮನುಷ್ಯನು ನಿರ್ಮಲನಾಗುವುದಿಲ್ಲವೆಂದೂ ಮನಸ್ಸು ನಿರ್ಮಲವಾದರೆ ಮಾತ್ರ ನಿರ್ಮಲವಾಗುವುದೆಂದೂ ಹೇಳಿದೆ. ಮನಸ್ಸು ಪ್ರಾಣಾಯಾಮಾದಿಗಳಿಂದ ಶುದ್ಧವಾಗುತ್ತದೆ. ಮನಃಶುದ್ಧಿಯಿರಬೇಕೆಂದು ಶಾಸ್ತ್ರವು ಅದರ ಮಹತ್ವವನ್ನು ಹೇಳುವುದಲ್ಲದೇ ಶರೀರಶುದ್ಧಿಯ ಅವಶ್ಯಕತೆಯೇ ಇಲ್ಲವೆಂದಲ್ಲ. ಶರೀರದ ಶುದ್ಧಿಗಾಗಿ ಮೃತ್ಸಂಗ್ರಹಣ, ಜಲಾಶಯಪ್ರವೇಶ, ಭಸ್ಮಧಾರಣ ಮುಂತಾದವುಗಳನ್ನು ವಿವರವಾಗಿ ಹೇಳಿದೆ.

(೩) ಶಿವಪ್ರಸಾದಗ್ರಹಣನಿರ್ಣಯ (೧೯೬೪)

ಶಿವನ ಪ್ರಸಾದವನ್ನು ಯಾರೂ ಸ್ವೀಕರಿಸಬಾರದೆಂದೂ, ಚಂಡೇಶ್ವರನೇ ಅದಕ್ಕೆ ಅಧಿಕಾರಿಯೆಂದೂ ಹೇಳಿದೆ. ಆದರೆ ಆಸ್ತಿಕರಲ್ಲಿ ಕೆಲವರು ಶಿವನ ನಿರ್ಮಾಲ್ಯವನ್ನು ಸ್ವೀಕರಿಸಬಹುದೆಂದು ಹೇಳುತ್ತಾರೆ. ಪಂಚಮೂರ್ತಿಯ ಪೂಜೆಯಲ್ಲಿ ಈ ಸಮಸ್ಯೆ ಉದ್ಭವಿಸಲಾರದು. ಶಿವಪೂಜೆಯನ್ನು ಮಾತ್ರ ಮಾಡುವಾಗ ಈ ಸಮಸ್ಯೆಯೇನೋ ಬರುವುದುಂಟು. ಆದರೆ ನೈವೇದ್ಯದ ಆರನೇ ಒಂದು ಭಾಗವನ್ನು ಶಿವನ ಹಿಂದೆ ಪಶ್ಚಿಮಾಭಿಮುಖವಾಗಿ ನಿಂತಿರುವ ಚಂಡೇಶ್ವರನಿಗೆ ಅರ್ಪಿಸಿ, ಶೇಷವನ್ನು ಸ್ವೀಕರಿಸಬಹುದು.

(೪) ಕರ್ಮವಿಪಾಕಃ (೧೯೬೫)

ಪುಣ್ಯದ ಫಲವಾಗಿ ಸುಖವೂ ಪಾಪದ ಫಲವಾಗಿ ದುಃಖವೂ ಉಂಟಾಗುವು-ದೆಂದು ಶಾಸ್ತ್ರದಲ್ಲಿ ಹೇಳಿದೆ. ಕರ್ಮವಿಪಾಕವೆಂದರೆ ಅಶುಭವನ್ನುಂಟುಮಾಡುವ (ಪಾಪ) ಕರ್ಮದ ಫಲವನ್ನು ಅನುಭವಿಸುವುದು ಎಂದರ್ಥ. ಪಾಪದ ಫಲವು ಆಧಿ ಮತ್ತು ವ್ಯಾಧಿಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಗರುಡಪುರಾಣದಲ್ಲಿ ಇದರ ವಿಸ್ತೃತವಾದ ವಿವರಣೆಯಿದೆ. ಅಕಸ್ಮಾತ್ತಾಗಿ ಪಾಪವನ್ನು ಆಚರಿಸಿದರೆ ಅದರ ಪರಿಹಾರಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಬೇಕು. ಒಂದು ವೇಳೆ ಪ್ರಾಯಶ್ಚಿತ್ತದಿಂದ

ಪಾಪದ ಪರಿಹಾರವನ್ನು ಮಾಡಿಕೊಳ್ಳದಿದ್ದರೆ ನರಕದಲ್ಲಿ ಬೀಳಬೇಕಾಗುತ್ತದೆ. ಅಲ್ಲಿಯ ಬವಣೆ ಮುಗಿದ ಮೇಲೆ ಕ್ರಿಮಿ-ಕೀಟಾದಿ ಜನ್ಮಗಳನ್ನು ಅನುಭವಿಸಬೇಕಾಗಬಹುದು. ಆಮೇಲೆ ಅಥವಾ ಮೊದಲೇ ಮನುಷ್ಯ ಜನ್ಮ ಪಡೆದರೂ ರೋಗ ರುಜಿನ-ಗಳುಂಟಾಗಬಹುದು. ಇದಕ್ಕೆ ಒಂದು ವ್ಯವಸ್ಥೆಯನ್ನು ಹೀಗೆ ಹೇಳಿದೆ. ಮಹಾಪಾತಕದ ಫಲವು ಏಳು ಜನ್ಮಗಳಲ್ಲಿಯೂ ಉಪಪಾತಕದ ಫಲವು ಐದು ಜನ್ಮಗಳಲ್ಲಿಯೂ ಪಾಪದ ಫಲವು ಮೂರು ಜನ್ಮಗಳಲ್ಲಿಯೂ ಅನುಭವಕ್ಕೆ ಬರುವುದು. ಮಹಾಪಾಪಕ್ಕೆ ಪೂರ್ಣಪ್ರಾಯಶ್ಚಿತ್ತವೂ, ಉಪಪಾತಕಕ್ಕೆ ಅರ್ಧಪ್ರಾಯಶ್ಚಿತ್ತವೂ, ಸಾಧರಣ ಪಾಪಕ್ಕೆ ಷಷ್ಠಾಂಶ ಪ್ರಾಯಶ್ಚಿತ್ತವೂ ಪರಿಹಾರವಾಗಿರುತ್ತದೆ.

(೫) ಮಾಸವಿಶೇಷಸ್ಯ ಕರ್ಮವಿಶೇಷೇ ಪ್ರಾಶಸ್ತ್ಯಮ್ (೧೯೯೬,೨೦೦೧)

ಮಾಸವು ನಾಲ್ಕು ಬಗೆ. ಚಾಂದ್ರ, ನಾಕ್ಷತ್ರ, ಸೌರ ಮತ್ತು ಸಾವನ. ವ್ರತ ಸೀಮಂತ, ಪುಂಸವನದಲ್ಲಿ ಸಾವನವೂ ಚೌಲೋಪನಯನಗಳಲ್ಲಿ ಸೌರವೂ, ಚಾಂದ್ರವೂ ಅನ್ನಪ್ರಾಶನದಲ್ಲಿ ಚಾಂದ್ರವೂ ಆಪತ್ತಿನಲ್ಲಿ ಚಾಂದ್ರವೂ ಗ್ರಾಹ್ಯವಾಗಿದೆ. ಸೌರ ಮತ್ತು ಚಾಂದ್ರ ಚೈತ್ರಾದಿ ಮಾಸಗಳಲ್ಲಿ ಧರ್ಮಕಾರ್ಯಗಳನ್ನು ವಿಶೇಷವಾಗಿ ಹೇಳಿರುತ್ತಾರೆ. ಜ್ಯೇಷ್ಠದಲ್ಲಿ ಸುಂದರ ಕಾಂಡ ಪಾರಾಯಣವೂ ಆಷಾಡದಲ್ಲಿ ಶಯನೋತ್ಸವವೂ, ಶ್ರಾವಣದಲ್ಲಿ ಶಿವಪೂಜೆಯೂ, ಭಾದ್ರಪದದಲ್ಲಿ ಪಿತೃಶ್ರಾದ್ಧಾದಿಗಳೂ, ಆಶ್ವಿನದಲ್ಲಿ ದೇವಿಪೂಜಾದಿಗಳೂ, ಕಾರ್ತಿಕದಲ್ಲಿ ದೀಪೋತ್ಸವವೂ, ಮಾರ್ಗಶಿರದಲ್ಲಿ ಸುಬ್ರಮಣ್ಯಪೂಜೆಯೂ ವಿಶೇಷವಾಗಿದೆ.

(೬) ಅಶೌಚವಿಚಾರಃ (೧೯೯೭)

ಜನನದಲ್ಲಿಯೂ ಮೃತಿಯಲ್ಲಿಯೂ ಬಾಂಧವರು ಅಶುಚಿ ಅಥವಾ ಅಶುದ್ಧರಾಗುತ್ತಾರೆ. ಅಶೌಚವು ಹತ್ತು, ಮೂರು ಅಥವಾ ಒಂದು ದಿನದವರೆಗೆ ಇರುತ್ತದೆ. ಸಪಿಂಡರಿಗೆ ಹತ್ತು ದಿನಗಳ ಕಾಲ ಅಶೌಚವಿರುತ್ತದೆ. ಏಳನೆಯ ತಲೆಮಾರಿನಲ್ಲಿ ಸಪಿಂಡತೆಯು ನಿವೃತ್ತವಾಗುತ್ತದೆ. ಹುಟ್ಟು ಮತ್ತು ಹೆಸರು ಗೊತ್ತಿಲ್ಲದಿದ್ದರೆ ಸಮಾನೋದಕತ್ವವೂ ಇರುವುದಿಲ್ಲ. ಗರ್ಭಸ್ರಾವದ ಸಂದರ್ಭದಲ್ಲಿ ಗರ್ಭದ ವಾಸಸಂಖ್ಯೆಯಷ್ಟು ದಿನದ ಕಾಲ ಸ್ತ್ರೀಗೆ ಅಶೌಚವಿರುತ್ತದೆ. ಚೂಡಾಕರ್ಮ-ವಾಗದ ಶಿಶುಮರಣದಲ್ಲಿ ಒಂದು ರಾತ್ರಿಯೂ, ಚೂಡಾಕರ್ಮವಾದರೆ ತ್ರಿರಾತ್ರವೂ ಅಶೌಚವಿರುತ್ತದೆ. ಎರಡು ವರ್ಷದ ಒಳಗೆ ಇರುವ ಮಗುವು ಮರಣಹೊಂದಿದರೆ ಭೂಮಿಯಲ್ಲಿ ಹುಗಿಯಬಹುದು. ಅದಕ್ಕೆ ಅಸ್ಥಿ ಸಂಚಯನವನ್ನಾಗಲೀ ಅಗ್ನಿಸಂಸ್ಕಾರವನ್ನಾಗಲೀ ಉದಕಕ್ರಿಯೆಯನ್ನಾಗಲೀ ಮಾಡಬೇಕಿಲ್ಲ ಎಂದು ಮುಂತಾಗಿ ಸ್ಮೃತಿಗಳಲ್ಲಿ ವಿಸ್ತೃತವಾಗಿ ಅಶೌಚ ವಿಚಾರವನ್ನು ವರ್ಣಿಸಲಾಗಿದೆ.

(೭) ಬ್ರಾಹ್ಮಣ್ಯಂ (೧೯೯೮)

ಬ್ರಾಹ್ಮಣ್ಯಂ ಎಂಬ ಶಬ್ದವು ಬ್ರಾಹ್ಮಣರ ಸಮೂಹ ಮತ್ತು ಬ್ರಾಹ್ಮಣತ್ವ ಎಂಬ ಎರಡು ಅರ್ಥಗಳಲ್ಲಿದೆ. ಬ್ರಾಹ್ಮಣಮಾಣವವಾಡವಾದ್ಯತ್(ಆ.ಸೂ.ಪೂ. ಸೂ.೪೨.೪೨) ಎಂಬಲ್ಲಿ ಪಾಣಿನಿಯು ಸಮೂಹ ಎಂಬ ಅರ್ಥದ ಪ್ರತ್ಯಯವನ್ನು ಹೇಳಿದ್ದಾನೆ. ಆದರೆ ಮನುಸ್ಮೃತಿ(೩.೧೭)ಯಲ್ಲಿ ಬ್ರಾಹ್ಮಣ್ಯ ಎಂಬ ಶಬ್ದವು ಬ್ರಾಹ್ಮಣಜಾತಿ ಎಂಬ ಅರ್ಥದಲ್ಲಿ ಇದೆ. ಜನಯಿತ್ವಾ ಸುತಂ ತಸ್ಯಾಂ ಬ್ರಾಹ್ಮಣ್ಯಾದೇವ ಹೀಯತೇ (ಶೂದ್ರಸ್ತ್ರೀಯಲ್ಲಿ ಮಗನಾದರೆ ಅವನು ಬ್ರಾಹ್ಮಣ್ಯದಿಂದ ಪತಿತ-ನಾಗುತ್ತಾನೆ) ಎಂದು ಬ್ರಾಹ್ಮಣ್ಯಶಬ್ದವು ಜಾತಿಯೆಂಬ ಅರ್ಥದಲ್ಲಿದೆ. ಬ್ರಾಹ್ಮಣ ಪುರುಷನಿಗೆ ಬ್ರಾಹ್ಮಣ ಸ್ತ್ರೀಯಲ್ಲಿ ಧರ್ಮದಿಂದ ಜನಿಸುವವನು ಬ್ರಾಹ್ಮಣ ಎಂದು ಹೇಳಬಹುದು. ಅಂತಹ ಬ್ರಾಹ್ಮಣನು ಯಥೇಷ್ಟಾಚಾರವನ್ನೋ ಪಾಮರಾಚಾರ-ವನ್ನೋ ಅಂಗೀಕರಿಸಿದ ಪಕ್ಷದಲ್ಲಿ ಅವನ ಬ್ರಾಹ್ಮಣ್ಯ ಸಂದಿಗ್ಧವಾಗುತ್ತದೆ. ಶೂದ್ರಸ್ತ್ರೀ ಸಂಸರ್ಗದಿಂದಲೂ, ಶೂದ್ರಸ್ತ್ರೀಯಲ್ಲಿ ಜನಿಸುವುದರಿಂದಲೂ ಪ್ರಾಯಶ್ಚಿತ್ತ ಶೂನ್ಯವಾದ ಅಬ್ರಾಹ್ಮಣ್ಯವುಂಟಾಗುತ್ತದೆ ಎಂದು ಮನು ಹೇಳುತ್ತಾನೆ. ಪ್ರಾತಃಸಾಯಂ ಸಂಧ್ಯೋಪಾಸನೆ ಬ್ರಾಹ್ಮಣ್ಯದ ರಕ್ಷಣೆಗೆ ಅತ್ಯಂತ ಅವಶ್ಯಕವಾಗಿದೆ. ಅದನ್ನು ಬಿಟ್ಟವನು ಶೂದ್ರನಿಗೆ ಸಮಾನನು. ಅವನಿಗೆ ದೈವ ಮತ್ತು ಪಿತೃ ಕರ್ಮಗಳಲ್ಲಿ ಅಧಿಕಾರವಿರುವುದಿಲ್ಲ.

(೮) ದತ್ತಕವಿಭಾಗಃ (೧೯೯೯)

ಔರಸ, ಕ್ಷೇತ್ರಜ, ದತ್ತ, ಕೃತ್ರಿಮ, ಗೂಢೋತ್ಪನ್ನ ಮತ್ತು ಅಪವಿದ್ಧ ಎಂದು ಆರು ಮಕ್ಕಳು ದಾಯವಿಭಾಗಕ್ಕೆ ಅರ್ಹರಾಗುತ್ತಾರೆ. ಔರಸಾದಿ ಪುತ್ರರ ಅಭಾವದಲ್ಲಿ ದತ್ತಪುತ್ರನನ್ನು ಸ್ವೀಕರಿಸಿದ ಮೇಲೆ ಔರಸ ಪುತ್ರನು ಜನಿಸಿದರೆ ದಾಯವಿಭಾಗದಲ್ಲಿ ಉಂಟಾಗುವ ಗೊಂದಲವನ್ನು ಪರಿಹರಿಸಬೇಕಾಗಿದೆ. ಅಂತಹ ಸಂದರ್ಭದಲ್ಲಿ ಔರಸನಿಗೂ ದತ್ತನಿಗೂ ಸಮಾನವಾಗಿ ದಾಯವನ್ನು ವಿಭಾಗ ಮಾಡಬೇಕೆಂದು ಕೆಲವರು ಹೇಳುತ್ತಾರೆ. ಆದರೆ ದತ್ತನಿಗೆ ಏನನ್ನೂ ಕೊಡುವ ಅಗತ್ಯವಿಲ್ಲವೆಂದು ಕೆಲವರು ವಾದಿಸುತ್ತಾರೆ. ದತ್ತಪುತ್ರೇ ಯಥಾಜಾತೇ ಕದಾಚಿತ್ತೌರಸೋ ಭವೇತ್ ಪಿತುರ್ವಿತ್ತಸ್ಯಸರ್ವಸ್ಯ ಭವೇತಾಂ ಸಮಭಾಗಿನೌ ಎಂಬ ಸ್ಮೃತಿಯು ಶೂದ್ರವಿಷಯಕ ವಾದುದೆಂದು ಹೇಳುತ್ತಾರೆ.

(೯) ಪೂರ್ವಸಂಸ್ಕಾರಃ (೨೦೦೦)

ಗುಣಾಧಾನವನ್ನೂ ದೋಷನಿವಾರಣೆಯನ್ನೂ ಮಾಡುವ ಸಂಸ್ಕಾರವು ಪೂರ್ವಸಂಸ್ಕಾರವೆಂದೂ ಉತ್ತರ ಸಂಸ್ಕಾರವೆಂದೂ ಎರಡು ವಿಧವಾಗಿದೆ.

ಗರ್ಭಾಧಾನ ಮುಂತಾದವು ಪೂರ್ವ ಸಂಸ್ಕಾರಗಳಾದರೆ, ಪಾಕಯಜ್ಞ ಹವಿರ್ಯಜ್ಞ ಮುಂತಾದವು ಉತ್ತರ ಸಂಸ್ಕಾರಗಳು. ಪೂರ್ವಸಂಸ್ಕಾರಗಳನ್ನು ಯಜ್ಞವೆಂದೂ, ಉತ್ತರ ಸಂಸ್ಕಾರಗಳನ್ನು ಮಹಾಯಜ್ಞಗಳೆಂದು ಮನು ಕರೆಯುತ್ತಾನೆ. ಯಜ್ಞಗಳಿಂದಲೂ ಮಹಾಯಜ್ಞಗಳಿಂದಲೂ ಶರೀರವು ಬ್ರಾಹ್ಮ(ಬ್ರಹ್ಮಸಂಬಂಧಿ) ವಾಗುತ್ತದೆ. ಹಾಗೂ ದಯಾದಿ ಗುಣಗಳಿಂದ ಕೂಡಿದರೆ ಬ್ರಹ್ಮಲೋಕಕ್ಕೆ ಸಾಧನ ವಾಗುತ್ತದೆ. ಪೂರ್ವಸಂಸ್ಕಾರಗಳು ಹದಿನಾರು. ಗರ್ಭಾಧಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಕರ್ಣವೇಧನ, ಚೌಳ, ಉಪನಯನ, ಹೋತೃ, ಶುಕ್ರಿಯ, ಉಪನಿಷದ್, ಗೋದಾನ, ಸಮಾವರ್ತನ ಮತ್ತು ವಿವಾಹ ಎಂದು ಬೋಧಾಯನರು ಹೇಳುತ್ತಾರೆ. ಈ ಸಂಸ್ಕಾರಗಳು ಕ್ಷೇತ್ರ ಸಂಸ್ಕಾರವೆಂದೂ ಪ್ರಜಾ ಸಂಸ್ಕಾರಗಳೆಂದೂ ಎರಡು ವಿಧವಾಗಿದೆ. ಜನನಕ್ಕಿಂತ ಮೊದಲು ಮಾಡುವ ಸಂಸ್ಕಾರಗಳು ಕ್ಷೇತ್ರ ಸಂಸ್ಕಾರಗಳೆಂದೂ, ಜನನಾನಂತರ ಮಾಡುವ ಸಂಸ್ಕಾರಗಳನ್ನು ಪ್ರಜಾಸಂಸ್ಕಾರಗಳೆಂದೂ ಕೆಲವರು ಹೇಳುತ್ತಾರೆ. ಎಲ್ಲವೂ ಪ್ರಜಾ ಸಂಸ್ಕಾರಗಳೆಂದು ಇನ್ನು ಕೆಲವರು ಹೇಳುತ್ತಾರೆ.

(೧೦) ಅಲಂಕಾರ ಶಾಸ್ತ್ರ

ಗೋಷ್ಠಿಗಳಲ್ಲಿ ಸಾಮಾನ್ಯವಾಗಿ ಸಾಹಿತ್ಯ ಅಥವಾ ಅಲಂಕಾರದ ವಿಷಯಗಳನ್ನು ಚರ್ಚೆಗೆ ಸ್ವೀಕರಿಸುವುದಿಲ್ಲ. ಅಲ್ಲಿ ಪದ ವಾಕ್ಯ ಪ್ರಮಾಣ ಶಾಸ್ತ್ರಗಳಿಗೆ ಮಾತ್ರವೇ ಪುರಸ್ಕಾರ ಸಲ್ಲುತ್ತದೆ. ಮಹರ್ಷಿಗಳು ರಚಿಸಿದ ಸೂತ್ರಗಳು, ಮುನಿಗಳು ರಚಿಸಿದ ಭಾಷ್ಯಗಳು, ಉದ್ದಾಮ ಪಂಡಿತರು ಅವುಗಳ ಮೇಲೆ ಬರೆದ ವ್ಯಾಖ್ಯಾನಗಳು ಚರ್ಚೆಗೆ ವಿಷಯವಾಗಿ ಪುಣ್ಯಜನಕವಾಗುತ್ತದೆ ಎಂಬಲ್ಲಿ ಎರಡು ಮಾತಿಲ್ಲ. ಆದರೆ ಕಾಳಿದಾಸಾದಿ ಮಹಾಕವಿಗಳು ರಚಿಸಿದ ಕಾವ್ಯಗಳೂ ಅವುಗಳ ಮೇಲಿನ ವಿಮರ್ಶೆಗಳೂ ಕಾವ್ಯಾಲಾಪವರ್ಜನ ಸ್ಮೃತಿಗೆ ಸುಯೋಗ್ಯವಾದ ಉದಾಹರಣೆ-ಗಳಾಗಲಾರವು ಎಂದು ಭಾವಿಸಿ ಸ್ವರ್ಣವಲ್ಲಿಯ ಚಿಂತನಗೋಷ್ಠಿಯಲ್ಲಿ ಸಾಹಿತ್ಯಶಾಸ್ತ್ರವನ್ನೂ ಇತ್ತೀಚೆಗೆ ಗೋಷ್ಠಿಯ ವಿಷಯಗಳಲ್ಲಿ ಸೇರಿಸಲಾಗಿದೆ.

(೧) ವಿಭಾವಾನುಭಾವವ್ಯಭಿಚಾರಿಸಂಯೋಗಾದ್ ರಸನಿಷ್ಪತ್ತಿಃ (೨೦೦೦)

ಭರತ ಮುನಿಯು ನಾಟ್ಯಶಾಸ್ತ್ರದಲ್ಲಿ ರಸದ ಅನುಭವವು ಹೇಗೆ ಬರುವುದೆಂದು ತಿಳಿಸುತ್ತಾನೆ. ವಿಭಾವ, ಅನುಭಾವ ಮತ್ತು ಸಂಚಾರಿ ಭಾವಗಳ ಸಂಯೋಗದಿಂದ ರಸದ ನಿಷ್ಪತ್ತಿಯಾಗುತ್ತದೆ ಎಂದು ಈ ಸೂತ್ರದಲ್ಲಿ ಹೇಳಲಾಗಿದೆ. ಇಲ್ಲಿ ಎಲ್ಲವೂ ಪಾರಿಭಾಷಿಕವಾದರೂ ಸಂಯೋಗ ಮತ್ತು ನಿಷ್ಪತ್ತಿ ಎಂಬ ಎರಡು ಶಬ್ದಗಳ ಮೇಲೆ

ವಿಶೇಷವಾದ ವಿಚಾರಗಳನ್ನು ವ್ಯಾಖ್ಯಾತೃಗಳು ಪ್ರಕಟಪಡಿಸುತ್ತಾರೆ. ಅಂತಹ ವ್ಯಾಖ್ಯಾನಗಳಲ್ಲಿ ಭಟ್ಟ ಲೋಲ್ಲಟ, ಭಟ್ಟ ಶಂಕುಕ, ಭಟ್ಟ ನಾಯಕ ಮತ್ತು ಅಭಿನವಗುಪ್ತ ಎಂಬ ನಾಲ್ವರು ವಿದ್ವಾಂಸರ ವಾದಗಳು ಸುಪ್ರಸಿದ್ಧವಾಗಿವೆ. ಅಭಿನವಗುಪ್ತನ ಸಿದ್ಧಾಂತವೆಂದು ಆಲಂಕಾರಿಕರು ಸ್ವೀಕರಿಸುತ್ತಾರೆ. ಶಂಕುಕನು ನೈಯಾಯಿಕನೆಂದೂ ನಾಯಕಲೋಲ್ಲಟರು ಮೀಮಾಂಸಕರೆಂದೂ ಅಭಿನವ ಗುಪ್ತನು ತಾಂತ್ರಿಕನೆಂದೂ ಹೇಳುತ್ತಾ ಅವರ ಸಿದ್ಧಾಂತಗಳಲ್ಲಿ ಆಯಾ ದರ್ಶನದ ಪ್ರಭಾವವು ಕಾಣಸಿಗುತ್ತದೆ.

(೨) ಶಾಂತೋಽಪಿ ನವಮೋ ರಸಃ (೨೦೦೦)

ಶೃಂಗಾರ, ವೀರ, ಕರುಣಾ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸ ಮತ್ತು ರೌದ್ರ ಎಂದು ಎಂಟು ರಸಗಳನ್ನು ಭರತನ ನಾಟ್ಯಶಾಸ್ತ್ರದಲ್ಲಿ ಹೇಳಿದೆ. ಅದನ್ನು ಅನುಸರಿಸುವ ಸಾಹಿತಿಗಳು ೮ ರಸಗಳನ್ನೇ ವಿವರಿಸುತ್ತಾರೆ. ಆದರೆ ಶಾಂತವೂ ರಸವೆಂದು ಸ್ವೀಕರಿಸಬೇಕೆಂದು ಕೆಲವರು ಹೇಳುತ್ತಾರೆ. ಅಭಿನಯದ ಮೂಲಕ ಶಾಂತವನ್ನು ತೋರ್ಪಡಿಸುವುದು ಅಸಾಧ್ಯವಾದುದರಿಂದ ನಾಟ್ಯದಲ್ಲಿ ಎಂಟೇ ಸರಗಳಾದರೂ ಶ್ರವ್ಯಕಾವ್ಯದಲ್ಲಿ ಶಾಂತವೂ ಸೇರಿ ೯ ರಸಗಳಿರಬಹುದೆಂದು ಅವರು ವಾದಿಸುತ್ತಾರೆ. ತಮ್ಮ ವಾದವನ್ನು ಶ್ರೀಮದ್ರಾಮಾಯಣ, ಶ್ರೀಮನ್ಮಹಾಭಾರತ, ಶ್ರೀಮದ್ಭಾಗವತ ಮುಂತಾದವುಗಳ ನಿದರ್ಶನಗಳಿಂದ ಅವರು ಸಮರ್ಥಿಸುತ್ತಾರೆ.

ಶ್ರೌತ:

ಕರ್ಮಗಳು ಶ್ರೌತವೆಂದೂ ಸ್ಮಾರ್ತವೆಂದೂ ಎರಡು ವಿಧ. ಶೃತಿಯಲ್ಲಿ ಹೇಳಿದ ಅಗ್ನಿಹೋತ್ರ, ದರ್ಶಪೂರ್ಣಮಾಸಗಳು, ಜ್ಯೋತಿಷ್ಟೋಮ ಮುಂತಾದ ಸಾವಿರಾರು ಕರ್ಮಗಳು ಶ್ರೌತವೆಂದು ಪ್ರಸಿದ್ಧವಾಗಿವೆ. ಗರ್ಭಾಧಾನಾದಿ ಕರ್ಮಗಳು ಸ್ಮೃತಿಯಲ್ಲಿ ಉಕ್ತವಾಗಿರುವುದರಿಂದ ಸ್ಮಾರ್ತವೆನ್ನುತ್ತಾರೆ. ಮೀಮಾಂಸಕರಿಗೆ ಭಿನ್ನವಾದ ಪ್ರತಿಕ್ರಿಯೆಯನ್ನು ಹೊಂದಿರುವ ಶ್ರೌತವು ವಿಚಾರಣೀಯವೇ ಸರಿ. ಇದರಂತೆ ಸ್ಮಾರ್ತವನ್ನೂ, ಆಗಮಗಳನ್ನೂ ಚಿಂತನೆಗೆ ಸ್ವೀಕರಿಸಬಹುದಾಗಿದೆ.

(೧) ಶ್ರೌತಕರ್ಮಸು ಪಶ್ವಾಲಂಭಮೀಮಾಂಸಾ (೨೦೦೧)

ಪಶುನಾ ಯಜೇತ ಎಂದು ಶೃತಿಯಲ್ಲಿದೆ. ಪಶು ಎಂದರೆ ಮಂತ್ರವರ್ಣದಲ್ಲಿ ಹೇಳಿದ ಅಜ. (ಆಡು, ಕುರಿ) ಅದನ್ನು ಪ್ರಕೃತಿದ್ರವ್ಯವಾಗಿಟ್ಟುಕೊಂಡು ಯಾಗ ಮಾಡುವುದು ಸೋಮಯಾಗಕ್ಕೆ ಅಂಗವಾದ ಅಗ್ನೀಷೋಮೀಯ ಮುಂತಾದ ಯಾಗಗಳಲ್ಲಿದೆ. ಇದರಿಂದ ಪಶುವಿಗೆ ಹಿಂಸೆಯಾಗುವುದಿಲ್ಲವೆ? ಹಿಂಸೆಯಿಂದ

ಯಜಮಾನನು ನರಕಕ್ಕೆ ಹೋಗುವುದಿಲ್ಲವೆ? ಪಿಷ್ಟದಿಂದ ಪಶುವನ್ನು ಯಾಗ ಮಾಡುವ ವಿಧಾನ ಸ್ಮೃತಿಯಲ್ಲಿರುವುದರಿಂದ ಅದನ್ನೇ ಮಾಡಬಹುದಲ್ಲವೇ? ಎಂದು ಮುಂತಾದ ಸಮಸ್ಯೆಗಳನ್ನು ಯಾಜ್ಞಿಕರು ಪರಿಹರಿಸಲಿದ್ದಾರೆ. ಮೀಮಾಂಸಕರು ಪುರುಷಾರ್ಥ ಹಿಂಸೆಯು ನರಕಸಾಧನವಾದರೂ ಕ್ರತ್ವರ್ಥ ಹಿಂಸೆಯು ನರಕ ಸಾಧನವಲ್ಲ ಎನ್ನುತ್ತಾರೆ. ಸಾಂಖ್ಯರು ಪಶುಹಿಂಸೆಯ ಪರಿಣಾಮವಾಗಿ ಫಲ(ಸುಖ)ವನ್ನು ಅನುಭವಿಸುವಾಗ ಅತ್ಯಂತ ಕಡಿಮೆ ಪ್ರಾಮಾಣದಲ್ಲಿ ದುಃಖವನ್ನು ಅನುಭವಿಸಬೇಕಾಗುವುದೆಂದು ವಾದಿಸುತ್ತಾರೆ.

ಜ್ಯೋತಿಃಶಾಸ್ತ್ರ

ಸೂರ್ಯ, ಪಿತಾಮಹ ಮುಂತಾದ ಹದಿನೆಂಟು ಪ್ರವರ್ತಕರು ಉಪದೇಶಿಸಿದ ಜ್ಯೋತಿಶಾಸ್ತ್ರವು ವೇದಾಂಗವಾಗಿದೆ. ಗಣಿತ, ಸಂಹಿತಾ ಮತ್ತು ಹೋರಾ ಎಂಬ ಮೂರು ಸ್ಕಂಧಗಳಲ್ಲಿ ಈ ಶಾಸ್ತ್ರವು ತನ್ನ ಪ್ರಮೇಯವನ್ನು ವಿಭಾಗಿಸಿಕೊಂಡಿದೆ. ಗಣಿತವು ಸೂರ್ಯಾದಿ ಗ್ರಹನಕ್ಷತ್ರಗಳ ಚಲನವಲನಗಳನ್ನು ಪೂರ್ಣವಾಗಿ ವಿವರಿಸುತ್ತದೆ. ಸಂಹಿತೆಯು ದಿವ್ಯ ಹಾಗೂ ಭೌಮ ಲಕ್ಷಣಗಳನ್ನು ರೂಪಿಸುತ್ತದೆ. ಹೋರಾ ಸ್ಕಂಧವು ಪ್ರಶ್ನೆ, ಜಾತಕ ಮತ್ತು ಮುಹೂರ್ತವನ್ನು ನಿಶ್ಚಯಿಸುತ್ತದೆ. ಹೀಗೆ ಕಾಲ ಮತ್ತು ಅದನ್ನು ನಿಯಂತ್ರಿಸುವ ಗ್ರಹನಕ್ಷತ್ರಗಳಿಗೆ ಸಂಬಂಧಿಸಿದ ವಿವರವು ಪಂಚಾಗಗಳ ಪರಿಜ್ಞಾನಕ್ಕೆ ಅತ್ಯಾವಶ್ಯಕವಾಗಿದ್ದು ಆ ಕುರಿತ ಚಿಂತನೆಯ ಸಾರವನ್ನು ಇಲ್ಲಿ ಸಂಗ್ರಹಿಸಿದೆ.

(೧) ಅಹರ್ಗಣಾನಯನಂ (೧೯೯)

ಅಭಿಮತ ಶಕೆಯಲ್ಲಿ ೧೪೨ ಕಳೆದು ಶೇಷವನ್ನು ೧೧ರಿಂದ ಭಾಗಿಸಿ ಬರುವ ಉತ್ತರಕ್ಕೆ ಚಕ್ರ ಎಂಬ ಸಂಜ್ಞೆಯಿದೆ. ಶೇಷವನ್ನು ೧೨ರಿಂದ ಗುಣಿಸಿ ಗತ ಚೈತ್ರಾದಿ ಮಾಸವನ್ನು ಸೇರಿಸಿ ಲಬ್ಧವನ್ನು ೨ ಸ್ಥಾನಗಳಲ್ಲಿಡಬೇಕು. ಒಂದು ಸ್ಥಾನದಲ್ಲಿ ೧೦ನ್ನೂ ಇಮ್ಮಡಿ ಚಕ್ರಸಂಖ್ಯೆಯನ್ನೂ ಸೇರಿಸಿ ೩೩ರಿಂದ ಭಾಗಿಸಿ ಬಂದ ಉತ್ತರ, ಅಧಿಕಮಾಸವನ್ನು ಬೇರೆಯಿಟ್ಟು ಮಾಸಕ್ಕೆ ಸೇರಿಸಿ ೩೦ರಿಂದ ಗುಣಿಸಬೇಕು. ಉತ್ತರಕ್ಕೆ ಶುಕ್ಲ ಪ್ರತಿಪದಾದಿ ತಿಥಿಯನ್ನು ಸೇರಿಸಿ ಮತ್ತೆ ಚಕ್ರದ ಷಷ್ಠಾಂಶವನ್ನು ಸೇರಿಸಿ ೨ ಸ್ಥಾನಗಳಲ್ಲಿಡಬೇಕು. ಒಂದು ಸ್ಥಾನದಲ್ಲಿ ೬೪ರಿಂದ ಭಾಗಿಸಿ ಲಬ್ಧವನ್ನು ಇನ್ನೊಂದರಲ್ಲಿ ಕಳೆಯಬೇಕು. ಅದು ಇಷ್ಟದಿನದ ಸೂರ್ಯೋದಯ ಕಾಲದ ಅಹರ್ಗಣವಾಗುತ್ತದೆ.

(೨) ಅಯನಾಂಶ ನಿರ್ಣಯ (೧೯೦೩)

ಮೇಷಸಂಪಾತದಿಂದಲೋ ತುಲಾಸಂಪಾತದಿಂದಲೋ ಅಯನಾಂಶಗಳನ್ನು ಸಾಧಿಸುತ್ತಾರೆ. ಸೂರ್ಯನು ಶುದ್ಧ ಪೂರ್ವದಲ್ಲಿ ಉದಯವಾದ ದಿನವನ್ನು

ವಿಷುದಿನವೆನ್ನುತ್ತಾರೆ. ಆ ದಿನದ ಸ್ಫುಟ ರವಿಯನ್ನು ಗಣಿತಮಾಡಿ, ರವಿಗೂ ಮೇಷಾದಿಗೂ ಇರುವ ಅಂತರವು ಅಯನಾಂಶಗಳಾಗುತ್ತವೆ. ಹೀಗೆಯೇ ದಕ್ಷಿಣಾಯನದಲ್ಲಿ ಸ್ಪುಟಸೂರ್ಯನಿಗೂ ತುಲಾದಿಗೂ ಇರುವ ಅಂತರವು ಅಯನಾಂಶಗಳು. ವಸಂತ ಸಂಪಾತದಿಂದ ಅಥವಾ ಮೇಷಸಂಪಾತದಿಂದ ಅಶ್ವಿನಿಯ ಆರಂಭದ ಅಂತರವು ಅಯನಾಂಶ ಅಥವಾ ಶರತ್ಸಂಪಾತದಿಂದ ಅಥವಾ ತುಲಾಸಂಪಾತದಿಂದ ಚಿತ್ತಾನಕ್ಷತ್ರವು ಆರಂಭವಾಗುವ ಅಂತರವು ಅಯನಾಂಶ. ಅವೆರಡೂ ಅಂತರಗಳು ಸಮಾನವಾಗಿರುವುದರಿಂದ ವೈದಿಕ ಧನಿಷ್ಠಾನಕ್ಷತ್ರ ಪ್ರಯುಕ್ತವಾದ ಅಶ್ವಿನಿಯ ಆರಂಭದಿಂದ ಅಯನಾಂಶವು ಸಿದ್ಧಿಸುವಂತೆ ವೈದಿಕ ಚಿತ್ರಾನಕ್ಷತ್ರ ಆರಂಭದಿಂದ ಅಯನಾಂಶವು ಶಾಸ್ತ್ರೀಯವಾಗಿ ಸಿದ್ಧಿಸುತ್ತದೆ.

(೩) ಚಂದ್ರಗ್ರಹಣಾಧಿಕಾರಃ

ದರ್ಶಪೂರ್ಣಮಾಸಾದಿಗಳನ್ನು ಅನುಷ್ಠಾನ ಮಾಡಲು ಅಮಾವಾಸ್ಯಾದಿ ಕಾಲದ ಜ್ಞಾನ ಅವಶ್ಯಕ. ಅಮಾವಾಸ್ಯಾ-ಪೌರ್ಣಮಾಸೀ ಕಾಲಗಳಲ್ಲಿ ಗ್ರಹಣಗಳು ಸಂಭವಿಸುವುದುಂಟು. ಅಮಾವಾಸ್ಯೆಯಲ್ಲಿ ಸೂರ್ಯ ಗ್ರಹಣವೂ, ಪೌರ್ಣಮಾಸಿ-ಗಳಲ್ಲಿ ಚಂದ್ರಗ್ರಹಣವು ಸಂಭವಿಸಬಹುದು. ಆದರೆ ಪ್ರತಿ ಅಮಾವಾಸ್ಯೆ-ಪೌರ್ಣಮಾಸಗಳಲ್ಲಿ ಗ್ರಹಣವು ಸಂಭವಿಸುವುದಿಲ್ಲ. ರಾಹುಕೇತುಗಳ ಸಮೀಪದಲ್ಲಿ ಸೂರ್ಯ ಚಂದ್ರರಿರುವಾಗ ಅಯಾ ಗ್ರಹಣಗಳು ಸಂಭವಿಸುತ್ತವೆ. ಆದ್ದರಿಂದ ಚಂದ್ರಗ್ರಹಣದ ಬಗ್ಗೆ ಹೇಳುವಾಗ ರಾಹು/ಕೇತುಗಳ ಸಾಮೀಪ್ಯ ಎಷ್ಟಿರಬೇಕೆಂದು ಹೇಳಬೇಕಾಗುತ್ತದೆ. ಪಂಚಾಗದಲ್ಲಿರುವ ಸ್ಪಷ್ಟಗ್ರಹಕೋಷ್ಟಕದಿಂದ ಪರ್ವಾಂತ-ಕಾಲಿಕವಾದ ರವಿ-ರಾಹುಗಳನ್ನು ಕಂಡುಹಿಡಿಯಬೇಕು. ರಾಹುವಿನ ಸ್ಪುಟಕ್ಕೆ ೬ ರಾಶಿಯನ್ನು ಕೂಡಿಸಿದರೆ ಕೇತುಸ್ಪುಟವು ಬರುತ್ತದೆ. ರಾಹುವನ್ನು ರವಿಯಿಂದ ಶೋಧಿಸಿ ಬಂದ ಉತ್ತರವು ೧೩ ಅಂಶಗಳಿಗಿಂತ ಕಡಿಮೆಯಿದ್ದರೆ (ವಿರಾಹ್ವರ್ಕ-ಬಾಹೌ) ಚಂದ್ರಗ್ರಹಣವು ಸಂಭವಿಸುತ್ತದೆ. ವಿರಾಹ್ವರ್ಕ ಭುಜಾಶಯಗಳು ೬ ಅಂಶಗಳಿಗಿಂತ ಕಡಿಮೆಯಿದ್ದರೆ, ಗ್ರಹಣವು ನಿಶ್ಚಯವಾಗಿಯೂ ಗೋಚರ-ವಾಗುವುದೆಂದು ಹೇಳಬೇಕು. ವ್ಯಗ್ವರ್ಕಬಾಹುಃ ಪರ್ವಾಂತೇ ವಿಶ್ವಾಂಶಾಲ್ಪೋ ಭವೇದ್ಯದಿ ಗ್ರಹಣಾಸಂಭವೋ ಜ್ಞೇಯಃ ಗೋಂಶಾಲ್ಪಶ್ಚೇದ್ವಿನಿಶ್ಚಯಃ

ಚಂದ್ರಗ್ರಹಣದಲ್ಲಿ ಎರಡು ವಿಶೇಷಗಳಿವೆ. ಒಂದು ಸೂರ್ಯ ಫಲದ ಕಾರಕವು ೧೨ ಎಂದು ತಿಳಿಯಬೇಕಲ್ಲದೆ ೧೬ ಎಂದಲ್ಲ. ಇನ್ನೊಂದು ಸೂರ್ಯಚಂದ್ರರ ಮಂದಕೇಂದ್ರಯೋಗವನ್ನು ಸೂರ್ಯ ಕೇಂದ್ರವೆಂದು ತಿಳಿದು ಲಬ್ಧವಾದ ಫಲದ ೨೪ ಅಂಶದಿಂದ ಚಂದ್ರನನ್ನು ಸಂಸ್ಕರಿಸಬೇಕು.

(೪) ಮಲಮಾಸನಿರ್ಣಯಃ (೧೯೯೫)

ಸೂರ್ಯನು ಮೇಷಾದಿ ರಾಶಿಗಳಲ್ಲಿ ಸುಮಾರು ತಿಂಗಳಿಗೆ ಒಂದು ರಾಶಿಯಂತೆ ಸಂಚರಿಸುತ್ತಾನೆ. ಅದರಂತೆ ಚಂದ್ರನೂ ಸುಮಾರು ಒಂದು ತಿಂಗಳಿಗೆ ೧೨ ರಾಶಿಗಳಲ್ಲಿ ಸಂಚರಿಸುತ್ತಾನೆ. ಹೀಗೆ ಸೂರ್ಯಚಂದ್ರರು ಖಗೋಳದಲ್ಲಿ ಸಂಚರಿಸುವಾಗ ಸೂರ್ಯನಿಗೂ ಚಂದ್ರನಿಗೂ ಇರುವ ಅಂತರದಿಂದ ತಿಥಿಯನ್ನು ತಿಳಿಯಬಹುದು. ಶಾಸ್ತ್ರದ ರೀತ್ಯಾ ಸೂರ್ಯನು ಚಂದ್ರನೂ ಒಂದೇ ಕಡೆ ಕಾಣುತ್ತಿದ್ದರೆ, (ಕನಿಷ್ಠ ಅಂತರವಿರುವಾಗ) ಅದು ಅಮಾವಾಸ್ಯಾ. ಸೂರ್ಯನಿಗೂ ಚಂದ್ರನಿಗೂ ಇರುವ ಗರಿಷ್ಠ ಅಂತರದಲ್ಲಿ ಹುಣ್ಣಿಮೆ ಸಂಭವಿಸುತ್ತದೆ. ಸೂರ್ಯನಿಂದ ಚಂದ್ರನು ದೂರ ಹೋಗುತ್ತಿದ್ದರೆ, ಅದು ಶುಕ್ಲಪಕ್ಷ, ಸೂರ್ಯನನ್ನು ಚಂದ್ರನು ಸಮೀಪಿಸುತ್ತಿದ್ದರೆ ಅದು ಕೃಷ್ಣಪಕ್ಷ. ಹೀಗೆ ಚಂದ್ರ ಮತ್ತು ಸೌರಮಾಸಗಳು ಸಾಗುತ್ತಿರುವಾಗ, ರವಿಯು ಒಂದೇ ರಾಶಿಯಲ್ಲಿರುವಾಗಲೇ ಎರಡು ಅಮಾವಾಸ್ಯೆ-ಗಳು ಬರುವುದುಂಟು ಅಥವಾ ಅಮಾವಾಸ್ಯೆ ಬರದೇ ಇರುವುದೂ ಉಂಟು. ಆ ಮಾಸವೇ ಮಲಮಾಸವಾಗಿರುತ್ತದೆ. ಅಸಂಕ್ರಾಂತಿ ಮಲೋಧಿಮಾಸಃ ಸ್ಫುಟಸ್ಯ ಎಂದು ಜ್ಯೋತಿರ್ನಿಬಂಧದಲ್ಲಿದೆ. ವಸಿಷ್ಠಸಿದ್ಧಾಂತದಲ್ಲಿ ಎರಡು ಮಲಮಾಸಗಳ ಅಂತರವು ೩೨ ತಿಂಗಳು, ೧೬ ದಿವಸ, ೩ ಘಟಿ ಎಂದು ತಿಳಿಸಲಾಗಿದೆ.

(೬) ಪಂಚಾಂಗಸಾಧನಮ್ (೧೮೮೭)

ಸ್ವಾರ್ಧ ಸಹಿತವಾದ ಮಾಸಗಣಕ್ಕೆ ಮಾಸಗಣದ ತೃತೀಯಾಂಶವನ್ನು ಸೇರಿಸಿ ಲಬ್ಧಕ್ಕೆ ೨,೩, ಮತ್ತು ಚಕ್ರಗುಣಿತವಾದ ೫,೯,೩೬ ದಿನಾದಿಯನ್ನು ಜೋಡಿಸಿದರೆ ತಿಥಿಯ ದಿನಾದಿ ಬರುತ್ತದೆ. ಹೀಗೆಯೇ ಗಣಿತದಿಂದ ನಕ್ಷತ್ರ, ಸೂರ್ಯನಕ್ಷತ್ರ, ಯೋಗ ಮತ್ತು ಕರಣಗಳನ್ನು ನಿರ್ಣಯಿಸುವುದೇ ಪಂಚಾಂಗ ಸಾಧನ. ಇಲ್ಲಿ ಮುಖ್ಯವಾಗಿ ಎರಡು ಪದ್ಧತಿಗಳು ಪ್ರಚಲಿತವಾಗಿವೆ. ಒಂದು ಸಂಪ್ರದಾಯಕರ ಸಿದ್ಧಾಂತ ಪದ್ಧತಿ. ಇನ್ನೊಂದು ಸಂಪ್ರದಾಯವಿರೋಧಿಯಲ್ಲದ ದೃಗ್ಗಣಿತ ಪದ್ಧತಿ. ಇವೆರಡೂ ಗ್ರಾಹ್ಯವೇ ಆಗಿದೆಯೆನ್ನಬಹುದು. ಅದೃಷ್ಟವಾದ ವಿಷಯಗಳಲ್ಲಿ ಸಿದ್ಧಾಂತ ವನ ಅನುಸರಿಸಿದರೆ ದೃಷ್ಟವಾದ ಗ್ರಹಣ, ಫಲಾದೇಶಗಳಲ್ಲಿ ದೃಗ್ಗಣಿತವು ಗ್ರಾಹ್ಯ.

(೭) ಗ್ರಹಗತಿಪರಾಮರ್ಶಃ (೧೯೯೮)

ಇಷ್ಟು ದಿವಸದ ವಾಕ್ಯದಲ್ಲಿ ಚಂದ್ರಧ್ರುವ, ಚಂದ್ರಾಹರ್ಮಾನ, ಚಂದ್ರಧ್ರುವ ಸಂಸ್ಕಾರಗಳನ್ನು ಸಂಕೇತವನ್ನು ಅನುಸರಿಸಿ ಸಂಸ್ಕರಿಸಿದರೆ ಚಂದ್ರಸ್ಫುಟವು ಬರುತ್ತದೆ. ಗೀರ್ನಃಶ್ರೇಯಃ ಮುಂತಾದ ವಾಕ್ಯದಲ್ಲಿ ಮುಂದಿನ ವಾಕ್ಯದಿಂದ ಹಿಂದಿನ ವಾಕ್ಯವನ್ನು

ಕಳೆದು ಎರಡರಿಂದ ಭಾಗಿಸಿದರೆ ಚಂದ್ರಗತಿಯು ತಿಳಿಯುತ್ತದೆ. ಹೀಗೆಯೇ ಬೇರೆ ಬೇರೆ ರೀತಿಯಲ್ಲಿ ಸೂರ್ಯಾದಿ ಗ್ರಹಗಳ ಗತಿಯನ್ನು ಗೊತ್ತು ಮಾಡಬೇಕು.

(೮) ಮಕರಸಂಕ್ರಾಂತಿನಿರ್ಣಯಃ (೧೯೯೯)

ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪ್ರವೇಶಿಸುವಾಗ ಸಂಕ್ರಾಂತಿಯುಂಟಾಗುತ್ತದೆ. ಆದರೆ ಸೂರ್ಯನು ಒಂದು ರಾಶಿಯನ್ನು ಬಿಡುವುದಾಗಲಿ ಇನ್ನೊಂದು ರಾಶಿಯನ್ನು ಪ್ರವೇಶಿಸುವುದಾಗಲಿ ಪ್ರತ್ಯಕ್ಷವಾಗುವು-ದಿಲ್ಲ, ಸಾಮಾನ್ಯವಾಗಿ ರಾಶಿಯು ನಕ್ಷತ್ರಗಳ ಸ್ಥಿತಿಯಿಂದ ಪ್ರತ್ಯಕ್ಷವೇ ಆದರೂ ಸೂಕ್ಷ್ಮವಾಗಿ ರಾಶಿಯ ಸೀಮೆಯನ್ನು ಕಾಣುವುದು ಕಷ್ಟ. ಸೂರ್ಯಬಿಂಬವು ಬೃಹತ್ತಾಗಿರುವುದರಿಂದ ಅದು ರಾಶಿಯನ್ನು ಬಿಟ್ಟು ರಾಶಿಯನ್ನು ಪ್ರವೇಶಿಸುವುದು ಅಸಂಭವವೆನ್ನಬಹುದು. ಒಂದು ರಾಶಿಯಲ್ಲಿ ಸೂರ್ಯನ ಒಂದು ಭಾಗವಿದ್ದರೆ ಇನ್ನೊಂದು ರಾಶಿಯಲ್ಲಿ ಅವನ ಇನ್ನೊಂದು ಭಾಗವು ಕಾಣುತ್ತದೆ. ಈ ಕಾರಣದಿಂದ ಸೂರ್ಯನ ಸಂಕ್ರಾತಿಯು ಸಂದಿಗ್ಧವಾಗುತ್ತದೆ. ಆದರೆ ಸೂರ್ಯಬಿಂಬದ ಮಧ್ಯ ಪರಮಾಣುವು ರಾಶಿಯ ಆದಿಯ ಪರಮಾಣುವಿನೊಂದಿಗೆ ಸೇರಿದಾಗ ಅದನ್ನು ಸಂಕ್ರಾಂತಿಯೆಂದರೆ ಆಗ ಸಂಶಯಕ್ಕೆ ಅವಕಾಶವಿಲ್ಲ. ಈಗ ಮಕರ ಸಂಕ್ರಾಂತಿ-ಯೆಂದರೆ ಸೂರ್ಯಬಿಂಬದ ಮಧ್ಯಪರಮಾಣು ಮತ್ತು ಮಕರರಾಶಿಯ ಕಾಲ್ಪನಿಕ-ವಾದ ಮೊದಲ ಪರಮಾಣು ಪರಸ್ಪರ ಸ್ಪರ್ಶಿಸುವಾಗ ಸಂಭವಿಸುವಾಗ ಸಂಭವಿಸುವುದೆನ್ನಬಹುದು. ಇದನ್ನು ಧರ್ಮಶಾಸ್ತ್ರದಲ್ಲಿ ಸ್ವೀಕರಿಸಬಹುದಾದರೂ ಜಾತಕಾದಿಗಳಿಗೆ ಸ್ವೀಕರಿಸುವಂತಿಲ್ಲ.

(೯) ಗ್ರಹಗತಿಸ್ಪಷ್ಟೀಕರಣಮ್ (೨೦೦೦)

ಕುಜಾದಿ ಗ್ರಹಗಳ ಗತಿಯು ಕೆಲವೊಮ್ಮೆ ವಕ್ರವಾಗಿರುತ್ತದೆ. ರಾಹುಕೇತುಗಳ ಗತಿಯು ಯಾವಾಗಲೂ ವಕ್ರವಾಗಿರುತ್ತದೆ. ತಾರಾಗ್ರಹಗಳ ಗತಿಯು ವಕ್ರವಾಗುವು-ದೆಂದರೆ ಕಳೆಯಬೇಕಾದ ಸಂಖ್ಯೆಯೇ ಹೆಚ್ಚಾಗಿರುವುದು. ಸಾಮಾನ್ಯವಾಗಿ ಕಳೆಯಬೇಕಾದ ಸಂಖ್ಯೆ ಕಡಿಮೆಯಾಗಿರುತ್ತದೆ. ಮಂದಕ್ರಿಯೆಯಲ್ಲಿ ಬರುವ ಗತಗಮ್ಯ ಜ್ಯಾವಿನ ಅಂತರದಿಂದ ಮಧ್ಯಮ ಗತಿಯನ್ನು ಗುಣಿಸಿ ೨೬೦ ರಿಂದ ಭಾಗಿಸಿದಾಗ ಮಂದೋಚ್ಚವನ್ನು ತೆಗೆದಾಗ ಇರುವ ಕೇಂದ್ರವೂ ಕರ್ಕಾದಿಯಾಗಿದ್ದರೆ ಕೂಡಿಸಬೇಕು, ಮಕರಾದಿಯಾಗಿದ್ದರೆ ಕಳೆಯಬೇಕು. ಈ ಉತ್ತರವನ್ನು ಶೀಘ್ರ ಮಧ್ಯಮ ಗತಿಯಲ್ಲಿ ಕಳೆದು ಅಂತ್ಯಕರಣದ ಜ್ಯಾದ ಅಂತರದಿಂದ ಗುಣಿಸಬೇಕು. ಹಿಂದಿನಂತೆ ಕೂಡುವುದು ಅಥವಾ ಕಳೆಯುವುದು ಸ್ಫುಟಗತಿಯನ್ನು ನಿಶ್ಚಯಿಸುತ್ತದೆ.

(೧೦) ಸೂರ್ಯಗ್ರಹಣಮ್ (೨೦೦೧)

ಸೂರ್ಯ ಮತ್ತು ಭೂಮಿ ಮಧ್ಯದಲ್ಲಿ ಚಂದ್ರನು ಬಂದರೆ ಸೂರ್ಯಗ್ರಹಣವು ಸಂಭವಿಸುತ್ತದೆ. ಇದನ್ನು ಗಣಿತದಿಂದ ಕಂಡುಹಿಡಿಯುವಾಗ ಸೂರ್ಯನಿಗೂ ತಮೋಗ್ರಹಗಳಿಗೂ ಇರುವ ಅಂತರ ಅತ್ಯಂತ ಪ್ರಮುಖವಾದುದು. ಅಂತರವು ತೀರಾ ಅಲ್ಪವಾಗಿರುವಾಗ ಅಮಾವಾಸ್ಯೆಯಾದರೆ ಅವಶ್ಯವಾಗಿ ಗ್ರಹಣವು ಗೋಚರವಾಗುತ್ತದೆ. ಅಮಾವಾಸ್ಯೆಯೆಂದೇ ಸೂರ್ಯಚಂದ್ರರು ಒಂದೇ ಕಡೆಯಲ್ಲಿ ಗೋಚರವಾಗುವುದೇ ಇದಕ್ಕೆ ಕಾರಣ.

ವೇದಾಂತಶಾಸ್ತ್ರ

ವೇದಾಂತವೆಂಬ ಸಿಂಹವು ಗರ್ಜಿಸುವವರೆಗೆ ಉಳಿದ ಶಾಸ್ತ್ರಗಳು ಗರ್ಜಿಸುತ್ತವೆ. ಶಾಸ್ತ್ರಪ್ರಪಂಚದಲ್ಲಿಯೇ ವೇದಾಂತವು ಕೊನೆಯ ಮಾತಾಗಿರುತ್ತದೆ. ವೇದಗಳ ಅಂತ್ಯವೆಂದರೆ ಕೊನೆಯೆಂದೇ ಅರ್ಥವಲ್ಲ. ಅಂತ್ಯವೆಂದರೆ ಸಿದ್ಧಾಂತ ಅಥವಾ ನಿರ್ಣಯ. ವೇದಗಳ ತಾತ್ಪರ್ಯ ವೇದಾಂತವೇ ಆಗಿದೆ. ಅದು ತಿಲದಲ್ಲಿ ತೈಲವು ಇರುವಂತೆ ಸಮಸ್ತ ವೇದದಲ್ಲಿಯೂ ಇದೆ. ವೇದವು ಗುರುಶಿಷ್ಯಪರಂಪರೆಯ ಮೂಲಕ ಸುರಕ್ಷಿತವಾಗಿದ್ದು, ಅದರ ತಾತ್ಪರ್ಯವಾದರೂ ಸಾಂಪ್ರದಾಯಿಕ-ವಾಗಿಯೇ ಉಳಿದು ಬಂದಿದೆ. ಈ ಸನಾತನ ಸಂಪ್ರದಾಯವನ್ನು ರಕ್ಷಿಸುವುದಕ್ಕಾಗಿ ಆಚಾರ್ಯ ಶಂಕರರು ಭಾಷ್ಯಗಳನ್ನು ಬರೆದಿರುತ್ತಾರೆ. ಅವರು ಶ್ರುತಿ, ಸ್ಮೃತಿ ಮತ್ತು ನ್ಯಾಯಗಳು ಒಂದೇ ಅರ್ಥವನ್ನು ತೋರಿಸುತ್ತವೆ ಎಂಬುದನ್ನು ಉಪನಿಷತ್, ಭಗವದ್‌ಗೀತೆ ಮತ್ತು ಬ್ರಹ್ಮಸೂತ್ರಗಳನ್ನು ವ್ಯಾಖ್ಯಾನಿಸಿ ತೋರಿಸಿದ್ದಾರೆ. ವೇದಾಂತವೆಂದರೆ ಶ್ರೀ ಶಂಕರ ಭಗವತ್ಪಾದರು ನಿರೂಪಿಸಿದ ಅದ್ವೈತವೊಂದೇ. ಅದನ್ನು ಚಿಂತನ ಮಾಡುವ ಮೂಲಕ ಪರಿಚಯವಾಗುವ ವಿಷಯಗಳನ್ನು ಈ ಕೆಳಗೆ ಸಂಗ್ರಹಿಸಿದೆ.

(೧) ಜಗನ್ಮಿಥ್ಯಾತ್ವಮ್ (೧೯೯೨)

ವೇದಾಂತ ಅರ್ಥಾತ್ ಉಪನಿಷತ್ತು ಹಾಗೂ ಅವುಗಳನ್ನು ಅನುಸರಿಸುವ ಗೀತೆ, ಬ್ರಹ್ಮಸೂತ್ರಭಾಷ್ಯ ಮುಂತಾದವು ಮುಖ್ಯವಾಗಿ ಚೇತನವನ್ನು ನಿರೂಪಿಸುತ್ತವೆ. ಜಡವೆಲ್ಲವೂ ಕೇವಲ ತೋರಿಕೆಯಾಗಿದ್ದು, ಚೇತನವೊಂದೇ ಸತ್ಯವಾಗಿರುತ್ತದೆ. ಜಡ ಅರ್ಥಾತ್ ಜಗತ್ತು ತೋರಿಕೆ ಅಥವಾ ಮಿಥ್ಯ ಎಂಬುದನ್ನು ತೋರಿಸಲು ಮಿಥ್ಯಾತ್ವಲಕ್ಷಣ, ಪ್ರಮಾಣ ಮತ್ತು ಫಲವನ್ನು ವಿವರಿಸಬೇಕಾಗಿದೆ. ಭಾಷ್ಯ ಮುಂತಾದವುಗಳಲ್ಲಿ ಅಲ್ಲಲ್ಲಿ ಹರಡಿಹೋಗಿರುವ ಮಿಥ್ಯಾತ್ವವಿಚಾರವನ್ನು

ಅದ್ವೈತಸಿದ್ಧಿಯಲ್ಲಿ ಶ್ರೀ ಮಧುಸೂದನ ಸರಸ್ವತಿಗಳು ನವೀನ ನ್ಯಾಯ ಶೈಲಿಯಲ್ಲಿ ನಿರೂಪಿಸಿ, ಜಗತ್ತು ಸತ್ಯವೆಂಬ ಮಾಧ್ವರ ವಾದವನ್ನು ಶಾಸ್ತ್ರೀಯವಾಗಿ ನಿರಾಕರಿಸುತ್ತಾರೆ. ಪಂಚಪಾದಿಕೆ, ವಿವರಣ, ಇಷ್ಟಸಿದ್ಧಿ ಮತ್ತು ತತ್ತ್ವಪ್ರದೀಪಿಕೆಗಳಲ್ಲಿ ಹೇಳಿದ ಮಿಥ್ಯಾತ್ವಲಕ್ಷಣವನ್ನು ಸಂಗ್ರಹಿಸಿ, ನ್ಯಾಯಾಮೃತಕಾರ ವ್ಯಾಸತೀರ್ಥರನ್ನು ಖಂಡಿಸಿ, ಅದ್ವೈತವನ್ನು ಸಮರ್ಥಿಸುತ್ತಾರೆ.

(೨) ಅಧ್ಯಾಸಭಾಷ್ಯ (೧೯೯೩)

ಆಚಾರ್ಯ ಶ್ರೀಶಂಕರಭಗವತ್ಪಾದರು ಮುಖ್ಯವಾಗಿ ಮೂರು ಭಾಷ್ಯಗಳನ್ನು ಬರೆದಿದ್ದಾರೆ. ಉಪನಿಷತ್ತು, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರಗಳ ಮೇಲಿನ ಶಾಂಕರಭಾಷ್ಯಗಳು ಪ್ರಸ್ಥಾನತ್ರಯ ಭಾಷ್ಯಗಳೆಂದೇ ಪ್ರಸಿದ್ಧವಾಗಿವೆ. ಅವುಗಳಲ್ಲಿ ಬ್ರಹ್ಮಸೂತ್ರಭಾಷ್ಯ ಅಥವಾ ಶಾರೀರಕ ಮೀಮಾಂಸಾ ಭಾಷ್ಯವು ಅಧ್ಯಾಸಭಾಷ್ಯದಿಂದ ಆರಂಭವಾಗುತ್ತದೆ. ಅಥಾತೋ ಬ್ರಹ್ಮಜಿಜ್ಞಾಸಾ ಎಂಬ ಬ್ರಹ್ಮಸೂತ್ರಕ್ಕೆ ಮಾತ್ರವೇ ಅಲ್ಲ, ಸಮಸ್ತ ವೇದಾಂತಕ್ಕೂ ಅಧ್ಯಾಸಭಾಷ್ಯವು ಉಪೋದ್ಘಾತವಾಗಿರುತ್ತದೆ. ಅಲ್ಲಿ ಅಧ್ಯಾಸದ ಸ್ವರೂಪ ಹಾಗೂ ತಟಸ್ಥ ಲಕ್ಷಣ, ಅಧ್ಯಾಸದ ಕಾರಣ, ಆ ವಿಷಯದ ಮತಭೇದ ಮುಂತಾದವುಗಳನ್ನು ವಿವರಿಸಲಾಗಿದೆ. ಅಧ್ಯಾಸವೆಂದರೆ, ಅದಲ್ಲದ್ದನ್ನು ಅದೆಂದು ತಿಳಿಯುವುದು. ಉದಾ- ಹಗ್ಗವನ್ನು ಹಾವೆಂದು ತಿಳಿಯುವುದು. ಜಡವನ್ನು ಚೇತನವೆಂದೂ, ಚೇತನವನ್ನು ಜಡವೆಂದೂ ತಿಳಿದು ಎಲ್ಲರೂ ಸಂಸಾರವನ್ನು ಅನುಭವಿಸುತ್ತಾರೆ. ನಿಜವಾಗಿ ಸಂಸಾರಕ್ಕೆ ಅನಾದಿಯಾದ ಅವಿದ್ಯೆಯೇ ಕಾರಣವಾಗಿದೆ.

(೩) ಅನಿರ್ವಚನೀಯಖ್ಯಾತಿಃ (೧೯೯೪)

ಹಗ್ಗವನ್ನು ನೋಡಿ ಹಾವೆಂಬ ಭ್ರಾಂತಿ ಬರುವುದುಂಟು. ಅದನ್ನು ದಾರ್ಶನಿಕರು ನಾನಾ ರೀತಿಯಾಗಿ ವಿವರಿಸುತ್ತಾರೆ. ಕೆಲವರು ಬೌದ್ಧರು ಆತ್ಮಖ್ಯಾತಿಯನ್ನು ಹೇಳುತ್ತಾರೆ. ಹಾವು ಎಂಬ ಬುದ್ಧಿಯು ಅಂತರಂಗದ ಧರ್ಮವಾಗಿದ್ದರೂ, ಅದು ಹಗ್ಗವನ್ನು ನೋಡಿದಾಗ ಹೊರಗಿರುವಂತೆ ಕಾಣುತ್ತದೆ. ಅವರಲ್ಲಿಯೇ ಮಾಧ್ಯಮಿಕರು, ಇಲ್ಲದ ಹಾವು ಹಗ್ಗದಲ್ಲಿ ಕಲ್ಪಿತವಾಗಿರುವುದೆಂದು ಹೇಳುತ್ತಾರೆ. ಅವರು ಅಸತ್ಖ್ಯಾತಿವಾದಿಗಳು, ಪ್ರದೇಶಾಂತರದಲ್ಲಿರುವ ಹಾವು ಇಲ್ಲಿರುವ ಹಗ್ಗದಲ್ಲಿ ಕಾಣುವುದೆಂದು ಅವರು ಹೇಳುತ್ತಾರೆ. ಮೀಮಾಂಸದಲ್ಲಿ ಪ್ರಾಭಾಕರರು ಅಖ್ಯಾತಿವಾದವನ್ನು ಸಮರ್ಥಿಸುತ್ತಾರೆ. ಹಗ್ಗವನ್ನು ನೋಡುವಾಗ ಹಾವು ಎಂಬ ಸ್ಮರಣೆಯುಂಟಾಗುತ್ತದೆ. ಅದು ಹಾವು ಇದು ಸ್ಮರಣೆ ಎಂಬುದು ತಿಳಿದಿರುವುದಿಲ್ಲ.

ಈ ಕಾರಣದಿಂದಲೇ ಹೊರಗಿರುವ ಹಗ್ಗವನ್ನು ಒಳಗಿರುವ ಸ್ಮರಣೆಯೊಂದಿಗೆ ಕೂಡಿಸಿ ಅದು ಹಾವು ಎಂಬ ಭ್ರಮೆ ಎಂದು ಹೇಳುತ್ತೇವೆ. ನಿಜವಾಗಿ ಭ್ರಮೆ ಎಂಬುದೇ ಇಲ್ಲ. ವೇದಾಂತಗಳು ಅನಿರ್ವಚನೀಯ ಖ್ಯಾತಿಯನ್ನು ಸ್ವೀಕರಿಸುತ್ತಾರೆ. ಹಾವು ಒಳಗಿರುವ ಬುದ್ಧಿಯಲ್ಲ; ಅದು ಹೊರಗೆ ಕಾಣುತ್ತದೆ. ಅದು ಎಲ್ಲಿಯೋ ಇರುವುದಿಲ್ಲ. ಇಲ್ಲಿಯೇ ಕಾಣುತ್ತದೆ. ಅದು ಇದ್ದದ್ದು ಎಂದು ಹೇಳುವಂತಿಲ್ಲ. ಇದೆ ಎಂದೇ ತೋರುತ್ತದೆ. ಭ್ರಮೆ ಎಂಬುದೇ ಇಲ್ಲ ಎಂಬುದು ಸಾಹಸದ ಮಾತು. ಹಾಗಿದ್ದರೆ ಭಯ-ಕಂಪ ಮುಂತಾದವು ಆಗುವುದಿಲ್ಲ ಎನ್ನಬೇಕಾದೀತು. ಆದ್ದರಿಂದ ಇದ್ದೂ ಇಲ್ಲದ, ಇಲ್ಲದೇ ಕಾಣುವ ಅನಿರ್ವಚನೀಯವಾದ ಹಾವು ಅಲ್ಲಿ ಸೃಷ್ಟಿಯಾಗುವುದೆಂದು ಹೇಳಬೇಕು.

(೪) ತದನನ್ಯಸ್ವಾಧಿಕರಣಂ (೧೯೫)

ಇದನ್ನು ಆರಂಭಣಾಧಿಕರಣವೆಂದು ಹೇಳುತ್ತಾರೆ. ವಾಚಾರಂಭಣಂ ವಿಕಾರೋ ನಾಮಧೇಯಂ ಎಂದು ಮುಂತಾದ ಉಪನಿಷದ್ವಾಕ್ಯ ಇಲ್ಲಿ ವಿಷಯ. ಭೇದ ಮತ್ತು ಅಭೇದ ಪಾರಮಾರ್ಥಿಕವೇ ಅಥವಾ ವ್ಯಾವಹಾರಿಕವೇ ಎಂದು ಸಂಶಯ. ಸಮುದ್ರದಲ್ಲಿ ತೆರೆ, ಗುಳ್ಳೆ ಮುಂತಾದ ಭೇದವೂ ಎಲ್ಲವೂ ನೀರೆ ಆಗಿರುವುದರಿಂದ ಅಭೇದವೂ ಇರುವುದು ಅನುಭವಸಿದ್ಧವಾಗಿರುವಂತೆ ಜೀವಬ್ರಹ್ಮರಿಗೆ ಭೇದ ಮತ್ತು ಅಭೇದ ಪಾರಮಾರ್ಥಿಕವಾಗಲಿ ಎಂದು ಪೂರ್ವಪಕ್ಷ, ಶೃತಿ ಮತ್ತು ಯುಕ್ತಿ -ಇವುಗಳಿಂದ ಬಾಧವಿರುವುದರಿಂದ ಭೇದ-ಅಭೇದಗಳು ವ್ಯಾವಹಾರಿಕವಾಗಿವೆ. ಕಾರ್ಯಕಾರಣದೊಂದಿಗೆ ಅಭಿನ್ನವಾಗಿರುವುದರಿಂದ ಬ್ರಹ್ಮವೊಂದೇ ತಾತ್ವಿಕ ಎನ್ನಲಾಗಿದೆ. ದ್ವೈತಸಿದ್ಧಿ ಪೂರ್ವಪಕ್ಷದ ಪ್ರಯೋಜನ ಅದ್ವೈತಸಿದ್ಧಿ ಸಿದ್ಧಾಂತದ ಫಲ ಹಿಂದಿನ ಭೋಕ್ತ್ರಾಪತ್ತ್ಯಧಿಕರಣದೊಂದಿಗೆ ಈ ಅಧಿಕರಣಕ್ಕೆ ಸಮಾನವಿಷಯತ್ವ ಸಂಗತಿಯಾಗಿರುತ್ತದೆ.

(೫) ತತ್ತು ಸಮನ್ವಯಾತ್ (೧೯೬)

ತತ್ ಎಂದರೆ ಬ್ರಹ್ಮ. ತತ್ ಎಂಬ ಅವ್ಯಯವು ಪೂರ್ವಪಕ್ಷದ ನಿರಾಕರಣೆಯನ್ನು ಸೂಚಿಸುತ್ತದೆ. ಸಮನ್ವಯಾತ್ ಎಂದರೆ ಅನ್ವಯ ತಾತ್ಪರ್ಯವಿಷಯ-ವಾಗಿರುವುದರಿಂದ ಎಂಬುದು ಸಾಧನ. ಶಾಸ್ತ್ರಯೋನಿ ಎಂಬುದು ಹಿಂದಿನ ಸೂತ್ರದಿಂದ ಅನುವೃತ್ತವಾಗುತ್ತದೆ. ಶಾಸ್ತ್ರವೇ ಪ್ರಮಾಣವಾಗಿ ಉಳ್ಳದ್ದು ಎಂದು ಅದರ ಅರ್ಥ. ಉಪನಿಷತ್ತುಗಳೆಲ್ಲಾ ಬ್ರಹ್ಮವೇ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಕ್ಕೆ ಕಾರಣವೆಂದು ಪ್ರತಿಪಾದಿಸುವುದರಿಂದ ಅದು ಉಪನಿಷತ್ತುಗಳಿಂದಲೇ

ತಿಳಿಯಲ್ಪಡುತ್ತದೆ ಎಂದು ಸೂತ್ರಾರ್ಥ. ಪೂರ್ವಪಕ್ಷವು ಇಲ್ಲಿ ಗೂಢವಾಗಿದೆ. ವೇದಾಂತಶಾಸ್ತ್ರವು ಸಿದ್ಧವಸ್ತು(ಬ್ರಹ್ಮ)ವನ್ನು ತಿಳಿಸುತ್ತದೆ ಎಂದು ಹೇಳಿರುವುದಕ್ಕೆ ನೇರ ವಿರುದ್ಧವಾಗಿ ಶಾಸ್ತ್ರವು ಕ್ರಿಯೆಯನ್ನು ಪ್ರತಿಪಾದಿಸುತ್ತದೆ ಎಂಬ ಮೀಮಾಂಸಕ ಮತವು ಇಲ್ಲಿ ಪೂರ್ವಪಕ್ಷವಾಗಿರುತ್ತದೆ. ಅಥವಾ ಶಾಸ್ತ್ರವು ಶ್ರವಣಮನನಾದಿಗಳಂತೆ ಬ್ರಹ್ಮಜ್ಞಾನವನ್ನು ವಿಧಿಸುತ್ತದೆ ಎಂದು ಪೂರ್ವಪಕ್ಷವಾದರೆ ಬ್ರಹ್ಮವನ್ನು ವಿವರಿಸುವುದರಿಂದ ಶಾಸ್ತ್ರವಾಗುವುದಲ್ಲದೇ, ವಿಧಿಸುವುದಲ್ಲ ಎಂದು ಸಿದ್ಧಾಂತ.

(೬) ಆನಂದಮಯಾಧಿಕರಣಂ (೧೯೯೭)

ತೈತ್ತಿರಿಯ ಉಪನಿಷತ್ತಿನ ಬ್ರಹ್ಮವಲ್ಲಿಯಲ್ಲಿ ಆನಂದಮಯ ಎಂಬ ಶಬ್ದವು ಬಂದಿದೆ. ಅವನು ಅನ್ನಮಯ, ಪ್ರಾಣಮಯ, ಮನೋಮಯ ಮತ್ತು ವಿಜ್ಞಾನಮಯ. ಆತ್ಮನು ಹೇಗೆ ಸಂಸಾರಿಯಾದ, ಜೀವನೂ ಹಾಗೆಯೇ ಜೀವನೇ ಅಥವಾ ಬ್ರಹ್ಮವೇ ಎಂದು ಸಂಶಯ ಬಂದರೆ, ವೃತ್ತಿಕಾರರು ಆನಂದಮಯನು ಬ್ರಹ್ಮವೆಂದು ಹೇಳುತ್ತಾರೆ. ಆದರೆ ಭಾಷ್ಯಕಾರರು ಬ್ರಹ್ಮಪುಚ್ಛಂ ಎಂಬ ವಾಕ್ಯವನ್ನಿರಿಸಿಕೊಂಡು ವಿಚಾರ ಮಾಡುತ್ತಾರೆ. ಬ್ರಹ್ಮವು ಅವಯವವೇ ಪ್ರಧಾನವೇ ಎಂದು ಸಂಶಯ. ಪುಚ್ಛ(ಬಾಲ)ವು ಶರೀರದ ಒಂದು ಅಂಗ ಆಥವಾ ಅವಯವವಾಗಿರುವುದರಿಂದ ಬ್ರಹ್ಮವು ಆನಂದಮಯ ಅಂಗವಾಗಲಿ ಎಂದರೆ, ಇಲ್ಲಿ ಪುಚ್ಛಶಬ್ದದ ಮುಖ್ಯಾರ್ಥವು ಸಂಭವಿಸದಿರುವ ಕಾರಣ ಆಧಾರವನ್ನು ಲಕ್ಷಿಸಬೇಕೆಂದೂ ಆನಂದಮಯ ಎಂಬ ಜೀವನು ಅದನ್ನು ಆಶ್ರಯಿಸಿರುವುದರಿಂದ ಅದು ಆಧಾರವಾಗಿವುದೆಂದೂ ಆ ವಾಕ್ಯದಲ್ಲಿ ಬ್ರಹ್ಮವು ಪ್ರಧಾನವೆಂದೂ ವಿವರಿಸುತ್ತಾರೆ. ಶ್ರುತಿ-ಸೂತ್ರಗಳಿಗೆ ವಿರೋಧವುಂಟಾದಲ್ಲಿ ಶ್ರುತಿಯು ಪ್ರಬಲವಾಗಿ ಸೂತ್ರವು ದುರ್ಬಲವಾಗುತ್ತದೆ. ಅಂತಹ ಸಂದರ್ಭದಲ್ಲಿ ಶ್ರುತಿಯನ್ನು ಅನುಸರಿಸಿ ಸೂತ್ರವನ್ನು ಬೇರೆಯ ರೀತಿಯಲ್ಲಿ ವ್ಯಾಖ್ಯಾನಿಸಬಹುದು.

(೭) ಫಲಮತ ಉಪಪತ್ತೇಃ (೩.೨.೯೮)

ಬ್ರಹ್ಮವೊಂದೇ ಸತ್ಯವೆಂದು ವೇದಾಂತದ ಸಿದ್ಧಾಂತವಾದರೂ, ವ್ಯವಹಾರದಲ್ಲಿ ಜೀವೇಶ್ವರ ಭೇದ ಇದ್ದೇ ಇದೆ ಎಂದು ವೇದಾಂತಿಗಳು ಸ್ವೀಕರಿಸುತ್ತಾರೆ. ಇಷ್ಟ, ಅನಿಷ್ಟ ಮತ್ತು ಮಿಶ್ರ ಎಂಬ ಮೂರು ವಿಧವಾದ ಕರ್ಮಫಲವು ಕರ್ಮಮಾತ್ರದಿಂದ ಸಿಗುವುದೇ ಅಥವಾ ಈಶ್ವರನಿಂದ ದೊರೆಯುವುದೇ ಎಂದು ವಿಚಾರಿಸಿದರೆ, ಫಲವು ಈಶ್ವರನಿಂದಲೇ ದೊರೆಯುವುದು ಎಂದು ಫಲಮತ ಉಪಪತ್ತೇಃ ಎಂಬ ಈ ಸೂತ್ರವು ತಿಳಿಸುತ್ತದೆ. ಸಮಸ್ತವನ್ನೂ ನೋಡುವ ಈಶ್ವರನು ವಿಚಿತ್ರವಾದ ಸೃಷ್ಟಿ

ಸ್ಥಿತಿ ಸಂಹಾರಗಳನ್ನು ಮಾಡಿ ಕರ್ಮಕ್ಕೆ ಅನುರೂಪವಾದ ಫಲವನ್ನು ಕೊಡುವನೆಂಬುದು ಸರಿಹೋಗುತ್ತದೆ. ಕ್ಷಣಮಾತ್ರದಲ್ಲಿ ನಾಶವಾಗುವ ಕರ್ಮವು ಕಾಲಾಂತರದಲ್ಲಿ ಫಲವನ್ನು ಸೃಷ್ಟಿಸುವುದೆಂಬುದು ಸರಿಯಲ್ಲ. ಮೀಮಾಂಸಕರು ಹೇಳುವಂತೆ ಅಪೂರ್ವ ಅಥವಾ ಅದೃಷ್ಟವನ್ನು ಕಲ್ಪನೆ ಮಾಡಿದರೂ, ಆಯಾ ಸನ್ನಿವೇಶಕ್ಕೆ ತಕ್ಕಂತೆ ಅದು ಫಲವನ್ನು ಕೊಡಲಾರದು. ಈ ಕಾರಣದಿಂದ ಈಶ್ವರಾನುಗ್ರಹದಿಂದ ಫಲವು ದೊರೆಯುವುದೆಂದೇ ಹೇಳಬೇಕು.

(೮) ಅಂಶಾಧಿಕರಣಮ್ (೨.೩.೧)

ಜೀವನು ಉಪಕಾರ್ಯ(ಪ್ರಯೋಜ್ಯ)ನೆಂದೂ ಈಶ್ವರನು ಉಪಕಾರ (ಪ್ರಯೋಜಕ)ನೆಂದೂ ಉಪಕಾರ್ಯೋಪಕಾರಕಭಾವವನ್ನು ಹೇಳಿದೆ. ಇದು ಸಂಬಂಧವಿದ್ದರೆ ಮಾತ್ರ ಸಂಭವಿಸುತ್ತದೆ ಆಥವಾ ಪ್ರಯೋಜಕಭಾವ ಸ್ವಾಮಿ ಮತ್ತು ಸೇವಕರ ಸಂಬಂಧದಂತೆ ಇರುವುದೇ ಆಥವಾ ಅಗ್ನಿ ಮತ್ತು ಕಿಡಿ ಇವುಗಳ ಸಂಬಂಧದಂತೆ ಇರುವುದೆ? ಈ ವಿಷಯದಲ್ಲಿ ವ್ಯವಸ್ಥೆಯೇನೂ ಇಲ್ಲವೆಂದು ಪೂರ್ವಪಕ್ಷಿಯು ಹೇಳುತ್ತಾನೆ. ಜೀವೇಶ್ವರಭೇದವೂ ಅಭೇದವೂ ಶ್ರುತಿಯಲ್ಲಿ ಪ್ರತಿಪಾದಿತವಾಗಿದೆ. ಭೇದವಿರುವಾಗ ಪ್ರಯೋಜ್ಯ ಪ್ರಯೋಗಕಭಾವ ಇರಬಹುದು. ಅಭೇದವಿರುವಾಗ ಅದು ಹೇಗೆ ಇದ್ದೀತು? ಆದ್ದರಿಂದ ಜೀವೇಶ್ವರರಿಗೆ ನಿಶ್ಚಿತವಾದ ಸಂಬಂಧವಿದೆ ಎಂದು ಹೇಳುವಂತಿಲ್ಲ. ಜೀವನು ಈಶ್ವರನ ಅಂಶ, ಆಭಾಸ ಎಂದು ಉಪಾಧಿಯ ಕಲ್ಪನೆಗಳಿಂದ ಜೀವೇಶ್ವರರಿಗೂ ಜೀವಿಗಳಿಗೂ ಸಂಬಂಧವನ್ನು ವ್ಯವಸ್ಥೆ ಮಾಡಬಹುದು. ಜೀವನು ಈಶ್ವರನ ಅಂಶವೆಂದಾದರೆ, ಈಶ್ವರನು ಅವನ ಜೀವನು ಪರಿಚ್ಛಿನ್ನನಾದರೆ, ಈಶ್ವರನು ಅಪರಿಚ್ಛಿನ್ನ ಅಥವಾ ಅನವಚ್ಛಿನ್ನ. ಜೀವನು ಈಶ್ವರನ ಆಭಾಸ(ಪ್ರತಿಬಿಂಬ)ವಾದರೆ, ಈಶ್ವರನು ಬಿಂಬಸ್ಥಾನೀಯ. ಈ ವ್ಯವಸ್ಥೆಯು ವ್ಯವಹಾರಿಕವೇ ಹೊರತು ತಾತ್ತ್ವಿಕವಲ್ಲ.

(೯) ನ ವಿಲಕ್ಷಣತ್ವಾಧಿಕರಣಂ

ಬ್ರಹ್ಮವು ಜಗತ್ತಿಗೆ ಕಾರಣನೆಂದು ಶ್ರುತಿ ಸ್ಮೃತಿಗಳಿಂದ ಸಾಧಿಸಬಹುದು. ಅವುಗಳ ವಿರೋಧವನ್ನು ಪರಿಹರಿಸಬಹುದು. ಆದರೆ ತರ್ಕವು ಅವುಗಳಿಗೆ ಅನುಕೂಲವಾಗಿಲ್ಲ. ಬ್ರಹ್ಮವು ಚೇತನ, ಜಗತ್ತು ಜಡ. ಜಡವಾದ ಜಗತ್ತಿಗೆ ಚೇತನವಾದ ಬ್ರಹ್ಮವು ಕಾರಣವಾಗುವುದು ಹೇಗೆ? ಕಾರ್ಯವು ಕಾರಣದ ಧರ್ಮಗಳನ್ನು ಹೊಂದಿರುತ್ತದೆ. ಕಾರಣವಾದ ಬ್ರಹ್ಮವು ಚೇತನವಾಗಿರುವುದರಿಂದ ಕಾರ್ಯವಾದ ಜಗತ್ತು ಚೇತನವಾಗಬೇಕಾದೀತು. ಆದ್ದರಿಂದ ಬ್ರಹ್ಮವು ಜಗತ್ತಿಗೆ

ಕಾರಣವೆಂಬುದು ಸರಿಯಲ್ಲ ಎಂದು ಪೂರ್ವಪಕ್ಷಿಯು ಆಕ್ಷೇಪಿಸುತ್ತಾನೆ. ಅಚೇತನವಾದ ಗೋಮಯದಿಂದ ಚೇಳು ಹುಟ್ಟುತ್ತದೆ. ಚೇತನರಾದ ಸ್ತ್ರೀಪುರುಷರಿಗೆ ಅಚೇತನವಾದ ಕೂದಲು, ಉಗುರು ಹುಟ್ಟುತ್ತದೆ. ಹೀಗೆ ಕಾರ್ಯ-ಕಾರಣಗಳಿಗೆ ವೈಲಕ್ಷಣ್ಯವಿರುವುದು ಸಾಮಾನ್ಯವಾಗಿ ಸಿದ್ಧವಾಗುತ್ತದೆ. ಅದರಂತೆ ಇಲ್ಲಿಯೂ ಶ್ರುತಿಯನ್ನು ಅನುಸರಿಸಿ ಚೇತನವಾದ ಬ್ರಹ್ಮದಿಂದ ಅಚೇತನವಾದ ಜಗತ್ತು ಹುಟ್ಟಬಹುದು ಎಂದು.

(೧೦) ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ

ಭಗವದ್ಗೀತೆಯ ೧೩ನೇ ಅಧ್ಯಾಯದಲ್ಲಿ ಈ ಮಾತು ಬರುತ್ತದೆ. ಈ ಶರೀರವು ಕ್ಷೇತ್ರ, ಅದನ್ನು ತಿಳಿದವನು ಕ್ಷೇತ್ರಜ್ಞ, ಆ ಕ್ಷೇತ್ರಜ್ಞನು ನಾನೇ ಎಂದು ತಿಳಿ ಎಂದು ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸುತ್ತಾನೆ.

ಕ್ಷೇತ್ರಜ್ಞಶಬ್ದವು ಗೀತೆಯಲ್ಲಿ ೧೨ನೇ ಅಧ್ಯಾಯದಲ್ಲಿ ಮಾತ್ರ ಐದು ಸಾರಿ ಬರುತ್ತದೆ. (೧.೨.೨., ೨೬.೩.೪) ಗೀತೆಯ ಬೇರೆಲ್ಲಿಯೂ ಈ ಶಬ್ದವು ಬರುವುದಿಲ್ಲ. ಬ್ರಹ್ಮಾದಿಸ್ತಂಬಪರ್ಯಂತವಾದ ಅನೇಕ ಕ್ಷೇತ್ರಗಳಲ್ಲಿ ವಿಭಕ್ತನಾಗಿರುವ ಕ್ಷೇತ್ರಜ್ಞನು ಯಾವ ಕ್ಷೇತ್ರದಲ್ಲಿಯೂ ವಿಭಕ್ತನಾಗದಿರುವ ಸದ್, ಅಸದ್ ಮುಂತಾದ ಶಬ್ದಗಳಿಗೆ ಹಾಗೂ ಜ್ಞಾನಗಳಿಗೆ ಅಗೋಚರನಾದ ಪರಮಾತ್ಮ.

ಹೀಗೆ ಹೇಳಿದರೆ ಈಶ್ವರನು ಸಂಸಾರಿಯೆಂದಾಗುತ್ತದೆ ಅಥವಾ ಸಂಸಾರಿಯೇ ಇಲ್ಲದೇ ಹೋಗಬೇಕಾಗುತ್ತದೆ. ಜೀವೇಶ್ವರ ವಿವೇಕವೇ ಇಲ್ಲದಿದ್ದರೆ, ಬಂಧ-ಮೋಕ್ಷಗಳೂ ಇಲ್ಲದೆ, ಶಾಸ್ತ್ರವು ವ್ಯರ್ಥವಾಗಬೇಕಾಗುತ್ತದೆ ಎಂದು ಮುಂತಾದ ಆಕ್ಷೇಪಗಳನ್ನು ಆಚಾರ್ಯ ಶಂಕರರು ಪರಿಹರಿಸುತ್ತಾರೆ.

ಹೀಗೆ ಪ್ರಾಚೀನವಾದ ಶಾಸ್ತ್ರಗಳ ಚಿಂತನೆ ನಡೆಯುತ್ತಾದರೂ ಅದು ಪೂರ್ಣವೆಂದೇನೂ ಭಾವಿಸುವಂತಿಲ್ಲ. ಶಾಸ್ತ್ರಗಳ ಚಿಂತನೆ ವೇದಗಳ ಮೂಲಕ ಮುಂದುವರೆಯುವುದಾದರೆ ಅದು ನಿಜವಾಗಿಯೂ ಹೆಚ್ಚು ಸಮರ್ಪಕವಾಗುತ್ತದೆ. ವೇದಾಂಗಗಳಾದ ಶಿಕ್ಷಾ, ನಿರುಕ್ತ, ಛಂದಸ್ಸು ಈ ಚಿಂತನೆಯಲ್ಲಿ ಸ್ಥಾನವನ್ನು ಪಡೆದಿಲ್ಲ. ಅಂತೆಯೇ ವಿಕೃತಿ ಪಾಠ, ಪ್ರಾತಿಶಾಖ್ಯ ಮುಂತಾದ ವಿಷಯಗಳನ್ನೂ ಸೇರಿಸಿ, ವಿಷಯಗಳ ಸಂಖ್ಯೆಯನ್ನು ಕಡಿಮೆ ಮಾಡಿ ಎಲ್ಲಾ ವಿದ್ವಾಂಸರೂ ಚರ್ಚೆಯಲ್ಲಿ ಪೂರ್ಣವಾಗಿ ಪಾಲ್ಗೊಳ್ಳುವಂತೆ ಮಾಡಿದರೆ ಚಿಂತನೆಯು ಸಾರ್ಥಕವಾಗಬಹುದು. ಈಗ ನಡೆಯುತ್ತಿರುವ ಚಿಂತನದಲ್ಲಿ ಎಲ್ಲರಿಗೂ ಅವಕಾಶ ನೀಡುವ ವ್ಯವಸ್ಥೆಯಿದೆ. ಆದರೆ ಅದು ಹಲವು ಸಾರಿ ವ್ಯರ್ಥವಾಗಿದೆ. ವಿಷಯವನ್ನೇನೂ ತಿಳಿಯದೆ

ಆಕ್ಷೇಪಗಳೆಂಬ ಬಾಣಗಳನ್ನು ಸುರಿಸುವ ಸಂದರ್ಭವೂ ಇಲ್ಲದಿಲ್ಲ. ವಿಷಯವೇ ಅರ್ಥವಾಗದೇ ಸುಮ್ಮನೇ ಕುಳಿತುಕೊಳ್ಳುವ ಪ್ರವೃತ್ತಿಯೂ ಕಾಣುತ್ತಿದೆ. ವಿಷಯವನ್ನು ಸಮರ್ಪಕವಾಗಿ ಸಿದ್ಧತೆ ಮಾಡಿಕೊಳ್ಳದೆ ಬರುವವರೂ ಇದ್ದಾರೆ. ಚಿಂತನೆ ಮಾಡುತ್ತಾ ಹತ್ತು ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವಿದ್ವಾಂಸನೂ ತಾನು ಚಿಂತನಗೋಷ್ಠಿಯಿಂದ ಪಡೆದ ಲಾಭವೇನು, ಬೇರೆಯವರಿಗೆ ತಾನು ಸಲ್ಲಿಸಿದ ಋಣವೆಷ್ಟು ಎಂಬುದನ್ನು ಪರಾಮರ್ಶಿಸಿದರೆ ಈ ಕಾರ್ಯಕ್ರಮ ಸಫಲವಾಗಿದೆಯೇ ಇಲ್ಲವೇ ಎಂಬುದು ತಿಳಿಯುವುದರೊಂದಿಗೆ ಅದರ ಲೋಪದ ವಿಷಯಗಳನ್ನು ಸರಿಪಡಿಸಲು ಸಾಧ್ಯವಾಗಬಹುದು.

❋❋❋

ಪರಿಸರ ಸಂರಕ್ಷಣೆ :
ಶ್ರೀ ಸ್ವರ್ಣವಲ್ಲಿ ಶ್ರೀಗಳ ದೃಷ್ಟಿ ಮತ್ತು ಹೆಜ್ಜೆ

-ಅನಂತ ಹೆಗಡೆ ಆಶೀಸರ

''ಅಂದು ಸೆಪ್ಟೆಂಬರ್ 18-1992 :

ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ನದಿಯ ಕಡೆ ಜನಧಾರೆ ಭೋರ್ಗರೆಯುತ್ತ ಸಾಗುತ್ತಿತ್ತು, ಮಾಗೋಡ ಜಲಪಾತದ ದಿಕ್ಕಿಗೆ ಸತತ ಐದು ದಿನಗಳಿಂದ ಬರಿಗಾಲಲ್ಲಿ ಚಲಿಸುತ್ತಿದ್ದ ಕಾವಿಧಾರಿಯ ಹಿಂದೆ ಪರಿಸರ ಪ್ರೇಮಿಗಳ ಸೈನ್ಯದ ಪಾದಯಾತ್ರೆ ಸಾಗುತ್ತಿತ್ತು. ಇವರ ಮಾರ್ಗಯಾನ ಪರಿಹರಿಸಲೆಂದು ಪ್ರತಿ ಐದೈದು ಕಿಮೀ ದೂರದಲ್ಲಿ ವಿಶೇಷ ಅರವಟ್ಟಿಗೆ ವ್ಯವಸ್ಥೆಯಾಗಿತ್ತು. ಸಂಬಳ, ಭತ್ಯ, ಸಾರಿಗೆ, ವಾಕಿ-ಟಾಕಿ ಏನೊಂದೂ ಇಲ್ಲದ ಹಳ್ಳಿಯ ಸ್ವಯಂಸೇವಕರು ಈ ಪಾದಯಾತ್ರೆಯ ಸ್ವಾಗತಕ್ಕೆಂದು ಪಾನಕ, ನೀರು, ಅವಲಕ್ಕಿ, ಸೌತೆಹೋಳು ಹಿಡಿದು ಸಜ್ಜಾಗಿದ್ದರು. ಬೇಡ್ತಿ ಅಣೆಕಟ್ಟಿನ ನಿರ್ವೇಶನ ತಲುಪಿದ ಯುವ ಸನ್ಯಾಸಿ ಬೊಬ್ಬೆಗಳೆದ್ದ ಅಂಗಾಲಿಗೆ ನೀರು ಚಿಮುಕಿಸಿಕೊಂಡು ಭೂಮಿ ಪೂಜೆ ಮಾಡಿದರು. ಅತ್ತಿ-ಅಶ್ವತ್ಥ-ಸಸಿ ನೆಟ್ಟರು, ಸ್ವಾಮೀಜಿಯವರು ಭೂಮಿ ಪೂಜೆ ನಂತರ ಬಿರುಬಿಸಿಲಲ್ಲಿ ನಿಂತ 35 ಸಹಸ್ರ ಜನರನ್ನುದ್ದೇಶಿಸಿ ನಿರುದ್ವಿಗ್ನರಾಗಿ ನುಡಿದರು. ''ನಾವೀಗ ಅಹಿಂಸಾತ್ಮಕ ಕುರುಕ್ಷೇತ್ರಕ್ಕೆ ಕಾಲಿಡುತ್ತಿದ್ದೇವೆ. ಈ ಮಹಾಸಮರದಲ್ಲಿ 80ರ ವೃದ್ಧ ಭೀಷ್ಮರೂ ಬಲಿ ಆಗಬಹುದು. ಹದಿಹರಯದ ಅಭಿಮನ್ಯುಗಳೂ ಆಹುತಿ ಆಗಬಹುದು. ಹೆಜ್ಜೆ ಹಿಂದಿಡುವ ಪ್ರಶ್ನೆ ಇಲ್ಲ!''

ಉತ್ತರ ಕನ್ನಡ ಜಿಲ್ಲೆ ಹಿಂದೆಂದೂ ಕಂಡುಕೇಳರಿಯದಷ್ಟು ಭಾರೀ ಸಂಖ್ಯೆಯ ಜನಸ್ತೋಮ-ಮಂತ್ರ ಮುಗ್ಧವಾಗಿ ಆ ಕಾವಿಧಾರಿಯ ಮಾತನ್ನು ಆಲಿಸಿತ್ತು! ಹೌದು, ಯುವ ಸನ್ಯಾಸಿಯ ಉಡಿಯಲ್ಲಿ ಜ್ವಲಿಸುವ ಕೆಂಡವಿದ್ದರೂ ನುಡಿಯಲ್ಲಿ ಹಿಮಶೀತಲ ಕವಚವಿತ್ತು. ಹಸಿರಿನ ಹತ್ತು ಅಡಿ ಎತ್ತರದ ವೇದಿಕೆಯಲ್ಲಿ ಕೃಷ್ಣಾಜಿನದ ಮೇಲೆ ಕುಳಿತು ಅಬ್ಬರ ಆಡಂಬರವಿಲ್ಲದೆ ಪ್ರಕೃತಿ ರಕ್ಷಣೆಯ ಪವಿತ್ರ ಸಮರಕ್ಕೆ ಕರೆ ನೀಡಿದ

ಸ್ವರ್ಣವಲ್ಲಿಯ ಶ್ರೀ ಗಂಗಾಧರೇಂದ್ರ ಸ್ವಾಮೀಜಿಯವರಿಗೆ ಕೇವಲ 24ರ ಹರೆಯ. ಮಾಮೂಲು ಸನ್ನಿವೇಶವಾಗಿದ್ದರೆ ಅಹಿಂಸೆ ಎಂಬ ಪದವೇ ಅಪಥ್ಯವಾಗಿರುತ್ತಿದ್ದ ವಯಸ್ಸು! ಇಡೀ ರಾಷ್ಟ್ರದ ಪರಿಸರ ಕಾರ್ಯಕರ್ತರೆಲ್ಲ ಒಟ್ಟಾಗಿ 3 ವರ್ಷದ ಹಿಂದೆ ನರ್ಮದಾ ಅಣೆಕಟ್ಟುಗಳ ವಿರುದ್ಧ ಮಧ್ಯಪ್ರದೇಶದಲ್ಲಿ ಸಂಘಟಿಸಿದ ಜನಮೇಳಕ್ಕಿಂತ ಹೋಲಿಕೆಯಲ್ಲಿ ದೊಡ್ಡದು ಎನ್ನಬಹುದಾದ ಜನಸಾಗರವನ್ನು ಮಾಗೋಡಿನಂಥ ಕುಗ್ರಾಮದಲ್ಲಿ ಸೇರಿಸಿದ ಕೀರ್ತಿ ಅವರದ್ದಾಯಿತು.

''ರಿಯೋ ಶೃಂಗ ಸಭೆಯಲ್ಲಿ ಪೃಥ್ವಿ ರಕ್ಷಣೆಗೆಂದು ವಿಶ್ವನಾಯಕರು ಏನೇನು ಕರೆಗಳನ್ನು ಕೊಟ್ಟರೋ ಆ ಎಲ್ಲ ಕರೆಗಳನ್ನು ಉ.ಕ. ಜಿಲ್ಲೆಯ ರೈತರು ಕಳೆದೊಂದು ದಶಕದಿಂದ ಕೂಗುತ್ತಲೇ ಬಂದಿದ್ದಾರೆ. ಆದರೂ ಈ ಜಿಲ್ಲೆಯ ಪ್ರಾಕೃತಿಕ ಸಂಪತ್ತು ಲೂಟಿ ಮಾಡುವ ಯೋಜನೆಗಳೇ ಒಂದರ ಮೇಲೊಂದು ಬರುತ್ತಿವೆಯೇ ಹೊರತು ಇಲ್ಲಿನ ಪರಿಸರ ಸಂವರ್ಧನೆಯಲ್ಲೇ ಉದ್ಯೋಗಾವಕಾಶ ಸೃಷ್ಟಿಸಬಲ್ಲ ಯಾವ ಯತ್ನವೂ ನಡೆದಿಲ್ಲ. ಸಮರ್ಥ ನಾಯಕರಿಲ್ಲದೆಯೂ ದೇಶದ ಅತಿ ಹೆಚ್ಚು ಪರಿಸರ ಹೋರಾಟಗಳನ್ನು ನಡೆಸಿದ ಈ ಜಿಲ್ಲೆ ಈಗ ಯುವ ಸನ್ಯಾಸಿಯೊಬ್ಬರ ಮುಂದಾಳತ್ವದಲ್ಲಿ ಮತ್ತೇ ಹೋರಾಟಕ್ಕೆ ಅಣಿಯಾಗಿದೆ'' ಎಂದು ನಾಡಿನ ಪ್ರಸಿದ್ಧ ಪತ್ರಿಕೆ 'ಸುಧಾ' ವಾರಪತ್ರಿಕೆ (18 ಅಕ್ಟೋಬರ್, 1992) ವಿಶ್ಲೇಶಿಸಿತು. ಅಂತಹುದೇ ಅಭಿಪ್ರಾಯ ಎಲ್ಲ ಮಾಧ್ಯಮಗಳಲ್ಲೂ ವ್ಯಕ್ತವಾಯಿತು ಅನ್ನಬೇಕು. ಖಂಡಿತಕ್ಕೂ ಅದು ಅಂತಹ ಐತಿಹಾಸಿಕ ಗಳಿಗೆ. ಎಂತಲೇ ಶ್ರೀ ಸ್ವರ್ಣವಲ್ಲಿಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಬೇಡ್ತಿ ಚಳುವಳಿಗೆ ನೇತೃತ್ವ ನೀಡುವ ಮೂಲಕ ವ್ಯಾಪಕ ಆಂದೋಲನದಲ್ಲಿ ಧುಮುಕಿದರು. ತಮ್ಮ ಸನ್ಯಾಸ ಸ್ವೀಕಾರ ಹಾಗೂ ಪೀಠಾರೋಹಣದ ನಂತರದ ಎರಡೇ ವರ್ಷಗಳಲ್ಲಿ ನೆಲ ಜಲ ಉಳಿಸುವ ಪವಿತ್ರ ಕಾರ್ಯಕ್ಕೆ ಆಧ್ಯಾತ್ಮದ ನೇತೃತ್ವ ನೀಡಿದರು. ದಿಕ್ಕು ತೋಚದಂತಿದ್ದ ಸಾಮಾಜಿಕ ಸ್ಥಿತ್ಯಂತರದ ಘಟ್ಟವೊಂದರಲ್ಲಿ ಪುಣ್ಯ ಪುರುಷರ ಪ್ರವೇಶವಾಗುವ ಪರಿ ಹೀಗೆಯೇ ಇರಬೇಕು!

ರಾಜ್ಯದಲ್ಲೇ ಮೊದಲ ಪರಿಸರ ಹೋರಾಟ

ಹಾಗೆಂದು ಬೇಡ್ತಿ ಚಳುವಳಿ ಇಲ್ಲಿನ ಜನತೆಗೆ ಹೊಸತೇನಲ್ಲ. 1978ರಿಂದಲೇ ಆರಂಭವಾದ ಬೇಡ್ತಿ ಉಳಿಸಿ ಆಂದೋಳನಕ್ಕೆ ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತಿ ಸ್ವಾಮೀಜಿ ಅವರು ಆಶೀರ್ವಾದ ನೀಡಿದ್ದರು.

ಖ್ಯಾತ ಬರಹಗಾರ ಶ್ರೀ ನಾಗೇಶ ಹೆಗಡೆ ಅವರು ಡಾ|| ರಾಮಚಂದ್ರ ಗುಹಾ ಅವರ ಜಾಗತಿಕ ಪರಿಸರ ಚರಿತ್ರೆಗೆ ಬರೆದ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ. ''ದಾಖಲೆಗಾಗಿ ಹೇಳುವುದಾದರೆ ಕರ್ನಾಟಕದಲ್ಲಿ 1979-80ರಲ್ಲಿ ನಡೆದ ಬೇಡ್ತಿ ಚಳುವಳಿಯೇ ರಾಜ್ಯದಲ್ಲಿ ನಡೆದ ಮೊದಲ ಪರಿಸರ ಹೋರಾಟವೆಂದು ಹೇಳಬೇಕು. ಶ್ರೀ ಸ್ವರ್ಣವಲ್ಲಿಯ ಶ್ರೀ ಸರ್ವಜ್ಞೇಂದ್ರ ಸರಸ್ವತಿ ಸ್ವಾಮಿಗಳಂಥ ಸನಾತನಿಗಳ ''ಅರಣ್ಯಸೂಕ್ತ'' ಉಪದೇಶ ಚಳುವಳಿಗೆ ಸ್ಫೂರ್ತಿ ನೀಡಿತು. 1980ರ ದಶಕದಲ್ಲಿ ದೊರಕಿದ ಶ್ರೀ ಸರ್ವಜ್ಞೇಂದ್ರರ ಆಶೀರ್ವಾದ ಮಾರ್ಗದರ್ಶನ-ದಿಂದಾಗಿಯೇ ಬೇಡ್ತಿ ಯೋಜನೆ ಕೆಲ ಕಾಲ ಸರ್ಕಾರದ ಪ್ರಾತಿನಿಧ್ಯದಿಂದ ಹಿಂದೆ ಸರಿಯಿತು. ಆದರೆ 10 ವರ್ಷಗಳ ನಂತರ ಬೇಡ್ತಿ ಯೋಜನೆ ಮತ್ತೆ ಉ.ಕ. ಬಾಗಿಲು ಬಡಿಯತೊಡಗಿತು. ಆಗ ಇಂತಹ ಸಂದಿಗ್ಧದಲ್ಲಿ ಚಳುವಳಿಗೆ ಪುನರ್ಜೀವನ ಕೊಟ್ಟವರು ಶ್ರೀ ಶ್ರೀ ಗಂಗಾಧರೇಂದ್ರರು, ಅವರು ಜನ ಆಂದೋಳನವನ್ನೇ ನಡೆಸಿದರು. 1991ರಲ್ಲಿ ಬೇಡ್ತಿ ಅಣೆಕಟ್ಟು ಯೋಜನೆ ಮತ್ತೆ ಪ್ರಸ್ತಾಪಕ್ಕೆ ಬಂತು. ಯೋಜನೆ ಜಾರಿ ಪ್ರಕ್ರಿಯೆ 1992ರಲ್ಲಿ ಆರಂಭವಾಗೇ ಬಿಟ್ಟಿತು. ರಾಜಕೀಯ ಪಕ್ಷಗಳ ಮುಖಂಡರ ನೇತೃತ್ವ ಇಲ್ಲದ ಜನತೆ ಸ್ವರ್ಣವಲ್ಲಿಯ ಯುವ ಸ್ವಾಮೀಜಿಯವರ ಮುಂದಾಳತ್ವ ಅಪೇಕ್ಷಿಸಿತು. ಬೇಡ್ತಿ-ಅಘನಾಶಿನಿಕೊಳ್ಳ ಸಂರಕ್ಷಣಾ ಸಮಿತಿಯ ರಚನೆಯಾಯಿತು. 1992ರಲ್ಲಿ ಶ್ರೀ ಶ್ರೀ ಸ್ವಾಮೀಜಿ ಪಾದಯಾತ್ರೆಯ ಘೋಷಣೆ ಮಾಡಿದರು.

ಕೊನೆಗೂ ಮಣಿದ ಸರ್ಕಾರ

ದೇಶದಲ್ಲೇ ಅಪೂರ್ವ ಎನ್ನುವ ಪಾದಯಾತ್ರೆ, ಮಾಗೋಡು ಸಮಾವೇಶ ಶ್ರೀ ಸ್ವರ್ಣವಲ್ಲೀ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆದಾಗ ಕೊನೆಗೂ ಸರ್ಕಾರ ಮಣಿಯಬೇಕಾಯಿತು. ಕೇಂದ್ರ ಪರಿಸರ ಮಂತ್ರಾಲಯ ಬೇಡ್ತಿ ಅಣೆಕಟ್ಟೆ ಯೋಜನೆಗೆ ನೀಡಿದ ಅನುಮತಿಯನ್ನು ಹಿಂತೆಗೆದುಕೊಂಡಿತು. ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ಬೇಡ್ತಿ ಸಮಿತಿ ಬೇಡ್ತಿ ಯೋಜನೆ ವಿರುದ್ಧ ವ್ಯವಸ್ಥಿತ ರಿಟ್ ಹಾಕಿತು. ವೈಜ್ಞಾನಿಕ ವಿಚಾರಧಾರೆಗೆ ನೈತಿಕ ನೆಲಗಟ್ಟು, ಧಾರ್ಮಿಕ ಬದುಕಿನ ಸಿಂಚನ ಸಿಕ್ಕಿದ ಅಪೂರ್ವ ಗಳಿಗೆ ಇದು. ದೇಶದ ಪರಿಸರ ಚಳುವಳಿಯ ಇತಿಹಾಸದಲ್ಲಿ ಹೊಸದೊಂದು ಸ್ವಾಗತಾರ್ಹ ಅಧ್ಯಾಯ ದಾಖಲಾಯಿತು. ರಾಜ್ಯದ-ದೇಶಮಟ್ಟದ ಪತ್ರಿಕೆಗಳು ವಿಶೇಷ ಲೇಖನ ಬರೆದವು. ಶ್ರೀ ಸ್ವರ್ಣವಲ್ಲೀ ಸ್ವಾಮೀಜಿಯವರನ್ನು 'ಹಸಿರು ಸ್ವಾಮೀಜಿ' ಎಂದು ಉಲ್ಲೇಖಿಸಿದವು.

ವೈಜ್ಞಾನಿಕ ವಿಶ್ಲೇಷಣೆ

1994 ರಿಂದ ಕರ್ನಾಟಕ ವಿದ್ಯುತ್ ನಿಗಮ ಬೇರೆ ಬೇರೆ ವೇಷಗಳಲ್ಲಿ ಬೇಡ್ತಿ ಕಣಿವೆ ಪ್ರವೇಶಿಸಲು (ಅಣೆಕಟ್ಟು ನಿರ್ಮಾಣಕ್ಕೆ) ಪ್ರಯತ್ನಿಸುತ್ತಲೇ ಇದೆ: ಈ ಎಲ್ಲ ಸಂದರ್ಭಗಳಲ್ಲಿ ಶ್ರೀ ಸ್ವರ್ಣವಲ್ಲೀ ಸ್ವಾಮೀಜಿ ತಮ್ಮ ಸಮಿತಿಯ ಪದಾಧಿಕಾರಿಗಳ ಜೊತೆ ಸಮಾಲೋಚಿಸಿದ್ದಾರೆ. ಅವರು ಹೇಳುತ್ತಾರೆ ''ನಾವು ಬೃಹತ್ ಯೋಜನೆಗಳನ್ನು ಕುರುಡಾಗಿ ವಿರೋಧಿಸಬಾರದು. ವೈಜ್ಞಾನಿಕವಾಗಿ ಯೋಜನೆಯ ವಿವರ ಪರಿಶೀಲಿಸಬೇಕು. ಜನತೆ, ಅರಣ್ಯ, ವನ್ಯಜೀವಿ ಸಂಕುಲಕ್ಕೆ ಮಾರಕವಾಗುವ ಯೋಜನೆ ನಮಗೆ ಬೇಡ.''

ಖಾಸಗಿ ಕಂಪನಿಗಳ ಪ್ರವೇಶ : ಈ ಮಧ್ಯೆ ಖಾಸಗಿ ಕಂಪನಿಗಳು (1996-97) ಹರಿನೀರು ವಿದ್ಯುತ್ ಯೋಜನೆ ಹೆಸರಲ್ಲಿ ಬೇಡ್ತಿ-ಗಂಗಾವಳಿಗೆ 16 ಸ್ಥಳಗಳಲ್ಲಿ ಚಿಕ್ಕ ಅಣೆಕಟ್ಟು ನಿರ್ಮಿಸುವ ಚೆಲ್ವರಾಜ್ ಯೋಜನೆ ಜಾರಿಗೆ ಮುಂದಾದವು. ಖಾಸಗಿ ಕಂಪನಿಗಳು ಪ್ರತಿನಿಧಿಗಳು ಶ್ರೀ ಸ್ವರ್ಣವಲ್ಲಿ ಮಠಕ್ಕೆ ಭೇಟಿ ನೀಡಿದರು. ಯೋಜನಾ ಅಧಿಕಾರಿಗಳು ಕಾರವಾರ ಜಿಲ್ಲಾಧಿಕಾರಿ ಕಛೇರಿಯಲ್ಲಿ ಸಾರ್ವಜನಿಕ ಅಹವಾಲು ಕೇಳಿಕೆ ಸಭೆ ನಡೆಸಲು ಮುಂದಾದರು. ಸ್ಥಳ ಸಮೀಕ್ಷೆಗೆ ಮುಂದಾದರು. ಗಂಗಾವಳಿ ಜನತೆ ಉಗ್ರವಿರೋಧ ವ್ಯಕ್ತ ಮಾಡಿತು. ಪುನಃ ಜನ ಸಮಾವೇಶ, ಅಂಕೋಲಾ ತಾಲೂಕು ಅಗಸೂರಿನಲ್ಲಿ 28-10-97ರಂದು ಭಾರೀ ಜನಮೇಳ. ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರು ಅಹಿಂಸಾತ್ಮಕ ಹೋರಾಟಕ್ಕೆ ಕರೆ ನೀಡಿದರು. ನಾವು ನಮ್ಮ ನೆಲ ಜಲ ರಕ್ಷಿಸಿದರೆ ಅದು ನಮ್ಮನ್ನು ಸಂರಕ್ಷಿಸುತ್ತದೆ'' ಎಂಬ ಮಂತ್ರ ಜಪಿಸಿದರು. ಶ್ರೀಗಳವರ ಪಕ್ಷಾತೀತ ಹಸಿರು ನಾಯಕತ್ವ ಜಯಗಳಿಸಿತು. ರಾಜ್ಯ ಸರ್ಕಾರ ಖಾಸಗಿ ಕಂಪನಿಗಳ ಜೊತೆ ಮಾಡಿಕೊಂಡ ಅಣೆಕಟ್ಟು ಒಪ್ಪಂದಗಳನ್ನು 1998ರಲ್ಲಿ ರದ್ದು ಮಾಡಿತು.

ವನವಾಸಿಗಳಿಗೆ ಅಭಯ ಹಸ್ತ :

ಕರ್ನಾಟಕ ಪವರ್ ಕಾರ್ಪೋರೇಶನ್ (ಕೆ.ಪಿ.ಸಿ) ಯಲ್ಲಾಪುರ ತಾ। ಕಿರವತ್ತಿ ಹತ್ತಿರ ಕರಿಯವ್ವನ ಗುಂಡಿ ಬಳಿ ಬೇಡ್ತಿಗೆ ಅಣೆಕಟ್ಟು ನಿರ್ಮಿಸಿ ತಟ್ಟೀಹಳ್ಳ ಜಲಾಶಯಕ್ಕೆ ನೀರು ಕೊಂಡೊಯ್ಯುವ ಯೋಜನೆಯನ್ನು 1999ರಲ್ಲಿ ಪ್ರಕಟಿಸಿತು. ಬೇಡ್ತಿ ಸಮಿತಿ ತಜ್ಞ ಸಮಿತಿಯನ್ನು ಸ್ಥಳಕ್ಕೆ ಕಳಿಸಿತು. ಪ್ರೊ। ಕೇಶವ ಹೆಗಡೆ ವರದಿ ಕಿರವತ್ತಿ ಅಣೆಕಟ್ಟು ಯೋಜನೆ ಪರಿಸರಕ್ಕೆ ಮಾರಕ ಎಂದು ಅಭಿಪ್ರಾಯ ನೀಡಿತು. ಕಿರವತ್ತಿ ಭಾಗದ ಸಿದ್ಧಿ, ಕುಣಬಿ, ಗೌಳಿ, ವನವಾಸಿ ಜನ ಶ್ರೀ ಸ್ವರ್ಣವಲ್ಲೀ ಸ್ವಾಮೀಜಿಯವರಿಗೆ

ಅಹವಾಲು ಸಲ್ಲಿಸಿದರು. ಶ್ರೀ ಸ್ವಾಮೀಜಿ ಅಭಯಹಸ್ತ ನೀಡಿದರು. ಬೇಡ್ತಿ ಸಮಿತಿ ಜಿಲ್ಲೆಯ ರಾಜ್ಯದ ಇತರ ಪರಿಸರ ಸಂಘಟನೆಗಳ ಜೊತೆ ಕರಿಯವ್ವನ ಗುಂಡಿಯಲ್ಲಿ ಪ್ರತಿಭಟನೆ ವ್ಯಕ್ತ ಮಾಡಿತು. ಇಲ್ಲೂ ಸರ್ಕಾರದ ಅಣೆಕಟ್ಟು ಸಮೀಕ್ಷಾ ಕಾರ್ಯವನ್ನು ವನವಾಸಿ ಜನ ತಡೆದರು. ರಾಜ್ಯ ಸರ್ಕಾರ ಸಾರ್ವಜನಿಕ ಅಹವಾಲು ಸಭೆಯನ್ನು ಯಲ್ಲಾಪುರದಲ್ಲಿ ಇತ್ತೀಚೆಗೆ (27-02-01) ನಡೆಸಿತು. (ಕಿರವತ್ತಿ ಯೋಜನೆ ಬಗ್ಗೆ) ಶ್ರೀ ಸ್ವರ್ಣವಲ್ಲೀ ಸ್ವಾಮೀಜಿ ಯುವ ಜನತೆಗೆ ಕರೆ ನೀಡಿದರು. ತರ್ಕಬದ್ಧವಾಗಿ ಪರಿಸರ ವಾದ ಮಂಡಿಸಲು ಸೂಚಿಸಿದರು. ಕೆ.ಪಿ.ಸಿ. ತಪ್ಪು-ಮಾಹಿತಿ ನೀಡಿದ್ದು ಬಯಲಾಯಿತು. ಕಿರವತ್ತಿ ಅಣೆಕಟ್ಟು ಯೋಜನೆ ಪರವಾಗಿ ಸಾರ್ವಜನಿಕರು ಯಾರೂ ಬೆಂಬಲ ನೀಡಲಿಲ್ಲ. ಎಲ್ಲ ರಾಜಕೀಯ ಪಕ್ಷಗಳ ಮುಖಂಡರು, ಜಿಲ್ಲಾ ಪಂಚಾಯತ ಪ್ರತಿನಿಧಿಗಳು ಮುಳುಗಡೆಯ ಅರಣ್ಯನಾಶದ ಯೋಜನೆ ವಿರೋಧಿಸಿದರು.

ಮಾಗೋಡಿನಲ್ಲಿ ಎರಡನೇ ಜನ ಸಮಾವೇಶ :

ಆಗಾಗ ಬೇಡ್ತಿ ಯೋಜನೆಯ ಬೆದರಿಕೆ ಬರುತ್ತಲೇ ಇರುವುದನ್ನು ಗಮನಿಸಿ ಬೇಡ್ತಿ ಮಾಗೋಡಿನಲ್ಲಿ ಎರಡನೇ ಜನ ಸಮಾವೇಶ ನಡೆಸಲು ಶ್ರೀ ಸ್ವರ್ಣವಲ್ಲೀ ಸ್ವಾಮೀಜಿ ಸಂಕಲ್ಪ ಮಾಡಿದರು.

2000ನೇ ಇಸವಿ ನವೆಂಬರ್ 12,13,14 ರಂದು ಬೇಡ್ತಿ ಬಳಿ ಚಂದಗುಳಿಯ ಶ್ರೀ ಸಿದ್ಧಿವಿನಾಯಕ ದೇವಸ್ಥಾನದಲ್ಲಿ 3 ದಿನಗಳ ಧಾರ್ಮಿಕ ಕಾರ್ಯಕ್ರಮ. ಬೇಡ್ತಿಯ ನೆಲ, ಜಲ ಉಳಿವಿಗೆ 20 ವರ್ಷಗಳ ಹಿಂದೆ ಮಾಡಿಕೊಂಡ ಹರಕೆಯನ್ವಯ ಸ್ಥಾನಿಕ ಜನ ಮುಂದಾಗಿ ಸಂಘಟಿಸಿದ ಕಾರ್ಯಕ್ರಮ ಇದು. ಬೇಡ್ತಿ ತಟದಲ್ಲಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ವಿಶೇಷ ಪೂಜೆ-ಪ್ರಾರ್ಥನೆ ಕೈಗೊಂಡರು. ಬೇಡ್ತಿ ಕಣಿವೆಯ ಸಾವಿರಾರು ಜನ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾದರು.

ನವೆಂಬರ್ 14ರಂದು ಬೇಡ್ತಿ ಮಾಗೋಡಿನ ಕರಡಿಪಾಲ ಶಾಲಾ ಆವರಣದಲ್ಲಿ 10,000 ಜನರ ಸಮಾವೇಶ. ಉ.ಕ. ಪರಿಸರ ಸಂರಕ್ಷಣಾ ಸಮಾವೇಶ ಎಂದು ಹೆಸರಿಸಲಾದ ಈ ಜಾಗೃತಿ ಸಮ್ಮೇಳನದಲ್ಲಿ ಶ್ರೀ ಶ್ರೀ ಸ್ವಾಮೀಜಿ 1992ರ ಮಾಗೋಡು ಸಮಾವೇಶದಲ್ಲಿ ಬೋಧಿಸಿದ ಪ್ರತಿಜ್ಞಾವಿಧಿಯನ್ನು ಜನತೆ ಪುನರುಚ್ಚರಿಸುವಂತೆ ಮಾಡಿದರು. ''ಹೇ ಭಗವಂತನೇ, ಬೇಡ್ತಿ ಅಘನಾಶಿನಿಕೊಳ್ಳ ಉಳಿಸಿಕಳ್ಳುವ ನಿರಂತರ ಅಹಿಂಸಾತ್ಮಕ ಆಂದೋಲನದಲ್ಲಿ ನನ್ನನ್ನೂ ಪೂರ್ಣವಾಗಿ

ತೊಡಗಿಸಿಕೊಳ್ಳುವ ಮೂಲಕ ಯಾವುದೇ ತ್ಯಾಗಕ್ಕೂ ನಾನು ಸಿದ್ಧನಾಗಿದ್ದೇನೆ. ಭಾರತ ಮಾತೆಯ ಪಶ್ಚಿಮಘಟ್ಟದ ಅಮೂಲ್ಯ ಸಂಪದ್ಭರಿತ ಉತ್ತರ ಕನ್ನಡದ ಪರಿಸರ ಸಂರಕ್ಷಣೆಗೆ ಪ್ರತಿಜ್ಞಾಬದ್ಧನಾಗಿದ್ದೇನೆ.'' ಪುನಃ ಬೇಡ್ತಿ ಕಣಿವೆಗೆ ಆಘಾತ ತರುವ ಯೋಜನೆಗಳ ಪ್ರಸ್ತಾಪವನ್ನು ಶ್ರೀಸ್ವಾಮೀಜಿ ಕಟುವಾಗಿ ವಿರೋಧಿಸಿದರು. ''ಪರಿಸರ ವಿನಾಶದ ಯಾವುದೇ ಯೋಜನೆಯನ್ನು ಜಾರಿಗೆ ತರಲು ಬಿಡುವುದಿಲ್ಲ. ಯಾವುದಾದರೂ ಷಡ್ಯಂತ್ರದಿಂದ ಯೋಜನೆ ತರಲು ಪ್ರಯತ್ನಿಸಿದರೆ : ನಾವು ಎಂತಹ ತ್ಯಾಗಕ್ಕೂ ಸಿದ್ಧರಿದ್ದೇವೆ. ಸಂದರ್ಭ ಬಂದರೆ ಪ್ರಾಣತ್ಯಾಗಕ್ಕೂ ಸಿದ್ಧರಿದ್ದೇವೆ'' ಎಂದು ಸ್ವರ್ಣವಲ್ಲೀ ಮಠಾಧೀಶರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ''ನಮ್ಮ ಅಹಿಂಸಾತ್ಮಕ ಹೋರಾಟಕ್ಕೆ ಅದ್ಭುತವಾದ ಶಕ್ತಿ ಇದೆ'' ಎಂದು ತಮ್ಮ ಸತ್ಯಾಗ್ರಹ ಮಾರ್ಗವನ್ನು ಸ್ಪಷ್ಟಪಡಿಸಿದರು, ಪೂಜ್ಯ ಸ್ವಾಮೀಜಿ.

ಅಘನಾಶಿನಿ ಕಣಿವೆಯ ಮಣ್ಣಿನ ಮಕ್ಕಳ ಜೊತೆ :

1992-93ರಲ್ಲಿ ನಡೆದ ಅಘನಾಶಿನಿ ಕಣಿವೆಯ ಹೋರಾಟಕ್ಕೆ ದಿಕ್ಕು ತೋರಿದವರು ಸ್ವಾಮಿಗಳೇ. ಹೇರೂರಿನಲ್ಲಿ ಸಮಾವೇಶಗೊಂಡ ಕಣಿವೆಯ ಸಾವಿರಾರು ಮಣ್ಣಿನ ಮಕ್ಕಳಿಗೆ ಶಕ್ತಿ ತುಂಬಿದರು. ಅಘನಾಶಿನಿ ಕೊಳ್ಳದ ಉಳಿವಿನ ಜನಾಂದೋಲನ ಯಶ ಪಡೆಯಿತು.

''ಪಶ್ಚಿಮ ಘಟ್ಟದ ಉಳಿವಿಗೆ ಕಂಕಣ ಬದ್ಧರು''

ಪರಿಸರ ಚಳುವಳಿಯಲ್ಲಿ ಶ್ರೀಗಳ ನೇತೃತ್ವ ಕೇವಲ ಬೇಡ್ತಿ-ಅಘನಾಶಿನಿಗೇ ಸೀಮಿತವಾಗಿಲ್ಲ. ಜಗತ್ತಿನ ಅತಿ ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಒಂದಾದ ಪಶ್ಚಿಮ ಘಟ್ಟದ ಸಂರಕ್ಷಣೆಯ ಆಂದೋಲನಕ್ಕೂ ಶ್ರೀ ಸ್ವರ್ಣವಲ್ಲಿಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಕೈ ಜೋಡಿಸಿದ್ದಾರೆ. 1997-98ರಲ್ಲಿ ರಾಜ್ಯದಲ್ಲಿ ನಡೆದ ''ಪಶ್ಚಿಮ ಘಟ್ಟದಲ್ಲಿ ಬೃಹತ್ ಗಣಿ ಕಂಪನಿಗಳಿಗೆ ಪ್ರವೇಶ ಬೇಡ ಎಂಬ ಚಳುವಳಿಯನ್ನು ಶ್ರೀ ಸ್ವಾಮೀಜಿ ಬೆಂಬಲಿಸಿದರು. ಯಲ್ಲಾಪುರದ ಬಿಸಗೋಡ ಗಣಿ ಅಧ್ವಾನಗಳನ್ನು ಅವರು ಖಂಡಿಸಿದರು. ದೇವಿಮನೆ ಘಟ್ಟದಲ್ಲಿನ ಬೆಣ್ಣೆಹೊಳೆ ಉಳಿಸಿ ಹೋರಾಟಕ್ಕೆ ಬೆಂಬಲ ನೀಡಿದರು. ಹೆಗ್ಗರಣೆಯಲ್ಲಿ ನಡೆದ ಪರಿಸರ ಚಿಂತನ ಸಭೆಯಲ್ಲಿ ಪಾಲ್ಗೊಂಡರು. ಅರಣ್ಯಗಳ್ಳತನವನ್ನು ಖಂಡಿಸಿದರು. ''ಸಹ್ಯಾದ್ರಿಯ ವನಸಿರಿಯ ರಕ್ಷಣೆಗೆ ಮುಂದಾಗೋಣ'' ಎಂದು ತರುಣರಿಗೆ ಸ್ಫೂರ್ತಿ ತುಂಬಿದರು. ಈ ಹತ್ತು ವರ್ಷದ ಅವಧಿಯ ಉ.ಕ.ದ ಜೀವ ಪರಿಸರ ಉಳಿಸಲು ಸತತ ಪ್ರಯತ್ನಿಸುತ್ತಿದ್ದಾರೆ ವೈಜ್ಞಾನಿಕ ತಿಳುವಿಗೆ ಅಹಿಂಸಾತ್ಮಕ ನೇತೃತ್ವ, ಆಧ್ಯಾತ್ಮಿಕ ನೆಲೆಗಟ್ಟು

ಕೊಡುವ ಅವರ ಪ್ರಯತ್ನದಿಂದಾಗಿಯೇ ಅನೇಕ ವಿಧಾಯಕ ಕಾರ್ಯಕ್ರಮ-ಗಳಾಗಲು ಸಾಧ್ಯವಾಯಿತು. ಅಂತಹ ಪ್ರಮುಖ ಸಂಗತಿಗಳ ಉಲ್ಲೇಖ ಈ ಮುಂದೆ ಇದೆ.

ಶ್ರೀಸ್ವರ್ಣವಲ್ಲಿಗೆ ಕೇಂದ್ರ ಪರಿಸರ ಮಂತ್ರಿಗಳ ಆಗಮನ

ಪಶ್ಚಿಮ ಘಟ್ಟದ ಪರಿಸರ ಸಂಘಟನೆಗಳ ಸಮಾವೇಶ ಶ್ರೀ ಸ್ವರ್ಣವಲ್ಲೀ ಶ್ರೀಗಳ ಅಧ್ಯಕ್ಷತೆಯಲ್ಲಿ ನಡೆದದ್ದು 5 ಅಕ್ಟೋಬರ್ 1998ರಲ್ಲಿ. ಸೋಂದಾ ಸ್ವರ್ಣವಲ್ಲಿಗೆ ಕೇಂದ್ರ ಪರಿಸರ-ಅರಣ್ಯ ಮಂತ್ರಿ ಶ್ರೀ ಸುರೇಶ್ ಪ್ರಭು ಆಗಮಿಸಿ ಪರಿಸರ ಸಂಘಟನೆಗಳ ಪ್ರತಿನಿಧಿಗಳು ನೀಡಿದ ಮನವಿ ಸ್ವೀಕರಿಸಿದರು. ಸ್ವರ್ಣವಲ್ಲಿ ಶ್ರೀಗಳು ಪರಿಸರ ಸಂರಕ್ಷಣೆ ಕ್ಷೇತ್ರಕ್ಕೆ ನೀಡುತ್ತಿರುವ ಸೇವೆಯನ್ನು ಕೇಂದ್ರ ಮಂತ್ರಿ ಶ್ಲಾಘಿಸಿದರು. ಕೇಂದ್ರ ಮಂತ್ರಿಗಳಿಗೆ ಪಶ್ಚಿಮ ಘಟ್ಟದ ಪರಿಸರದ ಬಗ್ಗೆ ಕಾಳಜಿ ವಹಿಸಿ ಎಂದು ಆಗ್ರಹಿಸಿದ ಶ್ರೀ ಶ್ರೀ ಸ್ವಾಮೀಜಿ ರಾಜ್ಯದ ವಿವಿಧ ಭಾಗಗಳಿಂದ ಬಂದ ಪರಿಸರ ಕಾರ್ಯಕರ್ತರಿಗೆ ಸದಾ ಜಾಗೃತರಾಗಿ ಸಂಘಟಿತರಾಗಿರಿ'' ಎಂದು ಕರೆ ನೀಡಿದರು.

ಪಶ್ಚಿಮ ಘಟ್ಟದ ಗ್ರಾಮ ಜೀವ ವೈವಿಧ್ಯ ದಾಖಲಾತಿ ವರದಿಯನ್ನು ಕೇಂದ್ರ ಪರಿಸರ ಮಂತ್ರಿಗಳು ಶ್ರೀ ಸ್ವರ್ಣವಲ್ಲಿಯಲ್ಲಿ ಬಿಡುಗಡೆಗೊಳಿಸಿದರು.

ಕೈಗಾ ಸತ್ಯಾಗ್ರಹಿಗಳಿಗೆ ಬೆಂಬಲ :

ರಾಜ್ಯದಲ್ಲಿ ಅತಿ ದೀರ್ಘಕಾಲ ನಡೆದ ಕೈಗಾ ಅಣುಸ್ಥಾವರ ವಿರೋಧೀ ಚಳುವಳಿ ಲೆಕ್ಕಿಸದೇ ಸರ್ಕಾರ ಅಣುಸ್ಥಾವರ ನಿರ್ಮಾಣ ಮಾಡಿತು. 1999ರ ನವೆಂಬರ್ 1ರಂದು ಕೈಗಾ ಅಣುಸ್ಥಾವರ ವಿದ್ಯುತ್ ಉತ್ಪಾದನೆ ಶುರು ಮಾಡುವ ಹೊತ್ತಿಗೆ ರಾಜ್ಯ ಮಟ್ಟದಲ್ಲಿ ಕೈಗಾ ಬಳಿ ಸತ್ಯಾಗ್ರಹ ನಡೆಯಿತು.

ಜನತೆಗೆ ಸುರಕ್ಷಾ ವಿಚಾರದಲ್ಲಿ ಪೂರ್ಣ ಮಾಹಿತಿ ನೀಡಬೇಕೆಂಬ ಬೇಡಿಕೆಯನ್ನು ಪರಿಸರ ಕಾರ್ಯಕರ್ತರು ಮುಂದಿಟ್ಟರು. ಉತ್ತರ ಭಾರತ ಯಾತ್ರೆಯಲ್ಲಿದ್ದ ಶ್ರೀ ಸ್ವರ್ಣವಲ್ಲಿ ಶ್ರೀಗಳು ಫ್ಯಾಕ್ಸ್ ಸಂದೇಶ ನೀಡಿ ಸತ್ಯಾಗ್ರಹಕ್ಕೆ ನೇರ ಬೆಂಬಲ ನೀಡಿದರು. ''ಕೈಗಾ ಅಣುಸ್ಥಾವರ ನುಂಗಲಾರದ ಉಗುಳಲಾರದ ವಿಷವೆನಿಸಿದೆ. ನುಂಗಿದರೆ ಅಪಾಯ ತಪ್ಪದು. ಉಗುಳಲು ಸಾಧ್ಯವಾಗದ ಹಂತಕ್ಕೆ ಸರ್ಕಾರ ತಲುಪಿದೆ. ಹಿಂದೆ ಭಗವಾನ್ ಶಂಕರ ವಿಷವನ್ನು ನುಂಗಬೇಕಾಯಿತು. ಆಗ ಆ ವಿಷ ಗಂಟಲಿಂದ ಕೆಳಗೆ ಇಳಿಯದಂತೆ ಪಾರ್ವತಿ ದೇವಿ ತಡೆದಳು. ಶಿವ ಶ್ರೀಕಂಠನಾದ.

ಈಗ ಉತ್ತರಕನ್ನಡವೆಂಬ ಶಿವ ಅಣುಸ್ಥಾವರ ವಿಷಯವನ್ನು ಗಂಟಲಿಗೆ ಹಾಕಿಕೊಂಡಿದ್ದಾನೆ. ಜನತೆಯೆಂಬ ಪಾರ್ವತಿಯೇ ಅದನ್ನು ಹೊಟ್ಟೆಗೆ ಹೋಗದಂತೆ ತಡೆಯಬೇಕಿದೆ. ಸುರಕ್ಷತೆಯ ಬಗ್ಗೆ ಎಚ್ಚರ ವಹಿಸಬೇಕಿದೆ. ಉ.ಕ.ದ ಪರಿಸರ ಸಮಿತಿ ಸರ್ಕಾರದ ಮುಂದಿಟ್ಟಿರುವ ಬೇಡಿಕೆ ನ್ಯಾಯಸಮ್ಮತವಾಗಿದೆ. ಅವುಗಳ ಪೈಕಿ 'ಸಾರ್ವಜನಿಕ ಸುರಕ್ಷಾ ಸಮಿತಿಯ ರಚನೆಯಂತೂ ತುಂಬಾ ಅವಶ್ಯವಾಗಿದೆ'' ಎಂದು ಜನತೆಗೆ ತಿಳುವಳಿಕೆ ನೀಡಿದರು.

ಕೈಗಾ ಪ್ರಮುಖರ ಜೊತೆ ಮುಕ್ತ ಚರ್ಚೆ :

ಕೈಗಾ ಅಣುಸ್ಥಾವರದ ಮುಖ್ಯಸ್ಥರು ಹಾಗೂ ಪರಿಸರ ಪ್ರಮುಖರ ನೇರ ಮುಖಾಮುಖಿ ಮುಕ್ತ ಚರ್ಚೆಗೆ ಅವಕಾಶ ಲಭ್ಯವಾದದ್ದು ಶ್ರೀ ಸ್ವರ್ಣವಲ್ಲಿ ಮಠದಲ್ಲಿ (2 ಜುಲೈ 2000). ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಮುಕ್ತ ಚರ್ಚೆಯಲ್ಲಿ ಈವರೆಗೆ ಪ್ರಕಟವಾಗದ ಅನೇಕ ಮಹತ್ವದ ಅಂಶಗಳು ಬೆಳಕು ಕಂಡವು. ಅಣುಸ್ಥಾವರ ಮುಖ್ಯಸ್ಥ ಶ್ರೀ ವಿ.ಕೆ. ಶರ್ಮಾ ಹಾಗೂ ಅವರ ಜೊತೆ ತಜ್ಞರು ಶ್ರೀ ಸ್ವರ್ಣವಲ್ಲಿ ಶ್ರೀಗಳಿಗೆ ಅಧ್ಯಯನ ವರದಿಗಳನ್ನು ನೀಡುತ್ತೇವೆ. ಅಣುಶಕ್ತಿ ಮಂಡಳಿ ಅಧ್ಯಕ್ಷರ ಹಾಗೂ ಶ್ರೀ ಸ್ವರ್ಣವಲ್ಲಿ ಶ್ರೀಗಳ (ಪರಿಸರ ಕಾರ್ಯಕರ್ತರ ಜೊತೆ) ಭೇಟಿ ಏರ್ಪಡಿಸುತ್ತೇವೆ, ಪುನರ್ವಸತಿ ಬಗ್ಗೆ ಜಂಟಿ ಸಭೆ ಕರೆಯುತ್ತೇವೆ'' ಎಂಬ ಸಂಗತಿಗಳನ್ನು ಪ್ರಕಟಿಸಿದರು. ''ಜನತೆಗೆ ಬೇಡವಾದ ಅಣುಸ್ಥಾವರ ಬಂದುಬಿಟ್ಟಿದೆ. ಸುರಕ್ಷಾಕ್ರಮಗಳಿಗೆ ಆದ್ಯತೆ ಮುಖ್ಯ. ವಿದ್ಯುತ್ತಿಗಿಂತ, ಮನುಷ್ಯ ಹಾಗೂ ವನ್ಯಜೀವಿ-ಸಸ್ಯ ಸಂಕುಲದ ಉಳಿವು ಪ್ರಾಮುಖ್ಯವಾದದ್ದು'' ಎಂದು ಶ್ರೀ ಸ್ವಾಮೀಜಿ ತಮ್ಮ ಆಂತರ್ಯದ ಮಾತುಗಳನ್ನು ಪ್ರಕಟಿಸಿದರು. ''ಈಗಲೂ ಈ ದೇಶದ ಪ್ರಧಾನ ಮಂತ್ರಿಗಳು ಕೈಗಾ ಅಣುಸ್ಥಾವರ ನಿಲ್ಲಿಸಿದರೆ ಅದು ತಮಗೆ ಅತ್ಯಂತ ಸಂತೋಷ ನೀಡುತ್ತದೆ'' ಎಂದು ಹೇಳಿದರು.

ಶರಾವತಿ ಕಣಿವೆಗೆ ಭೇಟಿ

ಶರಾವತಿ ಟೇಲರೇಸ್ ಅಣೆಕಟ್ಟು ಯೋಜನೆಯಿಂದ ಗೇರುಸೊಪ್ಪಾ ಕಣಿವೆ ನಾಶವಾಗುತ್ತಿದೆ. ಒಮ್ಮೆ ಆ ಪ್ರದೇಶಕ್ಕೆ ಬಂದು ಜನರನ್ನು ಜಾಗೃತಗೊಳಿಸಬೇಕೆಂಬ ಅಪೇಕ್ಷೆಯನ್ನು ಡಾ॥ ಕುಸುಮಾ ಸೊರಬಾ ಶ್ರೀ ಸ್ವರ್ಣವಲ್ಲಿ ಶ್ರೀಗಳಲ್ಲಿ ನಿವೇದನೆ ಮಾಡಿದ್ದರು. 1994ರ ಮಾರ್ಚ್‌ನಲ್ಲಿ ಶ್ರೀ ಸ್ವರ್ಣವಲ್ಲೀ ಶ್ರೀಗಳು ಉಪ್ಪೋಣಿ ಬಳಿ ಮಾವಿನಹೊಳೆ ಎಂಬಲ್ಲಿ ಗೇರುಸೊಪ್ಪಾ ಪ್ರದೇಶದ ಹಳ್ಳಿಗಳ ಜನರನ್ನು ಉದ್ದೇಶಿಸಿ

ಮಾತನಾಡಿದರು. ಪರಿಸರ ಸಂದೇಶ ನೀಡಿದರು. ಗೇರುಸೊಪ್ಪಾ ಅಣೆಕಟ್ಟು ಪ್ರದೇಶಕ್ಕೆ ಭೇಟಿ ನೀಡಿ ಪ್ರತ್ಯಕ್ಷ ಚಿತ್ರಣ ಪಡೆದರು.

'ಅಳಿದುಳಿದ ಕಾಳಿಕೊಳ್ಳ ಉಳಿಸೋಣ'

ಇತ್ತೀಚೆಗೆ 2000ನೇ ಇಸವಿಯ ನವೆಂಬರ್ ಡಿಸೆಂಬರ್‌ನಲ್ಲಿ ದಾಂಡೇಲಿ ಬಳಿ ಇನ್ನೊಂದು ಅಣೆಕಟ್ಟು ಹಾಕಿ ಅಲ್ಲಿನ ಮುಗ್ದ ಕುಣುಬಿ ಮರಾಠಿ ವನವಾಸಿಗಳನ್ನು ಮುಳುಗಡೆ ಮಾಡುವ ಹಾಗೂ ಅರಣ್ಯ ನಾಶಮಾಡುವ ಅಣೆಕಟ್ಟು ಯೋಜನೆ ಪ್ರಸ್ತಾಪವನ್ನು ಶ್ರೀ ಸ್ವರ್ಣವಲ್ಲಿ ಶ್ರೀಗಳು ವಿರೋಧಿಸಿದರು.

ಪರಿಸರ ಸಂಬಂಧೀ ರಚನಾತ್ಮಕ ಕಾರ್ಯಗಳಲ್ಲಿ :

1994ರಲ್ಲಿ 45 ದಿನ ಉ.ಕ. ಜಿಲ್ಲೆಯಾದ್ಯಂತ ಶ್ರೀ ಸ್ವರ್ಣವಲ್ಲಿ ಮಠ ಹಾಗೂ ಹಿಂದು ಸೇವಾ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಸಂಸ್ಕೃತ ಸಂಗಮ ಅಭಿಯಾನ ನಡೆಯಿತು. ಅಭಿಯಾನದ ಅಂಗವಾಗಿ ಜಿಲ್ಲೆಯ 20 ಸ್ಥಳಗಳಲ್ಲಿ ಪರಿಸರ ಸಂಬಂಧೀ ಉಪನ್ಯಾಸಗಳು ನಡೆದವು. ಗುಂದ, ದಾಂಡೇಲಿ, ಹೊನ್ನಾವರಗಳಲ್ಲಿ ಶ್ರೀ ಸ್ವರ್ಣವಲ್ಲಿ ಶ್ರೀಗಳು ಪರಿಸರ ಜಾಗೃತಿಯ ಸಂದೇಶ ನೀಡಿದರು. ಸಿದ್ದಾಪುರ ತಾಲೂಕಿನ ಇಟಗಿಯಲ್ಲಿ ವನೌಷಧಿ ಶಿಬಿರ ನಡೆಯಿತು. 28 ಕಡೆ ಮನೆಮದ್ದು ಕಾರ್ಯಕ್ರಮ ಏರ್ಪಾಟಾಗಿತ್ತು. ಅಂಕೋಲಾದ ಬೆಳ್ಳಂಬರಕ್ಕೆ ಸ್ವತಃ ಶ್ರೀ ಸ್ವರ್ಣವಲ್ಲೀ ಶ್ರೀಗಳು ಭೇಟಿ ನೀಡಿದರು. ಖ್ಯಾತ ನಾಟಿ ವೈದ್ಯ ಬೊಮ್ಮಶಿವುಗೌಡ ಅವರನ್ನು ಸನ್ಮಾನಿಸಿದರು.

ಪವಿತ್ರವಾದ ದೇವರ ಕಾಡು ರಕ್ಷಣೆ

ಶ್ರೀ ಸ್ವರ್ಣವಲ್ಲಿಯ ಪುಣ್ಯಭೂಮಿಯಲ್ಲಿ ಪವಿತ್ರವನ ನಿರ್ಮಾಣ, ಸಾಲು ಸಸಿ ಬೆಳೆಸುವ ಕಾರ್ಯಗಳಿಗೆ ಶ್ರೀಗಳು ಮುಂದಾದರು. ಶಿರಸಿ ತಾ। ಸದಾಶಿವಳ್ಳಿಯ ದೇವರ ವನದ ಉದ್ಘಾಟನೆ ಮಾಡಿ ಹೀಗೆಂದರು (16-7-99) ''ಪ್ರತಿಯೊಂದು ದೇವಸ್ಥಾನ ಮೂರು ಪ್ರಮುಖ ಅಂಶಗಳನ್ನು ಹೊಂದಿರಬೇಕು. ಅಲ್ಲಿ ವೇದ ಘೋಷ ನಡೆಯುತ್ತಿರಬೇಕು. ಸಮೀಪದಲ್ಲೇ ಸರೋವರ ಇರಬೇಕು. ದೇವಾಲಯ ಪವಿತ್ರವನ ಹೊಂದಿರಬೇಕು. ಪವಿತ್ರವನ ನಿರ್ಮಾಣ ಹಾಗೂ ದೇವರ ಕಾಡು ಸಂರಕ್ಷಣೆ ಎಲ್ಲೆಡೆ ಆಂದೋಲನವಾಗಬೇಕು.''

ಶ್ರೀಸ್ವರ್ಣವಲ್ಲಿ ಶ್ರೀಗಳು ಗೌರವ ಅಧ್ಯಕ್ಷರಾಗಿರುವ ಸಂಸ್ಕೃತ ವರ್ಷ ಸಮಿತಿ ಅಂಕೋಲಾದಲ್ಲಿ 'ವೃಕ್ಷ ಆಯುರ್ವೇದ' ಕುರಿತು ವಿಚಾರ ಸಂಕೀರ್ಣ ನಡೆಸಿದ್ದು ಉಲ್ಲೇಖನೀಯ.

ನಮ್ಮ ಜಿಲ್ಲೆಯ ಅಭಿವೃದ್ಧಿ ಹೇಗಿರಬೇಕು?

''ಉ.ಕ. ಜಿಲ್ಲೆಯಲ್ಲಿ ಬೃಹತ್ ಅರಣ್ಯ ನಾಶೀ ಯೋಜನೆಗಳು ಬೇಡ ಎಂದು ನಾವು ವಿರೋಧಿಸುವ ಹೊತ್ತಿಗೇ ನಮ್ಮ ಜಿಲ್ಲೆಯ 'ವಿನಾಶರಹಿತ ಅಭಿವೃದ್ಧಿ' ಹೇಗಿರಬೇಕು ಎಂಬ ಬಗ್ಗೆ ವಿಶೇಷ ಗಮನ ನೀಡಿದ್ದೇವೆ. ನಮ್ಮ ಬೇಡ್ತಿ ಸಮಿತಿ ಆಶ್ರಯದಲ್ಲಿ ಶಿರಸಿಯಲ್ಲಿ 3 ದಿನಗಳ ರಾಜ್ಯಮಟ್ಟದ ವಿಚಾರ ಸಂಕೀರ್ಣ ನಡೆಸಿ ಜಿಲ್ಲೆಯ ಸಮಗ್ರ ವಿಕಾಸದ ಬಗ್ಗೆ ಚಿಂತನೆ ನಡೆಸಿದ್ದೇವೆ ನಮ್ಮ ವಿಕಾಸದ ಮಾದರಿಯನ್ನು ಸರ್ಕಾರಕ್ಕೂ ನೀಡಿದ್ದೇವೆ. (ಜನವರಿ 23,24,25 1999) ಬೇಡ್ತಿ ಸಮಿತಿ ನಮ್ಮ ಜಿಲ್ಲೆಯ ನದಿಗಳ ನೀರಿನ ಸದ್ಬಳಕೆಗೆ ಜನಪರ ಯೋಜನೆಯನ್ನು ತಯಾರಿಸಿದೆ. ಈಗ ರಾಜ್ಯ ಸರ್ಕಾರವೇ ನಮ್ಮ ಮನವಿ ಪುರಸ್ಕರಿಸಿದೆ. ನೀರಾವರಿ ಸಮಿತಿ ರಚಿಸಿದೆ'' ಎಂದು ತಮ್ಮ ಸುಸ್ಥಿರ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಶ್ರೀಸ್ವರ್ಣವಲ್ಲಿ ಶ್ರೀಗಳು ಮುಂದಿಡುತ್ತಾರೆ.

ಕನ್ನಡದ ಇನ್ನೊಂದು ವಾರಪತ್ರಿಕೆ ತರಂಗ, ತನ್ನ 13 ಡಿಸೆಂಬರ್ 1992ರ ಸಂಚಿಕೆಯಲ್ಲಿ ಪ್ರಕಟಿಸಿದ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರ ಸಂದರ್ಶನ ಇಲ್ಲಿ ಉಲ್ಲೇಖನೀಯ. ''ಉತ್ತರ ಕನ್ನಡದ ನೆಲದಲ್ಲಿ ತೇಜಸ್ವಿ ಪುಂಜವೊಂದರ ಉದಯವಾಗಿದೆ. ಪರಿಸರ ಅವನತಿಯ ಅಂಚಿನಲ್ಲಿರುವ ಈ ಜಿಲ್ಲೆಯ ಪಾಲಿಗೆ ಒಂದು ಆಶಾಕಿರಣ ಮೂಡಿ ನಿಂತಿದೆ. ಜಿಲ್ಲೆ ತನ್ನ ಅಸ್ತಿತ್ವದ ಉಳಿವಿಗೆ ಇಷ್ಟು ವರ್ಷ ಕಾದಿದ್ದು ಸಾರ್ಥಕವಾಗಿದೆ. ಒಬ್ಬ ತೇಜೋವಂತರೂ, ಚಾಣಾಕ್ಷರೂ, ಸಮರ್ಥನೇತಾರರೂ ಆದ ಶ್ರೀ ಗಂಗಾಧರೇಂದ್ರ ಸ್ವಾಮಿಗಳು ಹೆತ್ತತಾಯಿಯ ಅಳಲನ್ನು ಸಮರ್ಥವಾಗಿ ತೊಡೆದುಹಾಕಬಲ್ಲರು ಎಂಬುದರಲ್ಲಿ ಸಂಶಯವಿಲ್ಲ. ಅವರ ಪ್ರೀತಿಯ ಮೊದಲ ಕರೆಗೆ 35,000 ಜನ ಓಗೊಟ್ಟಿದ್ದಾರೆ. ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಚಳುವಳಿಯ ಸೇನಾನಿಯಾದ ಇವರು ಮೊದಲ ಸುತ್ತಿನಲ್ಲೇ ಜಯದ ಕಹಳೆ ಮೊಳಗಿಸಿದ್ದಾರೆ.'' ಈ ಹತ್ತು ವರ್ಷಗಳಲ್ಲಿ ಶ್ರೀಗಳವರ ಸಾಧನೆ ಗಮನಿಸಿದರೆ ಈ ಒಂದೊಂದು ಮಾತೂ ಸತ್ಯ ಎಂದೆನಿಸದೇ ಇರದು. ತರಂಗಕ್ಕೆ ನೀಡಿದ ಸಂದರ್ಶನದಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತಿಗಳು ''ಸ್ವಾಮೀಜಿಯಿರಲಿ, ಮಠವಿರಲಿ, ಅದು ಸಮಾಜದಿಂದ ಹೊರಗಿರಲು ಸಾಧ್ಯವಿಲ್ಲ. ಸಾಮಾಜಿಕ ಬದ್ಧತೆ ಅದಕ್ಕೂ ಇದ್ದೇ ಇದೆ. ಪರಿಸರ ಸಂರಕ್ಷಣೆ ಜನ ಸಮಾಜದ ರಕ್ಷಣೆ ನಮ್ಮ ಈ ಚಳುವಳಿಯ ಉದ್ದೇಶ.'' ಇದು ಯಾವ ಜಾತಿ ಜನಾಂಗದ ಹೋರಾಟ ಅಲ್ಲ, ಇದು ಕಳೆದುಕೊಳ್ಳುವವರ ಹೋರಾಟ. ಜನರು ಪರಿಸರ ಉಳಿಸುವ ಕಾಳಜಿ ಉಳ್ಳವರ ಹೋರಾಟ'' ಎಂದರು. ''ಬೇಡ್ತಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವ

ಹಠವನ್ನು ಸರ್ಕಾರ ಮಾಡಬಾರದು. ಹಾಗೊಮ್ಮೆ ಮುಂದಾದರೆ ನಾವು ಬಲಿದಾನಕ್ಕೂ ಸಿದ್ಧ. ಇಲ್ಲಿ ರಾಜೀಯ ಪ್ರಶ್ನೆ ಇಲ್ಲ. ಅಹಿಂಸಾತ್ಮಕ ಹೋರಾಟವನ್ನು ನಾವು ಇನ್ನಷ್ಟು ಉಗ್ರಗೊಳಿಸುತ್ತೇವೆ'' ಎಂದು ಅಭಿಪ್ರಾಯ ಪಟ್ಟರು. ಅಂತೆಯೇ ಇಂದಿಗೂ ಆ ಧೃಡ ಸಂಕಲ್ಪವನ್ನು ಜನರ ಚಿತ್ತದಲ್ಲಿರಿಸಲು ಪ್ರಯತ್ನಿಸುತ್ತಿದ್ದಾರೆ.

ಮುಂದೇನು?

ನಮ್ಮ ಇಂದಿನ ಪರಿಸರ ಪರಿಸ್ಥಿತಿ ಒಂದು ಗಂಭೀರ ಪರಿಸ್ಥಿತಿಗೆ ಬಂದು ನಿಂತಿದೆ. ಏರುತ್ತಿರುವ ಜನಸಂಖ್ಯೆಯಿಂದಾಗಿ ಹಾಗೂ ಅದರ ಹೆಚ್ಚುತ್ತಿರುವ ಬೇಡಿಕೆಗಳಿಂದಾಗಿ ಪರಿಸರದ ಮೇಲೆ ಇನ್ನಿಲ್ಲದ ಒತ್ತಡ ಹೆಚ್ಚುತ್ತಿರುವುದು ಒಂದು ಸಂಗತಿ. ಇಷ್ಟೇ ಪ್ರಮುಖವಾದ ಇನ್ನೊಂದು ಒತ್ತಡವೆಂದರೆ ದೇಶ ವಿವೇಚನೆಯಿಲ್ಲದೆ ಔದ್ಯೋಗಿಕರಣಕ್ಕೆ ತೆರೆದುಕೊಳ್ಳುತ್ತಿರುವುದರಿಂದಾದ ಬೆದರಿಕೆಗಳು. ''ಇವೆರಡನ್ನೂ ಎದುರಿಸಿ, ಮುಂದಿನ ಜನಾಂಗಕ್ಕೆ ನಮ್ಮ ಈ ಪವಿತ್ರ ಭೂಮಿಯನ್ನು ಕಾಯ್ದಿಡ-ಬೇಕಾದ್ದು ನಮ್ಮ ಕರ್ತವ್ಯ'' ಎಂದು ಶ್ರೀಗಳು ಹೇಳುತ್ತಾರೆ. ಹಾಗಾದರೆ ಆಧುನಿಕ ಬದುಕಿನ ಕನಿಷ್ಠ ಬೇಡಿಕೆಗಳನ್ನಾದರೂ ಪೂರೈಸುವುದು ಹೇಗೆ ಎಂದು ಕೇಳಿದರೆ ಶ್ರೀಗಳರವರಲ್ಲಿ ಸ್ಪಷ್ಟ ಉತ್ತರವಿದೆ: ''ಪರಿಸರಕ್ಕೆ ಹಾನಿ ಆಗದ ಬದಲಿ ಇಂಧನ ಮೂಲಗಳ ಅಭಿವೃದ್ಧಿಯಾಗಬೇಕು. ಸ್ಥಳೀಯ ಬದುಕನ್ನು, ಜೀವಸಂಪತ್ತನ್ನು ಸಂರಕ್ಷಿಸಿಕೊಂಡೇ ಮುಂದುವರಿಯುವಂಥ ಉದ್ಯೋಗ ಮೂಲಗಳು ಸೃಷ್ಟಿಯಾಗ-ಬೇಕು. ಇಷ್ಟಕ್ಕೂ ನಮ್ಮ ಇತಿ-ಮಿತಿ ಅರಿತು ಬಾಳುವ ವಿವೇಕಶೀಲ ಮನಸ್ಸು ನಮಗೆಲ್ಲ ನೆನವರಿಕೆಯಾಗಬೇಕು.'' ಎಂಥ ಅನುಭವಿ ಅಭಿಪ್ರಾಯಗಳಲ್ಲವೆ?

1992ರ ಡಿಸೆಂಬರ್ 2ರ 'ಫ್ರಂಟ್‌ಲೈನ್' ಇಂಗ್ಲೀಷ್ ಪಾಕ್ಷಿಕ ಸ್ವಾಮೀಜಿಯವರನ್ನು 'ಮೌನ ಕಣಿವೆಯ ಹಸಿರು ಸ್ವಾಮೀಜಿ' ಎಂದು ತನ್ನ ಲೇಖನದಲ್ಲಿ ಉಲ್ಲೇಖಿಸಿತ್ತು. ಎಂತಹ ಅನ್ವರ್ಥಕ ಮಾತುಗಳವು! ಅಂತಹ ನೈತಿಕ-ಧಾರ್ಮಿಕ-ಸಾಮಾಜಿಕ ಮುಂದಾಳತ್ವ ಪಡೆದ ಉ.ಕ. ಜನತೆ ಧನ್ಯವೆನ್ನಬೇಕು. ಆದ್ದರಿಂದಲೇ ಶ್ರೀಗಳವರ ಮಾರ್ಗದರ್ಶನದಲ್ಲಿ ಹೆಜ್ಜೆಯಿಡುವುದು ನಮ್ಮ ಮಂತ್ರವಾಗಲಿ ಎಂದು ಹಾರೈಕೆ.

ಲೇಖಕರ ಕುರಿತು :

ಶ್ರೀ ಅನಂತ ಹೆಗಡೆ ಅಶೀಸರ ಇವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು, ತಮ್ಮ ವಿದ್ಯಾಭ್ಯಾಸದ ನಂತರ ಪೂರ್ಣ ಸಮಯವನ್ನು ಪರಿಸರ ಸಂರಕ್ಷಣೆ ಹಾಗೂ ಗ್ರಾಮ ವಿಕಾಸ ಕಾರ್ಯಗಳಲ್ಲಿ ತೊಡಗಿಸಿಕೊಂಡವರು. ಕಳೆದ

18 ವರ್ಷಗಳಿಂದ ಪಶ್ಚಿಮ ಘಟ್ಟದಲ್ಲಿ ಪರಿಸರ ಉಳಿಸಲು ಜನ ಸಂಘಟನೆ ಮಾಡುತ್ತಿದ್ದಾರೆ. ವೃಕ್ಷಲಕ್ಷ ಆಂದೋಲನದ ರಾಜ್ಯ ಸಂಯೋಜಕರು ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ರಾಷ್ಟ್ರೀಯ ಜಲಾನಯನ ತಜ್ಞ ಮಂಡಳಿಯ ಸದಸ್ಯರು. ಬೇಡ್ತಿ ಅಘನಾಶಿನಿಕೊಳ್ಳ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿಗಳು. ಬೇಡ್ತಿ ಚಳುವಳಿ, ಶ್ರೀ ಸ್ವರ್ಣವಲ್ಲಿ ಶ್ರೀಗಳ ಪಾತ್ರ, ರಚನಾತ್ಮಕ ಆಯಾಮಗಳ ಚಿತ್ರಣವನ್ನು ಶ್ರೀ ಅನಂತ ಆಶೀಸರ ಈ ಲೇಖನದಲ್ಲಿ ನೀಡಿದ್ದಾರೆ.

❋❋❋

ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಆಶ್ರಯದಲ್ಲಿ ಇತಿಹಾಸ ಸಮ್ಮೇಳನ

-ಡಾ|| ಎ.ಕೆ. ಶಾಸ್ತ್ರಿ

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಆಶ್ರಯದಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ಹನ್ನೊಂದನೆಯ ವಾರ್ಷಿಕ ಸಮ್ಮೇಳನ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ತಾ|| 25-10-97 ರಿಂದ 27-10-97ರ ವರೆಗೆ ನಡೆಯಿತು. ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳವರ ಸಾನ್ನಿಧ್ಯದಲ್ಲಿ, ತೋಟಗಾರರ ಕಲ್ಯಾಣಮಂಟಪದಲ್ಲಿ ಜರುಗಿದ ಇತಿಹಾಸ ಸಮ್ಮೇಳನದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಇಲಾಖೆಗಳ ಅಂದಿನ ರಾಜ್ಯ ಸಚಿವೆಯರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಉದ್ಘಾಟಿಸಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಕೆ. ಅಭಿಶಂಕರ್ ವಹಿಸಿದ್ದರು.

ಹದಿನೈದು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಕರ್ನಾಟಕ ಇತಿಹಾಸ ಅಕಾಡೆಮಿ ಇಂದು ಹೆಮ್ಮರವಾಗಿ ಬೆಳೆದಿದೆ. ಇತಿಹಾಸ ಅಕಾಡೆಮಿಯನ್ನು ಸ್ಥಾಪಿಸಿ ಅದಕ್ಕೆ ಚಾಲನೆ ನೀಡಿದವರು ದೇಶದ ಪ್ರಸಿದ್ಧ ಇತಿಹಾಸ ತಜ್ಞ ಡಾ|| ಜಿ.ಎಸ್. ದೀಕ್ಷಿತ್. ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಸ್ಥಳೀಯರ ಆಶ್ರಯದಲ್ಲಿ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸುತ್ತ ಬರಲಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿಯ ಆಕರ ಸಾಮಗ್ರಿಗಳನ್ನು ಬೆಳಕಿಗೆ ತಂದು, ಅವುಗಳನ್ನು ಆಧಾರವಾಗಿರಿಸಿಕೊಂಡು ಸಂಶೋಧನಾತ್ಮಕ ಲೇಖನಗಳನ್ನು ಪ್ರತಿವರ್ಷ ಪ್ರಕಾಶಿಸಲ್ಪಡುವ 'ಇತಿಹಾಸ ದರ್ಶನ'ದಲ್ಲಿ ಅಳವಡಿಸಲಾಗಿದೆ. ಇಂದಿನವರೆಗೆ ಹದಿನೈದು ಸಂಪುಟಗಳು ಈಗಾಗಲೇ ಬೆಳಕಿಗೆ ಬಂದಿದ್ದು, ಸುಮಾರು ಒಂದು ಸಾವಿರದಷ್ಟು ಕರ್ನಾಟಕದ ಚರಿತ್ರೆಗೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ.

ಕರ್ನಾಟಕದ ಚರಿತ್ರೆಯನ್ನು ವಸ್ತುನಿಷ್ಠವಾಗಿ ಪುನರ್‌ರೂಪಿಸುವಲ್ಲಿ ಇತಿಹಾಸ ಅಕಾಡೆಮಿಯು ಪ್ರಕಾಶಿಸಿದ ಗ್ರಂಥಗಳು ಅಮೂಲ್ಯವಾಗಿವೆ. ಕರ್ನಾಟಕ ಚರಿತ್ರೆಗೆ ಸಂಬಂಧಿಸಿದ ಶಿಲಾ ಮತ್ತು ತಾಮ್ರ ಶಾಸನಗಳು, ಕೋಟೆ ಕೊತ್ತಲಗಳು, ದೇವಾಲಯ, ಇಗರ್ಜಿ, ಮಸೀದಿಗಳು, ನಾಣ್ಯಗಳು, ವಿದೇಶೀಯರ ಕಥನಗಳು, ಸಾಹಿತ್ಯಕ ಕೃತಿಗಳು, ದಾಖಲೆಗಳು, ತಾಡೋಲೆಗಳು, ಕಡತಗಳು ಮುಂತಾದ ಆಕರಗಳನ್ನು ಪರಿಶೀಲಿಸಿ, ಅವುಗಳನ್ನು ಕಾಪಾಡಿಕೊಂಡು, ಸಂಶೋಧನಾತ್ಮಕ ಪ್ರಬಂಧಗಳನ್ನು ಬರೆಯುವ ಕಾರ್ಯವನ್ನು ಇತಿಹಾಸ ಅಕಾಡಮಿಯ ಹಿರಿ-ಕಿರಿಯ ವಿದ್ವಾಂಸರು ಸಮರ್ಥವಾಗಿ ಮಾಡುತ್ತಲೇ ಬಂದಿದ್ದಾರೆ. ಕರ್ನಾಟಕ ಇತಿಹಾಸ ಅಕಾಡೆಮಿಯ ಸಮ್ಮೇಳನಗಳಲ್ಲಿ ಭಾಗವಹಿಸುವುದೇ ಒಂದು ಹೆಮ್ಮೆಯ ವಿಷಯವಾಗಿದೆ.

ಇತಿಹಾಸ ಅಕಾಡೆಮಿಯ ಈ ಹಿನ್ನೆಲೆಯಲ್ಲಿ, ಸ್ವರ್ಣವಲ್ಲಿಯ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನದ ಸಹಯೋಗದಲ್ಲಿ ಶಿರಸಿಯಲ್ಲಿ ನಡೆದ ಹನ್ನೊಂದನೆಯ ವಾರ್ಷಿಕ ಸಮ್ಮೇಳನ ಒಂದು ಅಪರೂಪದ ಸಮ್ಮೇಳನವೆಂದೇ ಹೇಳಬೇಕು.

ದಿ.25ರಂದು ಸಮಾರಂಭವನ್ನು ಉದ್ಘಾಟಿಸಿದ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರು, ''ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಕಲೆ, ಪರಿಸರ ಹೀಗೆ ಎಲ್ಲವನ್ನೂ ಉಳಿಸಬೇಕು ಎಂಬ ಕೂಗು ಕೇಳಿ ಬರುತ್ತಿದೆ. ಉಳಿಸಬೇಕಾದ ಅಗತ್ಯ ಇರುವುದೂ ನಿಜ. ಆದರೆ ಎಲ್ಲವೂ ಸರಕಾರದಿಂದಲೇ ಆಗಬೇಕು ಎಂಬ ಭಾವನೆ ಸರಿ ಅಲ್ಲ. ಸರಕಾರ ನಿಮಿತ್ತ ಮಾತ್ರ. ರಾಜ್ಯದ ಸಮಗ್ರ ಜನತೆ ಈ ಕಾರ್ಯಕ್ಕೆ ಮುಂದಾಗ-ಬೇಕಿದೆ'' ಎಂದು ಹೇಳಿದರು. 'ಇತಿಹಾಸ ಎಂದರೆ ಆಂಗ್ಲರ ಇತಿಹಾಸ' ಎಂದು ವ್ಯಾಖ್ಯೆ ನೀಡುವ ಕಾಲ ಸೃಷ್ಟಿಯಾಗುತ್ತಿದೆ ಎಂದು ವಿಷಾದಿಸಿದ ಅವರು ನಮ್ಮ ಮಕ್ಕಳಿಗೆ ನಮ್ಮ ಇತಿಹಾಸ, ಪರಂಪರೆ ಮತ್ತು ನಮ್ಮ ತನವನ್ನು ತಿಳಿಸಿಕೊಡುವ ಅಗತ್ಯವಿದೆ ಎಂಬುದಾಗಿಯೂ ಹೇಳಿದರು. 'ಉತ್ತರ ಕನ್ನಡ ಜಿಲ್ಲೆಯ ಮಣ್ಣಿನ ಕಣಕಣವೂ ವಿಶೇಷವಾಗಿದೆ. ಕಡಲತೀರ, ಜಲಪಾತ, ದಟ್ಟಕಾಡು, ಹೀಗೆ ವೈವಿಧ್ಯತೆಯಿಂದೊಡ-ಗೂಡಿದೆ. ಜೊತೆಗೆ, ಆ ಕುರಿತು ಕಾಳಜಿ ಇದ್ದವರೂ ಇದ್ದಾರೆ,'' ಎಂದು ಬಣ್ಣಿಸಿದ ಸಚಿವೆ, ''ಸ್ವರ್ಣವಲ್ಲೀ ಶ್ರೀಗಳಂಥವರು ಜಿಲ್ಲೆಗೊಬ್ಬರು ಸಿಕ್ಕರೆ ಸರಕಾರದ ಕೆಲಸ ಎಷ್ಟೋ ಕಡಿಮೆಯಾಗುತ್ತದೆ. ಓದುವ ಹವ್ಯಾಸವೇ ಕಡಿಮೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಓದುವ ಅಭಿರುಚಿ ಬೆಳೆಸಿಕೊಂಡವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ'' ಎಂದು ಸಚಿವೆ ಸಂತಸ ವ್ಯಕ್ತಪಡಿಸಿದರು.

''ನಮ್ಮ ದೇಶದ ಮಠಮಾನ್ಯಗಳು ಅಧ್ಯಯನ-ಅಧ್ಯಾಪನಕ್ಕೆ ನೆರವಾಗುವ ಮತ್ತು ಸಂಸ್ಕೃತಿಯನ್ನು ಪೋಷಿಸುವ ಉಜ್ವಲ ಪರಂಪರೆಯನ್ನು ಹೊಂದಿವೆ. ಈ ವಾಡಿಕೆ ಇತರ ಪ್ರದೇಶಗಳಿಗಿಂತ ಹೆಚ್ಚಾಗಿ ಕರ್ನಾಟಕದಲ್ಲಿ ಶತಮಾನಗಳಿಂದ ನಿರಂತರವಾಗಿ ನಡೆದು ಬಂದಿದೆ ಎಂಬುದು ಗಮನಾರ್ಹ. ಈ ಸಂಪ್ರದಾಯಕ್ಕೆ ಅನುಗುಣವಾಗಿ, ಉತ್ತರಕನ್ನಡ ಜಿಲ್ಲೆಯಲ್ಲಿ ಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಚೈತನ್ಯಯುತ ನೇತೃತ್ವದಲ್ಲಿ ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನವು ಮತ್ತು ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನವು ವಿವಿಧ ಸಾಂಸ್ಕೃತಿಕ ಕಾರ್ಯಗಳನ್ನು ಹಮ್ಮಿಕೊಂಡು ಫಲಪ್ರದವಾಗಿ ನಡೆಸುತ್ತಿರುವಂತೆ, ಈ ಅಖಿಲ ಕರ್ನಾಟಕ ಇತಿಹಾಸ ಸಮ್ಮೇಳನದ ಸಂಘಟನೆಗೆ ಉದಾರಾಶ್ರಯ ನೀಡಿ ಸಹಕರಿಸಿವೆ..... ರಾಷ್ಟ್ರೀಯ ಮಹತ್ವದ ಮತ್ತು ಪ್ರಾದೇಶಿಕ ಮಹತ್ವದ ಪ್ರಾಚ್ಯ ಕಟ್ಟಡಗಳು, ಶಿಲ್ಪಗಳು, ಇತ್ಯಾದಿ, ರಾಜ್ಯದಲ್ಲಿ ಇರುವಷ್ಟು ದೊಡ್ಡ ಸಂಖ್ಯೆಯಲ್ಲಿ ದೇಶದ ಮತ್ತಾವ ಭಾಗದಲ್ಲಿಯೂ ಇಲ್ಲವೆನ್ನುವುದು ರಾಜ್ಯದ ಐತಿಹಾಸಿಕ ವೈಶಿಷ್ಟ್ಯವನ್ನು ತೋರಿಸುತ್ತದೆ. ಅವುಗಳನ್ನು ರಕ್ಷಿಸಿ, ಸುಸ್ಥಿತಿಯಲ್ಲಿಡಬೇಕಾದ ದೊಡ್ಡ ಪ್ರಶ್ನೆ ಇದೆ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಕ್ರಮಗಳಿಗೆ ಪೂರಕವಾಗಿ ರಾಜ್ಯದ ಸಂಘ-ಸಂಸ್ಥೆಗಳು, ಉದಾರ ವ್ಯಕ್ತಿಗಳು ಈ ದಿಶೆಯಲ್ಲಿ ಪ್ರಯತ್ನಿಸುವುದು ಅಗತ್ಯ..... ಪ್ರತಿಯೊಬ್ಬ ಇತಿಹಾಸ ಪ್ರೇಮಿಯು ತನಗೆ ಅನುಕೂಲಕರವಾದ ಕೆಲವು ಗ್ರಾಮಗಳನ್ನು ಅಥವಾ ಪಟ್ಟಣವನ್ನು ದತ್ತು ತೆಗೆದುಕೊಂಡು ಅಲ್ಲಿನ ಜನರಲ್ಲಿ, ಶಿಕ್ಷಿತರಲ್ಲಿ ಸಹ ಇತಿಹಾಸದ ಅರಿವಿನ ಬಗ್ಗೆ ಇರುವ ತಾತ್ಸಾರ ಹೋಗಲಾಡಿಸಿ, ಅವರನ್ನು ಇತಿಹಾಸ ಕುತೂಹಲಿಗಳನ್ನಾಗಿ ಮಾಡಿ, ಚರಿತ್ರೆಯ ಬಗ್ಗೆ, ಪುರಾತತ್ವದ ಬಗ್ಗೆ ಆಸಕ್ತಿಯುಳ್ಳವರಾಗುವಂತೆ ಪರಿವರ್ತಿಸಬೇಕು.... ಕರ್ನಾಟಕವು ಪ್ರಾಚೀನ ಕಾಲದಿಂದಲೂ ಅಖಿಲಭಾರತದ ಮುಖ್ಯಧಾರೆಯಲ್ಲಿ ಸಮ್ಮಿಳಿತವಾಗಿರುವ ದೃಢ ಪರಂಪರೆಯನ್ನು ಪಡೆದಿದೆ. ತನ್ನದೇ ಆದ ಸ್ವಂತಿಕೆ ಮಾತ್ರವಲ್ಲದೆ, ಅಖಿಲ ಭಾರತದ ಸಂಸ್ಕೃತಿಯ ಸಾಮರಸ್ಯವನ್ನು ಅದು ಹೊಂದಿದೆ. ಸಮನ್ವಯದ ದೃಷ್ಟಿಯಿಂದ ಇಡೀ ಭಾರತದ ಏಕತೆಗೆ ಸಹಾಯಕವಾಗುವ ಸಬಲ ಹಿನ್ನೆಲೆ ಕರ್ನಾಟಕಕ್ಕೆ ಇದೆ.... ಸಮಾಜದಲ್ಲಿ ಸಾತತ್ಯ ಮತ್ತು ಪರಿವರ್ತನೆ ಎರಡೂ ಬೇಕು. ಸಮಾಜದಲ್ಲಿ ಕಾಲಕ್ರಮೇಣ ಅನೇಕ ಕಲ್ಮಷಗಳು ವಿವಿಧ ಕಾರಣಗಳಿಂದಾಗಿ ಸೇರಿಕೊಳ್ಳುತ್ತಲೇ ಇರುತ್ತವೆ. ಪರಂಪರಾಗತವಾಗಿ ಬಂದ ಉತ್ತಮ ಅಂಶಗಳನ್ನು ಉಳಿಸಿಕೊಂಡು, ಅನಿಷ್ಟಗಳನ್ನು ತೊಡೆದುಹಾಕಬೇಕಾಗುತ್ತದೆ. ಈ ಪ್ರಕ್ರಿಯೆ ಆಗಾಗ ನಡೆಯುತ್ತಲೇ ಇರುವದು ಅಗತ್ಯ. ಇಲ್ಲದಿದ್ದರೆ ವಿಷಮಸ್ಥಿತಿ ಉಂಟಾಗುತ್ತದೆ. ಜಡತ್ವವನ್ನು ಹೊಂದಿದ

ಸಮಾಜಕ್ಕೆ ನೆಮ್ಮದಿ ಲಭ್ಯವಾಗದು. ಚಲನಶೀಲ, ಕ್ರಿಯಾಶೀಲ ಸಮಾಜ ಪ್ರಗತಿಪಥದಲ್ಲಿ ನಡೆಯುತ್ತದೆ'' ಎಂಬುದಾಗಿ ಮೂಲತಃ ಬನವಾಸಿಯವರೇ ಆದ ಇತಿಹಾಸ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಕೆ. ಅಭಿಶಂಕರ ಅವರು ಅತ್ಯಂತ ಕಳಕಳಿಯಿಂದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

''1986ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ಮೂರು ಮುಖ್ಯ ಗುರಿಗಳೊಂದಿಗೆ ಕಾರ್ಯಾರಂಭಮಾಡಿತು. ಕರ್ನಾಟಕದ ಇತಿಹಾಸವನ್ನು ಜನರಿಗೆ ಮುಟ್ಟಿಸುವುದು. ಇತಿಹಾಸದ ಸಂಶೋಧನೆ, ಇತಿಹಾಸದ ಪರಂಪರೆ ರಕ್ಷಣೆಗೆ ಜನರಲ್ಲಿ ಜಾಗೃತಿ, ಇವೇ ಆ ಮೂರು ಗುರಿಗಳು,'' ಎಂಬುದಾಗಿ ಅಕಾಡೆಮಿಯ ಅಧ್ಯಕ್ಷ ಡಾ|| ಸೂರ್ಯನಾಥ ಕಾಮತ್, ಅಕಾಡೆಮಿಯ ಗೊತ್ತುಗುರಿಗಳನ್ನು ವಿವರಿಸಿದರು.

ಆಶೀರ್ವಚನ ನೀಡಿದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳವರು, ''ಇತಿಹಾಸವು ಸಮಾಜದ ವಿವಿಧ ಆಯಾಮಗಳನ್ನು ಒಳಗೊಳ್ಳುತ್ತದೆಯಾದ್ದರಿಂದ ಆಕರ ಸಾಮಗ್ರಿಗಳ ಪರಿಶೀಲನೆ, ವಿಶ್ಲೇಷಣೆ, ವಿಮರ್ಶೆಯ ಜೊತೆಗೆ ಇತಿಹಾಸಕಾರರು ಸಮಗ್ರತೆಯ ದೃಷ್ಟಿಯನ್ನೂ ಪಡೆದುಕೊಂಡರೆ, ದೇಶದ, ಸಮಾಜದ ನಾನಾ ಸಮಸ್ಯೆಗಳಿಗೆ ಸಮರ್ಪಕ ಪರಿಹಾರಗಳನ್ನು ಕಂಡು ಹಿಡಿಯಲು ಸಾಧ್ಯವಾಗುತ್ತದೆ,'' ಎಂಬುದಾಗಿ ನುಡಿದರು. ''ವೈವಿಧ್ಯತೆಯಲ್ಲಿ ಏಕತೆಯು ಭಾರತದ ಸಂಸ್ಕೃತಿಯ ಜೀವಾಳ. ನಮ್ಮ ಇತಿಹಾಸದಲ್ಲಿ ಗುಣಗಳೂ ಇವೆ ದೋಷಗಳೂ ಇವೆ. ಆದರೆ ಅವುಗಳನ್ನು ದಾಖಲಿಸುವಾಗ ಗುಣಕ್ಕೆ ಹೆಚ್ಚು ಪ್ರಾಶಸ್ತ್ಯ ಪ್ರಚಾರ ನೀಡಬೇಕು. ಆ ಗುಣಗ್ರಾಹಿತ್ವದ ಮೂಲಕ ಸಮಾಜಕ್ಕೆ ಉತ್ತಮ ಮಾರ್ಗದರ್ಶನ- ವಾಗುವ ರೀತಿಯಲ್ಲಿ ಗ್ರಂಥಗಳು ಬರಬೇಕು. ಈ ದೇಶದ ಇತಿಹಾಸ, ಸಂಸ್ಕೃತಿಯ ತಿರುಳು- ವೈವಿಧ್ಯದಲ್ಲಿ ಏಕತೆ, ಸೃಷ್ಟಿ ಸಹಜವಾದ ವೈವಿಧ್ಯತೆಯಲ್ಲಿ ಏಕತೆ ಕಂಡುಕೊಳ್ಳುವುದು ಇಲ್ಲಿಯ ಇತಿಹಾಸದ ಜೀವ. ಇಲ್ಲಿ ಭಾಷೆ ಬೇರೆ, ಆಚಾರ ಬೇರೆ, ಹೀಗೆ ಅನೇಕ ಪ್ರಕಾರದ ವೈವಿಧ್ಯಗಳಿವೆ, ಆದರೆ ಇಡೀ ದೇಶವನ್ನು ಗಮನಿಸಿದಾಗ ಏಕತ್ರ ಸಂಸ್ಕೃತಿ ಇದೆ. ಭಾರತವನ್ನು ಏಕಚಕ್ರಾಧಿಪತ್ಯದ ಅಡಿಯಲ್ಲಿ ತಂದ ಅಶೋಕ ಚಕ್ರವರ್ತಿ, ತಾನೂ ಅಹಿಂಸೆ ಆಚರಣೆ ಮಾಡಿ, ಸಮಸ್ತರೂ ಧರ್ಮ ಮಾರ್ಗವನ್ನು ಅನುಸರಿಸಲು ಪ್ರೇರೇಪಿಸಿದ. ಅದಕ್ಕೂ ಮುಂಚೆ ಶ್ರೀ ರಾಮಚಂದ್ರ ಸಮಗ್ರ ಭಾರತ ಹಾಗೂ ಅದರ ಹೊರಗೂ ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಿದ್ದ. ಕೃಷ್ಣದೇವರಾಯ, ಸಮುದ್ರಗುಪ್ತ ಮುಂತಾದವರು ವೈವಿಧ್ಯದಲ್ಲಿ ಏಕತೆಯನ್ನು ಉಳಿಸಿ ಕೊಂಡು ಬಂದಿದ್ದರು. ಅಲ್ಲಲ್ಲ ಇರುವ ಒಳ್ಳೆಯ ಅಂಶಗಳನ್ನು ಇತಿಹಾಸಕಾರರು ಎತ್ತಿ

ಹಿಡಿಯಬೇಕಾಗಿದೆ. ಕೆಟ್ಟದ್ದನ್ನು ಎತ್ತಿ ಹಿಡಿದರೆ ಕೆಟ್ಟ ಪರಿಣಾಮಕ್ಕೆ ಅವಕಾಶ-ವಾಗುತ್ತದೆ,'' ಎಂಬುದಾಗಿ ಇತಿಹಾಸದ ಮುಖ್ಯಾಂಶಗಳನ್ನು ಮನಮುಟ್ಟುವಂತೆ ಮಾಡಿ, ಕೊನೆಯಲ್ಲಿ ಇತಿಹಾಸಕಾರರಿಗೆ ಎಚ್ಚರಿಕೆಯ ಮಾತನ್ನೂ ಆಡಿದವರು ಶ್ರೀ ಶ್ರೀ ಗಂಗಾಧರೇಂದ್ರ ಮಹಾಸ್ವಾಮಿಗಳವರು.

ಉದ್ಘಾಟನಾ ಸಮಾರಂಭದ ದಿನ, ಡಾ|| ಅನಂತ ಕೃಷ್ಣಶಾಸ್ತ್ರಿಯವರ 'ಸ್ವರ್ಣವಲ್ಲೀ ಮಹಾಸಂಸ್ಥಾನ,' ಡಾ|| ಗಿರಿರಾಮ ದೀಕ್ಷಿತ ಅವರ 'ಶ್ರೀ ಕೃಷ್ಣದೇವರಾಯ,' ಚನ್ನಕ್ಕ ಪಾವಟೆಯವರ 'ಹಾನಗಲ್ ಕದಂಬರು,' ಪುರಾತತ್ವ ಇಲಾಖೆ ಪ್ರಕಟಿಸಿದ 'ಇತಿಹಾಸ ದರ್ಶನ,' ಮುಂತಾದ ಸಂಶೋಧನಾತ್ಮಕ ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು.

ದಿನಾಂಕ : 25-10-1997ರಂದು ಡಾ|| ಅ. ಸುಂದರ, ಡಾ|| ಎಸ್.ಕೆ. ಜೋಶಿ ಮತ್ತು ಡಾ|| ಶ್ರೀನಿವಾಸ ಹಾವನೂರ ಅವರ ಅಧ್ಯಕ್ಷತೆಯಲ್ಲಿ ನಡೆದ ಮೂರು ವಿಚಾರಗೋಷ್ಠಿಗಳಲ್ಲಿ ಒಟ್ಟೂ 24 ಪ್ರಬಂಧಗಳು ಮಂಡಿತವಾದವು.

ದಿನಾಂಕ 26-10-1997ರಂದು ವಿಚಾರ ಗೋಷ್ಠಿಗಳನ್ನು ಶ್ರೀ ಮಹಾ ಸಂಸ್ಥಾನದ ಮಠದ ಆವರಣದಲ್ಲಿ ನಡೆಸಲಾಯಿತು. ಅಂದು ಬೆಳಿಗ್ಗೆ 9 ಗಂಟೆಗೆ ಸ್ವಾದಿಯ ಬಗ್ಗೆ ನಡೆದ ವಿಶೇಷವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಅಕಾಡೆಮಿಯ ಆಜೀವ ಗೌರವ ಅಧ್ಯಕ್ಷರೂ ಆದ ಹಿರಿಯ ಇತಿಹಾಸಕಾರ ಡಾ|| ಜಿ.ಎಸ್. ದೀಕ್ಷಿತ್ ಅವರು ವಹಿಸಿದ್ದರು. ಆ ಗೋಷ್ಠಿಯಲ್ಲಿ 11 ಪ್ರಬಂಧಗಳನ್ನು ಮಂಡಿಸಲಾಯಿತು. ಅದೇ ಸ್ಥಳದಲ್ಲಿ ಮುಂದುವರಿದ ವಿಚಾರ ಗೋಷ್ಠಿಯಲ್ಲಿ ಡಾ|| ಶ್ರೀನಿವಾಸ ರಿತ್ತಿ ಅವರ ಅಧ್ಯಕ್ಷತೆಯಲ್ಲಿ 9 ಪ್ರಬಂಧಗಳು ಮಂಡಿತವಾದವು.

ವಿಚಾರ ಗೋಷ್ಠಿಗಳ ಆರಂಭಕ್ಕೆ ಮೊದಲು ಆಹ್ವಾನದ ಮೇರೆಗೆ ಶ್ರೀಮಠಕ್ಕೆ ಆಗಮಿಸಿದ ಸೋದೆಯ ರಾಜಮನೆತನದ ಶ್ರೀ ಬಸವಲಿಂಗ ಒಡೆಯರ್ ಮತ್ತು ಶ್ರೀ ಮಧುಲಿಂಗ ಒಡೆಯರ್‌ರನ್ನು ಮತ್ತು ಸ್ವರ್ಣವಲ್ಲೀ ಮಹಾಸಂಸ್ಥಾನದ ಚರಿತ್ರೆಯನ್ನು ಬರೆದ ಅನಂತ ಕೃಷ್ಣ ಶಾಸ್ತ್ರಿಯವರನ್ನೂ ಶ್ರೀ ಶ್ರೀ ಸ್ವಾಮೀಜಿಯವರು ಸನ್ಮಾನಿಸಿ ಆಶೀರ್ವದಿಸಿದರು.

ನಂತರ ನಡೆದ ವಿಚಾರಗೋಷ್ಠಿಗಳ ಅಧ್ಯಕ್ಷತೆಯನ್ನು, ಕ್ರಮವಾಗಿ, ಡಾ|| ಜ್ಯೋತ್ಸ್ನಾ ಕಾಮತ್ ಮತ್ತು ಕೆ.ಜಿ. ವಸಂತಮಾಧವ ವಹಿಸಿದ್ದು, ಒಟ್ಟು 15 ಸಂಶೋಧನಾ ಪ್ರಬಂಧಗಳು ಮಂಡನೆ ಆದವು.

ಸಮ್ಮೇಳನದ ಮೂರನೇ ದಿನ ಅಂದರೆ 27-10-1997ರಂದು ಡಾ|| ಎ.ಕೆ. ಶಾಸ್ತ್ರಿ, ಡಾ|| ರು.ಮ. ಷಡಕ್ಷರಯ್ಯ ಮತ್ತು ಡಾ|| ಎಮ್.ಬಿ. ನೇಗಿನಹಾಳ್ ಅವರ ಅಧ್ಯಕ್ಷತೆಯಲ್ಲಿ ಶಿರಸಿಯಲ್ಲಿ ನಡೆದ ಮೂರು ಗೋಷ್ಠಿಗಳಲ್ಲಿ ಒಟ್ಟೂ 23 ಪ್ರಬಂಧಗಳು ಮಂಡಿತವಾದವು. ಹೀಗೆ, ಸಮ್ಮೇಳನದಲ್ಲಿ ನಡೆದ 10 ಗೋಷ್ಠಿಗಳಲ್ಲಿ ಒಟ್ಟೂ 82 ಪ್ರಬಂಧಗಳು ಮಂಡಿತವಾದವು.

ದಿನಾಂಕ 27-10-1997ರಂದು ಸಂಜೆ 4 ಗಂಟೆಗೆ ನಡೆದ ಸಮಾರೋಪ ಸಮಾರಂಭದಲ್ಲಿ, ಶ್ರೀಮದ್ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಅಧ್ಯಕ್ಷ ಸ್ಥಾನದ ಮೂಲಕ ಆಶೀರ್ವದಿಸಿ, ಸಮಾರಂಭ ಯಶಸ್ವಿಯಾಯಿತೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು. ಅಕಾಡೆಮಿಯ ಗೌರವಾಧ್ಯಕ್ಷರಾದ ಡಾ|| ಜಿ.ಎಸ್. ದೀಕ್ಷಿತ್, ಸಮ್ಮೇಳನಾಧ್ಯಕ್ಷರಾದ ಶ್ರೀ ಕೆ. ಅಭಿಶಂಕರ್, ಅಕಾಡೆಮಿಯ ಅಧ್ಯಕ್ಷ ಡಾ|| ಸೂರ್ಯನಾಥ ಕಾಮತ್ ಮುಂತಾದವರು, ಸಮ್ಮೇಳನದ ಏರ್ಪಾಡು, ಅಚ್ಚುಕಟ್ಟುತನ, ಆತ್ಮೀಯ ಆತಿಥ್ಯ, ವಿಚಾರ ಪ್ರಚೋದಕ ಪ್ರಬಂಧಗಳು, ಇತ್ಯಾದಿ-ಗಳನ್ನು ಕುರಿತು ತೃಪ್ತಿ ವ್ಯಕ್ತಪಡಿಸಿ ಆತಿಥೇಯರನ್ನು ಅಭಿನಂದಿಸಿದರು. ಸಮ್ಮೇಳನದ ಸಂದರ್ಭ ಸದಾಕಾಲ ಅತಿಥಿಗಳ ಮತ್ತು ಪ್ರತಿನಿಧಿಗಳ ಸೌಕರ್ಯ ಮತ್ತು ಕಾರ್ಯಕ್ರಮಗಳ ಬಗೆಗೆ ಕ್ರಿಯಾಶೀಲರಾಗಿ ಶ್ರಮಿಸಿ ಎಲ್ಲರ ಪ್ರೀತಿ, ವಿಶ್ವಾಸ ಮತ್ತು ಗೌರವಗಳಿಗೆ ಪಾತ್ರರಾದ ಕಾರ್ಯಕಾರೀ ಸಮಿತಿಯ ಶ್ರೀಯುತರಾದ ಜಿ.ವಿ. ಜೋಶಿ ಕಾಗೇರಿ, ಜಿ.ಎಸ್. ಹೆಗಡೆ ಅಜ್ಜೀಬಳ, ಶಾಂತಾರಾಮ ಹೆಗಡೆ, ವಿ.ಎಸ್. ಸೊಂದೆ, ಜಿ.ಟಿ. ಹೆಗಡೆ ತಟ್ಟೀಸರ್, ಜಿ.ಎಮ್. ಹೆಗಡೆ ಹುಳಗೋಳ, ಎ.ಕೆ. ಶಾಸ್ತ್ರಿ ಪಿ.ಆಯ್. ಹೆಗಡೆ, ಭಾಸ್ಕರ ಹೆಗಡೆ, ಎಸ್.ಜಿ. ಹೆಗಡೆ, ಎಮ್.ಎಸ್. ಹೆಗಡೆ, ಕೆ.ವಿ. ಭಟ್ಟ, ಎನ್.ಎಸ್. ಹೆಗಡೆ ಕುಂದರಗಿ ಮುಂತಾದ ಗಣ್ಯರನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

ಮೂರು ದಿನಗಳ ಕಾಲ ನಡೆದ ಇತಿಹಾಸ ಸಮ್ಮೇಳನದಲ್ಲಿ ಪ್ರಾಗೈತಿಹಾಸಿಕ ಮತ್ತು ಇತಿಹಾಸ ಕಾಲಕ್ಕೆ ಸಂಬಂಧಿಸಿದ, ವಿವಿಧ ಆಕರ ಸಾಮಗ್ರಿಗಳ ಮೇಲೆ ಆಧಾರಿತವಾದ ಅನೇಕ ಸಂಶೋಧನಾತ್ಮಕ ಪ್ರಬಂಧಗಳು ಕರ್ನಾಟಕದ ವಿವಿಧ ಸ್ಥಳಗಳ, ಬೆಳಕಿಗೆ ಬಾರದೇ ಇದ್ದ ಅನೇಕ ಚಾರಿತ್ರಿಕ ಅಂಶಗಳನ್ನು ಬೆಳಕಿಗೆ ತಂದವು. ಅನೇಕ ಹಿರಿ-ಕಿರಿಯರು ಭಾಗವಹಿಸಿದ ಈ ಸಮ್ಮೇಳನ ತರುಣ ಸಂಶೋಧಕರಿಗೆ ಹೆಚ್ಚಿನ ಸ್ಫೂರ್ತಿ ನೀಡಿತು. ಒಟ್ಟಿನಲ್ಲಿ ಶಿರಸಿಯಲ್ಲಿ ನಡೆದ ಇತಿಹಾಸ ಅಕಾಡೆಮಿಯ ಹನ್ನೊಂದನೆಯ ವಾರ್ಷಿಕ ಸಮ್ಮೇಳನ ಇತಿಹಾಸಕಾರರ ಮನದಲ್ಲಿ ಸದಾ ಹಸಿರಾಗಿ ಉಳಿಯಿತು. ಶಿರಸಿಯಲ್ಲಿ ಮಂಡಿತವಾದ ಪ್ರಬಂಧಗಳನ್ನೆಲ್ಲ ಕರ್ನಾಟಕ ಇತಿಹಾಸ

ಅಕಾಡೆಮಿಯ 'ಇತಿಹಾಸ ದರ್ಶನ'ದ (1998) ಹದಿಮೂರನೆಯ ಸಂಪುಟದಲ್ಲಿ ಪ್ರಕಾಶಿಸಲಾಗಿದೆ. ಇತಿಹಾಸ ಸಮ್ಮೇಳನವು ಶಿರಸಿಯಲ್ಲಿ ಆಗಬೇಕೆಂದು ಬಯಸಿ ಅದಕ್ಕೆ ತಕ್ಕ ಸಕಲ ಸಿದ್ಧತೆಗಳನ್ನು ಮಾಡಲು ಕಾರ್ಯಕಾರೀ ಸಮಿತಿಯ ಸದಸ್ಯರಿಗೆ ಚಾಲಸೆ ನೀಡಿ ಎಲ್ಲ ಗೋಷ್ಠಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ, ಅತಿಥಿಗಳಿಗೆ ಯಥೋಚಿತ ಆತಿಥ್ಯ ನೀಡಿ, ಕೊನೆಯಲ್ಲಿ ಸರ್ವರಿಗೂ ಆಶೀರ್ವಚನ ನೀಡಿದವರು ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು.

ಶ್ರೀಸ್ವಾಮಿಗಳು ಮತ್ತು
ಸಂಸ್ಕೃತ ಸಂಭಾಷಣ ಆಂದೋಲನ

-ಸತ್ಯನಾರಾಯಣ ಭಟ್ಟ

ಸಂಸ್ಕೃತ ಭಾಷೆ ನಮ್ಮ ದೇಶದ ಸಂಸ್ಕೃತಿಯ ಜೀವಾಳ. ನಮ್ಮ ಹಿಂದು ಸಂಸ್ಕೃತಿಯ ಜೀವನಾದರ್ಶಗಳು, ಮೌಲ್ಯಗಳು ಪ್ರಾಚೀನ ಕಾಲದಿಂದಲೂ ವಿಕಸಿತವಾಗಿರುವುದು ಸಂಸ್ಕೃತ ಭಾಷೆಯಿಂದಲೇ. ಜಗತ್ತಿನಾದ್ಯಂತ ಸಂಸ್ಕೃತ ಭಾಷೆಯಲ್ಲಿರುವ ಜ್ಞಾನ, ವಿಜ್ಞಾನಗಳ ಕುರಿತು ಗೌರವಾದರಗಳಿವೆ. ಸಂಸ್ಕೃತ ಕೇವಲ ಭಾಷೆ ಮಾತ್ರವಲ್ಲ. ಅದು ಅಲೌಕಿಕಾನುಭವದ, ಸಮಷ್ಟಿ ಪ್ರಜ್ಞೆಯ, ಅಭಿವ್ಯಕ್ತಿ ಸಾಧನ. ಅದನ್ನು ಉಳಿಸಿ, ಬೆಳಸಬೇಕಾದುದು ಎಲ್ಲ ಭಾರತೀಯರ ಕರ್ತವ್ಯ. ಸಂಸ್ಕೃತ ಪುನಃ ಭಾರತದ ಆಡುಭಾಷೆಯಾಗಬೇಕೆಂದು ಕಳೆದ 30 ವರ್ಷಗಳಿಂದ ''ಸಂಸ್ಕೃತ ಭಾರತೀ'' ಜನಸಾಮಾನ್ಯರಿಗೆ ಸಂಸ್ಕೃತವನ್ನು ಕಲಿಸುತ್ತಿದೆ.

ಸಂಸ್ಕೃತ ಭಾರತೀಯ ಕಾರ್ಯಕ್ಕೆ ಬೆಂಬಲವಾಗಿ ನಿಂತು, ನಿರಂತರ ಮಾರ್ಗದರ್ಶನವನ್ನು ಮಾಡುತ್ತಿರುವವರಲ್ಲಿ ಸೋಂದಾ ಸ್ವರ್ಣವಲ್ಲೀ ಮಠಾಧೀಶ-ರಾದ ಶ್ರೀ ಶ್ರೀಮದ್ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಅಗ್ರಗಣ್ಯರು. ಶ್ರೀಸ್ವಾಮೀಜಿಯವರು ತಮ್ಮ ಪೂರ್ವಾಶ್ರಮದಿಂದಲೇ ಸಂಸ್ಕೃತ ಆಂದೋಲನದಲ್ಲಿ ಸಕ್ರಿಯರಾಗಿದ್ದವರು. ಪೀಠಾಧೀಶರಾದ ಮೇಲೆ ಉತ್ತರ ಕನ್ನಡದಲ್ಲಿ ಸಂಸ್ಕೃತ-ಸಂಸ್ಕೃತಿ-ಅಧ್ಯಾತ್ಮ-ಜೀವನಮೌಲ್ಯಗಳ ಪ್ರಚಾರ-ಪ್ರಸಾರದ ಅಭಿಯಾನದ ನೇತೃತ್ವವನ್ನು ಸ್ವತಃ ತಾವೇ ಸ್ವೀಕರಿಸಿದವರು. ಬಹುಶಃ ಸ್ವಾಮೀಜಿಯವರ ವೇಗ ಪ್ರಕಾಶದ ವೇಗಕ್ಕೆ ಹೋಲಿಸುವಂತಹದ್ದು. ಎಂದೂ ಅವರು ಹತ್ತಾರು ಕೆಲಸಕ್ಕಿಂತ ಕಡಿಮೆ ಸ್ವೀಕಾರ ಮಾಡಿದವರೇ ಅಲ್ಲ. ಸಂಸ್ಕೃತ ಆಂದೋಲನಕ್ಕೆ ನಿರಂತರ ಸಿಗುತ್ತಿರುವ ಅವರ ಬೆಂಬಲದಿಂದಾಗಿ ಸಾಂಸ್ಕೃತಿಕ ಪ್ರತೀಕದಂತೆ ಇರುವ ಉತ್ತರ ಕನ್ನಡದಲ್ಲಿ ಸಂಸ್ಕೃತದ ಕಾರ್ಯ ವೇಗವಾಗಿ ಬೆಳೆಯಲು ಸಹಕಾರಿಯಾಯಿತು.

1994ನೇ ಇಸ್ವಿಯಲ್ಲಿ ಉತ್ತರಕನ್ನಡದಲ್ಲಿ ನಡೆದ ನಾಲ್ಕು ತಿಂಗಳ ಸಂಸ್ಕೃತ ಸಂಭಾಷಣಾ ಅಭಿಯಾನ ದೇಶದ ಇತಿಹಾಸದಲ್ಲಿ ಅದ್ವಿತೀಯವಾದದು. ಸ್ವತಃ ಶ್ರೀ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚಿನ ಸ್ಥಾನಗಳಲ್ಲಿ ಸಂಭಾಷಣ, ಯೋಗ, ವೇದಗಣಿತ, ಮನೆಮದ್ದು, ಅಧ್ಯಾತ್ಮ ಶಿಬಿರಗಳು, ಉಪನ್ಯಾಸಗಳು ನಡೆದು ಇತಿಹಾಸವೇ ನಿರ್ಮಾಣವಾಯಿತು. ಸ್ವತಃ ಶ್ರೀಸ್ವಾಮೀಜಿ-ಯವರು ಶ್ರೀಮಠದ ಇತಿಹಾಸದಲ್ಲಿ ಮೊದಲಬಾರಿಗೆ ನೂರಾರು ಸ್ಥಾನಗಳಲ್ಲಿ ಪಾದಯಾತ್ರೆಯನ್ನು ಕೈಗೊಂಡರು. ಕಾರವಾರ-ದಾಂಡೇಲಿ ಮುಂತಾದ ಅತ್ಯಂತ ಹಿಂದುಳಿದ ಸ್ಥಾನಗಳಲ್ಲಿ ಸ್ವಾಮೀಜಿಯವರ ಪಾದಯಾತ್ರೆಯಿಂದ ಜನರು ತಮ್ಮ ಜೀವನ ಧನ್ಯವಾಯಿತು ಎನ್ನುವ ಉದ್ಗಾರ ಹೃದಯವನ್ನು ತಲ್ಲಣಿಸುವಂತಿತ್ತು. ಅಕ್ಷರಶಃ ಸಾವಿರಾರು ಜನರು ಸ್ವಾಮೀಜಿಯವರ ಕಾರ್ಯಕ್ರಮಗಳಿಗೆ ಬರುತ್ತಿದ್ದರು ಅಂದು. ನಾಲ್ಕು ತಿಂಗಳುಗಳ ಅಭಿಯಾನದ ನಂತರ 1994, ಮೇ 10ರಂದು ಶಿರಸಿಯಲ್ಲಿ ನಡೆದ 'ಸಂಸ್ಕೃತ ಸಂಗಮ' ಅಭೂತಪೂರ್ವ ಯಶಸ್ಸನ್ನು ಪಡೆಯಿತು. ಅಂದಿನ ಇಡೀ ದಿನದ ಕಾರ್ಯಕ್ರಮದ ಕೇಂದ್ರ ಬಿಂದುವಾಗಿದ್ದವರು ಸ್ವತಃ ಸ್ವಾಮೀಜಿಯವರೆ. ಉತ್ತರಕನ್ನಡದ ಮೂಲೆ ಮೂಲೆಗಳಿಂದ ಅಂದಿನ ಕಾರ್ಯಕ್ರಮದಲ್ಲಿ ಜನರು ಭಾಗವಹಿಸಿದ್ದರು. ಇಡೀ ನಗರದಲ್ಲಿ ಸಂಸ್ಕೃತಮಯ ವಾತಾವರಣವೇ ಕಾಣುತ್ತಿತ್ತು ಎಂದು ಪ್ರಸಿದ್ಧ ಪತ್ರಿಕೆಗಳು ವರದಿ ಮಾಡುತ್ತಿದ್ದವು. ವಾಸ್ತವಿಕ ಸ್ಥಿತಿಯ ಚಿತ್ರಣ ಅಂದಿನ ಪತ್ರಿಕೆಗಳಲ್ಲಿ ಉಲ್ಲೇಖವಾಗಿತ್ತು. ಸಂಸ್ಕೃತ ಅಭಿಯಾನದ ಪ್ರಭಾವದಿಂದ ಹಾಗೂ ಸ್ವಾಮೀಜಿಯವರ ಪ್ರೇರಣೆಯಿಂದ ನೂರಾರು ಕಾರ್ಯಕರ್ತರು ಮುಂದಿನ ವರ್ಷಗಳಲ್ಲಿ ಸಂಸ್ಕೃತ-ಸಂಸ್ಕೃತಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

'ಸಂಸ್ಕೃತ ಭಾರತಿ'ಯ ಯೋಜನೆಯಂತೆ ಕ್ರಿ.ಶ. 1999-2000 (ಯುಗಾಬ್ದ 5101)ನೇ ವರ್ಷವನ್ನು 'ಸಂಸ್ಕೃತ ವರ್ಷ'ವನ್ನಾಗಿ ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿತು. ದೇಶಾದ್ಯಂತ ನಡೆಯುತ್ತಿರುವ ಸಂಸ್ಕೃತ ಕಾರ್ಯಕ್ಕೆ ವೇಗವನ್ನು ನೀಡುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. 'ಸಂಸ್ಕೃತ ವರ್ಷ' ಘೋಷಣೆಯಾದಾಗ ಕರ್ನಾಟಕದಲ್ಲಿ ಸಾರ್ವಜನಿಕವಾಗಿ ಜನಸಾಮಾನ್ಯ-ರವರೆಗೂ ಸಂಸ್ಕೃತವನ್ನು ತಲುಪಿಸುವ ಉದ್ದೇಶದಿಂದ ಪ್ರಪ್ರಥಮರಾಗಿ ಶ್ರೀಸ್ವರ್ಣವಲ್ಲೀ ಮಠಾಧೀಶರು ಸಂಸ್ಕೃತ ಅಭಿಯಾನದ ನೇತೃತ್ವವನ್ನು ವಹಿಸಿದರು. ಶ್ರೀ ಸ್ವಾಮೀಜಿಯವರ ಗೌರವಾಧ್ಯಕ್ಷತೆಯಲ್ಲಿ ಉತ್ತರ ಕನ್ನಡ ಜಿಲ್ಲಾ ಸಂಸ್ಕೃತ ವರ್ಷಾಚರಣ ಸಮಿತಿಯು ರಚಿತವಾಯಿತು. ಸ್ವಾಮೀಜಿಯವರ ಅಪೇಕ್ಷೆಯಂತೆ ಎಲ್ಲ

ತಾಲ್ಲೂಕುಗಳಲ್ಲಿಯೂ ಉಪಸಮಿತಿಗಳು ರಚಿತವಾದವು. ಸ್ವಾಮೀಜಿಯವರ ಮಾರ್ಗದರ್ಶನ ಸಮಿತಿಯ ಸದಸ್ಯರಿಗೆ ನಿರಂತರ ಸಿಗುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಪ್ರತಿತಿಂಗಳು ನಡೆಯುವ ಸಮಿತಿಯ ಗೋಷ್ಠಿಯಲ್ಲಿ ಶ್ರೀಗಳು ಸ್ವತಃ ತಾವೆ ಉಪಸ್ಥಿತರಿದ್ದು ಮಾರ್ಗದರ್ಶನವನ್ನು ಮಾಡುತ್ತಿದ್ದರು. ಜಿಲ್ಲೆಯಲ್ಲಿ ನಡೆಯಬೇಕಾದ ಕಾರ್ಯದ ಯೋಜನೆಯು ಸ್ವಾಮೀಜಿಯವರ ಸಮ್ಮುಖದಲ್ಲಿ ಕ್ರಿ.ಶ. 1999 ಏಪ್ರಿಲ್-ಮೇ ತಿಂಗಳಲ್ಲಿ ನಿಶ್ಚಯಿಸಲ್ಪಟ್ಟಿತು.

<u>ಸಂಸ್ಕೃತ ವರ್ಷದ ಪ್ರಯುಕ್ತ ಹಮ್ಮಿಕೊಂಡ ಕಾರ್ಯಕ್ರಮಗಳು</u>

1. ಜಿಲ್ಲೆಯಾದ್ಯಂತ 100ಕ್ಕೂ ಹೆಚ್ಚು ಸಂಸ್ಕೃತ ಸಂಭಾಷಣಾ ಶಿಬಿರಗಳು.
2. 100ಕ್ಕೂ ಹೆಚ್ಚು ವೇದ, ವೇದಾಂಗ, ಶಾಸ್ತ್ರ ಪುರಾಣ, ದರ್ಶನ, ಆಯುರ್ವೇದ, ಕಲೆ ಮುಂತಾದ ವಿಷಯಗಳ ಕುರಿತು ತಜ್ಞ ಉಪನ್ಯಾಸಗಳು.
3. ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು
4. ವಿದ್ವಾಂಸರ ಸಂಮಾನ
5. ಬೀದಿ ನಾಟಕಗಳು ಮತ್ತು ನಾಟಕೋತ್ಸವ
6. ಅಖಿಲ ಕರ್ನಾಟಕ ಸಂಸ್ಕೃತ ಶಿಕ್ಷಕ-ವಿದ್ಯಾರ್ಥಿ ಸಮಾವೇಶ
7. ಶಿಕ್ಷಕ ಪ್ರಶಿಕ್ಷಣ ವರ್ಗ
8. ಜಿಲ್ಲಾ ಮಟ್ಟದ ಬೃಹತ್ ಸಮಾರೋಪ
9. ರಾಜ್ಯಸ್ತರದ ಸಂಸ್ಕೃತ ಕವಿಗೋಷ್ಠೀ.

ಇಂತಹ ನಮ್ಮ ಸಂಸ್ಕೃತಿಯ ಬೆಳವಣಿಗೆಯ ಕುರಿತಾದ ಹತ್ತಾರು ಕಾರ್ಯಕ್ರಮಗಳ ಬೃಹತ್ ಅಭಿಯಾನದ ಯೋಜನೆಯು ಕಾರ್ಯಗತವಾಯಿತು.

ಸಂಸ್ಕೃತ ಸಂಭಾಷಣ ಶಿಬಿರವನ್ನು ನಡೆಸಲು ತರಬೇತಿ ನೀಡುವ 10 ದಿನಗಳ ಕಾಲದ ಶಿಕ್ಷಕ ಪ್ರಶಿಕ್ಷಣ ವರ್ಗವನ್ನು ಶಿರಸಿಯ ಮಾರಿಕಾಂಬಾ ದೇವಸ್ಥಾನದಲ್ಲಿ ನಡೆಸಲಾಯಿತು. ರಾಜ್ಯಾದ್ಯಂತ ಬಂದಿದ್ದ 85 ಜನ ಶಿಕ್ಷಕ-ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿ ಶಿಕ್ಷಣವನ್ನು ಪಡೆದರು. ಶ್ರೀಗಳು ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ ಮುಂದಿನ ಜಿಲ್ಲೆಯ ಯೋಜನೆಗಳನ್ನು ಸವಿಸ್ತಾರವಾಗಿ ವಿವರಿಸಿದರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲ ಶಿಕ್ಷಾರ್ಥಿಗಳು ಮುಂದೆ ತಮ್ಮ ಕ್ಷೇತ್ರದಲ್ಲಿ ಸಂಸ್ಕೃತ ಸಂಭಾಷಣಾ ಶಿಬಿರಗಳನ್ನು ನಡೆಸಬೇಕೆಂದು ಶ್ರೀಗಳು ತಿಳಿಸಿದರು. ಅದರಂತೆ ಅಭಿಯಾನರೂಪದಲ್ಲಿ ಎರಡು ಬಾರಿ ನೂರಕ್ಕೂ ಹೆಚ್ಚು ಸಂಭಾಷಣಾ ಶಿಬಿರಗಳನ್ನು ಸ್ಥಾನೀಯರೇ ನಡೆಸಿದರು.

ಸಂಸ್ಕೃತ ವರ್ಷದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀಸ್ವಾಮೀಜಿಯವರು ಜಿಲ್ಲೆಯಾದ್ಯಂತ ನಡೆಯುವ ಸಂಸ್ಕೃತ ಕಾರ್ಯದ ವಿವರಣೆಯನ್ನು ನೀಡಿದರು. ಸಂಸ್ಕೃತ ವರ್ಷವನ್ನಾಗಿ ಆಚರಿಸುವ ಮೂಲಕ ನೂರು ವರ್ಷ ಹಿಂದಕ್ಕೆ ಹೋಗುತ್ತಿದ್ದೇವೆ ಎನ್ನುವ ಆರೋಪ ಕೆಲವರಿಂದ ಕೇಳಿಬಂದಿದೆ. ಆದರೆ ಹಳೆಯದಾದ ಒಳ್ಳೆಯದನ್ನು ಉಳಿಸಿ ಬೆಳೆಸಬೇಕೆನ್ನುವುದು ಇದರ ಉದ್ದೇಶ, ಸಂಸ್ಕಾರ ಸಂಪನ್ನವಾದದ್ದು ಸಂಸ್ಕೃತ, ವಿಕಾರಗಳಿಗೆ ಇಲ್ಲಿ ಅವಕಾಶಗಳಿಲ್ಲ. ಪ್ರಾಚೀನ ಪರಂಪರೆಯ ಉತ್ತಮ ಅಂಶಗಳನ್ನು ಉಳಿಸುವ ಯತ್ನ ಇದರ ಹಿಂದಿನದು ಎಂದು ಶ್ರೀಸ್ವಾಮೀಜಿ ತಿಳಿಸಿದರು.

ಬೀದಿ ನಾಟಕ ಅಭಿಯಾನದ ಉದ್ಘಾಟನೆ

ಸಂಸ್ಕೃತ ಕೇವಲ ಒಂದು ಭಾಷೆಯಲ್ಲ. ಅದೊಂದು ಸಂಸ್ಕೃತಿಯಾಗಿದೆ. ಸಂಸ್ಕೃತ ಭಾಷೆಯನ್ನು ಜನರಿಗೆ ಕೊಡುವ ಮೂಲಕ ಜನರಿಗೆ ಉತ್ತಮ ಸಂಸ್ಕೃತಿ ಕೊಡಲಾಗುತ್ತದೆ. ಸಂಸ್ಕೃತದಿಂದ ಜೀವನ ಆರ್ಷಪೂರ್ಣವಾಗುತ್ತದೆ ಎಂದು 28-09-2000ದಂದು ಸಿರಸಿಯ ಮಾರಿಕಾಂಬ ದೇವಸ್ಥಾನದಲ್ಲಿ ಜರುಗಿದ ಸಂಸ್ಕೃತ ಬೀದಿ ನಾಟಕ ಜಾಥಾವನ್ನು ಉದ್ಘಾಟಿಸಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿಯವರು ನುಡಿದರು. ಭಾರತೀಯ ಎಲ್ಲ ಭಾಷೆಗಳಲ್ಲಿ ಸಂಸ್ಕೃತ ಛಾಯೆ ಇದ್ದು, ಸಂಸ್ಕೃತವಿಲ್ಲದ ಭಾರತೀಯ ಭಾಷೆಗಳಿಲ್ಲ. ಸಂಸ್ಕೃತವು ಎಲ್ಲ ಭಾಷೆಗಳ ತಾಯಿಯಾಗಿದೆ. ಸಂಸ್ಕೃತವನ್ನು ಪ್ರೋತ್ಸಾಹಿಸುವುದರಿಂದ ಎಲ್ಲ ಭಾಷೆಗಳನ್ನು ಬಲಪಡಿಸಿದಂತಾಗುವುದರಿಂದ ಸಂಸ್ಕೃತವನ್ನು ಪ್ರೋತ್ಸಾಹಿಸಬೇಕಾಗಿದೆ ಎಂದು ಸ್ವಾಮೀಜಿ ನುಡಿದರು. ಜೀವನದ ಅರ್ಥ, ಉದ್ದೇಶ ಹಾಗೂ ಸಾರ್ಥಕತೆಗಳ ಬಗ್ಗೆ ಸಂಸ್ಕೃತವನ್ನು ಪ್ರೋತ್ಸಾಹಿಸಬೇಕಾಗಿದೆ ಎಂದು ಸ್ವಾಮೀಜಿ ನುಡಿದರು. ಜೀವನದ ಅರ್ಥ, ಉದ್ದೇಶ ಹಾಗೂ ಸಾರ್ಥಕತೆಗಳ ಬಗ್ಗೆ ಸಂಸ್ಕೃತದಲ್ಲಿದ್ದಷ್ಟು ಪ್ರಾಯೋಗಿಕ ಚಿತ್ರಣ ಕನ್ನಡ ಭಾಷೆಯಲ್ಲಿ ಇಲ್ಲ. ಜಗತ್ತಿನ ವೈಜ್ಞಾನಿಕ ವಿಷಯಗಳಲ್ಲಿ ಸಂಸ್ಕೃತ-ದಲ್ಲಿರುವ ಯೋಗ ಮತ್ತು ಆಯುರ್ವೇದಗಳು ಸೇರಿವೆ. ಸಂಸ್ಕೃತದಲ್ಲಿರುವ ಅನೇಕ ಶಾಸ್ತ್ರಗಳು ವೈಜ್ಞಾನಿಕವೆಂದು ಸ್ಪಷ್ಟಪಡಿಸಬೇಕಾಗಿದೆ. ಬೀದಿಯಲ್ಲಿ ಸಂಸ್ಕೃತ ನಾಟಕವನ್ನು ಪ್ರದರ್ಶಿಸುವ ಉದ್ದೇಶ ಜನರನ್ನು ಸಂಸ್ಕೃತ ಭವನದ ಒಳಗೆ ಸೇರಿಸಿಕೊಳ್ಳು-ವುದಾಗಿದೆಯೇ ವಿನಃ ಸಂಸ್ಕೃತವನ್ನು ಬೀದಿಗಿಳಿಸುವುದಲ್ಲ ಎಂದು ಶ್ರೀಸ್ವಾಮೀಜಿ ನುಡಿದರು. 15 ಜನರಿರುವ ಬೀದಿ ನಾಟಕ ತಂಡದಿಂದ ಜಿಲ್ಲೆಯ ಅನೇಕ ಕಡೆಗಳಲ್ಲಿ ಸಂಸ್ಕೃತ ವೀಥಿ ನಾಟಕದ ಪ್ರದರ್ಶನ ನಡೆಯಿತು. ಅನೇಕ ಕಡೆಗಳಲ್ಲಿ ನೂರಾರು ಸಂಖ್ಯೆಯಲ್ಲಿ ಜನರು ಇವರನ್ನು ಸ್ವಾಗತಿಸಿದರು.

ಸಂಸ್ಕಾರವಿಲ್ಲದೆ ವ್ಯಕ್ತಿಯ ಅಧಃಪತನ :

ಜಿಲ್ಲೆಯಾದ್ಯಂತ ಶ್ರೀಸ್ವಾಮೀಜಿಯವರ ಪಾದಯಾತ್ರೆ ಹಾಗೂ ಉಪನ್ಯಾಸ ಕಾರ್ಯಕ್ರಮಗಳ ಅಂಗವಾಗಿ ನೂರಾರು ಸ್ಥಾನಗಳಲ್ಲಿ ವೈಭವಯುತವಾದ ವಿವಿಧ ಕಾರ್ಯಕ್ರಮಗಳು ನಡೆದವು. ಅವುಗಳಲ್ಲಿ ಉಲ್ಲೇಖನೀಯವಾದ ಒಂದು ಕಾರ್ಯಕ್ರಮ ಮ್ಲೇಂಛರೇ ಅಧಿಕ ಸಂಖ್ಯೆಯಲ್ಲಿ ಇರುವ ಭಟ್ಕಳ ನಗರದಲ್ಲಿ ನಡೆದ ಪಾದಯಾತ್ರೆ, ಉಪನ್ಯಾಸ ಕಾರ್ಯಕ್ರಮ. ಸ್ವತಃ ಸ್ವಾಮೀಜಿಯವರು 1 ಕಿ.ಮೀ. ಅಧಿಕ ದೂರವನ್ನು ಪಾದಯಾತ್ರೆಯಲ್ಲಿ ಭಾಗವಹಿಸಿ ಭಟ್ಕಳದ ಇತಿಹಾಸದಲ್ಲಿ ಸಂಸ್ಕೃತದ ಮೂಲಕ ಪಾದಯಾತ್ರೆ ಮಾಡಿ ಜನಜಾಗೃತಿಯನ್ನು ಉಂಟುಮಾಡುವುದರ ಜೊತೆಗೆ ಹೊಸ ಅಧ್ಯಾಯವನ್ನು ತೆರೆದರು. ಉಪನ್ಯಾಸ ಕಾರ್ಯದಲ್ಲಿ ಭಾಗವಹಿಸಿ ಶ್ರೀಸ್ವಾಮೀಜಿಯವರು ಭಾರತದಲ್ಲಿ ಇಂದು ಉಂಟಾಗಿರುವ ಈ ಪ್ರತಿಕೂಲ ಪರಿಸ್ಥಿತಿಗೆ ನೈತಿಕ ಅಧಃಪತನವೇ ಕಾರಣ ಎಂದರು. ವ್ಯಕ್ತಿಯ ನೈತಿಕ ಉನ್ನತಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸುವ ಶ್ರೇಷ್ಠತೆ ಸಂಸ್ಕೃತ ಸಾಹಿತ್ಯಕ್ಕಿದೆ. ಹುಟ್ಟಿನಿಂದ ವ್ಯಕ್ತಿಯೋರ್ವ ದುರ್ಬಲನಲ್ಲ, ಆದರೆ ಸಂಸ್ಕಾರವಿಲ್ಲದೇ ವ್ಯಕ್ತಿಯ ಅಧಃಪತನವಾಗುತ್ತದೆ ಮತ್ತು ಸಂಸ್ಕೃತ ಸಾಹಿತ್ಯದ ಓದಿನಿಂದ ಸುಸಂಸ್ಕೃತ ವ್ಯಕ್ತಿಯ ಸೃಷ್ಟಿಯಾಗುತ್ತದೆ ಎಂದು ಸ್ವಾಮೀಜಿ ನುಡಿದರು.

ಸಂಸ್ಕೃತದ ಔನ್ನತ್ಯಕ್ಕಾಗಿ ಮಠಾಧೀಶರ ಸಂಘಟನೆ

ಸಂಸ್ಕೃತ ವರ್ಷದ ಮಂಗಲಮಯ ಸನ್ನಿವೇಶದಲ್ಲಿ ಮೇ 10,11 2000ದಂದು ಶಿರಸಿಯಲ್ಲಿ ನಡೆದ ಅಖಿಲ ಕರ್ನಾಟಕ ಸಂಸ್ಕೃತ ಶಿಕ್ಷಕ-ವಿದ್ಯಾರ್ಥಿ ಸಮ್ಮೇಳನದಲ್ಲಿ ರಾಜ್ಯದ ಎಲ್ಲ ಮಠಾಧೀಶರು ಒಂದೇ ವೇದಿಕೆಯಲ್ಲಿ ಸೇರಿ ಸಂಘಟಿತರಾಗಿ ಸಂಸ್ಕೃತದ ಔನ್ನತ್ಯಕ್ಕೆ ಚಿಂತಿಸಬೇಕು ಎಂದು ಶ್ರೀಸ್ವರ್ಣವಲ್ಲೀ ಹಾಗೂ ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠಾಧೀಶರು ಅಭಿಪ್ರಾಯಪಟ್ಟರು.

ಜಿಲ್ಲೆಯ ಹಾಗೂ ರಾಜ್ಯದ ವಿವಿಧ ಭಾಗಗಳಿಂದ ನೂರಾರು ಸಂಖ್ಯೆಯಲ್ಲಿ ಶಿಕ್ಷಕ-ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀಸ್ವಾಮೀಜಿಯವರು ಎರಡು ದಿನ ಸಮ್ಮೇಳನದಲ್ಲಿ ಪೂರ್ಣ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ಸ್ವಾಮೀಜಿಯವರ ಉಪಸ್ಥಿತಿಯೇ ಸಮ್ಮೇಳನಕ್ಕೆ ನವಚೈತನ್ಯವನ್ನು ಕಾರ್ಯಕರ್ತರಲ್ಲಿ ಉತ್ಸಾಹವನ್ನು ತುಂಬಿತ್ತು.

ಉದ್ಘಾಟನಾ ಕಾರ್ಯಕ್ರಮದ ದಿಕ್ಸೂಚಿ ಭಾಷಣದಲ್ಲಿ ಶ್ರೀಸ್ವಾಮೀಜಿಯವರು ಸಂಸ್ಕೃತ ಭಾಷೆಯಲ್ಲಿ ದೊರೆಯಲ್ಲೂ ಇಲ್ಲ. ಆದ್ದರಿಂದ ಸಮಾಜದಲ್ಲಿ ನೈತಿಕತೆ

ಬೆಳೆಸುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ಸಂಸ್ಕೃತ ಭಾಷೆಯ ಪ್ರಚಾರ ಕೈಗೊಳ್ಳುವುದು ಇಂದಿನ ಅಗತ್ಯವಾಗಿದೆ. ದೇಶದಲ್ಲಿ ಅಪ್ರಾಮಾಣಿಕತೆ, ಭ್ರಷ್ಟತೆ, ನಿಯಂತ್ರಣಕ್ಕೆ ಅನೇಕ ಕಾನೂನುಗಳು ರಚನೆಯಾದರೂ ನಿಯಂತ್ರಣ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಅವರು ಪಡೆದ ಶಿಕ್ಷಣದಲ್ಲಿ ಮೌಲ್ಯಗಳ ಕೊರತೆ. ಪ್ರತಿಯೊಬ್ಬರಲ್ಲೂ ದೇಶಾಭಿಮಾನ, ಧರ್ಮಾಭಿಮಾನವನ್ನು ತುಂಬುವಂಥ ಶಕ್ತಿ ಸಂಸ್ಕೃತ ಭಾಷೆಯಲ್ಲಿದೆ. ಅದರಲ್ಲಿ ಉತ್ತಮ ಸಂಸ್ಕಾರವೂ ಇದೆ. ಮನುಷ್ಯನನ್ನು ಪರಿಪೂರ್ಣನನ್ನಾಗಿ ಮಾಡುವ ಮಹಾಶಕ್ತಿ ಇದೆ. ದೇಶದ ಇಂದಿನ ಪರಿಸ್ಥಿತಿಯಲ್ಲಿ ಸಂಸ್ಕೃತ ಜನಭಾಷೆಯಾದರೆ ಮಾತ್ರ ಸುಸಂಸ್ಕೃತ ಸಮಾಜ ನಿರ್ಮಾಣವಾಗಲು ಸಾಧ್ಯವೆಂದರು.

ಉದ್ಘಾಟನೆಯನ್ನು ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಶ್ರೀಯುತ ಶಾಮರಾವ್ ಮಾಡಿದರು.

ಸಮ್ಮೇಳನದ ಸಮಾರೋಪಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮೂರುಸಾವಿರ ಮಠದ ಜಗದ್ಗುರುಗಳು ರಾಜ್ಯದಲ್ಲಿ ಸಂಸ್ಕೃತ ಅಕಾಡೆಮಿ ಸ್ಥಾಪನೆಯಾಗಬೇಕೆಂದು ಆಗ್ರಹಿಸಿದರು. ಎಲ್ಲ ಮಠಗಳು ಸಂಸ್ಕೃತ ಕಾರ್ಯಕ್ಕೆ ಮೊದಲ ಆದ್ಯತೆ ನೀಡಬೇಕೆಂದು ಆಗ್ರಹಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಕೃತ ವರ್ಧಿನೀ ಸಮಿತಿಯ ಗೌರವಾಧ್ಯಕ್ಷರಾದ ಸ್ವರ್ಣವಲ್ಲೀ ಮಠಾಧೀಶ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಮೂರು ಸಾವಿರ ಮಠದ ಸ್ವಾಮೀಜಿಯವರ ಆಶಯವನ್ನು ಪುನರುಚ್ಚರಿಸಿದರು. ಇಡೀ ಸಭೆ ಇದಕ್ಕೆ ಅಂಗೀಕಾರವನ್ನು ನೀಡಿತು.

ಶ್ರೀಗಳು ಸಮಾರೋಪದಲ್ಲಿ ಮಾತನಾಡುತ್ತಾ-ಸಂಸ್ಕೃತ ಮಾಧ್ಯಮದಲ್ಲೇ ಶಿಕ್ಷಣ, ಸಂಸ್ಕೃತಜ್ಞರು ಲೋಕಾವಲೋಕನ, ಸ್ವ-ಅಧ್ಯಯನ ಹಾಗೂ ಅಂತರ್‌ದೃಷ್ಟಿಗಳನ್ನು ಬೆಳೆಸಿಕೊಳ್ಳಬೇಕು, ಸಮೂಹ ಮಾಧ್ಯಮಗಳು ಸಂಸ್ಕೃತ ಪ್ರವೃತ್ತಿ ತೋರಿಸಿ, ಸಂಸ್ಕೃತದಲ್ಲಿನ ವೈಜ್ಞಾನಿಕ ವಿಷಯಗಳನ್ನು ಎತ್ತಿ ಹೇಳಬೇಕು. ಇದರಿಂದ ಸಾಮಾಜಿಕ ಸಾಮರಸ್ಯ ಉಂಟಾಗುತ್ತದೆ ಎಂದರು.

ಶ್ರೀಸ್ವಾಮೀಜಿಯವರು ಧಾರವಾಡದ ವೇದಬ್ರಹ್ಮಶ್ರೀ ಮಾರ್ತಂಡ ದೀಕ್ಷಿತರನ್ನು, ಸಂಸ್ಕೃತ ಚಲನಚಿತ್ರ ನಿರ್ದೇಶಕ, ನಿರ್ಮಾಪಕ ಶ್ರೀ ಜಿ.ವಿ. ಅಯ್ಯರ್ ಅವರನ್ನು ಸಂಮಾನಿಸಿದರು. ಸಂಸ್ಕೃತ ಅಭಿಯಾನದ ಸಂದರ್ಭದಲ್ಲಿ ಕಾರ್ಯ ಮಾಡಿದ ಅನೇಕ ಜನರನ್ನು ಸ್ವಾಮೀಜಿ ಸ್ಮರಿಸಿಕೊಂಡರು. ಅಭಿಯಾನದ ಸಂಘಟನಾ

ಕಾರ್ಯದರ್ಶಿ ಅನಂತಹೆಗಡೆ ಆಶೀಸರ ಅವರ ಪ್ರಯತ್ನ ಇಲ್ಲಿ ನೆನಪಿಸಿಕೊಳ್ಳು-ವಂತಹದ್ದು. ಶ್ರೀ ಸ್ವಾಮೀಜಿಯವರು ಮಠಾಧೀಶರಾದಂದಿನಿಂದ ಸಂಸ್ಕೃತ ಕಾರ್ಯದ ಬೆಳವಣಿಗೆಗೆ ಹೊಸ ಯೋಜನೆಗಳನ್ನು ಮುಂದಿಡುತ್ತಿರುವುದು ನಿಜಕ್ಕೂ ಶ್ಲಾಘನೀಯ. ಅಭೂತಪೂರ್ವ ಯಶಸ್ಸನ್ನು ಕಂಡಿತು ಉತ್ತರ ಕನ್ನಡದಲ್ಲಿ 'ಸಂಸ್ಕೃತ ವರ್ಷ'.

ಯೋಗ ಸಂಗಮ

-ಪ್ರೊ. ಕೆ.ವಿ. ಭಟ್

''ಯೋಗದ ಗುರಿ ದೇಹ ಮತ್ತು ಮನಸ್ಸಿನ ಸಮತೋಲನವನ್ನು ಸಾಧಿಸುವುದ-ರೊಂದಿಗೆ ವ್ಯಕ್ತಿ ಮತ್ತು ಅವನ ಸುತ್ತಲ ಪ್ರಪಂಚದೊಂದಿಗೆ ಸಂಪೂರ್ಣ ಏಕತೆಯನ್ನು ಸಾಧಿಸುವುದೇ ಆಗಿದೆ. ಮಾನವನ ದೈಹಿಕ, ಮಾನಸಿಕ, ನೈತಿಕ ಮತ್ತು ಬೌದ್ಧಿಕ ಸಮತೋಲನದ ಜೊತೆಗೆ, ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಯೋಗಾಸನ, ಯೋಗ ಕ್ರಿಯೆ, ಪ್ರಾಣಾಯಾಮ ಯೋಗನಿದ್ರೆ ಇವು ಪ್ರಾಚೀನ ಭಾರತದ ಕೊಡುಗೆಗಳು. ನಾವು ಮಾಡುವ ಸಂಧ್ಯಾವಂದನೆ, ಪ್ರಾರ್ಥನೆಗಳಲ್ಲಿ ಯೋಗ ಸಹಜವಾಗಿದೆ. ಇಲ್ಲಿ ಬರುವ ಸಿದ್ಧಾಸನ, ಪ್ರಾಣಾಯಾಮಗಳು ಸಹಜ ಕ್ರಿಯೆಗಳು ಆದರೆ ಇಂದು ಅದು ನಶಿಸುತ್ತಿದೆ.''

''ಸಹಜವಾದ ವ್ಯಾಧಿಗಳಿಗೆ ಪ್ರಕೃತಿಯಲ್ಲಿ ಪರಿಣಾಮಕಾರಿ ಚಿಕಿತ್ಸೆ ಇದೆ. ಆದರೆ ವಿಕೃತ ವ್ಯಾದಿಗಳಿಗೆ ಚಿಕಿತ್ಸೆ ಇಲ್ಲ. ಯೋಗವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಶರೀರದಲ್ಲಿರುವ ರೋಗವನ್ನು ಹೊರದೂಡಬಹುದಾಗಿದೆ. ಜೀವಾತ್ಮ ತನ್ನ ಮೂಲ ಸ್ಥಿತಿಗೆ ಹೋಗುವುದೇ ಯೋಗದಸಾರ. ಭಗವದ್ಗೀತೆಯಲ್ಲಿ ಯೋಗದ ಫಲ ಹೇಳಲಾಗಿದೆ. ಯಾವುದೋ ಆಂತರ್ಯಸ್ಥಿತಿಗೆ ತಲುಪಿದಾಗ ದುಃಖದ ಲವಲೇಶವೂ ಇರುವುದಿಲ್ಲ. ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಇವೆರಡೂ ಸುಲಭ ಹಾಗೂ ಶ್ರೇಷ್ಠವಾದವುಗಳು.'' ಇವು 14 ದಿನಗಳ ಕಾಲ ದಿ. 25-2-2001, ರವಿವಾರದಿಂದ 11-3-2001, ರವಿವಾರದವರೆಗೆ ನಡೆದ ಬೃಹತ್ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀ ಸೋಂದಾ ಸ್ವರ್ಣವಲ್ಲೀ ಮಠಾಧೀಶರಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಆಶೀರ್ವಚನದ ಕೆಲವು ನುಡಿಗಳು.

ಐದು ವರ್ಷಗಳ ಹಿಂದೆ, ಶಿರಸಿಯಲ್ಲಿ ಯೋಗ ಮಂದಿರದ ಕಾರ್ಯ ಪ್ರಾರಂಭಿಸುವ ಸಂದರ್ಭದಲ್ಲಿ ಸ್ಪಷ್ಟ ಶಬ್ದಗಳಲ್ಲಿ ಈ ಯೋಗ ಮಂದಿರದ

ಉದ್ದೇಶವನ್ನು ವಿವರಿಸಿದ್ದರು. ಅಷ್ಟಾಂಗ ಯೋಗದ ತತ್ವಗಳ ಪ್ರಚಾರ ಹಾಗೂ ಅಭ್ಯಾಸ, ಯೋಗ ಚಿಕಿತ್ಸೆ ಹಾಗೂ ಪ್ರಕೃತಿ ಚಿಕಿತ್ಸೆ, ಯೋಗ ಚಿಂತನೆಗಳು ಇವು ಈ ಯೋಗ ಮಂದಿರದ ನಿರ್ಮಾಣದ ಒಂದು ಉದ್ದೇಶ. ದೇವತಾರಾಧನೆ, ಧಾರ್ಮಿಕ ಕಾರ್ಯಕ್ರಮಗಳು, ಸ್ತ್ರೀಯರೇ ಮಾಡುವ ವ್ರತಪೂಜೆ, ಸ್ತೋತ್ರ ಮುಂತಾದವು-ಗಳನ್ನೊಳಗೊಂಡ ಅಧಿಯಜ್ಞ ಇನ್ನೊಂದು ಉದ್ದೇಶ. ಜನರಲ್ಲಿ ವೈಚಾರಿಕತೆ ಬೆಳೆಯಲು ಅನುಕೂಲವಾಗುವಂತಹ ಚರ್ಚೆ, ವಿಚಾರ ಸಂಕಿರಣ ಪ್ರವಚನ ಮುಂತಾದವುಗಳನ್ನೊಳಗೊಂಡ ಅಧಿವಿದ್ಯಾ ಎಂಬುದು ಮತ್ತೊಂದು ಉದ್ದೇಶ. ಶ್ರೀಗಳವರ ನೇತೃತ್ವದಲ್ಲಿ ಕೊನೆಯ ಎರಡು ಉದ್ದೇಶಗಳನ್ನೊಳಗೊಂಡ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಮೊದಲನೆಯ ಉದ್ದೇಶ ಇನ್ನೂ ಸಾಕಾರ ರೂಪ ಪಡೆದಿರಲಿಲ್ಲ. ಈ ಉದ್ದೇಶದ ಸಾಧನೆಗಾಗಿ ಶಾಂತಿವನ ಟ್ರಸ್ಟ್ (ರಿ.) ಧರ್ಮಸ್ಥಳ, ಶ್ರೀ ಧರ್ಮಸ್ಥಳ, ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಹಾಗೂ ಯೋಗ ವಿಜ್ಞಾನ ಕಾಲೇಜು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ।। ವೈ. ರುದ್ರಪ್ಪ, ಯೋಗ ವಿಭಾಗದ ಮುಖ್ಯಸ್ಥರಾದ ಶ್ರೀ ರಾಘವೇಂದ್ರ ಪೈ ಇವರುಗಳೊಂದಿಗೆ ಸಂಪರ್ಕವಿಟ್ಟುಕೊಂಡಿದ್ದರು. ಶ್ರೀಗಳವರ ಸಂಕಲ್ಪದಂತೆ ದಿ. 25-2-2001 ರಿಂದ 11-3-2001ರ ವರೆಗೆ ಬೃಹತ್‌ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ ಸಂಘಟಿತವಾಯಿತು.

ಶ್ರೀಗಳವರು ಈ ಶಿಬಿರದ ಕಾರ್ಯವ್ಯಾಪ್ತಿ ಪೂರ್ತಿ ಜಿಲ್ಲೆಯಾಗಿರಬೇಕು ಎಂದು ಬಯಸಿದರು. ಜೋಯಿಡಾ ಹಳಿಯಾಳದಂತಹ ತಾಲೂಕುಗಳು ಅನೇಕ ಕಾರ್ಯಕ್ರಮಗಳಿಂದ ವಂಚಿತವಾಗಿವೆ. ಆದಕಾರಣ ಅಲ್ಲಿಯೂ ಇಂತಹ ಕಾರ್ಯನಡೆಯಬೇಕು ಎಂದು ಆಶಿಸಿದ್ದರು. ಅದರಂತೆ ಜಿಲ್ಲೆಯ ಆಯ್ದಜನರ ಸ್ವಾಗತ ಸಮಿತಿಯನ್ನೂ ರಚಿಸಲಾಯಿತು. ಆದರೆ ಜಿಲ್ಲೆಯ ವ್ಯಾಪ್ತಿ, ಸಂಪರ್ಕ ಸಾಧನೆಯ ಕೊರತೆ, ಸಂಘಟನೆಯ ಸಂದರ್ಭದಲ್ಲಿ ಬರಬಹುದಾದ ತೊಂದರೆ-ಗಳನ್ನು ಗಮನದಲ್ಲಿಟ್ಟುಕೊಂಡು ಎರಡು ಹಂತದಲ್ಲಿ ಈ ಕಾರ್ಯ ಕೈಗೆತ್ತಿಕೊಳ್ಳಲು ನಿರ್ಧರಿಸಿದರು. ಅದರ ಫಲವಾಗಿಯೇ ಮೊದಲನೆಯ ಹಂತದಲ್ಲಿ ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲೂಕುಗಳ ಆಯ್ದ 35 ಸ್ಥಳಗಳಲ್ಲಿ ಯೋಗ ಶಿಬಿರ ಸಂಘಟಿಸಲು ನಿರ್ಧರಿಸಲಾಯಿತು ಹಾಗೂ ಪ್ರಕೃತಿ ಚಿಕಿತ್ಸಾ ಶಿಬಿರವನ್ನು ಶಿರಸಿಯ ಕಡವೆ ಶ್ರೀಪಾದ ಹೆಗಡೆ ಕಲ್ಯಾಣ ಮಂಟಪದಲ್ಲಿ ನಡೆಸಲು ನಿಶ್ಚಯಿಸಲಾಯಿತು.

ಶ್ರೀಗಳವರ ಮಾರ್ಗದರ್ಶನದಲ್ಲಿ ಈ ಭಾಗಗಳಲ್ಲಿ ಸಂಘಟಕರ ನೇಮಕ ನಿರಂತರ ಸಂಪರ್ಕ, ಓಡಾಟ, ಮೇಲಿಂದ ಮೇಲೆ ಸಂಘಟಕರ ಸಭೆ, ಪತ್ರಿಕಾಗೋಷ್ಠಿ,

ಧರ್ಮಸ್ಥಳ ಆಸ್ಪತ್ರೆಯೊಂದಿಗೆ ಸಮಾಲೋಚನೆ ಮುದ್ರಣಗಳ ಮೂಲಕ ವ್ಯಾಪಕ ಪ್ರಚಾರ ಹೀಗೆ ಈ ಶಿಬಿರದ ಬಗ್ಗೆ ಸಾರ್ವಜನಿಕರಿಗೆ ನಿರಂತರ ತಿಳುವಳಿಕೆ ನೀಡಲಾಯಿತು. ಹೀಗಾಗಿ ಸಿದ್ದಾಪುರ ತಾಲ್ಲೂಕಿನ ಸಿದ್ದಾಪುರ ನಗರ, ಹಾಗೂ ಗ್ರಾಮಾಂತರ ಪ್ರದೇಶಗಳಾದ ಕಾನಸೂರು, ನಾಣಿಕಟ್ಟಾ, ಬಾಳೇಸರ, ಬಿದ್ರಕಾನ, ಕಬ್ನಳ್ಳಿಗಳಲ್ಲಿ, ಶಿರಸಿ ತಾಲೂಕಿನ ಶಿರಸಿ ನಗರ, ಬೊಮ್ಮನಳ್ಳಿ, ಬೈರುಂಭೆ, ಹುಲೇಕಲ್, ಸಾಲಕಣಿ, ವಾನಳ್ಳಿ, ಹೆಗಡೆಕಟ್ಟಾ ಬಿಲಸ ಕೊಪ್ಪಗಳಲ್ಲಿ, ಯಲ್ಲಾಪುರ ತಾಲೂಕಿನ ಯಲ್ಲಾಪುರ ನಗರ ಚವತ್ತಿ, ಮಾವಿನಕಟ್ಟೆ ಮಂಚಿಕೇರಿ, ಕವಡಿಕೇರಿ, ದೇಹಳ್ಳಿ ಮುಂತಾದ 35 ಕಡೆಗಳಲ್ಲಿ ಯೋಗಶಿಬಿರ ನಡೆಯಿತು. ಕೆಲವು ಭಾಗಗಳಲ್ಲಿ ದೇವಸ್ಥಾನದಲ್ಲಿ, ಕೆಲವು ಕಡೆ ವಿದ್ಯಾಲಯಗಳಲ್ಲಿ, ಕಲ್ಯಾಣ ಮಂಟಪಗಳಲ್ಲಿ ಇನ್ನು ಕೆಲವು ಕಡೆ ಬಯಲುಗಳಲ್ಲಿಯೇ ಈ ಶಿಬಿರಗಳು ನಡೆದವು. 15 ಯೋಗ ಶಿಬಿರಗಳು ಮುಂಜಾನೆ 6-00 ರಿಂದ 7-30ರವರೆಗೆ 30 ಶಿಬಿರಗಳು ಸಂಜೆ 6-00 ರಿಂದ 7-30ರವರೆಗೆ ನಡೆದವು. ಒಟ್ಟು 1600 ಜನ ಈ ಯೋಗ ಶಿಬಿರದಲ್ಲಿ ಯೋಗ, ಪ್ರಾಣಾಯಾಮ, ಧ್ಯಾನಗಳ ತರಬೇತಿ ಪಡೆದರು ಹಾಗೂ ಇಂತಹ ಕಾರ್ಯಕ್ರಮ-ಗಳು ನಿರಂತರವಾಗಿ ನಡೆಯಲಿ ಎಂದು ಹಾರೈಸಿದರು.

ಶಿರಸಿಯ ಕಡವೆ ಶ್ರೀಪಾದ ಹೆಗಡೆ ಕಲ್ಯಾಣ ಮಂಟಪದಲ್ಲಿ ಮುಂಜಾನೆ 9-30 ರಿಂದ ಸಂಜೆ 5-30ರವರೆಗೆ ನಡೆದ ಪ್ರಕೃತಿ ಚಿಕಿತ್ಸಾ ಶಿಬಿರದಲ್ಲಿ 1140 ಜನ ಚಿಕಿತ್ಸೆ ಪಡೆದರು. ಪ್ರತಿ ನಿತ್ಯ 100 ರಿಂದ 150 ಹೊಸ ನೊಂದಣಿಗಳಾಗುತ್ತಿದ್ದವು. ಶಿಬಿರದ ನಿರ್ದೇಶಕ ಡಾ।। ಪ್ರಶಾಂತ ಶೆಟ್ಟಿ, ಮುಖ್ಯ ವೈದ್ಯಾಧಿಕಾರಿ ಡಾ।। ವೈ. ರುದ್ರಪ್ಪ, ಡಾ।। ಪದ್ಮನಾಭ ಶೆಟ್ಟಿಗಾರ, ಡಾ।। ಮೈನಾ ಶೆಟ್ಟಿ ಇವರ ನೇತೃತ್ವದಲ್ಲಿ ದಮ್ಮು, ಮಧುಮೇಹ, ಬೆನ್ನುನೋವು, ತಲೆನೋವು, ಕೀಲುನೋವು, ಅಲರ್ಜಿ, ಚರ್ಮ ವ್ಯಾಧಿ, ರಕ್ತದೊತ್ತಡ, ಜೀರ್ಣಾಂಗದ ತೊಂದರೆ ಮುಂತಾದ ವ್ಯಾಧಿಗಳಿಗೆ ಮಸಾಜ (ಅಂಗಮರ್ಧನ), ಉಗಿಸ್ನಾನ, ಆಯಸ್ಕಾಂತ ಚಿಕಿತ್ಸೆ, ಬೆನ್ನುಹುರಿ ಸ್ನಾನ, ಸೂಜಿ ಚಿಕಿತ್ಸೆ, ಯೋಗಚಿಕಿತ್ಸೆ ಮಣ್ಣಿನ ಚಿಕಿತ್ಸೆ ಮುಂತಾದ ಚಿಕಿತ್ಸೆಗಳು ನೀಡುವುದರ ಜೊತೆಗೆ, ಸಲಹೆ ಸೂಚನೆಗಳನ್ನು ನೀಡಲಾಯಿತು. ಈ ಕಾರ್ಯಕ್ರಮಗಳಲ್ಲಿ ವೈದ್ಯರಾಗಿ, ಯೋಗ ತರಬೇತುದಾರರಾಗಿ ಧರ್ಮಸ್ಥಳ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಕಾಲೇಜಿನ ವೈದ್ಯಾಧಿಕಾರಿಗಳು ಅಂತಿಮ ವರ್ಷದ ವಿದ್ಯಾರ್ಥಿಗಳು, ಹೌಸ ಸರ್ಜನುಗಳು, ಸಿಬ್ಬಂದಿಗಳು ಸೇರಿ ಒಟ್ಟು 35 ಜನ ಭಾಗವಹಿಸಿದ್ದರು.

ಶ್ರೀಗಳವರ ಅಪೇಕ್ಷೆಯಂತೆ, ಈ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಶ್ರೀ ಶ್ರೀ ಶ್ರೀ ನಾರಾಯಣ ಸ್ವಾಮಿಗಳು

ಉದ್ಘಾಟಕರಾಗಿ ಭಾಗವಹಿಸಿದರೆ, ಸೇವಾರತ್ನ ಡಾ|| ಎ.ಎನ್. ಪಟವರ್ಧನ. ಶ್ರೀ ಧ.ಮ. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಆಸ್ಪತ್ರೆಯ ಡಾ|| ವಿಠ್ಠಲ ಸರಳಾಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಪೊನ್ನಪೇಟೆಯ, ಶ್ರೀ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಜಗದಾತ್ಮಾನಂದಜೀ ಯವರು ವಿಶೇಷ ಆಮಂತ್ರಿತರಾಗಿ ಭಾಗವಹಿಸಿದ್ದರು. ಶಾಂತಿವನ ಟ್ರಸ್ಟ್ (ರಿ.) ಧರ್ಮಸ್ಥಳ ಇದರ ಕಾರ್ಯದರ್ಶಿ ಶ್ರೀ ಬಿ. ಸೀತಾರಾಮ ತೋಳ್ಪಾಡಿತ್ತಾಯ್ ಇವರು ರಾಜರ್ಷಿ ಡಾ|| ವೀರೇಂದ್ರ ಹೆಗಡೆಯವರ ಪ್ರತಿನಿಧಿಯಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಯೋಗ ವಿಭಾಗದ ಮುಖ್ಯಸ್ಥ ರಾಘವೇಂದ್ರ ಪೈ ಅವರು 'ಯೋಗದ ಕುರಿತು ಕಾರ್ಯಾಗಾರವನ್ನೇ ನಡೆಸಿಕೊಟ್ಟರು.

ಉದ್ಘಾಟನಾ ಸಮಾರಂಭದಲ್ಲಿ ಶ್ರೀಗಳವರು ಒಂದು ಮಾತನ್ನು ಹೇಳಿದ್ದರು. ''ಈ ಶಿಬಿರ ಮಠದ ನೇತೃತ್ವದಲ್ಲಿ ನಡೆಯುತ್ತಿದೆ. ಮಠದ ನೇತೃತ್ವದಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಅದರಂತೆ ಈ ಕಾರ್ಯಕ್ರಮವೂ ಮಾದರಿಯಾಗಲಿ''.

ಶ್ರೀಗಳವರ ಸಂಕಲ್ಪದಂತೆ, ಶ್ರೀಧರ್ಮಸ್ಥಳ ಮಂಜುನಾಥೇಶ್ವರ, ಪ್ರಕೃತಿ ಚಿಕಿತ್ಸಾ ಹಾಗೂ ಯೋಗ ವಿಜ್ಞಾನ ಕಾಲೇಜು ಆಸ್ಪತ್ರೆ ಧರ್ಮಸ್ಥಳ ಇವರ ಸರಕಾರದಿಂದ ಶಾಂತಿವನ ಟ್ರಸ್ಟ್‌ನ ಸಹಯೋಗದಿಂದ, ಎಲ್ಲ ಸಂಘಟಕಾರರ ಸಂಘಟನಾ ಚಾತುರ್ಯದಿಂದ, ಶಿರಸಿಯ ಕಡವೆ ಶ್ರೀಪಾದ ಹೆಗಡೆ ಕಲ್ಯಾಣ ಮಂಟಪದ ಪದಾಧಿಕಾರಿಗಳ ನೆರವಿನಿಂದ, ಎಲ್ಲ ಸಂಘ ಸಂಸ್ಥೆ ಹಾಗೂ ಸ್ವಾಗತ ಸಮಿತಿಯ ಪದಾಧಿಕಾರಿಗಳು ಪತ್ರಿಕಾ ಪ್ರತಿನಿಧಿಗಳ ಸಕ್ರಿಯ ಭಾಗವಹಿಸುವಿಕೆ- ಯಿಂದ, ಧರ್ಮಸ್ಥಳದವರೇ ಹೇಳುವಂತೆ ಇದೊಂದು ಅತ್ಯಂತ ಯಶಸ್ವಿ ಬೃಹತ್‌ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ. ಸಮಾರೋಪ ಸಮಾರಂಭದಂದು ಧರ್ಮಸ್ಥಳ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ|| ವೈ. ರುದ್ರಪ್ಪನವರ ಮಾತು ಈ ಶಿಬಿರದ ಯಶಸ್ಸಿಗೆ ಸಾಕ್ಷಿ. ''ಶಿರಸಿಯ ಜನರ ಎದುರು ನಾವು ಸೋತಿದ್ದೇವೆ. ನಿರೀಕ್ಷೆಗಿಂತ ಅಧಿಕ ಜನರು ಇವರ ಪ್ರಯೋಜನ ಪಡೆದಿದ್ದಾರೆ.'' ಶ್ರೀಗಳವರ ಸಂಕಲ್ಪವೊಂದಿದ್ದರೆ ಏನನ್ನೂ ಸಾಧಿಸಬಹುದು ಎಂಬುದಕ್ಕೆ ಈ ಯೋಗ ಸಂಗಮವೇ ಸಾಕ್ಷಿ.

ಹರಿ ಓಂ

ಸೋಂದಾದ ಐತಿಹಾಸಿಕ ಶಿಲ್ಪಕಲೆಗಳ ರಕ್ಷಣೆಯಲ್ಲಿ ಶ್ರೀ ಶ್ರೀಗಳ ನೇತೃತ್ವ

-ಶ್ರೀ ಪರಮೇಶ್ವರ ಎ. ಹೆಗಡೆ.

ಶಿರಸಿಯಿಂದ ಉತ್ತರಕ್ಕೆ 20 ಕಿ.ಮೀ. ದೂರದಲ್ಲಿ ಈಗಿನ ಸೋಂದಾ ಎಂಬ ಹೆಸರಿನ ನಿಸರ್ಗ ರಮಣೀಯ ಇತಿಹಾಸ ಪ್ರಸಿದ್ಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರತೀಕ ಪ್ರವಾಸಿ ತಾಣವಾದ ಪುಟ್ಟಹಳ್ಳಿ ಇದೆ.

ಸುಮಾರು 16ನೇ ಶತಮಾನದಲ್ಲಿ ಅರಸಪ್ಪ ನಾಯಕನಿಂದ ಮೊದಲ್ಗೊಂಡು 8 ಜನ ಅರಸರು 200 ವರ್ಷಗಳಕಾಲ ಈ ಸ್ವಾದಿಯನ್ನು ಆಳಿದರು ಎಂಬ ಪ್ರತೀತಿ ಇದೆ. ಆ ಕಾಲದಲ್ಲಿ ಈ ಸೋಂದಾವು ಬಹಳ ಉಛ್ರಾಯಸ್ಥಿತಿಯಲ್ಲಿ ಇತ್ತೆಂದು ಇಲ್ಲಿ ಈಗ ಇರುವ ಸುಂದರವಾದ ಕೆತ್ತನೆಗಳುಳ್ಳ ಹಲವಾರು ದೇವಾಲಯಗಳು ಹಾಗೂ ಮುತ್ತಿನಕೆರೆಗಳಂತಹ ಕೆರೆಗಳು ಅಚ್ಚುಕಟ್ಟಾದ ಬಾವಿಗಳು ಎಲ್ಲೆಂದರಲ್ಲಿ ನೋಡ ಸಿಗುವ ಶಿಲಾಶಾಸನಗಳನ್ನು ನೋಡಿದಾಗ ನಮಗೆ ವೇದ್ಯವಾಗುತ್ತದೆ.

ಆದರೆ ಕಾಲದ ವೈಪರೀತ್ಯಕ್ಕೆ ಸಿಲುಕಿ ಈ ಎಲ್ಲಾ ಗುಡಿ ಗೋಪುರಗಳೂ ಈಗ ನಾಶವಾಗುವ ಹಂತಕ್ಕೆ ಬಂದವೆ. ಅವುಗಳ ರಕ್ಷಣೆಯ ಆವಶ್ಯಕತೆಯನ್ನು ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ಮನಗಂಡು ಇವುಗಳ ರಕ್ಷಣೆ ಹಾಗೂ ಅಭಿವೃದ್ಧಿಯ ಸಲುವಾಗಿ ಇದಕ್ಕೊಂದು ವ್ಯವಸ್ಥೆ ಮಾಡಲು ನಿರ್ಧರಿಸಿ ಇಲ್ಲಿಯ ಶಿಷ್ಯ ಜನರನ್ನು ಶ್ರೀ ಮಠಕ್ಕೆ ಕರೆದು ವಿಷಯ ಪ್ರಸ್ತಾಪಿಸಿದರು. ಅದರಂತೆ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳವರ ಘನ ಗೌರವಾಧ್ಯಕ್ಷತೆಯಲ್ಲಿ 06-03-1995 ರಂದು ಜಾಗೃತ ವೇದಿಕೆ ಸೋಂದಾ (ರಿ). ಎಂಬ ಸಂಸ್ಥೆ ಆರಂಭಗೊಂಡಿತು.

ಶ್ರೀ ಶ್ರೀಗಳವರ ಅನಿಸಿಕೆಯು ಉತ್ತರ ಕನ್ನಡ ಜಿಲ್ಲೆಯಾದ್ಯಂತ ಇರುವ ಗುಡಿ ಗೋಪುರಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಯಾಗಿದ್ದರೂ ಸಧ್ಯಕ್ಕೆ ಸೋಂದಾ-ದಲ್ಲಿಯ ಐತಿಹಾಸಿಕ ಸ್ಥಳಗಳ ಅಭಿವೃದ್ಧಿಯನ್ನು ಈ ವೇದಿಕೆಯು ಕೈಗೆತ್ತಿಕೊಂಡಿದೆ.

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ಅಪ್ಪಣೆ ಕೊಡಿಸಿದಂತೆ ವೇದಿಕೆಯ ಧ್ಯೇಯೋದ್ದೇಶಗಳು ಈ ಕೆಳಗಿನಂತೆ ಇರುತ್ತವೆ.

1) ಐತಿಹಾಸಿಕ ಸ್ಮಾರಕಗಳು ಹಾಗೂ ಪ್ರಾಚೀನ ದೇವಸ್ಥಾನದ ಧಾರ್ಮಿಕ ಕ್ಷೇತ್ರಗಳ ಬಗ್ಗೆ ಅಧ್ಯಯನ, ಸಂಶೋಧನೆ ಹಾಗೂ ಅವುಗಳ ಜೀರ್ಣೋದ್ಧಾರ-ವನ್ನು ಕೈಗೊಳ್ಳುವುದು.

2) ಐತಿಹಾಸಿಕ ಹಾಗೂ ಗುಡಿ ಗೋಪುರಗಳ ಕ್ಷೇತ್ರಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಚಟುವಟಿಕೆಗಳನ್ನು ಕೈಗೊಳ್ಳುವುದು.

3) ಉತ್ತರ ಕನ್ನಡ ಜಿಲ್ಲೆಯ ಅದರಲ್ಲೂ ವಿಶೇಷತಃ ಸೋಂದಾ ಮತ್ತು ಮಠದೇವಳ ಗ್ರಾಮ ಸಮುದಾಯಗಳ ದೇವಸ್ಥಾನಗಳನ್ನು ಹಾಗೂ ಐತಿಹಾಸಿಕ ಸ್ಥಳಗಳನ್ನು ಸಂರಕ್ಷಿಸುವುದು ಹಾಗೂ ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸುವುದು.

4) ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಳ್ಳುವುದು.

5) ಪರಿಸರ ಸಂರಕ್ಷಣೆ, ದೈಹಿಕ ಹಾಗೂ ಸಾಮಾಜಿಕ ಆರೋಗ್ಯ, ರಾಷ್ಟ್ರೀಯ ಭಾವೈಕ್ಯ ಇವೇ ಮೊದಲಾದ ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳುವುದು.

6) ಈ ಮೇಲಿನ ಧ್ಯೇಯೋದ್ದೇಶಗಳನ್ನು ಸ್ವತಂತ್ರವಾಗಿ ಇಲ್ಲವೇ ಇಂತಹ ಸಮಾನ ಉದ್ದೇಶ ಹೊಂದಿರುವ ಬೇರೆ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಕೈಗೊಳ್ಳುವುದು.

7) ಈ ಮೇಲಿನ ಉದ್ದೇಶ ಸಾಧನೆಗಾಗಿ ಅವಶ್ಯವಿರುವ ಇನ್ನಿತರ ಯಾವತ್ತೂ ಚಟುವಟಿಕೆಗಳನ್ನು ಕೈಗೊಳ್ಳುವುದು.

ಸೋಂದಾ ಹಾಗೂ ಮಠದೇವಳ ಗ್ರಾಮಗಳಲ್ಲಿಯ ಪ್ರತಿಯೊಂದು ಮಜರೆಗೆ ಒಬ್ಬರಂತೆ 16 ಮಜರೆಗಳ 16 ಜನರು ಸಂಸ್ಥಾಪಕ ಸದಸ್ಯರಿದ್ದು ಈ ಸದಸ್ಯರಲ್ಲಿ ಐವರನ್ನು ಶ್ರೀ ಶ್ರೀಗಳವರೇ ಸೂಚಿಸುತ್ತಾರೆ. ಆಜೀವ ಸದಸ್ಯರಿಂದ ಇಬ್ಬರು

ಅಲ್ಲದೇ ಸಾಮಾನ್ಯ ಸದಸ್ಯತ್ವದಿಂದ ಇಬ್ಬರು ಹೀಗೆ 9 ಜನ ಸದಸ್ಯರಿರುವ ಕಾರ್ಯಕಾರಿ ಸಮಿತಿ ಇದ್ದು ಇದರ ಅವಧಿ 3 ವರ್ಷ ಇರುತ್ತದೆ. ಈ ಸಮಿತಿಯಲ್ಲಿ ಕಾರ್ಯಾಧ್ಯಕ್ಷ, ಕೋಶಾಧ್ಯಕ್ಷ, ಹಾಗೂ ಕಾರ್ಯದರ್ಶಿ ಸಹ ಕಾರ್ಯದರ್ಶಿ ಹೀಗೆ ಪದಾದಿಕಾರಿಗಳಿರುತ್ತಾರೆ. ಪ್ರತೀ ವರ್ಷದ ಸರ್ವ ಸಾಧಾರಣ ಸಭೆಯು ಶ್ರೀ ಶ್ರೀ ಗಳವರ ಅಧ್ಯಕ್ಷತೆಯಲ್ಲಿಯೇ ನಡೆದು ಆಯಾ ಆಯಾ ವರ್ಷದ ಆಥಾವೆ ಹಾಗೂ ಕೆಲಸ ಕಾರ್ಯಗಳ ಅವಲೋಕನ ನಡೆಯುತ್ತದೆ.

ಪ್ರಾರಂಭದ ಹಂತದಲ್ಲಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ ಉದ್ದೇಶದಂತೆ ಊರಿನ ನಾಗರಿಕರ ಹಾಗೂ ಯುವಕ ಮಂಡಳ ಮಹಿಳಾ ಮಂಡಳ ಅಲ್ಲದೇ ಸಹಕಾರಿ ಸಂಘ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಸಹಾಯ ಸಹಕಾರದಿಂದ ಇಲ್ಲಿಯ ಎಲ್ಲಾ ಗುಡಿ ಗೋಪುರಗಳನ್ನು ಸ್ವಚ್ಛಗೊಳಿಸಿ ಪ್ರವಾಸಿಗರು ವೀಕ್ಷಿಸಲು ಅನುಕೂಲ ಮಾಡಿಕೊಡಲಾಯಿತು. ಶ್ರೀ ಶ್ರೀಗಳವರ ಅಪ್ಪಣೆಯಂತೆ ಪ್ರವಾಸಿಗರ ಅನುಕೂಲಕ್ಕಾಗಿ ಮಾರ್ಗಸೂಚಿ ಫಲಕಗಳನ್ನು ಹಾಕಲಾಗಿದೆ.

ನಮ್ಮ ವೇದಿಕೆಗೆ ಪ್ರತೀವರ್ಷವೂ ಧನ ಸಹಾಯ ನೀಡುವ ಮೂಲಕ ಶ್ರೀ ಶ್ರೀಗಳವರು ಆರ್ಥಿಕ ಸಹಾಯ ಕಲ್ಪಿಸುತ್ತಿದ್ದಾರೆ.

ಇಲ್ಲಯ ಕೆಲವೊಂದು ದೇವಸ್ಥಾನಗಳು ಆನುವಂಶಿಕ ಟ್ರಸ್ಟ್‌ಗಳಾಗಿದ್ದು ಅವುಗಳನ್ನು ಪಬ್ಲಿಕ್ ಟ್ರಸ್ಟ್‌ಗಳಾಗಿ ಪರಿವರ್ತಿಸಲು ಶ್ರೀ ಶ್ರೀಗಳವರ ಪ್ರೇರಣೆಯೇ ಕಾರಣವಾಗಿರುತ್ತದೆ.

ಶ್ರೀ ಶ್ರೀಗಳವರ ಸೂಚನೆಯಂತೆ ವೇದಿಕೆಯು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಮುಜರಾಯಿ, ಪ್ರಾಚ್ಯವಸ್ತು ಈ ಎಲ್ಲಾ ಇಲಾಖೆಗಳಿಗೆ ಅಭಿವೃದ್ಧಿಗೊಳಿಸಲು ಮನವಿ ಮಾಡಿಕೊಂಡಿದ್ದು ಈ ಇಲಾಖೆಗಳಿಂದ ಕೆಲಸ ಕಾರ್ಯಗಳು ನಡೆಯುತ್ತಿವೆ.

ಪ್ರವಾಸಿಗರ ಅನುಕೂಲಕ್ಕಾಗಿ ಸೋಂದಾ ದರ್ಶನ ಎಂಬ ಕೈಪಿಡಿಯನ್ನು ಶ್ರೀ ಶ್ರೀಗಳವರ ಮಾರ್ಗದರ್ಶನದಲ್ಲಿ ಹೊರತರಲಾಗಿದೆ.

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ ಸಾಮಾಜಿಕ ಹಾಗೂ ಆರೋಗ್ಯ ರಕ್ಷಣೆಯ ಹಾದಿಯಲ್ಲಿ ಉಚಿತ ರಕ್ತ ವರ್ಗೀಕರಣ ಶಿಬಿರವನ್ನು ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಸೋಂದಾ ಸೇವಾ ಸಹಕಾರಿ ಸಂಘ, ಜಾಗೃತ ವೇದಿಕೆ ಇವುಗಳ ಸಹಯೋಗದೊಂದಿಗೆ ಶ್ರೀ ಮಠದಲ್ಲಿಯೇ ನಡೆಸಿದ್ದು ಸುಮಾರು

550 ಕ್ಕೂ ಹೆಚ್ಚು ಜನರ ರಕ್ತ ವರ್ಗೀಕರಣ ನಡೆಸಿ ರಕ್ತದ ಗುಂಪಿನ ಮಾಹಿತಿ ಚೀಟಿ ನೀಡಿದ್ದು ರಕ್ತ ದಾನಿಗಳ ಹೆಸರನ್ನು ದಾಖಲೆ ಮಾಡಿಕೊಳ್ಳಲಾಗಿದೆ.

ಕೇವಲ 8-10 ಕಿ.ಮೀ. ವ್ಯಾಪ್ತಿಯಲ್ಲಿ ಇರುವ ಅನೇಕ ಗುಡಿ ಗೋಪುರಗಳ ಹಾಗೂ ಐತಿಹಾಸಿಕ ದಾಖಲೆಗಳ ಪುನರುತ್ಥಾನಕ್ಕಾಗಿ ಕಂಡ ಕೇಳಿದ ಎಲ್ಲಾ ಮಹನೀಯರಿಂದ ಸಹಾಯ ಯಾಚಿಸಲಾಗುತ್ತಿದೆ. ಸಾತ್ವಿಕ ಮಹನೀಯರು ಇಲ್ಲಯ ಕೆಲಸಗಳಲ್ಲಿ ಪಾಲ್ಗೊಳ್ಳಬೇಕಾಗಿದೆ. ಕೇವಲ ಕರ್ನಾಟಕ ಸರ್ಕಾರಕ್ಕೆ ಅಲ್ಲದೇ ಕೇಂದ್ರ ಸರ್ಕಾರಕ್ಕೂ ನಮ್ಮ ಮನವಿ ಸಲ್ಲಿಸಲಾಗಿದೆ. ಒಟ್ಟಿನಲ್ಲಿ ನಮ್ಮ ಮನವಿಗೆ ಬೆಲೆ ಸಿಕ್ಕಿ ಅವರಿಂದ ಇಲ್ಲಿಯ ಸ್ಥಳಗಳ ಅಭಿವೃದ್ಧಿಯಾದರೆ ಹಿಂದಿನ ವೈಭವೋಪೇತ ಸ್ವಾದಿಯಾಗಿ ಕಂಗೊಳಿಸುವುದರಲ್ಲಿ ಸಂಶಯವಿಲ್ಲ. ನಮ್ಮ ವೇದಿಕೆಯ ಗೌರವಾಧ್ಯಕ್ಷರಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳವರ ಶುಭಾಶೀರ್ವಾದದಿಂದ ಹಾಗಾಗಲೆಂದು ಹಾರೈಸುತ್ತೇವೆ.

ಶ್ರೀ ರಾಜರಾಜೇಶ್ವರೀ ವಿದ್ಯಾಸಂಸ್ಥೆ ಹಾಗೂ ಸಂಸ್ಕೃತ ಮಹಾವಿದ್ಯಾಲಯ ನಡೆದು ಬಂದ ದಾರಿಯ ಒಂದು ಸಿಂಹಾವಲೋಕನ

-ವಿದ್ವಾನ್ ಬಾಲಚಂದ್ರ ಶಾಸ್ತ್ರಿಗಳು

ಸುಂದರ ಪರಿಸರದ ಸಹ್ಯಾದ್ರಿ ಶಿಖರಗಳ ಸಾಲಿನಲ್ಲಿ ಬರುವ ಶಿರಸಿ ನಗರದ ಸಮೀಪದ ಶಾಲ್ಮಲಾ ನದಿಯ ತೀರದಲ್ಲಿ ಪ್ರಸಿದ್ಧವಾದ ಶ್ರೀಸ್ವರ್ಣವಲ್ಲೀ ಮಠವು ಇದೆ. ಅನೇಕ ಯತಿವರ್ಯರ ಕಠೋರ ತಪಸ್ಸಿನ ತಾಣವಾದ ಈ ಸ್ಥಳವು ಇಂದಿಗೂ ಪ್ರಪಂಚದ ಬವಣೆಯಿಂದ ಬೇಸತ್ತು ಬಂದ ಯಾತ್ರಿಕರಿಗೆ ಕಣ್ಮನಗಳಿಗೆ ತಂಪನ್ನು ನೀಡಿ ಶಾಂತಿ, ಸಮಾಧಾನ, ನೆಮ್ಮದಿ ವಿತರಿಸುವ ಪುಣ್ಯ ಸ್ಥಳವಾಗಿದೆ.

ಕಾಶಿಯ ದಶಾಶ್ವಮೇಧಘಾಟಿನಲ್ಲಿ ಶ್ರೀ ಜಗದ್ಗುರು ಶಂಕರಾಚಾರ್ಯರ ಸಮ್ಮುಖದಲ್ಲಿ ಈ ಪೀಠದ ಯತಿಪರಂಪರೆಯು ಶ್ರೀ ವಿಶ್ವವಂದ್ಯರಿಂದ ಆರಂಭವಾಗಿ ಉಜ್ಜಯಿನಿ, ಗೋಕರ್ಣ, ಕಡತೋಕೆ ಹಾಗೂ ಶಾಲ್ಮಲಾ ತೀರದ ಸಹಸ್ರಲಿಂಗ ಎಂಬ ಸ್ಥಳಗಳನ್ನು ಒಳಗೊಂಡು ಈಗ ಶ್ರೀ ಸ್ವರ್ಣವಲ್ಲೀ ಎಂಬ ಸ್ಥಳದಲ್ಲಿ ತಪಃಪ್ರಭಾವದಿಂದ ಬೆಳಗುತ್ತಿದೆ. ಈ ಪೀಠದಲ್ಲಿ ಬಂದ ಯತಿವರ್ಯರೆಲ್ಲರೂ ''ಮಠಃ ಛಾತ್ರಾದಿ ನಿಲಯಃ'' ಎಂಬುದನ್ನು ಸಾರ್ಥಕವಾಗಿ ತೋರಿಸುತ್ತಾ ಬಂದವರು. ಈ ವಿದ್ಯಾಲಯವು ಪ್ರಾರಂಭವಾಗುವುದಕ್ಕೂ ಇದೇ ಮೂಲಮಂತ್ರವಾಗಿದೆ. ಇದಕ್ಕೆ ವ್ಯವಸ್ಥಿತ ಸ್ವರೂಪ ನೀಡಿದವರು ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳವರು. ತಾವು ಕಷ್ಟದಿಂದ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿರುವುದನ್ನು ಆಗಾಗ ಜ್ಞಾಪಿಸಿಕೊಂಡು ಮೈಸೂರಿನಿಂದ ಬಂದನಂತರ ಕ್ರಿ.ಶ. 1929ರಲ್ಲಿ ''ವೇದಾಧ್ಯಯನ ವರ್ಧಿನೀ'' ಎಂಬ ಹೆಸರಿನಲ್ಲಿ ಸೀಮಿತವಾಗಿ ಮಠದಲ್ಲಿ ಮಕ್ಕಳಿಗೆ ಆಶ್ರಯಕೊಟ್ಟು ತಾವೇ ಸ್ವತಃ ಪಾಠಪ್ರವಚನ ನೀಡುತ್ತಾ ವೇದ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಮಾಡಿದ್ದರು. ಇಷ್ಟೇ ಸಾಲದು ಎಂದು ಈ ಪಾಠಶಾಲೆಗೆ ಕಾಯಕಲ್ಪ ಚಿಕಿತ್ಸೆ

ಆಗಬೇಕೆಂದು ಬಯಸಿ 1950ರಲ್ಲಿ ವ್ಯವಸ್ಥಿತ ಆಡಳಿತ ಮಂಡಳಿ ಇರುವ ಶ್ರೀ ರಾಜರಾಜೇಶ್ವರೀ ವಿದ್ಯಾ ಸಂಸ್ಥೆಯನ್ನು ಕಟ್ಟಿದರು. ಈ ಸಂಸ್ಥೆಯು ಶ್ರೀ ಶ್ರೀಗಳವರ ಆರಾಧ್ಯ ದೇವತೆಯ ಹೆಸರಿನಲ್ಲೇ ಶ್ರೀ ರಾಜರಾಜೇಶ್ವರೀ ಪಾಠಶಾಲೆಯೆಂದು ಇದಕ್ಕೆ ನಾಮಕರಣ ಮಾಡಿ 1956ರಲ್ಲಿ ಶ್ರೀ ರಾಜರಾಜೇಶ್ವರೀ ಸಂಸ್ಕೃತ ಪಾಠಶಾಲೆಯನ್ನು 16 ವಿದ್ಯಾರ್ಥಿಗಳು ಒಬ್ಬರು ಶಿಕ್ಷಕರಿಗೆ ಆಶ್ರಯ ನೀಡಿ ಶ್ರೀಮಠದಲ್ಲಿಯೇ ಪ್ರಾರಂಭಿಸಿತು.

ಶಾಲೆಯು ಉತ್ತಮವಾಗಿ ನಡೆಯುತ್ತಿದ್ದುದರಿಂದ ಶ್ರೀಗಳವರ ಆಶ್ರಯ ಮಾರ್ಗದರ್ಶನ ಬಯಸಿ ಈ ಪಾಠಶಾಲೆಗೆ ಬರುವ ಛಾತ್ರರ ಸಂಖ್ಯೆ ಹೆಚ್ಚಾಗ-ತೊಡಗಿದ್ದರಿಂದ ಶ್ರೀಮಠದ ಆಡಳಿತ ಮಂಡಳಿಯು ಶಾಲಾ ಪ್ರವೇಶ ಸಂಖ್ಯಾ ಮಿತಿಯನ್ನು ಜಾರಿಗೊಳಿಸುವುದು ಅನಿವಾರ್ಯವಾಗತೊಡಗಿತು. 1970 ರಿಂದ 75ರ ವರೆಗೆ ಛಾತ್ರ ಸಂಖ್ಯೆ 15 ರಿಂದ 25ಕ್ಕೆ ಹೆಚ್ಚಿಸಿ ಇಬ್ಬರು ಶಿಕ್ಷಕರನ್ನು ಶ್ರೀಮಠವು ಒದಗಿಸಿತು. 1976ರಿಂದ 80ರ ವರೆಗೆ 50 ವಿದ್ಯಾರ್ಥಿಗಳು ಮೂವರು ಶಿಕ್ಷಕರು ಕಾರ್ಯ ನಿರ್ವಹಿಸಿದರು.

ಆಗಲೇ 79-80ರಿಂದ ಕರ್ನಾಟಕ ಸರಕಾರವು ಪಾಠಶಾಲಾ ನಿಯಮಾವಳಿಯನ್ನು ಅಂಗೀಕರಿಸಿದಾಗ ಶಿಕ್ಷಕರಿಬ್ಬರೇ 1991ರ ವರೆಗೆ ಕಾರ್ಯನಿರ್ವಾಹಿಸುವಂತಾಯಿತು.

ಈಗಾಗಲೇ ಈ ಪೀಠದಲ್ಲಿ 54ನೆಯವರಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಪೀಠಾಧ್ಯಕ್ಷರಾಗಿ ವಿರಾಜಮಾನರಾಗಿದ್ದು ಈ ಶಾಲೆಯನ್ನು ಮಹಾವಿದ್ಯಾಲಯವನ್ನಾಗಿ ಪರಿವರ್ತಿಸುವ ಚಿಂತನೆ ನಡೆಸಿದ್ದರು. ಈವರೆಗೆ ಕಾಲೋಚಿತ ಪ್ರಯೋಗ, ನಾಟಕಾಂತ ಸಾಹಿತ್ಯ ಬೋದಿಸಲ್ಪಡುತ್ತಿದ್ದ ಶಾಲೆ ಶಾಸ್ತ್ರ ಭಾಗಗಳನ್ನು ಆಯ್ದುಕೊಳ್ಳುವ ಪ್ರಗತಿಗೆ ಶ್ರೀ ಶ್ರೀಗಳವರು ಪ್ರೋತ್ಸಾಹಿಸಿ ತಾವೂ ಶಾಸ್ತ್ರ ಪಾಠ ಪ್ರವಚನ ನಡೆಸುತ್ತಾ ಬಂದರು. ಸ್ಥೂಲಪ್ರಗತಿ ಪರಾಂಬರಿಸೋಣ.

<u>ಈ ಶಾಲೆಯ ಹತ್ತು ವರ್ಷಗಳ ಪ್ರಗತಿಯ ನೋಟ</u>

ವರ್ಷ	ಬೋಧನಾ ವಿಷಯ	ಛಾತ್ರ ಸಂಖ್ಯೆ	ಬೋಧಕರ ಸಂಖ್ಯೆ	ಪರೀಕ್ಷಾ ಪರಿಣಾಮ
1991-92	ಕಾಲೋಚಿತ ಪ್ರಯೋಗ ಪ್ರಥಮಾ-ಕಾವ್ಯ-ಸಾಹಿತ್ಯ	162	3	ಶೇ.91

1992-93	ಕಾಲೋಚಿತ ಪ್ರಯೋಗ ಪ್ರ.ಕಾ.ಸಾ.	173	4	ಶೇ.92
1993-94	ಕಾ.ಪ್ರ.ಪ್ರ.ಕಾ. ಸಾಹಿತ್ಯ	175	4	ಶೇ.94
1994-95	-''-	189	4	ಶೇ.100
1995-96	-''-	170	9	ಶೇ.87

ಕೃಷ್ಣ ಯಜುರ್ವೇದ ತರಗತಿ ಆರಂಭ, ಅದ್ವೈತ ವೇದಾಂತ ಮತ್ತು ಮಿಮಾಂಸಾ ಶಾಸ್ತ್ರ ವಿದ್ವತ್ ಮಧ್ಯಮಾ ತರಗತಿ ಆರಂಭ, ಸಂಸ್ಕೃತ ಕಾಲೇಜಾಗಿ ಪರಿವರ್ತನವಾಯಿತು.

1996-97	ಕಾ.ಪ್ರ.ಪ್ರ.ಕಾ.ಸಾಹಿತ್ಯ ವಿ.ಮ.2		202	9	ಶೇ.90
1997-98	-''-	ವಿ.ಮ.3	207	9	ಶೇ.95
1998-99	-''-	ವಿ.ಉತ್ತಮಾ 1 ಜ್ಯೋತಿಷ 1	221	10-1	ಶೇ.93
1999-2000	-''-	2	223	11-1	ಶೇ.94
2001-01	-''-		223	11-1	ಶೇ.

ಈ ವರ್ಷದಲ್ಲಿ ವಿದ್ವತ್ ಉತ್ತಮಾವರೆಗೆ ಪೂರ್ಣಪ್ರಮಾಣದ ಎ.ಗ್ರೇಡ್ ಕಾಲೇಜಾಗಿ (ಅನುದಾನ ರಹಿತ) ಪಾಠಶಾಲೆಯು ಪೂರ್ಣ ಪ್ರಮಾಣದಲ್ಲಿ ಪರಿವರ್ತಿತವಾಯಿತು.

ಮೇಲ್ನೋಟದಲ್ಲಿ ಕಂಡುಬಂದಂತೆ ಶ್ರೀಗಳವರ ಪೀಠಾರೋಹಣದ ನಂತರ ಪ್ರತಿವರ್ಷ 15 ಮಕ್ಕಳಂತೆ ಹೆಚ್ಚಿಸುತ್ತಾ 95-96ರಿಂದ 100 ಮಕ್ಕಳಿಗೆ ಉಚಿತ ಊಟವಸತಿ ಪಠ್ಯಪುಸ್ತಕಗಳನ್ನು ಈವರೆಗೂ ಶ್ರೀಮಠವೇ ನೀಡುತ್ತಾ ಬಂದಿರುವು-ದೊಂದು ಹೆಮ್ಮೆಯ ಸಾಧನೆ ಎಂದರೆ ಅತಿಶಯೋಕ್ತಿಯೇನಿಲ್ಲ.

ಸಂಸ್ಕೃತ ವಿದ್ಯಾಪ್ರಸಾರ ಪ್ರಚಾರದ ದೃಷ್ಟಿಯಿಂದ ಖಾಸಾಪಾಲ ಪೂರ್ಣ ಪ್ರಾಥಮಿಕ ಶಾಲೆ, ಶ್ರೀದೇವಿ ಪದವೀಪೂರ್ವ ವಿದ್ಯಾಲಯ, ಶ್ರೀ ಗಜಾನನ ಮಾಧ್ಯಮಿಕ ಶಾಲೆ ವಾನಳ್ಳಿ ಈ ಸ್ಥಳಗಳಲ್ಲೂ ಮಕ್ಕಳಿಗೆ ಬೋಧನಾವ್ಯವಸ್ಥೆಯನ್ನೂ ಈ ಸಂಸ್ಥೆಯೇ ಮಾಡುತ್ತಿದೆ.

ಶ್ರೀ ರಾಜರಾಜೇಶ್ವರೀ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಪ್ರತಿವರ್ಷವೂ ಜಿಲ್ಲಾಮಟ್ಟದ ಶಿಕ್ಷಕ ಸಂಮೇಲನ, ಸಂಸ್ಕೃತೋತ್ಸವ, ಜಿಲ್ಲಾಮಟ್ಟದ ಸಂಸ್ಕೃತ

ಕಾಲೇಜುಗಳ ಮತ್ತು ಪಾಠಶಾಲಾ ಛಾತ್ರರಿಗಾಗಿ ವಿವಿಧ ಸ್ಪರ್ಧೆಗಳನ್ನು ನಡೆಸಿ ವಿವಿಧ ರೀತಿಯ ಧತ್ತಿನಿಧಿಯಿಂದ ವಿಜೇತರಿಗೆ ಪ್ರೋತ್ಸಾಹಕ ಬಹುಮಾನ ವಿತರಣೆ ಇತ್ಯಾದಿ ಚಟುವಟಿಕೆಗಳೊಂದಿಗೆ ಸಂಸ್ಕೃತ ಶಿಕ್ಷಕ ಸಂಮೇಲನ ಹಾಗೂ ರಾಜ್ಯಮಟ್ಟದ ಸಂಸ್ಕೃತ ಕಾಲೇಜು ಶಿಕ್ಷಕರಿಗಾಗಿ ಹೆಚ್ಚಿನ ತರಬೇತಿ, ಚಿಂತನಗೋಷ್ಠಿಗಳನ್ನೂ ಯಶಸ್ವಿಯಾಗಿ ಶ್ರೀಗಳವರ ನಿರ್ದೇಶನ ಪಡೆದು ನಡೆಸಿಕೊಂಡು ಬರಲಾಗುತ್ತಿರುವುದು ಪ್ರಗತಿಯ ಸ್ಪಷ್ಟ ಚಿತ್ರಣವಾಗಿದೆ. ಇಲ್ಲಿಯ ಚಟುವಟಿಕೆಗಳನ್ನು ಕಂಡು ಅನೇಕ ಪೀಠಾಧಿಪತಿಗಳು, ಹಿರಿಯ ವಿದ್ವಾಂಸರು, ರಾಜ್ಯ ಹಾಗೂ ಕೇಂದ್ರದ ಉನ್ನತ ಶಿಕ್ಷಣಾಧಿಕಾರಿಗಳು ಸಮಾಜದ ಗಣ್ಯರು ಶ್ಲಾಘಿಸಿ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

1998 ರಿಂದಲೂ ಈ ಮಹಾವಿದ್ಯಾಲಯದಲ್ಲಿ ಶಾಸ್ತ್ರ ಓದುತ್ತಿರುವ ಛಾತ್ರರು ರಾಜ್ಯ ಹಾಗೂ ರಾಷ್ಟ್ರಮಟ್ಟದ ವಾಕ್ಪ್ರತಿಯೋಗಿತಾದಲ್ಲಿ ಬಂಗಾರದ ಪದಕ ಸ್ಮರಣಿಕೆ ಬಹುಮಾನಗಳನ್ನು ಪಡೆದು ಬರುತ್ತಿರುವುದಕ್ಕೆ ಬೋಧಕರ ಮತ್ತು ಛಾತ್ರರ ಪ್ರಾಮಾಣಿಕ ಪ್ರಯತ್ನ ಶ್ರೀ ಶ್ರೀಗಳವರ ಪ್ರೋತ್ಸಾಹ ಆಶೀರ್ವಾದವೇ ಕಾರಣವೆಂಬುದು ಜನಜನಿತವಾಗಿದೆ.

ಈ ಶಾಲೆಯಲ್ಲಿ ಓದಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಖ್ಯಾತ ಪಂಡಿತರಲ್ಲಿ ಕಳಿಸಿ ಹೆಚ್ಚಿನ ಪರಿಣತಿ ಪಡೆಯಲು ಶ್ರೀಗಳವರೇ ಪ್ರೋತ್ಸಾಹಧನ ನೀಡಿ ಕಳಿಸಿಕೊಟ್ಟಿರುವುದು ಶ್ರೀಗಳವರ ಭವಿತವ್ಯದ ಬಗೆಗೆ ಇರುವ ಕಳಕಳಿಯನ್ನು ತೋರಿಸುತ್ತಿದೆ. ಒಟ್ಟಿನಲ್ಲಿ ಶ್ರೀಗಳವರ ಪೀಠಾರೋಹಣದ ನಂತರ ಶ್ರೀ ಸರ್ವಜ್ಞೇಂದ್ರರು ಪಾಠಶಾಲೆಯ ಬಗ್ಗೆ ಕಂಡ ಕನಸು ನನಸಾಗಿದೆ. ಈ ಮಹಾವಿದ್ಯಾಲಯವು ಹೆಮ್ಮರವಾಗಿ ಬೆಳೆದು ಸನಾತನ ಧರ್ಮರಕ್ಷಣೆಗೆ ಇನ್ನೂ ಹೆಚ್ಚಿನ ಅವಕಾಶ ಕಲ್ಪಿಸುವಂತಾಗಬೇಕೆಂದು ಗುರುಸನ್ನಿಧಿಯಲ್ಲೇ ಪ್ರಾರ್ಥಿಸೋಣ.

ವೇದ ಪಾರಾಯಣ ಮತ್ತು ವೇದ ಸಂಗಮ

-ವಿದ್ವಾನ್ ಎಂ. ಸುಬ್ರಹ್ಮಣ್ಯಭಟ್, ಬೀರೂರು

'ವೇದೋಽಖಿಲೋ ಧರ್ಮಮೂಲಮ್' ಎಂಬುದು ಸ್ಮೃತಿವಾಕ್ಯ. ಆರ್ಯೋಕ್ತಿಯೊಂದು ಹೀಗೆ ತಿಳಿಸುತ್ತದೆ- 'ಧರ್ಮೇಣೈವ ಪ್ರಜಾಃ ಸರ್ವಾಃ ರಕ್ಷಂತಿ ಸ್ಮ ಪರಸ್ಪರಮ್.' ನಿಜ, ಎಲ್ಲರೂ ಧರ್ಮಮಾರ್ಗದಲ್ಲಿ ನಡೆದರೆ ಯಾವ ಅಹಿತಕರ ಘಟನೆಗಳಿಗೂ ಅವಕಾಶವಿಲ್ಲ. ಧರ್ಮವನ್ನು ಎಲ್ಲರೂ ಪಾಲಿಸಿದರೆ ಯಾವ ಸಮಸ್ಯೆಗಳೂ ಉದ್ಭವಿಸಲಾರವು. ಧರ್ಮಕ್ಕೆ ಮೂಲವಾಗಿರುವ ವೇದಾಧ್ಯಯನ-ಅಧ್ಯಾಪನ ನಿರಂತರವಾಗಿ ನಡೆದಾಗಲೇ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ದೊರಕುವುದರಲ್ಲಿ ಸಂದೇಹವಿಲ್ಲ.

ಅಪೌರುಷೇಯಗಳೆಂದು ಹೇಳಲಾಗಿರುವ ವೇದಗಳನ್ನು ಮಂತ್ರದ್ರಷ್ಟಾರರು ಎಂದು ಕಂಡುಕೊಂಡರು ಎಂದು ಹೇಳುವುದು ಸುಲಭವಲ್ಲ. ಅಂದಿನಿಂದಲೂ ಪ್ರಶಾಂತವೂ ರಮಣೀಯವೂ ಆದ ಗುರುಕುಲಗಳಲ್ಲಿ ವೇದ-ವೇದಾಂಗಾದಿಗಳ ಅಧ್ಯಯನ-ಅಧ್ಯಾಪನಗಳು ನಡೆಯುತ್ತಾ ಬಂದಿವೆ. ಬರವಣಿಗೆಯ ವ್ಯವಸ್ಥೆ ಇಲ್ಲದಿದ್ದ ಆ ಕಾಲದಲ್ಲಿ ಗುರುಮುಖೇನ ಶಿಷ್ಯರಿಗೆ ವಿದ್ಯೆಗಳು ಪ್ರಾಪ್ತವಾಗುತ್ತಿದ್ದವು.

ಕಾಲ ವಿಪರ್ಯಾಸದಿಂದಲೋ, ಪರಕೀಯರ ಆಕ್ರಮಣದಿಂದಲೋ, ಸುಲಭಗ್ರಾಹ್ಯವಾದ ಆಧುನಿಕ ವಿದ್ಯೆಯ ಪ್ರಭಾವದಿಂದಲೋ ವೇದಾಧ್ಯಯನವು ಕ್ಷೀಣಿಸತೊಡಗಿದೆ. ಉತ್ತರ ಭಾರತದಲ್ಲಂತೂ ವಿದೇಶೀಯರ ಆಕ್ರಮಣಗಳನ್ನು ತಡೆಗಟ್ಟಲು ಬಹುಮಂದಿ ವೇದಪರಂಪರೆಯನ್ನು ತ್ಯಜಿಸಿ ಕ್ಷಾತ್ರ ತೇಜಸ್ಸನ್ನು ರೂಢಿಸಿಕೊಂಡರು. ತತ್ಪರಿಣಾಮವಾಗಿ 'ಆರ್ಯಾವರ್ತ=ಪುಣ್ಯಭೂಮಿ' ಎಂದು ಪ್ರಸಿದ್ಧವಾಗಿದ್ದ ಉತ್ತರಭಾರತವು ವೇದಾಧ್ಯಯನದಿಂದ ದೂರವಾಯಿತು. ನೂರಾರು ಶಾಖೆಗಳಲ್ಲಿದ್ದ ವೇದರಾಶಿ ಇಂದು ಅಲ್ಪಸಂಖ್ಯಾಕವಾಗಿದೆ. ಅಧ್ಯಯನ-ಅಧ್ಯಾಪನ ಮಾಡುವವರ ಸಂಖ್ಯೆಯೂ ಕಡಮೆಯಾಗಿದೆ. ಪ್ರಾಚೀನ ಕಾಲದಲ್ಲಿ

ಯಾರಿಗೂ ಜೀವಿಕೆಯೊಂದು ಸಮಸ್ಯೆಯಾಗಿರಲಿಲ್ಲ. ಇದ್ದುದರಲ್ಲಿ ಸುಖವಾಗಿ ನೆಮ್ಮದಿಯಿಂದ ಬದುಕುವ ಕಲೆ ನಮ್ಮವರಿಗೆ ಕರಗತವಾಗಿತ್ತು. ಅಂದು 'ತೇನ ತ್ಯಕ್ತೇನ ಭುಂಜೀಥಾಃ' ಎಂಬ ಈಶಾವಾಸ್ಯೋಪನಿಷತ್ತಿನ ಚಿಂತನೆಯಂತೆ ಎಲ್ಲರೂ ಬಾಳುತ್ತಿದ್ದರು.

ಇಂದು ಪರಿಸರ ಬದಲಾಗಿದೆ; ಜೀವನ ಕ್ರಮ ವ್ಯತ್ಯಾಸವಾಗಿದೆ; ಆಸೆ-ಆಕಾಂಕ್ಷೆಗಳು ಭಿನ್ನವಾಗಿವೆ. ಜ್ಞಾನರಾಶಿಗಿಂತಲೂ ಧನರಾಶಿಯ ಕಡೆಗೆ ನಮ್ಮ ಗಮನ ಹೆಚ್ಚಾಗಿ ಹರಿದಿದೆ. ಒಂದು ಕಾಲಕ್ಕೆ ಎಲ್ಲೆಡೆ ಕೇಳಿಬರುತ್ತಿದ್ದ ವೇದಘೋಷ-ವೇದಚಿಂತನೆ ಇಂದು ವಿರಲವಾಗಿದೆ. ಸನಾತನ ಸಂಸ್ಕೃತಿಯ ಜೀವಾಳಗಳಾದ ವೇದಗಳನ್ನು ರಕ್ಷಿಸಲು ನಮ್ಮ ಪ್ರಾಚೀನರು ಬಹಳಷ್ಟು ಪ್ರಯತ್ನ ಪಟ್ಟಿದ್ದರು. ಅದನ್ನು ನಾವಿಂದು ಉಳಿಸಿ ಬೆಳೆಸಬೇಕಾಗಿದೆ.

ಇಂದು ದಕ್ಷಿಣಭಾರತದಲ್ಲಿ ಅಲ್ಪಪ್ರಮಾಣದಲ್ಲಾದರೂ ವೇದಾಧ್ಯಯನ-ಅಧ್ಯಾಪನಗಳು ಉಳಿದುಕೊಂಡು ಬಂದಿವೆ. ಅದನ್ನು ವ್ಯಾಪಕವಾಗಿಸುವ ದೃಷ್ಟಿಯಿಂದ ಬೆಂಗಳೂರಿನ ವೇದ ವಿದ್ಯಾ ಸಂಸತ್ ನಮ್ಮ ನಾಡಿನಾದ್ಯಂತ (ಮೊದಲಿಗೆ ಉತ್ತರಕನ್ನಡ ಜಿಲ್ಲೆಯಲ್ಲಿ) ವೇದಪಾರಾಯಣಗಳನ್ನು ನಡೆಸುವ ಮೂಲಕ ನಮ್ಮವರಿಗೆ ವೇದಗಳ ಮಹತ್ತ್ವವನ್ನು ತಿಳಿಸಲು ಇದೀಗ ಮುಂದಾಗಿದೆ.

ಶ್ರೀ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನಾಧೀಶ್ವರರಾದ ಶ್ರೀಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಮತ್ತು ಗೋಕರ್ಣ ಮಂಡಲಾಧೀಶ್ವರ ಶ್ರೀ ಶ್ರೀ ರಾಮಚಂದ್ರಪುರ ಮಠಾಧೀಶರಾದ ಶ್ರೀ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮಿಗಳವರ ದಿವ್ಯ ಮಾರ್ಗದರ್ಶನದಲ್ಲಿ ವೇದವಿದ್ಯಾಸಂಸತ್ ವೇದ ಪಾರಾಯಣ ಯೋಜನೆಯನ್ನು ಉತ್ತರಕನ್ನಡ ಜಿಲ್ಲೆಯಲ್ಲಿ ಕೈಗೆತ್ತಿಕೊಂಡಿತು. ಸಂಸತ್ತಿನ ಪ್ರಮುಖರಾದ ವಿದ್ವಾನ್ ಸೋ.ತಿ. ನಾಗರಾಜ (ಬೆಂಗಳೂರು) ವಿದ್ವಾನ್ ಶಂಕರಭಟ್ಟ, ಬಾಲೀಗದ್ದೆ (ಶ್ರೀ ಸ್ವರ್ಣವಲ್ಲೀ ಶ್ರೀಮಠ), ಹಾಗೂ ವಿದ್ವಾನ್ ಶೇಷಗಿರಿ ಭಟ್ಟ, ಗುಂಜಗೋಡು (ಸಿದ್ದಾಪುರ) ಇವರು ಕಾರ್ಯತತ್ಪರರಾಗಿ ಉತ್ತರಕನ್ನಡ ಜಿಲ್ಲೆಯ ಐದು ತಾಲೂಕುಗಳ 36 ಕೇಂದ್ರಗಳಲ್ಲಿ ಪರ್ಯಾಯ ಕ್ರಮದಲ್ಲಿ ವೇದಪಾರಾಯಣ ಯೋಜನೆಯನ್ನು ಕಳೆದ ಡಿಸೆಂಬರ್ ತಿಂಗಳ ದಿನಾಂಕ 13ರಿಂದ ಪ್ರಾರಂಭಿಸಿದರು.

ಶಿರಸಿಯ ಶ್ರೀ ಮಹಾಗಣಪತಿ ದೇವಾಲಯದಲ್ಲಿ ಸ್ವರ್ಣವಲ್ಲೀ ಶ್ರೀಗಳವರ ದಿವ್ಯ ಉಪಸ್ಥಿತಿಯಲ್ಲಿ ಶುಭಾರಂಭಗೊಂಡ ಈ ಯೋಜನೆ ಯಲ್ಲಾಪುರ, ಸಿರಸಿ,

ಸಿದ್ದಾಪುರ, ಹೊನ್ನಾವರ ಮತ್ತು ಕುಮಟಾ ತಾಲೂಕುಗಳ 36 ಸ್ಥಾನಗಳಲ್ಲಿ ಯಶಪ್ರದವಾಗಿ ಕಾರ್ಯಗತವಾದುದು ವೇದಮಾತೆಯ ಕೃಪೆಯಿಂದಲೇ ಎಂಬುದರಲ್ಲಿ ಎರಡು ಮಾತಿಲ್ಲ. ಈ ಪರಿಸರದಲ್ಲಿ ವೇದಪಾರಾಯಣ ಯೋಜನೆ-ಯನ್ನು ಕೈಗೆತ್ತಿಕೊಂಡಾಗ ಈ ಪ್ರದೇಶದ ಮುಖ್ಯ ಬೆಳೆಯಾಗಿದ್ದ ಅಡಕೆಯ ಧಾರಣೆ ಕುಸಿದು ಹೋಗಿತ್ತು. ಸಂಘಟಕರಂತೂ ದಿಕ್ಕುತೋಚದೆ ಕಂಗಾಲಾಗಿದ್ದರೂ 'ಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋऽತ್ರ ದೋಷಃ' ಎಂಬ ಸುಭಾಷಿತದಂತೆ ಕಾರ್ಯಪ್ರವೃತ್ತರಾದರು. ಆರ್ಥಿಕ ಸ್ಥಿತಿಯಲ್ಲಿ ಕುಸಿತವುಂಟಾಗಿದ್ದರೂ ಹೃದಯಾಂತರಾಳದಲ್ಲಿ ಮನೆಮಾಡಿಕೊಂಡಿದ್ದ ವೇದಭಕ್ತಿ ಇವರಲ್ಲಿ ಕಿಂಚಿತ್ತೂ ಕಡಮೆಯಾಗಿರಲಿಲ್ಲವೆಂಬುದು ವೇದಪಾರಾಯಣ ಮಾಡಿಸಲು ಸಿದ್ಧರಾದ ಗೃಹಸ್ಥರ ಸಂಖ್ಯೆ ಬೆಳೆಯುತ್ತಲೇ ಹೋದಾಗ ಸಂಘಟಕರಿಗೆ ಅರಿವಾಯಿತು. ತತ್ಪರಿಣಾಮವಾಗಿ ಸಾಕಷ್ಟು ಸಂಖ್ಯೆಯಲ್ಲಿ ವೇದಪಾರಾಯಣ ಕರ್ತೃಗಳನ್ನು ಒದಗಿಸಲು ಸಂಘಟಕರು ಸಾಕಷ್ಟು ಶ್ರಮಿಸಬೇಕಾಯಿತು.

ಕೆಲವು ವರ್ಷಗಳ ಹಿಂದೆ ದೆಹಲಿಯಲ್ಲಿ ರಾಷ್ಟ್ರಮಟ್ಟದ ವೇದ ಸಮ್ಮೇಳನ ನಡೆದಾಗ ಈ ಲೇಖಕನೂ ಪಾಲ್ಗೊಂಡಿದ್ದ. ವೇದಪಾರಾಯಣ ನಡೆಯುತ್ತಿದ್ದ ವೇದಿಕೆಗೆ ಅಲ್ಲಿನ ಜನರು ಆಗಮಿಸಿ ಶ್ರದ್ಧಾಭಕ್ತಿಗಳಿಂದ ವೇದಪಠನವನ್ನು ಆಲಿಸುತ್ತಿದ್ದರು. ತಮ್ಮ ಹಿರಿಯರು ದೇಶರಕ್ಷಣೆಗೆ ಹೆಚ್ಚು ಗಮನ ಕೊಡಬೇಕಾಗಿ ಬಂದುದರಿಂದ ವೇದಾಧ್ಯಯನದಿಂದ ದೂರವಾಗಬೇಕಾಯಿತೆಂಬುದನ್ನೂ ಅವರು ತಿಳಿಸಿದರು. ಆದರೆ ದಕ್ಷಿಣಭಾರತದಲ್ಲಿ ಮೆಕಾಲೆ ನಮಗೆ ನೀಡಿದ ಶಿಕ್ಷಣ ಪದ್ಧತಿಯಿಂದ ಮತ್ತು ಆಧುನಿಕ ವಿಜ್ಞಾನ ನಮಗೆ ದಯಪಾಲಿಸಿದ ಭೋಗ ಜೀವನ ಪದ್ಧತಿಯಿಂದ ವೇದಾಧ್ಯಯನ ನಶಿಸಿಹೋಗುತ್ತಾ ಇದೆ ಎಂಬುದಂತೂ ನಿರ್ವಿವಾದ. ಇಂತಹ ಪರಿಸ್ಥಿತಿಯಲ್ಲಿ ವೇದ ವಿದ್ಯಾಸಂಸತ್ ವೇದ ಪ್ರಚಾರಕ್ಕೆ ಹೆಚ್ಚಿನ ಗಮನ ನೀಡಿ ಅನೇಕ ಧ್ಯೇಯೋದ್ದೇಶಗಳನ್ನು ಮುಂದಿಟ್ಟುಕೊಂಡು ಮುಂದಡಿಯಿಟ್ಟಿತ್ತು.

ಉದ್ದೇಶ :

1. ಸನಾತನ ವಿದ್ಯೆಗಳೆಲ್ಲ ವೇದಕೇಂದ್ರೀಕೃತವೆಂಬುದನ್ನು ಆಸ್ತಿಕರಿಗೆ ಮನದಟ್ಟು ಮಾಡಿಕೊಡುವುದು.
2. ವೇದಾಧ್ಯಯನಕ್ಕೆ ಪ್ರೋತ್ಸಾಹ ಕೊಡುವುದು.
3. ವೇದರಾಶಿಯನ್ನು ಸಮಗ್ರವಾಗಿ ಶಬ್ದ ಸ್ವರೂಪದಲ್ಲಿ ಪರಿಚಯಿಸುವುದು.

4. ವೇದೋಕ್ತವಾದ ಎಲ್ಲ ಕರ್ಮಗಳ ಅನುಷ್ಠಾನ ಈ ಕಾಲದಲ್ಲಿ ದುಃಸಾಧ್ಯ. ಮಂತ್ರ ಪಾರಾಯಣದಿಂದ ಅವುಗಳ ಫಲವನ್ನು ಪಡೆಯಬಹುದು.
5. ವೇದ ಮಂತ್ರಗಳಿಂದಲೇ ಗರ್ಭಾಧಾನಾದಿ ಸಂಸ್ಕಾರಗಳು. ಸಮಗ್ರ ವೇದ ಪಾರಾಯಣದಿಂದ ಅವು ಹೆಚ್ಚು ಅರ್ಥಪೂರ್ಣ.
6. ಗೃಹಸ್ಥರ ಮನೆಗಳಲ್ಲಿ, ದೇವಾಲಯಗಳಲ್ಲಿ, ಧಾರ್ಮಿಕ ಸಂಸ್ಥೆಗಳಲ್ಲಿ ವೇದ ಪಾರಾಯಣ ಪದ್ಧತಿಯನ್ನು ಪುನರ್ಜಾಗರಣಗೊಳಿಸುವುದು.

ಸ್ವರೂಪ :

1. ಉತ್ತರ ಕನ್ನಡ ಜಿಲ್ಲೆಯ ಆಯ್ದ ಐದು ತಾಲೂಕುಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸುವುದು.
2. ಪ್ರತಿ ತಾಲೂಕಿನಲ್ಲೂ ಈ ಬಾರಿ ಐದು ಗೃಹಸ್ಥರ ಮನೆಗಳಲ್ಲಾದರೂ ವೇದಪಾರಾಯಣ ನಡೆಸುವುದು.
3. ಪ್ರತಿ ಪಾರಾಯಣದ ಅವಧಿ ಎಂಟು ದಿನಗಳು.
4. ಪ್ರತಿ ತಾಲೂಕಿನಲ್ಲಿಯೂ ಪಾರಾಯಣ ಅವಧಿ ಮುಗಿದ ಬಳಿಕ ತಾಲೂಕು ಮಟ್ಟದಲ್ಲಿ ವೇದ ಸಂದೇಶವನ್ನು ತಿಳುಹಲು ಕಾರ್ಯಕ್ರಮವೊಂದನ್ನು ಸಾರ್ವಜನಿಕರಿಗಾಗಿ ಆಯೋಜಿಸುವುದು.
5. ಪಾರಾಯಣ ಕರ್ತರ ಸಂಯೋಜನೆಯ ಜವಾಬ್ದಾರಿಯನ್ನು ವೇದ ವಿದ್ಯಾಸಂಸತ್ ಮಾಡುತ್ತದೆ.
6. ಪ್ರತಿಮನೆಗೂ ಪ್ರಶಿಕ್ಷಿತರಾದ ಇಬ್ಬರು ಪಾರಾಯಣಕರ್ತರನ್ನು ಕಳುಹಿಸಿ ಕೊಡಲಾಗುವುದು.
7. ವೇದ ಪಾರಾಯಣಗಳು ಮುಗಿದ ಬಳಿಕ 'ವೇದ ಸಂಗಮ'ವೆಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

ಸ್ವರ್ಣವಲ್ಲೀ ಶ್ರೀಮಠದಲ್ಲಿ ವೇದಸಂಗಮ

ಪ್ರಾಚೀನ ಕಾಲದಲ್ಲಿ ರಾಜ-ಮಹಾರಾಜರು ವೇದ-ಶಾಸ್ತ್ರಗಳ ರಕ್ಷಣೆಗಾಗಿ ಗುರುಕುಲಗಳ ಸ್ಥಾಪನೆಗೆ ಮತ್ತು ಅವುಗಳ ಪೋಷಣೆಗಾಗಿ ಸಾಕಷ್ಟು ನೆರವು ನೀಡುತ್ತಿದ್ದರು. ಇಂದು ಕಾಲ ಬದಲಾಗಿದೆ. ಸನಾತನ ಸಂಸ್ಕೃತಿಯ ಬೆನ್ನೆಲುಬಾದ ವೇದ-ಶಾಸ್ತ್ರಗಳ ರಕ್ಷಣೆ ಮತ್ತು ಪೋಷಣೆಗಳು ಮಠಾಧಿಪತಿಗಳ ಅನುಗ್ರಹದಿಂದ ನಡೆಯಬೇಕಾಗಿದೆ. ವೈದಿಕ ಸಂಸ್ಕೃತಿಯ ಪರಂಪರೆಯ, ಪುರಾತನ ಜನ್ಮ ಸಂಸ್ಕಾರ-

ವನ್ನು ಹೊಂದಿದ ಸದ್ಗೃಹಸ್ಥರು ವೇದ ಪೋಷಣೆಗೆ ನೆರವು ನೀಡಬೇಕಾಗಿದೆ. ಕೆಲವು ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ನೂರಾರು ಕೇಂದ್ರಗಳಲ್ಲಿ ಸಂಸ್ಕೃತ ಸಂಭಾಷಣ ಶಿಬಿರಗಳನ್ನು ನಡೆಸಲು ಮಾರ್ಗದರ್ಶನ ನೀಡಿದ, ಸಿರಸಿ ನಗರದಲ್ಲಿ ಅಭೂತಪೂರ್ವವಾದ 'ಸಂಸ್ಕೃತ ಸಂಗಮ'ವೆಂಬ ಮಹೋನ್ನತ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಟ್ಟ ಸ್ವರ್ಣವಲ್ಲೀ ಶ್ರೀಗಳು ಈಗಲೂ ಅದೇ ರೀತಿಯಲ್ಲಿ ಶ್ರೀಮಠದಲ್ಲಿ ವೇದಸಂಗಮವೆಂಬ ಕಾರ್ಯಕ್ರಮವನ್ನು ನಡೆಸಿಕೊಡಲು ಮುಂದಾದುದು ವೇದ ಭಕ್ತರ ಸೌಭಾಗ್ಯವೇ ಆಗಿದೆ.

ವೇದಾಸ್ತಾವತ್ ಯಜ್ಞಕರ್ಮ ಪ್ರವೃತ್ತಾಃ

ಉತ್ತರ ಕನ್ನಡಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ನಡೆದ ವೇದಪಾರಾಯಣ ಯೋಜನೆಯ ''ವೇದ ಸಂಗಮ'' ಸಮಾರೋಪ ಕಾರ್ಯಕ್ರಮದ ಅಂಗವಾಗಿ ಶ್ರೀಮಠದಲ್ಲಿ ಋಗ್ವೇದ ಸಂಹಿತಾಯಾಗ, ಕೃಷ್ಣಯಜುರ್ವೇದ ಮಂತ್ರ ಸ್ವಾಹಾಕಾರ ಯಾಗ, ಶುಕ್ಲಯಜುರ್ವೇದ ಮಂತ್ರ ಸ್ವಾಹಾಕಾರ ಯಾಗ, ಸಾಮವೇದ ಮಂತ್ರ ಸ್ವಾಹಾಕಾರ ಯಾಗ, ದಿವ್ಯ ಭೌಮಾಂತರಿಕ್ಷ ಉತ್ಪಾತಶಾಂತಿ, ಮಹಾರುದ್ರ ಪಾರಾಯಣ, ಮಹಾರುದ್ರ ಹವನ ಮೊದಲಾದ ಯಜ್ಞಗಳು ಫೆಬ್ರವರಿ 28ರಂದು ಪ್ರಾರಂಭವಾಗಿ ಮಾರ್ಚ್ 5ರಂದು ಮುಕ್ತಾಯಗೊಂಡವು.

ಶ್ರೀಮಠದಲ್ಲಿ ನಡೆದ ಈ ಯಜ್ಞಗಳೆಲ್ಲ ಲೋಕಕಲ್ಯಾಣ ದೃಷ್ಟಿಯಿಂದಲೇ ನಡೆದವುಗಳಾಗಿವೆ. ಇತ್ತೀಚೆಗೆ ಗುಜರಾತಿನಲ್ಲಿ ಸಂಭವಿಸಿದ ಭೀಕರ ಭೂಕಂಪ-ದಿಂದಾಗಿ ಅಪಾರ ಜೀವಹಾನಿಯಾಗಿದೆ; ದೇಶದ ಸಂಪತ್ತು ಅಪಾರ ಪ್ರಮಾಣದಲ್ಲಿ ನಷ್ಟವಾಗಿದೆ. ಇದರಿಂದ ಅಪಾರವಾಗಿ ನೊಂದುಕೊಂಡ ಶ್ರೀ ಶ್ರೀಗಳು ದಿವ್ಯ (ಅಗ್ನಿಯ ಅನಾಹುತಗಳು) ಭೌಮ (ಭೂಕಂಪ, ಭೂಕುಸಿತ, ಪ್ರವಾಹ....) ಅಂತರಿಕ್ಷ (ಅತಿವೃಷ್ಟಿ, ಚಂಡಮಾರುತ, ಉಲ್ಕಾಪಾತ) ಉತ್ಪಾತಗಳು ಮುಂದೆ ಉಂಟಾಗದಿರಲಿ ಎಂಬ ಲೋಕಾನುಕಂಪ ದೃಷ್ಟಿಯಿಂದ, ಸಮಸ್ತ ಜೀವರಾಶಿಗೆ ಹಿತವಾಗಲೆಂಬ ಬಯಕೆಯಿಂದ ದಿವ್ಯ ಭೌಮಾಂತರಿಕ್ಷ ಉತ್ಪಾತ- ಶಾಂತಿಯನ್ನು ವಿಶೇಷವಾಗಿ ಏರ್ಪಡಿಸಿದ್ದರು. ಸನಾತನ ಪರಂಪರೆಯ ಚಿಂತಕರು ಎಂದೂ, ಯಾರಲ್ಲೂ, ಯಾವವರ್ಗದ ಬಗೆಗೂ ಭೇದವೆಣಿಸಿದವರಲ್ಲ. ಇವರೆಲ್ಲರ ಚಿಂತನೆ 'ಸರ್ವೇಽಪಿ ಸುಖಿನಸ್ಸಂತು' ಎಂಬುದೇ ಆಗಿದೆ. ನಮ್ಮ ನಾಡಿನ ಹಿರಿಯ ಚಿಂತಕರಾಗಿದ್ದ ಡಿ.ವಿ.ಜಿ.ಯವರು ಯಾವಾಗಲೂ 'ನಂಬಿಕೆ'ಗೆ ವಿಶೇಷ ಮಹತ್ತ್ವ ನೀಡುತ್ತಿದ್ದರು. ನಮ್ಮ ಸತ್ಕರ್ಮಾನುಷ್ಠಾನಗಳ ಸತ್ಫಲಗಳಿಗೆಲ್ಲ ನಂಬಿಕೆಯೇ ಮೂಲ.

ಸಚ್ಚಿದಾನಂದ ಸ್ವರೂಪರೇ ಆಗಿರುವ ಶ್ರೀಗಳವರ ನಂಬಿಕೆ ಯಥಾರ್ಥವಾಗಲಿ ಎಂಬುದೇ ಭಕ್ತಕೋಟಿಯ ಪ್ರಾರ್ಥನೆಯಾಗಿದೆ.

ಸಮಾರೋಪ

ಮಾರ್ಚ್ ದಿನಾಂಕ 5ರಂದು ಸಂಜೆ ಶ್ರೀಮಠದ ಸಭಾಂಗಣ ವೇದ ಸಂಗಮದ ಸಮಾರೋಪ ಕಾರ್ಯಕ್ರಮಕ್ಕಾಗಿ ನಾಡಿನ ವಿವಿಧ ಮೂಲೆಗಳಿಂದ ಬಂದ ವೇದಭಕ್ತರಿಂದ ಕಿಕ್ಕಿರಿದು ತುಂಬಿತ್ತು. ಶ್ರೀ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಮಾರೋಪ ಸಮಾರಂಭವು ವೇದಘೋಷದೊಂದಿಗೆ ಪ್ರಾರಂಭವಾಯಿತು. ಸ್ವಾಗತ ಕಾರ್ಯಕ್ರಮದ ಬಳಿಕ ವೇದ ವಿದ್ಯಾ ಸಂಸತ್ತಿನ ಪ್ರಮುಖರಾದ ವಿದ್ವಾನ್ ಸೋ.ತಿ. ನಾಗರಾಜರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ- ''ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಕಾಮರೂಪದಿಂದ ಸೌರಾಷ್ಟ್ರದ ವರೆಗೆ ಒಂದೇ ದೇಶವೆಂಬ ಏಕತ್ವವನ್ನು ಪ್ರತಿಪಾದಿಸಿದುದು ವೇದ. ಈ ದೇಶದ ಎಲ್ಲರ ಮನಸ್ಸನ್ನು ಒಂದೆಡೆ ಸೇರಿಸಿದುದು ವೇದ. 'ಗಣಾನಾಂ ತ್ವಾ' ಎಂಬ ಮಂತ್ರೋಚ್ಚಾರಣೆ ಪ್ರಾರಂಭಿಸಿದ ಕೂಡಲೇ ಸಮಸ್ತಭಾರತೀಯರೂ ಗಣಪತಿಯನ್ನೇ ಸ್ಮರಿಸುತ್ತಾರೆ. ವೇದ ಮಂತ್ರಗಳ ಶಬ್ದಾರ್ಥಕ್ಕೆ ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣವೆಂಬ ಭೇದವಿಲ್ಲ. ನಮ್ಮ ಋಷಿಗಳು 'ತಪಸಾ ಕ್ರಮೇಣ' ಮಂತ್ರಗಳನ್ನು ಕಂಡುಕೊಂಡು ನಮಗೆ ಉಪದೇಶಿಸಿ ಅಮೂಲ್ಯವಾದ ಜ್ಞಾನಸಂಪತನ್ನು ನೀಡಿದ್ದಾರೆ. ಅದನ್ನು ಉಳಿಸಿ ಬೆಳೆಸಬೇಕಾದುದು ನಮ್ಮ ಕರ್ತವ್ಯ. ವೇದಾಧ್ಯಯನದಿಂದ ಮಾತ್ರ ನಾವು ಋಷಿ ಋಣದಿಂದ ಮುಕ್ತರಾಗಲು ಸಾಧ್ಯ. ಇಂದು ಕಾಲ ವೈಪರೀತ್ಯದಿಂದ ಅಧ್ಯಯನ-ಅಧ್ಯಾಪನ ಮಾಡುವ ಅವಕಾಶಗಳು ಲುಪ್ತವಾಗುತ್ತಿವೆ. ಶ್ರೀ ಶ್ರೀಗಳವರ ಆಶೀರ್ವಾದ ಬಲದಿಂದ ಈ ವೇದಪಾರಾಯಣ ಯೋಜನೆ ಮತ್ತು ವೇದಸಂಗಮ ಕಾರ್ಯಕ್ರಮ ಗಳು ಯಶಸ್ವಿಯಾಗಿವೆ. ನಾವು ಊಹಿಸಿದ್ದಕ್ಕಿಂತಲೂ ಹೆಚ್ಚು ಪಾರಾಯಣಗಳು ನಡೆದಿವೆ. 'ಯಜ್ಞೇನ ದೇವೇಭ್ಯಃ' - ಜೀವನವೇ ಒಂದು ಯಜ್ಞ. ಯಜ್ಞಾನುಷ್ಠಾನವು ಪರಮ ಕರ್ತವ್ಯವಾಗಿದೆ. 'ಯಂ ಯಂ ಕ್ರತುಮಧೀತೇ ತೇನಾಸ್ಯ ಇಷ್ಟಂ ಭವತಿ'' ಎಂದು ಹೃದಯಂಗಮವಾಗಿ ವಿವರಿಸಿದರು.

ಶ್ರೀ ಕೃಷ್ಣಯಜುರ್ವೇದಕ್ಕೆ ಸಂಬಂಧಿಸಿದಂತೆ 'ಸ್ವಾಹಾಕಾರ ವಿಧಿ' ಗ್ರಂಥವು ಮುದ್ರಿತ ಪುಸ್ತಕರೂಪದಲ್ಲಿ ಲಭ್ಯವಿರಲಿಲ್ಲ. ಸ್ವರ್ಣವಲ್ಲೀ ಶ್ರೀ ಶ್ರೀಗಳ ಕೃಪಾಪೋಷಣೆಯಿಂದ ಶ್ರೀ ಭಗವತ್ಪಾದ ಪ್ರಕಾಶನವು ಸ್ವಾಹಾಕಾರ ವಿಧಿಗ್ರಂಥವನ್ನು ಮುದ್ರಿಸಿ ಪ್ರಕಟಪಡಿಸಲು ಮುಂದಾಗಿದೆ. ವಿ|| ಸೋ.ತಿ. ನಾಗರಾಜರ

ಸಂಪಾದಕತ್ವದಲ್ಲಿ ಇದೀಗ ಎರಡನೆಯ ಭಾಗವು ಬಿಡುಗಡೆಗೆ ಸಿದ್ಧವಾದ ಸಂದರ್ಭದಲ್ಲಿ ಆಸ್ಥಾನವಿದ್ವಾಂಸರಾದ ಸೂರಿ ರಾಮಚಂದ್ರ ಶಾಸ್ತ್ರಿಗಳು 'ಯಜುರ್ವೇದ ಸ್ವಾಹಾಕಾರ ವಿಧಿ' ಗ್ರಂಥದ ಎರಡನೆಯ ಭಾಗವನ್ನು ಬಿಡುಗಡೆ ಮಾಡುತ್ತಾ ''ವೇದಃ ಶಿವಃ ಶಿವೋ ವೇದಃ, ವೇದಾಧ್ಯಾಯೀ ಸದಾಶಿವಃ'' ಎಂದು ತಮ್ಮ ಭಾಷಣವನ್ನು ಪ್ರಾರಂಭಿಸಿ ''ಬ್ರಾಹ್ಮಣೇನ ನಿಷ್ಕಾರಣೋ ಧರ್ಮಃ ಷಡಂಗೋ ವೇದೋಽಧ್ಯೇಯೋ ಜ್ಞೇಯಶ್ಚ'' ಎಂದು ಜ್ಞಾನಿಗಳು ಹೇಳಿದುದನ್ನು ನೆನಪಿಸಿದರು. 'ಈ ಜಗತ್ಸೃಷ್ಟಿಯ ವಿವರಣೆಯೇ ವೇದದಲ್ಲಿದೆ. ವೇದಾಧ್ಯಯನ ಇಂದು ಲೋಪವಾಗುತ್ತಿದೆ. 'ಅನೇಕ ಮಕ್ಕಳಿದ್ದರೆ ಒಬ್ಬನಾದರೂ ಕಾಶಿಗೆ ಹೋದಾನು' ಎಂಬ ಬಯಕೆ ಹಿಂದಿನವರಿಗೆ ಇತ್ತಂತೆ. ಇಂದು ಬ್ರಾಹ್ಮಣ ಪರಂಪರೆಯವರು ಒಬ್ಬನನ್ನಾದರೂ ವೇದ-ಸಂಸ್ಕೃತಗಳ ಅಧ್ಯಯನಕ್ಕೆ ಕಳುಹಿಸಿಕೊಟ್ಟರೆ ಇದಕ್ಕಿಂತ ಮಿಗಿಲಾದ ಪುಣ್ಯಕಾರ್ಯ ಬೇರೊಂದಿಲ್ಲ. ಇಂದು ನನ್ನ 87ನೆಯ ವಯಸ್ಸಿನಲ್ಲಿ ಇಲ್ಲಿ ಸೇರಿದ ವೇದಾಧ್ಯಯನ ಸಂಪನ್ನರನ್ನು, ವೇದಭಕ್ತರನ್ನು ನೋಡಿ ನನಗೆ ಬಹಳ ಆನಂದವಾಗಿದೆ. ಪುಸ್ತಕ ಬಿಡುಗಡೆಯ ನೆಪದಿಂದ ನನ್ನನ್ನು ಇಲ್ಲಿಗೆ ಬರಮಾಡಿಸಿಕೊಂಡು ವೇದಜ್ಞರನ್ನು ನೋಡಲು ಅನುವು ಮಾಡಿಕೊಟ್ಟ ನಿಮಗೆಲ್ಲರಿಗೂ ಕೃತಜ್ಞತೆಗಳು'' ಎಂದು ತಿಳಿಸಿದರು.

ಸಮಾರಂಭದ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರೂ, ಮನೆಯನ್ನೇ ವೇದಪಾಠಶಾಲೆಯನ್ನಾಗಿಸಿದ ವೇದ-ಪೋಷಕರೂ, ಜ್ಯೋತಿ ಉದ್ಯಮದ ಒಡೆಯರೂ ಆದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯಂ ಅವರು ಈ ''ವೇದ ಸಂಗಮ''ದಲ್ಲಿ ಪಾಲ್ಗೊಂಡುದು ತಮ್ಮ ಸುಕೃತವೆಂದು ಹೇಳುತ್ತಾ ಮುಂದಿನ ಜನ್ಮವೇನಾದರೂ ಇದ್ದುದೇ ಆದಲ್ಲಿ ತಾನೊಬ್ಬ ಶ್ರೇಷ್ಠಮಟ್ಟದ ವೇದ-ಸಂಸ್ಕೃತ ಪಂಡಿತನಾಗಿ ಜನಿಸುವಂತಾಗಲಿ'' ಎಂದು ಪ್ರಾರ್ಥಿಸುತ್ತಾ ಶ್ರೀಗಳು ಹಮ್ಮಿಕೊಂಡ ವೇದಪ್ರಚಾರ ಕಾರ್ಯಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದರು. ಕಳೆದ ವರ್ಷ ಯಜುರ್ವೇದದ ಕನ್ನಡಾನುವಾದ ಗ್ರಂಥದ ಬಿಡುಗಡೆಯ ಸಂದರ್ಭದಲ್ಲಿ ರೂಪುಗೊಂಡ ವೇದ ಪಾರಾಯಣ ಯೋಜನೆಯು ಇಲ್ಲಿ ಕಾರ್ಯಗತವಾದುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವೇದಶಾಸ್ತ್ರಗಳಲ್ಲಿ ಮಹಾಪಂಡಿತರಾದ ಯಜುರ್ವೇದ ಸ್ವಾಹಾಕಾರ ವಿಧಿಗ್ರಂಥಕ್ಕೆ ಸಲಹೆ-ಸಹಕಾರಗಳನ್ನು ನೀಡಿದ ವಿ॥ ರಾಮೇಶ್ವರ ಅವಧಾನಿಗಳನ್ನು ಮತ್ತು ಸಂಪೆಕಟ್ಟೆ ಶ್ರೀ ಶಂಕರನಾರಾಯಣ ಘನಪಾಠಿಗಳನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ದೇಹತ್ಯಾಗ ಮಾಡಿದ

ಗೋಕರ್ಣದ ವಿದ್ವಾಂಸ ವೇ|| ರಾಮಚಂದ್ರ ಭಟ್ಟ ಶ್ರೌತಿಗಳನ್ನೂ ಸಂಸ್ಮರಿಸಲಾಯಿತು. ಇವರು ಸ್ವಾಹಾಕಾರವಿಧಿ ಗ್ರಂಥಕ್ಕೆ ಮಾರ್ಗದರ್ಶನ ನೀಡಿದವರಾಗಿದ್ದರು.

ಸಮಾರೋಪ ಸಮಾರಂಭದಲ್ಲಿ ಅನುಗ್ರಹ ಭಾಷಣ ಮಾಡುತ್ತಾ ಶ್ರೀ ಶ್ರೀಗಳು ''ಇಂದು 'ವೇದಸಂಗಮ'ದ ಮೂಲಕ ಮುಂದಿನ ಸತ್ಕಾರ್ಯಗಳ ಶುಭಾರಂಭ-ವಾಗಿದೆ. ಉಪನಯನ ಸಂಸ್ಕಾರ ಪಡೆದೂ ವೇದಾಧ್ಯಯನ ಮಾಡದವನು 'ಬ್ರಾಹ್ಮಣಬ್ರುವ'ನೇ ಸರಿ. ಅಂತಃಕರಣದಲ್ಲಿ ವೇದ ಭಕ್ತಿಯನ್ನು ತುಂಬಿಕೊಳ್ಳದೆ ಆಡಂಬರದ ಬಾಹ್ಯಾಚರಣೆಯಿಂದ ಏನೂ ಪ್ರಯೋಜನವಿಲ್ಲ. ವೇದಗಳು ಜ್ಞಾನದ ಭಂಡಾರಗಳು. ಪರಮಾತ್ಮನ ಮುಖದಿಂದ ಹೊರಹೊಮ್ಮಿತೆಂದು ಹೇಳಲಾದ ಕಾರಣ ಅವು ಪರಮ ಪವಿತ್ರವಾದುವುಗಳು. ಏಕೆಂದರೆ ಪರಮಾತ್ಮನಿಗೆ ಯಾವುದೇ ಮಮತ್ವಾದಿ ಭಾವನೆಗಳಿಲ್ಲ. ವೇದ ಭಗವಂತನಲ್ಲಿ ನಮಗೆ ಅಚಲವಾದ ಭಕ್ತಿಯಿರಬೇಕು. ಪುರಾಣ-ಶಾಸ್ತ್ರ ಪ್ರಾಮಾಣ್ಯಗಳಿಗಿಂತಲೂ ವೇದ-ಪ್ರಾಮಾಣ್ಯವು ಉನ್ನತವಾದುದು. ಭಗವಂತನಿಂದ ಕೊಡುಗೆಯಾಗಿ ಬಂದ ವೇದಗಳಲ್ಲಿ ನಾವು ತಾದಾತ್ಮ್ಯಭಾವನೆಯನ್ನು ತಳೆಯಬೇಕು. ವೇದಗಳಲ್ಲಿರುವ ಪಾವಕತ್ವ (ಪುನೀತ-ರನ್ನಾಗಿಸುವಿಕೆ) ಮತ್ತು ಶೋಧಕತ್ವ (ದುಷ್ಟಗುಣಗಳ ದೂರೀಕರಣ, ಸದ್ಗುಣಗಳ ಸಂಗ್ರಹ) ಗುಣಗಳು ನಮ್ಮನ್ನು ಮಾನವತ್ವದಿಂದ ದೈವತ್ವಕ್ಕೇರಿಸಲು ಸಹಕಾರಿ. ವೇದಗಳಲ್ಲಿರುವ ಪರಮ ಪಾವನ ಸ್ವರೂಪದ ಅಪಾರ ಶಬ್ದ ಸಂಪತ್ತನ್ನು ವೇದ-ಪಾರಾಯಣದ ಶ್ರವಣ ಮಾಡುವುದರ ಮೂಲಕ ತಿಳಿಯಬಹುದಾಗಿದೆ. ವೇದ ಪರಿಚಯ, ಸ್ವರಪರಿಚಯ, ಅದರ ಮಾಧುರ್ಯ, ಅದರಿಂದ ಹೊಮ್ಮುವ ಧ್ವನಿತರಂಗ ಹೀಗೆ ನಮ್ಮ ಪ್ರಾಚೀನ ಜ್ಞಾನಭಂಡಾರದ ಶ್ರೀಮಂತಿಕೆಯನ್ನೂ, ವೈಶಿಷ್ಟ್ಯವನ್ನೂ ತಿಳಿದುಕೊಂಡು ಅಭಿಮಾನಪಡಬಹುದಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಮ್ಮಿಕೊಂಡ ಈ ಕಾರ್ಯಕ್ರಮಕ್ಕೆ ವೇದಜ್ಞರು, ಸಂಘಟಕರು, ಗೃಹಸ್ಥರು, ವೇದಭಕ್ತರು, ಶ್ರೀಮಠದ ಶಿಷ್ಯರು, ಹಾಗೂ ವೇದಾಭಿಮಾನಿಗಳು ಅಪಾರ ಶ್ರಮಿಸಿದ್ದಾರೆ. ಇವರೆಲ್ಲರಿಗೂ ವೇದಪುರುಷನು ಮಂಗಲವನ್ನುಂಟುಮಾಡಲಿ. ಭಗವಂತನ ವಾಣಿಯ ಅನುವ್ಯಾಹರಣ ದಿಂದ ಲೋಕಕ್ಕೆ ಮಂಗಲವಾಗಲಿ'' ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಶ್ರೀ ಶ್ರೀಗಳು ವೇದಪಾರಾಯಣಗಳನ್ನು ಏರ್ಪಡಿಸಿದ ಗೃಹಸ್ಥರನ್ನು, ವೇದಪಾರಾಯಣ ನಡೆಸಿಕೊಟ್ಟ ವೇದಜ್ಞರನ್ನು ಮತ್ತು ವೇದೋಪನ್ಯಾಸ ನೀಡಿದ ವಿದ್ವನ್ಮಣಿಗಳನ್ನು ಶಾಲು ಹೊದೆಸಿ ಫಲ ತಾಂಬೂಲ ನೀಡಿ ಗೌರವಿಸಿದರು.

ವೇದಪ್ರಚಾರದ ಮುಂಚೂಣಿಯಲ್ಲಿ ನಿಂತ, ಸ್ವಾಹಾಕಾರ-ವಿಧಿ' ಗ್ರಂಥದ ಪ್ರಧಾನ ಸಂಪಾದಕರೂ, ವೇದ ವಿದ್ಯಾಸಂಸತ್ತಿನ ಪ್ರಮುಖರೂ, ವೇದಶಾಸ್ತ್ರಪಂಡಿತವರೇಣ್ಯ ರಾದ ವಿ|| ಸೋ. ತಿ. ನಾಗರಾಜ, ಸಂಘಟನಾ ಪ್ರಮುಖರಾದ ವಿ|| ಬಾಲಿಗದ್ದೆ ಶಂಕರಭಟ್ಟ ಮತ್ತು ವಿ|| ಶೇಷಗಿರಿ ಭಟ್ಟ ಗುಂಜಗೋಡು ಇವರ ಕಾರ್ಯಸಾಮರ್ಥ್ಯ ವನ್ನು ವಿಶೇಷವಾಗಿ ಉಲ್ಲೇಖಿಸಿದ ಶ್ರೀಗಳು ಶಾಲುಹೊದೆಸಿ ಫಲತಾಂಬೂಲ ನೀಡಿ ಗೌರವಿಸಿದರು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪೂರ್ವಯೋಜಿತ ಪ್ರವಾಸದಲ್ಲಿದ್ದ ಶ್ರೀ ರಾಮಚಂದ್ರಪುರ ಮಠಾಧೀಶ ಶ್ರೀಮದ್ರಾಘವೇಶ್ವರ ಭಾರತೀ ಸ್ವಾಮಿಗಳ ಸಂದೇಶವನ್ನು ಹೊತ್ತು ತಂದ ಕೈಯೂರು ನಾರಾಯಣ ಭಟ್ಟರನ್ನೂ ಶ್ರೀಮಠದ ಪರವಾಗಿ ಗೌರವಿಸಲಾಯಿತು.

ಶ್ರೀ ಮಠದ ಅಧಿಕಾರಿವರ್ಗ, ನೌಕರವರ್ಗ, ಮಹಾಪಾಠ ಶಾಲೆಯ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿವರ್ಗ ಹಾಗೂ ಶ್ರೀಮಠದ ಭಕ್ತವೃಂದ ವೇದಸಂಗಮ ಕಾರ್ಯಕ್ರಮಕ್ಕೆ ಅಸದೃಶವಾದ ನೆರವು ಸಹಕಾರಗಳನ್ನು ನೀಡಿತ್ತು. ಕಾರ್ಯಕ್ರಮ ಪ್ರಾರಂಭವಾದ ದಿನದಿಂದಲೂ ಶ್ರೀಮಠಕ್ಕೆ ಆಗಮಿಸುತ್ತಿದ್ದ ಭಕ್ತಕೋಟಿಗೆ ಅತ್ಯಂತ ಆದರಪೂರ್ವಕವಾಗಿ ಆತಿಥ್ಯವನ್ನು ನೀಡಲಾಗುತ್ತಿತ್ತು.

ಉತ್ತರ ಕನ್ನಡ ಜಿಲ್ಲೆಯ ಹಲವು ಕೇಂದ್ರಗಳಲ್ಲಿ ಅನುರಣಿಸಿದ ವೇದಘೋಷ ಹಾಗೂ ಶ್ರೀಮಠದಲ್ಲಿ ಒಂದು ವಾರ ಕಾಲ ನಡೆದ ಯಜ್ಞಾನುಷ್ಠಾನ - ಇವುಗಳ ಸತ್ಫಲಗಳು ಸಮಸ್ತ ಜೀವಕೋಟಿಗೂ ಲಭ್ಯವಾಗಲಿ ಎಂಬುದೇ ಸನಾತನ ಪರಂಪರೆಯವರೆಲ್ಲರ ಚಿರಂತನ ಬಯಕೆಯಾಗಿದೆ.

|| ಶುಭಂ ಭೂಯಾತ್ ||

ವೇದ ಪಾರಾಯಣ ನಡೆಸಿದ ಗೃಹಸ್ಥರು

(1) ಶ್ರೀ ಮಹಾಗಣಪತಿ ದೇವಸ್ಥಾನ (2) ಶ್ರೀ ಕೇಶವ ಎಂ. ಹೆಗಡೆ ಮತ್ತು ಸಹೋದರರು (ಗಡಿಕೈ) (3) ವೇ|| ಮೂ|| ವಿಶ್ವನಾಥ ಭಟ್ಟ ಮತ್ತು ಸಹೋದರರು (ಬೆಳಖಂಡ) (4) ಶ್ರೀ ಉಮಾಮಹೇಶ್ವರ ಹಂಗಾರಿ (ಹಂಗಾರಿ ಮನೆ) (5) ಶ್ರೀ ನಾರಾಯಣ ಭಟ್ಟರು (ಅಗಾಶಿ) (6) ಶ್ರೀ ಗೋಪಾಲಕೃಷ್ಣಭಟ್ಟ ಮತ್ತು ಸಹೋದರರು (ಹಂಡ್ರಮನೆ) (7) ಶ್ರೀ ಎಸ್.ಜಿ. ಹೆಗಡೆ ಮತ್ತು ಸಹೋದರರು (ಶಿರ್ನಾಲಾ) (8) ಶ್ರೀ ಚಂದ್ರಶೇಖರ ಹೆಗಡೆ (ಹೂಡ್ಲಿಮನೆ) (9) ಶ್ರೀ ವಿ.ಎನ್. ಹೆಗಡೆ (ಬೊಮ್ಮಳ್ಳಿ) (10) ಶ್ರೀ ಪಿ.ಐ. ಹೆಗಡೆ (ಹುಡ್ಲಜಡ್ಡಿ) (11) ಶ್ರೀ ಪಿ.ವಿ.

ಹೆಗಡೆ (ಕಟ್ಟಳ್ಳಿ) (12) ಶ್ರೀ ಅನಂತಹೆಗಡೆ (ಕಾಗೇರಿ) (13) ಶ್ರೀ ತಿಮ್ಮಪ್ಪಹೆಗಡೆ (ಕನ್ನಳ್ಳಿ) (14) ಶ್ರೀಮತಿ ಮತ್ತು ಶ್ರೀನಾರಾಯಣ ಹೆಗಡೆ (ಗುಂಜಗೋಡು) (15) ಶ್ರೀ ಧನಂಜಯ ಹೆಗಡೆ (ತ್ಯಾಗಲಿ) (16) ಶ್ರೀ ಮಂಜುನಾಥ ಹೆಗಡೆ ಮತ್ತು ಸಹೋದರರು (ಶೀಬಳಿ) (17) ಶ್ರೀ ಜಿ.ಕೆ. ಹೆಗಡೆ ಮತ್ತು ಸೋದರರು (ಗೋಳಗೋಡು) (18) ವಿದ್ವಾನ್ ಕೃಷ್ಣಭಟ್ (ಅಡವೀತೋಟ) (19) ಶ್ರೀಕೃಷ್ಣಭಟ್ಟ ಸಾರಂಗ (ಕಲಕೈ) (20) ಶ್ರೀ ಸದಾಶಿವ ಹೆಗಡೆ (ಅಭ್ಹಿಮನೆ) (21) ಶ್ರೀ ಸತ್ಯನಾರಾಯಣ ಗ ಭಟ್ಟ (ಕಲ್ಲಬ್ಬೆ) (22) ಶ್ರೀ ಶಾಸ್ತ್ರಿಗಳು (ಉಂಚಗೇರಿ) (23) ಶ್ರೀ ಸುಬ್ರಾಯ ಭಟ್ಟ (ಅಲೇಖ) (24) ಶ್ರೀಮತಿ ಮತ್ತು ಶ್ರೀ ಗೋವಿಂದ ಹೆಗಡೆ (ಕೆಕ್ಕಾರು ಮಠ) (25) ಶ್ರೀ ವೆಂಕಟರಮಣ ಜಿ. ಭಟ್ಟ (ಉಪ್ಪಿನಪಟ್ಟಣ) (26) ಶ್ರೀ ಆರ್.ಜಿ. ಭಟ್ಟ (ಕೂಜಳ್ಳಿ) (27) ಶ್ರೀ ಕೆ.ಟಿ. ಹೆಗಡೆ (ಕಲ್ಲಬ್ಬೆ) (28) ಶ್ರೀ ಸುಬ್ರಾಯ ಶಿವಭಟ್ಟ (ಕೋಣಾರೆ) (29) ಡಾ|| ಟಿ.ಟಿ. ಹೆಗಡೆ (ಕುಮಟಾ) (30) ಶ್ರೀ ಉಮಾಪತಿ ಭಟ್ಟ (ದೇವದ ಕೇರಿ) (31) ಶ್ರೀ ವಿನಯ ಹೆಗಡೆ (ಶಿರಸಿ) (32) ಶ್ರೀ ಸೀತಾರಾಮ ಹೆಗಡೆ (ಹೊಸ್ತೋಟ) (33) ಶ್ರೀ ಅನಂತ ವಿ. ಹೆಗಡೆ (ಧೂಪದ ಹೊಂಡ) (34) ಶ್ರೀ ಗಜಾನನ ಹೆಗಡೆ (ದುಗ್ಗುಮನೆ) (35) ಶ್ರೀ ಎಂ.ಎನ್. ಭಟ್ಟ (ನಿಡಗೋಡು) (36) ಶ್ರೀ ವಿ.ಟಿ. ಹೆಗಡೆ (ಹೊಸಬಾಳೆ)

ಪಾರಾಯಣ ಕರ್ತರು

ಸರ್ವಶ್ರೀ ವೇ|| ಮೂ||

(1) ನಾಗರಾಜ ಭಟ್ಟ (ಸ್ವರ್ಣವಲ್ಲೀ ಮಠ) (2) ರಾಘವೇಂದ್ರ ಭಟ್ಟ (ಸಂಪೇಕಟ್ಟೆ) (3) ಅನಂತ ಭಟ್ಟ (ಸ್ವರ್ಣವಲ್ಲೀ) (4) ಅರವಿಂದ ಭಟ್ಟ (ಬೆಂಗಳೂರು) (5) ಸತ್ಯನಾರಾಯಣ ಭಟ್ಟ (ಬೆಂಗಳೂರು) (6) ರವೀಶ ಭಟ್ಟ (ಬೆಂಗಳೂರು) (7) ನಾರಾಯಣ ಭಟ್ಟ (ಬೆಂಗಳೂರು) (8) ಗಣಪತಿ ಭಟ್ಟ (ಬೆಂಗಳೂರು) (9) ಶಂಕರ ನಾರಾಯಣ ಘನಪಾಠಿಗಳು (ಸಂಪೇಕಟ್ಟೆ) (10) ಸುಬ್ರಹ್ಮಣ್ಯ ಅವಧಾನಿಗಳು (ಅರಕಲಗೂಡು) (11) ಎಸ್. ಕೃಷ್ಣಭಟ್ಟ (ಬೆಳ್ಳಾರೆ) (12) ತಿರುಮಲೇಶ್ವರ ಜೋಶಿ (ಬೆಂಗಳೂರು) (13) ಮನೋಜ ಕುಮಾರ (ಬೆಂಗಳೂರು) (14) ಕುಮಾರ ಪುರಾಣಿಕ (ಗೋಕರ್ಣ) (15) ಅನಂತರಾಮ ಅವಧಾನಿ (ಅರಕಲಗೂಡು) (16) ಗಿರೀಶ (ದ.ಕ.) (17) ಗಣಪತಿ ನಾರಾಯಣ ಸಭಾಹಿತ (ಗೋಕರ್ಣ) (18) ಸುರೇಶ ಭಟ್ಟ (ಹಾಸಣಗಿ) (19) ಕೇಶವಭಟ್ಟ ಖರೆ (ಗೋಕರ್ಣ) (20) ನಾಗರಾಜ ಭಟ್ಟೂ (ಗೋಕರ್ಣ) (21) ಶ್ರೀಧರ ಭಟ್ಟ

(ಯಲ್ಲಾಪುರ) (22) ಕೃಷ್ಣಜೋಶಿ (ಶಿರಬ) (23) ಶಿವಪ್ರಸಾದ (ಬೆಂಗಳೂರು) (24) ನಾರಾಯಣ ಭಟ್ಟ ಬೆಣ್ಣೆ (ಬೆಂಗಳೂರು) (25) ಬಾಲಚಂದ್ರ ಸಾಂಬ ಗಾಯತ್ರೀ (ಗೋಕರ್ಣ) (26) ಪ್ರಭಾಕರ ಭಟ್ಟ ಶ್ರೌತಿ (ಗೋಕರ್ಣ) (27) ಗೋಪಾಲಕೃಷ್ಣ ಎಂ.ವಿ. (ಬೆಂಗಳೂರು) (28) ಲಕ್ಷ್ಮೀನಾರಾಯಣ ಭಟ್ಟ (ಸಂಪೇಕಟ್ಟೆ) (29) ಉದಯ ವೈದ್ಯ (ಗೋಕರ್ಣ) (30) ಎಂ. ಸತ್ಯನಾರಾಯಣ (ಬೆಂಗಳೂರು) (31) ಪುಟ್ಟಯ್ಯ ಶಾಸ್ತ್ರಿ (ವರದ ಹಳ್ಳಿ) (32) ವೆಂಕಟಾಚಲ ಅವಧಾನಿ (ಹೊಸಹಳ್ಳಿ-ಮತ್ತೂರು) (33) ಲಕ್ಷ್ಮೀಕೇಶವ ಅವಧಾನಿ (ಮತ್ತೂರು) (34) ಎಸ್.ಆರ್. ಚನ್ನಕೇಶವ ಅವಧಾನಿ (ಮತ್ತೂರು) (35) ಆರ್. ರಾಘವೇಂದ್ರ ಭಟ್ಟ (ಮತ್ತೂರು) (36) ಶ್ರೀನಿವಾಸ ಭಟ್ಟ (ಮಿತ್ತೂರು) (37) ಸುಬ್ರಹ್ಮಣ್ಯ ಭಿಡೆ (ಹೊಸಪೇಟೆ) (38) ಕೆ. ರವಿಶಂಕರ ಭಟ್ಟ (ಪೆರ್ಲ) (39) ಗೌತಮ (ಬೆಂಗಳೂರು) (40) ಎಂ. ಮಹಾಬಲೇಶ್ವರ ಭಟ್ಟ (ಕಾಂಚೀ) (41) ಶಂಕರ ಭಟ್ಟ (ನೆಲೆಮಾವು) (42) ಎಂ. ನರಸಿಂಹ ಭಟ್ಟ (ಉರಿಮಜಲು, ದ.ಕ.) (43) ಗೋಪಾಲಕೃಷ್ಣಭಟ್ಟ (ಬಂಟ್ವಾಳ) (44) ಕೇಶವ ಜೋಯಿಸ್ (ದ.ಕ.) (45) ಪಳ್ಳತ್ತಡ್ಕ ವಿಶ್ವೇಶ್ವರ ಭಟ್ಟ (46) ಫಾಲಚಂದ್ರ (47) ವಿಘ್ನೇಶ್ವರ (48) ಮಹಾಬಲೇಶ್ವರ (49) ವೆಂಕಟರಮಣ ಎನ್. ಭಟ್ಟ (50) ರಾಘವೇಂದ್ರ (ಎಲ್ಲರೂ-ಹರಿಹರಪುರ) (51) ನಾಗರಾಜ ಭಟ್ಟ (ಬೆಂಗಳೂರು) (52) ರಾಮಬಾಬು (ಬೆಂಗಳೂರು) (53) ಕೃಷ್ಣಭಟ್ಟ (ಬಲ್ನಾಯ ಬೆಟ್ಟು, ದ.ಕ.) (54) ಶ್ರೀನಿವಾಸ ಭಟ್ಟ (ಸಂಪೇಕಟ್ಟೆ) (55) ನಾರಾಯಣ ಭಟ್ಟ (ಹೊನ್ನಾವರ).

ವೇದೋಪನ್ಯಾಸಕರು

ಸರ್ವಶ್ರೀ ವೇ|| ಬ್ರ|| ಶ್ರೀ

(1) ವಿ|| ಬಾಲಚಂದ್ರ ಶಾಸ್ತ್ರೀ (ಸ್ವರ್ಣವಲ್ಲೀ) (2) ವಿ|| ಅನಂತಶರ್ಮಾ (ಭುವನಗಿರಿ) (3) ಶಂಕರಭಟ್ಟ (ಉಂಚಳ್ಳಿ) (4) ವಿ|| ಮಂಜುನಾಥ ಭಟ್ಟ (ಅಗ್ಗೆರೆ) (5) ಡಾ|| ಶ್ರೀರಾಮಭಟ್ಟ (ಬೆಂಗಳೂರು) (6) ಟಿ.ಎನ್. ಪ್ರಭಾಕರ (ತುರುವೆಕೆರೆ) (7) ವಿಘ್ನೇಶ್ವರ ಶರ್ಮಾ (ತದ್ದಲಸೆ) (8) ಮಾರ್ಕಂಡೇಯ ಅವಧಾನಿಗಳು (ಮತ್ತೂರು) (9) ವಿ.ಎನ್. ಭಟ್ (ಶಿವಮೊಗ್ಗ) (10) ಅನಂತಕೃಷ್ಣ ಭಟ್ಟ, ಅಮ್ಮೆ (ಬೆಂಗಳೂರು) (17) ಕೃಷ್ಣಜೋಶಿ (ಸ್ವರ್ಣವಲ್ಲೀ) (12) ವಿ|| ಸೋ.ಪಿ. ನಾಗರಾಜ (ಬೆಂಗಳೂರು) (13) ವಿ|| ಶಂಕರ ಭಟ್ಟ ಬಾಲಿಗದ್ದೆ (14) ವಿ|| ಶೇಷಗಿರಿ ಭಟ್ಟ, ಗುಂಜಗೋಡು.

ಸ್ಥಾನೀಯ ಸಂಘಟಕರು

ಸರ್ವಶ್ರೀ (1) ವಿಶ್ವನಾಥ ಭಟ್ಟ (ಯಲ್ಲಾಪುರ) (2) ಪ್ರಮೋದ ಹೆಗಡೆ (ಯಲ್ಲಾಪುರ) (3) ಡಿ.ಡಿ. ಭಟ್ಟ (ಬನವಾಸಿ) (4) ವಿ.ಜಿ. ಹೆಗಡೆ (ಶಿರಸಿ) (5) ಜಿ.ಎಸ್. ಭಟ್ಟ (ಗುಂಜಗೋಡು) (6) ವಿ|| ಶಂಭುಭಟ್ಟ (ಕಡತೋಕಾ) (7) ಡಾ|| ಜಿ.ಜಿ. ಸಭಾಹಿತ (ಹಳದೀಪುರ) (8) ಡಾ|| ಟಿ.ಟಿ. ಹೆಗಡೆ (ಕುಮಟಾ)

ಕಾರ್ಯಾಲಯ ಸಹಾಯಕರು

ಸರ್ವಶ್ರೀ (1) ಸತ್ಯನಾರಾಯಣ (ಬೆಂಗಳೂರು) (2) ಲಕ್ಷ್ಮೀನಾರಾಯಣ (ಸ್ವರ್ಣವಲ್ಲೀ ಶ್ರೀಮಠ) (3) ರವಿ ಮಶೀಗದ್ದೆ (ಸ್ವರ್ಣವಲ್ಲೀ ಶ್ರೀಮಠ)

ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ಸ್ವರ್ಣವಲ್ಲೀ ಶ್ರೀಮಠದಲ್ಲಿ ನಡೆದ ವೇದಪುರುಷನ ಅರ್ಚನೆಗೆ ಸಹಕಾರ ನೀಡಿದವರು ಎಷ್ಟೊಂದು ಮಂದಿ! ತೇನ ವಿನಾ ತೃಣಮಪಿ ನಚಲತಿ! ಭಗವತ್ಸಂಕಲ್ಪದಿಂದ ಹಾಗೂ ಶ್ರೀ ಶ್ರೀಗಳವರ ಅನುಗ್ರಹದಿಂದ ನಡೆದ ವೇದಪುರುಷನ ಸಮಾರಾಧನೆ ನ ಭೂತಃ!

ಓಂ ಶ್ರೀ ಗುರುಭ್ಯೋ ನಮಃ

ಕೋಟಿ ಕುಂಕುಮಾರ್ಚನೆ - ರಾಷ್ಟ್ರ ರಕ್ಷಣೆಗೆ ಶ್ರೀಗಳವರ ಕಾಣಿಕೆ

-ಡಾ|| ಪಿ. ಶಂಕರರಾವ್

ನಮೋಽಸ್ತು ವರದೇ ಕೃಷ್ಣೇ ಕುಮಾರಿ ಬ್ರಹ್ಮಚಾರಿಣಿ ।
ಬಾಲಾರ್ಕ ಸದೃಶಾಕಾರೇ ಪೂರ್ಣಚಂದ್ರ ನಿಭಾನನೇ ॥
ಜಯಾ ತ್ವಂ ವಿಜಯಾ ಚೈವ ಸಂಗ್ರಾಮೇ ಚ ಜಯಪ್ರದಾ ।
ಮಮಾಪಿ ವಿಜಯಂ ದೇಹಿ ವರದಾ ತ್ವಂ ಚ ಸಾಂಪ್ರತಮ್ ॥
ಪ್ರಣಮಂತಿ ಚ ಯೇ ತ್ವಾಂ ಹಿ ಪ್ರಭಾತೇ ತು ನರಾ ಭುವಿ ।
ನ ತೇಷಾಂ ದುರ್ಲಭಂ ಕಿಂ ಚಿತ್ಪುತ್ರತೋಧನತೋಽಪಿವಾ ॥
ತ್ರಾಹಿ ಮಾಂ ಪದ್ಮ ಪತ್ರಾಕ್ಷಿ ಸತ್ಯೇ ಸತ್ಯಾ ಭವಸ್ವನಃ ।
ಶರಣಂ ಭವ ಮೇ ದುರ್ಗೇ ಶರಣ್ಯೇ ಭಕ್ತವತ್ಸಲೇ ॥

ಶ್ರೀ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಸ್ವರ್ಣವಲ್ಲಿ ಮಹಾ ಸಂಸ್ಥಾನವು ಶಿರಸಿ-ಯಲ್ಲಾಪುರ ದಿಕ್ಕಿನಲ್ಲಿ ಶಿರಸಿಯಿಂದ ಸುಮಾರು 30 ಕಿ.ಮೀ. ದೂರದಲ್ಲಿ ಶಾಲ್ಮಲಾ ನದಿಯ ದಂಡೆಯ ಮೇಲೆ ಸ್ಥಾಪನೆಗೊಂಡ ಶಂಕರ ಪರಂಪರೆಯ ಪೀಠವಾಗಿರುತ್ತದೆ. ಇಲ್ಲಿಯ ಆರಾಧ್ಯ ದೇವತೆಗಳು ಶ್ರೀರಾಜರಾಜೇಶ್ವರಿ ಹಾಗೂ ಶ್ರೀ ಲಕ್ಷ್ಮೀನರಸಿಂಹ. ಈ ಪೀಠವನ್ನಲಂಕರಿಸಿರುವವರು ಶ್ರೀ ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು.

ಶ್ರೀಗಳವರು, ಆಕಸ್ಮಿಕವೆಂಬಂತೆ, ಸುಮಾರು 27-28ರ ಎಳೆಯ ಪ್ರಾಯದಲ್ಲಿ ಪೀಠಾರೋಹಣಗೊಂಡು ಒಂದು ದಶಕದ ಅವಧಿಯಲ್ಲಿ ಹಲವಾರು ಧಾರ್ಮಿಕ ಹಾಗೂ ಸಾಮಾಜಿಕ ಯೋಜನೆಗಳನ್ನು ಕೈಕೊಂಡು, ಅನುಕರಣೀಯ ರೀತಿಯಲ್ಲಿ

ಕಾರ್ಯಗತಗೊಳಿಸಿ ಶ್ರೀ ಮಠದ ಸಂಪರ್ಕ ಪಡೆದವರೆಲ್ಲರನ್ನೂ ಮಂತ್ರ ಮುಗ್ಧರನ್ನಾಗಿಸುತ್ತಿದ್ದಾರೆ. ''ಕೋಟಿ ಕುಂಕುಮಾರ್ಚನೆ''ಯು ಶ್ರೀಗಳವರಿಂದ ರೂಪಿತಗೊಂಡ ಹಲವಾರು ಧಾರ್ಮಿಕ ಯೋಜನೆಗಳಲ್ಲಿ ಅತಿ ಮುಖ್ಯವಾದದ್ದು. ಕಾರಣವೆಂದರೆ, ಈ ಧಾರ್ಮಿಕ ಯೋಜನೆಯು ದೇಶದ ಗಡಿ ರಕ್ಷಣೆಯ ದೃಷ್ಟಿಯಿಂದ ಹಮ್ಮಿಕೊಂಡದ್ದು- ಕಾರ್ಗಿಲ್ ಯುದ್ಧ ನಡೆದ ಅವಧಿಯಲ್ಲಿ, ಗಡಿ ರಕ್ಷಣೆಗಾಗಿ ಹೋರಾಡುತ್ತಿದ್ದ ನಮ್ಮ ಯೋಧರ ನೈತಿಕ ಮತ್ತು ಮನೋಬಲಗಳು ಹೆಚ್ಚಿ ಯಶ ದೊರೆಯುವಂತಾಗಲಿ ಎಂಬ ಸಂಕಲ್ಪದಿಂದ.

1999 ಜೂನ್/ಜುಲೈ ಸಮಯ, ಶಿರಸಿಯಲ್ಲಿ 'ಜಡಿಮಳೆ' ಹಿಡಿದಾಗಿತ್ತು. ಋತುಮಾನದಲ್ಲಿ ಪಾಕಿಸ್ತಾನಿ ಸುಸಜ್ಜಿತ ಸೈನಿಕರು ಕಾಶ್ಮೀರಿ ಭಯೋತ್ಪಾದಕರೊಡನೆ ಕೂಡಿಕೊಂಡು ಸೀಮೋಲ್ಲಂಘನೆ ಮಾಡಿ ನಮ್ಮ ದೇಶದ ಕೆಲವು ಪ್ರದೇಶಗಳನ್ನು ಆಕ್ರಮಿಸುತ್ತಾ, 'ಜೇಹಾದ್' ಸಾರಿದ ಸಂದರ್ಭ. ಮೊದಮೊದಲು ನಮ್ಮ ರಕ್ಷಣಾ ತಯಾರಿ/ಕಾರ್ಯಯೋಜನೆ ಅಪೂರ್ಣವೋ/ಅಸಮರ್ಪಕವೋ ಎನ್ನುವ ರೀತಿಯಲ್ಲಿ ಸಮೂಹ ಮಾಧ್ಯಮಗಳಿಂದ ವರದಿಗಳು ಪ್ರಸಾರವಾಗುತ್ತಿದ್ದವು. ಬಹಳ ಕಳವಳಕಾರಿ ಕ್ಷಣಗಳನ್ನು ಪ್ರತಿಯೊಬ್ಬ ಭಾರತೀಯನೂ ಅನುಭವಿಸುತ್ತಿದ್ದ. ಸರ್ವರೂ, ಯಥಾ ಶಕ್ತಿ, ಹಣ/ವಸ್ತುರೂಪದಲ್ಲಿ ದೇಣಿಗೆ ನೀಡುತ್ತಿದ್ದರು. ಈ ದಿನಗಳಲ್ಲಿ ಶ್ರೀಗಳವರು ಸ್ವಲ್ಪಮಟ್ಟಿಗೆ ಲವಲವಿಕೆಯನ್ನು ಕಳೆದುಕೊಂಡು ಯೋಚನಾಮಗ್ನರಾದಂತೆ ಕಾಣುತ್ತಿತ್ತು. ಬಹುಶಃ ದೇಶಕ್ಕೆದುರಾದ ವಿಷಮ ಪರಿಸ್ಥಿತಿಯ ಬಗ್ಗೆ ಚಿಂತಿಸುತ್ತಿರಬಹುದು. (ಈ ಸಂದರ್ಭದಲ್ಲಿ ಯತಿಗಳ ಪಾತ್ರವೇನೆಂದು ಯೋಚಿಸುತ್ತಿರಬಹುದು.) ಆಗೊಂದು ದಿನ, ಶ್ರೀ ಲಲಿತಾಂಬೆಗೆ ''ಕೋಟಿ ಕುಂಕುಮಾರ್ಚನೆ'' ಹಾಗೂ ಶ್ರೀ ನೃಸಿಂಹ ದೇವರಿಗೆ'' ''ಕೋಟಿ ತುಳಸಿ ಅರ್ಚನೆ'' ಯೋಜನೆಗಳ ಕಲ್ಪನೆ ಮತ್ತು ರೂಪ ರೇಷೆಗಳನ್ನು ಕೆಲವು ಶಿಷ್ಯರೆದುರು ಪ್ರಸ್ತಾಪಿಸಿದ್ದೇ ತಡ, ಯಾಲ್ಲಾಪುರ, ಶಿರಸಿ ಮತ್ತು ಸಿದ್ದಾಪುರ ತಾಲೂಕುಗಳ ಹದಿನಾರು ಸೀಮೆಯ ಸಮಸ್ತ ಶಿಷ್ಯರೂ ಮತ್ತು ರಾಮಕ್ಷತ್ರಿಯ ಸಮಾಜದ ಶಿಷ್ಯರೂ ಏಕಕಾಲಕ್ಕೆ ಸ್ಪಂದಿಸಿ ಕಾರ್ಯೋನ್ಮುಖರಾದರು. ದಿ. 19-7-1999 (ಆಷಾಢ ಶುದ್ಧ ಸಪ್ತಮಿ) ರಿಂದ ದಿ.23-7-1999 (ಏಕಾದಶಿ)ರ ವರೆಗೆ, ಐದು ದಿನಗಳ ಕಾಲ ''ಕೋಟಿ ಕುಂಕುಮಾರ್ಚನೆ'' ನೆರವೇರಿಸುವುದೆಂದು ತೀರ್ಮಾನಿಸಲಾಯಿತು.

ಶ್ರೀ ಕಾಂಚಿ ಪರಮಾಚಾರ್ಯರ ಆಶೀರ್ವಚನಗಳ ಸಂಗ್ರಹ, ''ದೈವವಾಣಿ'' ಯಲ್ಲಿ ಹೇಳಿರುವಂತೆ, ಅಂಬಿಕೆಯು ದೇವತೆಗಳೆಲ್ಲರ ದೇವತೆ. ಈ ಅತಿ ಕ್ಲಿಷ್ಟ

ಸಂದರ್ಭದಲ್ಲಿ ಅತಿ ಶಕ್ತಿಯುತ ದೇವತೆಯ ಆರಾಧನೆಯೇ ಸೂಕ್ತವೆಂದು ಶ್ರೀಗಳು ಲಲಿತಾಂಬಿಕೆಗೆ ಕೋಟಿ ಕುಂಕುಮಾರ್ಚನೆ ಕಾರ್ಯಯೋಜನೆಯನ್ನು ಸಂಕಲ್ಪಿಸಿದರೇನೋ?

ಧಾರ್ಮಿಕ ಕಾರ್ಯಕ್ರಮದ ರೂಪರೇಷೆ :

ಓಂ ಹ್ರೀಂ ಶ್ರೀಮಾತ್ರೇ ನಮಃ, ಓಂ ಹ್ರೀಂ ಶ್ರೀ ಮಹಾರಾಜ್ಞ್ಯೈ ನಮಃ, ... ಇತ್ಯಾದಿ ಅಂಬಿಕೆಯ ಸಹಸ್ರನಾಮಗಳನ್ನು ಉಚ್ಚರಿಸುತ್ತಾ, ಪ್ರತಿ ನಾಮಕ್ಕೊಂದು ಬಾರಿಯಂತೆ, 'ದುರ್ಗಾಯಂತ್ರ'ಕ್ಕೆ ಕುಂಕುಮಾರ್ಚನೆಯಾಗಬೇಕು. ಈ ಸಹಸ್ರನಾಮ ಕುಂಕುಮಾರ್ಚನೆಯು 10,000 ಬಾರಿ ಪುನರಾವರ್ತನೆಗೊಂಡಾಗ ಕೋಟಿ ಕುಂಕುಮಾರ್ಚನೆ ಆಗುತ್ತದೆ. ಈ ಸಂಕಲ್ಪಿತ ಅರ್ಚನೆಯು ಐದು ದಿನಗಳಲ್ಲಿ ಪೂರ್ಣಗೊಳ್ಳಬೇಕಾಗಿದ್ದರಿಂದ, ಪ್ರತಿದಿನ 20,00,000 ನಾಮೋಚ್ಚಾರಪೂರ್ವಕ ಕುಂಕುಮ ಪೂಜೆಯಾಗಬೇಕು. ಈ ಧಾರ್ಮಿಕ ಯೋಜನೆಯನ್ನು ಕಾರ್ಯಗತ-ಗೊಳಿಸಲು, ಯಲ್ಲಾಪುರ, ಶಿರಸಿ, ಸಿದ್ದಾಪುರ ಮತ್ತು ಸಾಗರ ತಾಲೂಕುಗಳಿಂದ 'ಶ್ರೀ ಲಲಿತಾ ಸಹಸ್ರನಾಮ' ಮಾಲಿಕೆಯನ್ನು ವಿಧಿವತ್ತಾಗಿ ಉಪದೇಶ ಪಡೆದ 250 ಸುಮಂಗಲೆಯರನ್ನು ತೊಡಗಿಸಲಾಯಿತು. ಅಂದರೆ, ಪ್ರತಿ ಸುಮಂಗಲಿಯೂ, ಪ್ರತಿದಿನವೂ ಎಂಟು ಸಹಸ್ರ ನಾಮೋಚ್ಚಾರಣಪೂರ್ವಕ 'ದುರ್ಗಾಯಂತ್ರ' ಅರ್ಚನೆ ಮಾಡುವ ವ್ಯವಸ್ಥೆ ಕಾರ್ಯರೂಪಕ್ಕೆ ಬಂದಿತು. ಇದಕ್ಕೆ ಅವಶ್ಯವಿದ್ದ ಉತ್ತಮ ಗುಣಮಟ್ಟದ ಹನ್ನೊಂದು ಕ್ವಿಂಟಾಲು ಕುಂಕುಮವನ್ನು ಬೆಂಗಳೂರಿನಿಂದಲೂ, ಐವತ್ತುದುರ್ಗಾಯಂತ್ರಗಳನ್ನು ಉಡುಪಿಯಿಂದಲೂ ತರಿಸಿಕೊಳ್ಳಲಾಯಿತು. 250 ಜನ ಸುಮಂಗಲೆಯರನ್ನು ಐದರ 50 ಗುಂಪುಗಳಾಗಿ ವಿಂಗಡಿಸಿ, ಪ್ರತಿ ಗುಂಪಿ-ಗೊಂದರಂತೆ ದುರ್ಗಾಯಂತ್ರ ಪ್ರತಿಷ್ಠಾಪಿಸಿ, ಸಂಕ್ಷಿಪ್ತ ಪೂಜೆಯನ್ನು ವೈದಿಕರಿಂದ ನೆರವೇರಿಸಿದ ನಂತರ ಸುಮಂಗಲೆಯರಿಂದ ಕುಂಕುಮಾರ್ಚನೆ ಪ್ರಾರಂಭ-ವಾಗುತ್ತಿತ್ತು. ಈ ಅರ್ಚನೆಯು ಪ್ರತಿದಿನ ಬೆಳಿಗ್ಗೆ 9 ರಿಂದ 11ರ ವರೆಗೆ ಮತ್ತು 11-30 ರಿಂದ 1-30 ರವರೆಗೆ ನಡೆಯುತ್ತಿತ್ತು. ಈ ಅರ್ಚನೆ ಕೈಕೊಂಡ ಸುಮಂಗಲೆಯರ ಗುಂಪುಗಳು ದೇವಸ್ಥಾನದ ನಾಲ್ಕೂ ದಿಕ್ಕಿನ ಒಳ ಪ್ರಾಂಗಣವನ್ನು ತುಂಬಿದ್ದರಿಂದ, ಉತ್ತಮ ರೀತಿಯ ಧ್ವನಿವರ್ಧಕಗಳ ಜೋಡಣೆಯ ಮುಖಾಂತರ ''ಶ್ರೀ ಲಲಿತಾ ಸಹಸ್ರನಾಮಾವಳಿಗಳನ್ನು ಹೇಳಿಕೊಡಲಾಗುತ್ತಿತ್ತು. ಪ್ರತಿ ಸುಮಂಗಲೆಯೂ ಪ್ರತಿ ನಾಮವನ್ನುಚ್ಚರಿಸಿ ದುರ್ಗಾಯಂತ್ರಕ್ಕೆ ಕುಂಕುಮಾರ್ಚನೆ ಸಲ್ಲಿಸುವುದಿತ್ತು. ಶ್ರೀ ಲಲಿತಾ ಸಹಸ್ರನಾಮಾವಳಿಯ ಮೊದಲನೇ ಆವರ್ತನೆಯನ್ನು ಶ್ರೀಗಳು

ಹೇಳಿಕೊಡುತ್ತಿದ್ದರು. ಸುಮಂಗಲೆಯರು ಏಕಕಂಠದಿಂದ ನಾಮೋಚ್ಚಾರಣೆ ಮಾಡುತ್ತಾ ಕುಂಕುಮಾರ್ಚನೆ ಅರ್ಪಿಸುತ್ತಿದ್ದರು. ಮುಂದಿನ ಆವರ್ತನೆಗಳನ್ನು ಅಧ್ಯಾಪಕರುಗಳಾದ ಶ್ರೀ ನರಸಿಂಹ ಭಟ್, ತಾರೀಮಕ್ಕಿ ಮತ್ತು ಶ್ರೀ ನಾಗರಾಜ ಭಟ್, ಕೋಣೆಮನೆ, ಯವರು ಹೇಳಿಕೊಡುತ್ತಿದ್ದರು. ಕೊನೆಯಲ್ಲಿ, ಶ್ರೀಗಳವರು, ಶ್ರೀ ದುರ್ಗಾಸ್ತೋತ್ರದ ಆಯ್ದ ಶ್ಲೋಕಗಳನ್ನು (ಪಾಂಡವರು ಅಜ್ಞಾತವಾಸಕ್ಕಾಗಿ ವಿರಾಟನಗರಕ್ಕೆ ಹೋಗುವಾಗ ಧರ್ಮರಾಜನು ಶ್ರೀ ದುರ್ಗೆಯನ್ನು ಪ್ರಾರ್ಥಿಸಿದ ಶ್ಲೋಕಾವಳಿಗಳು. ಈ ಲೇಖನದ ಪ್ರಾರಂಭದಲ್ಲಿ ನಾಲ್ಕನ್ನು ಮಾತ್ರ ಉಲ್ಲೇಖಿಸಿದೆ.) ಹೇಳಿಕೊಡುತ್ತಿದ್ದರು. ಅನಂತರ, ಏಕಾದಶ ರುದ್ರಾಭಿಷೇಕ ಪೂಜೆ ನೆರವೇರುತ್ತಿತ್ತು.

ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ, ಭಕ್ತಿ, ಶ್ರದ್ಧೆ, ಮತ್ತು ಉತ್ಸಾಹಗಳ ಆಗರಗಳೆಂಬಂತೆ, ಐದು ದಿನಗಳ ಕಾಲ, ಪ್ರತಿದಿನವೂ, ವ್ರತ ನಿರತ ಸುಮಂಗಲೆಯರು, ಬೇರೆ-ಬೇರೆ, ಊರುಗಳಿಂದ, ತಪ್ಪದೇ 8-30ಕ್ಕೆ ಮಠಕ್ಕೆ ಬಂದು, ಸ್ನಾನ ಮಾಡಿ, ರೇಷ್ಮೆ ವಸ್ತ್ರಧರಿಸಿ, ಕುಂಕುಮಾರ್ಚನೆಯಲ್ಲಿ ತೊಡಗುವುದು, ಸ್ವತಃ ಶ್ರೀಗಳವರೇ ಸಹಸ್ರನಾಮಾವಳಿಯ ಮೊದಲ ಆವರ್ತನೆಯನ್ನು ಹೇಳಿ-ಕೊಡುವುದು, ವೈದಿಕರು ಮತ್ತು ವಿದ್ಯಾರ್ಥಿಗಳು ವಿವಿಧ ಕಾರ್ಯಗಳಲ್ಲಿ ಕರ್ತವ್ಯ ನಿಷ್ಠೆಯಿಂದ ತೊಡಗಿಕೊಳ್ಳುವುದು, ಸಹಾಯಕ ಕೆಲಸಗಳಿಗಾಗಿ ಶ್ರೀ ಮಠದ ಹಲವಾರು ಶಿಷ್ಯರು ತಮ್ಮನ್ನು ತಾವೇ ತೊಡಗಿಸಿಕೊಳ್ಳುವುದು, ಶ್ರೀಗಳು 'ದುರ್ಗಾ ಸ್ತೋತ್ರ'ದ ಆಯ್ದ ಶ್ಲೋಕಗಳನ್ನು ಹೇಳಿಕೊಡುವುದು, ಏಕಾದಶ ರುದ್ರಾಭಿಷೇಕ ಪೂಜೆ - ಅದರಲ್ಲಿಯೂ ವಿಶೇಷವಾಗಿ ವಿದ್ಯಾರ್ಥಿಗಳಿಂದ ಏಕಕಂಠದ ಉಪನಿಷತ್ ಪಾರಾಯಣ, ಇತ್ಯಾದಿ ಧಾರ್ಮಿಕ ಚಟುವಟಿಕೆಗಳು ಶ್ರೀಮಠದ ಪವಿತ್ರ ವಾತಾವರಣವನ್ನು ಅಲೌಕಿಕತೆಯ ಉತ್ತುಂಗಕ್ಕೆ ಏರಿಸಿದ್ದವು. ಈ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಸ್ವಲ್ಪ ಸಮಯವಾದರೂ ವೀಕ್ಷಕರಾಗಿ/ಶ್ರೋತೃಗಳಾಗಿ ಪಾಲ್ಗೊಳ್ಳುವ ಅವಕಾಶ ಲಭ್ಯವಾದವರು ಧನ್ಯರೆಂಬುದೇ ನನ್ನ ಅನಿಸಿಕೆ.

ಐದು ದಿನಗಳ ''ಕೋಟಿ ಕುಂಕುಮಾರ್ಚನೆ'' ಮತ್ತೈದು ದಿನಗಳ ''ಕೋಟಿ ತುಳಸಿ ಅರ್ಚನೆ''ಯ ನಂತರ ಪೂಜಾ ಪ್ರಸಾದವನ್ನು ಕಾರ್ಗಿಲ್ ಯೋಧರಿಗೆ ತಲುಪಿಸುವ ವ್ಯವಸ್ಥೆ ಶ್ರೀ ಸಿ.ಎಂ. ಭಟ್ ಇವರ ಮುಖಾಂತರವಾಗಿದೆ.

ಈ ಎಲ್ಲ ಚಟುವಟಿಕೆಗಳ ಸಂಯೋಜನೆಯಲ್ಲಿ ಹಿರಿಯ ಪಾತ್ರವಹಿಸಿದ, ಪಾದರಸದಂತೆ ಚುರುಕಾಗಿ ಚಲಿಸುತ್ತಿದ್ದ, ಶ್ರೀ ಶಂಕರ ಭಟ್, ಬಾಲಿಗದ್ದೆ, ಇವರು ''ಕೋಟಿ ಕುಂಕುಮಾರ್ಚನೆ''ಯ ನೆನಪಿನೊಂದಿಗೆ ಬೆಸೆದುಕೊಂಡಿರುತ್ತಾರೆ.

ರಣಾಂಗಣದಲ್ಲಿ ನಮ್ಮ ಯೋಧರ ನಿರಂತರ ಹೋರಾಟ, ಪ್ರತಿಯೊಬ್ಬ ಭಾರತೀಯನಿಂದಲೂ ಸ್ವಯಂ ಪ್ರೇರಣೆಯಿಂದ ಬಂದ ಸರ್ವ ರೀತಿ (ಹಣ/ ವಸ್ತು/ನೈತಿಕ/....) ಬೆಂಬಲದ ಜೊತೆಗೆ, ಶ್ರೀಗಳವರ ದಿವ್ಯ ಕನಸಾಗಿ ರೂಪಗೊಂಡು ಕಾರ್ಯರೂಪತಳೆದ "ಕೋಟಿ ಕುಂಕುಮಾರ್ಚನೆ" ಮತ್ತು "ಕೋಟಿ ತುಳಸಿ ಅರ್ಚನೆ"ಗಳ ಫಲವಾದ ದೈವಾನುಗ್ರಹವೂ ಸೇರಿದೆಯೋ ಎಂಬಂತೆ, ದಿನಗಳುರುಳಿದಂತೆ ನಮ್ಮ ಯೋಧರು ವೈರಿಗಳನ್ನು ಹಿಮ್ಮೆಟ್ಟಿಸಿ ಜಯಗಳಿಸಿ ಕೊಟ್ಟರು.

ದೇವತಾರ್ಚನೆ, ಯಜ್ಞ-ಯಾಗಾದಿಗಳು, ಹೋಮ-ಹವನಗಳು, ವೇದ-ಉಪನಿಷತ್ ಪಾರಾಯಣ, ಇತ್ಯಾದಿ ಧಾರ್ಮಿಕ ಕಾರ್ಯಗಳ ಫಲವನ್ನು ವೈಜ್ಞಾನಿಕ ತಳಹದಿಯ ಮೇಲೆ ಸಿದ್ಧ ಮಾಡಲು ಸಾಧ್ಯವಿಲ್ಲವಾದರೂ, ನಾವು ನಂಬುವ ಕೆಲವು ವೈಜ್ಞಾನಿಕ ವಿಷಯಗಳೊಂದಿಗೆ ಹೋಲಿಸಿ ಗ್ರಹಿಸಬಹುದು.

ಉದಾ: (1) ಕಣ್ಣಿಗೆ ಕಾಣದ **ಎಲೆಕ್ಟ್ರೋ ಮಗ್ನೆಟಿಕ್** (Electro Magnetic) ತರಂಗಗಳಿಂದ ರೇಡಿಯೋ/ ಟಿ.ವಿ. ಪ್ರಸಾರ ಸಾಧ್ಯವೆಂದು ನಂಬುತ್ತೇವೆ.

2) ಅಗೋಚರ ಗಾಮಾ (Gama)ಕಿರಣಗಳಿಂದ 'ಕ್ಯಾನ್ಸರ್' ಕೋಶಗಳನ್ನು ಸುಡಬಹುದೆಂದು ಒಪ್ಪುತ್ತೇವೆ.

3) ದೂರದ ಊರಿನಲ್ಲಿ ಆಪ್ತರೊಬ್ಬರು ಕಾಯಿಲೆಗೆ ತುತ್ತಾದಾಗ **ದೂರದ ಚಿಕಿತ್ಸೆ** (Distance Healing) ವಿಧಾನಗಳಿಂದ ರೋಗಿಯನ್ನು ಗುಣಪಡಿಸಬಹುದೆಂಬ ಸಿದ್ಧಾಂತವನ್ನು ವಿಜ್ಞಾನಿಗಳು ಒಪ್ಪುವ ಹಂತ ತಲುಪಿದೆಯೆಂಬ ವರದಿಗಳಿವೆ.

4) **ಪ್ರಾಣ ಚೈತನ್ಯ ಚಿಕಿತ್ಸಕರು** (Pranic Healers) ತಮ್ಮ ಆತ್ಮ/ಮನೋ ಶಕ್ತಿಯನ್ನು ಯಾವುದೇ ಸಾಧನವಿಲ್ಲದೆ ರೋಗಿಗೆ ವರ್ಗಾಯಿಸಿ ಹಲವಾರು ರೋಗಗಳನ್ನು ನಿವಾರಿಸುವುದು ಪ್ರಚಾರ ಪಡೆಯುತ್ತಿದೆ.

ಈ ಹಿನ್ನೆಲೆಯಲ್ಲಿ, ಶ್ರೀಗಳವರ ಅನುಷ್ಠಾನ ಶಕ್ತಿ, ಇಚ್ಛಿತ ಸಂಕಲ್ಪಗಳು ಮತ್ತು ಸುಮಂಗಲೆಯರ / ವೈದಿಕರ ಭಕ್ತಿ, ಶ್ರದ್ಧೆ ಮತ್ತು ಏಕಾಗ್ರತಾಪೂರ್ವಕ ಅರ್ಚನೆ-ಗಳ ಫಲವು 'ಯಾವುದೋ ಒಂದು ರೀತಿಯ' (some sort of) ಅಗೋಚರ ತರಂಗದ / ಶಕ್ತಿಯ ರೂಪದಲ್ಲಿ ಪ್ರಸಾರಗೊಂಡು ನಮ್ಮ ಯೋಧರ ಹೃದಯ ಮತ್ತು ಮನಸ್ಸುಗಳ ಮೇಲೆ ವರ್ತಿಸಿ, ಭೌತಿಕ, ನೈತಿಕ ಮತ್ತು ಮನೋಬಲಗಳನ್ನು ಹೆಚ್ಚಿಸಿವೆಯೆಂದು ತಿಳಿದರೆ, ಈ ತಿಳುವಳಿಕೆಯು ಸತ್ಯದಿಂದ ದೂರವಿರಲಾರದು. ಈ ತರ್ಕವು, ಭವಿಷ್ಯದಲ್ಲಿ, ಮನ್ನಣೆಯನ್ನೂ ಪಡೆಯಬಹುದು.

ಆಕಸ್ಮಿಕವಾಗಿ ರಾಷ್ಟ್ರಕ್ಕೆದುರಾದ ಅಪಾಯಕ್ಕೆ, ಅತಿ ಕಡಿಮೆ ಸಮಯದಲ್ಲಿ ರೂಪ ತಳೆದ, ಸಮಸ್ತ ಹದಿನಾರು ಸೀಮೆಯ ಶಿಷ್ಯರ ಏಕಕಾಲದ ನಿಷ್ಠಾಪೂರ್ವಕ ಪ್ರಯತ್ನದಿಂದ ಕಾರ್ಯರೂಪಕ್ಕಿಳಿದ ಈ ಧಾರ್ಮಿಕ ಚಟುವಟಿಕೆಗಳು ಯಶಸ್ಸು ಕಂಡದ್ದು ಶ್ರೀಗಳವರ ಅನುಷ್ಠಾನ ಬಲದಿಂದ ಮಾತ್ರವೇ ಎಂಬುದು ಸ್ಪಷ್ಟ.

ದೇಶದ ಹಿತದೃಷ್ಟಿಯಿಂದ ಪ್ರಾರಂಭವಾದ ಈ ಕೋಟಿ ಕುಂಕುಮಾರ್ಚನೆಯ ಕಾರ್ಯಕ್ರಮವು ಅಲ್ಲಿಗೇ ನಿಂತಿಲ್ಲ. ಪ್ರತಿವರ್ಷವೂ, ಸಾಂಕೇತಿಕವಾಗಿ, ''ದೇಶಕ್ಕಾಗಿ ಕುಂಕುಮಾರ್ಚನೆ''ಯನ್ನು ಹಮ್ಮಿಕೊಳ್ಳುತ್ತಿದ್ದು, ಇದು ವಾರ್ಷಿಕ-ಕಾರ್ಯಕ್ರಮ-ವಾಗಿ ಮುಂದುವರೆಯುತ್ತಿದೆ. ಇದೂ ಅಲ್ಲದೇ, ದುರ್ಗಾಯಂತ್ರಗಳ ನಿತ್ಯಪೂಜೆಯು ನಿರಂತರವಾಗಿ ನಡೆಯುತ್ತಲಿದೆ.

ಈ ''ಪೀಠಾರೋಹಣ ದಶಮಾನೋತ್ಸವ'' ಶುಭಸಂದರ್ಭದಲ್ಲಿ, ಶ್ರೀ ಲಲಿತಾಂಬಿಕೆ ಹಾಗೂ ಶ್ರೀ ಲಕ್ಷ್ಮೀ ನೃಸಿಂಹ ದೇವತೆಗಳು ಶ್ರೀಗಳವರ ಅನುಷ್ಠಾನಕ್ಕೆ ಇನ್ನೂ ಹೆಚ್ಚಿನ ಕಾಲಾವಕಾಶ ಕರುಣಿಸಿ, ಭವಿಷ್ಯದಲ್ಲಿನ ಲೋಕ ಕಲ್ಯಾಣದ ಪ್ರಯತ್ನಗಳಿಗೆ ಇಚ್ಛಿತ ಫಲ ನೀಡಿ ಅನುಗ್ರಹಿಸಲಿ ಎಂದು ಭಕ್ತಿ ಮತ್ತು ಶ್ರದ್ಧಾಪೂರ್ವಕ ಪ್ರಾರ್ಥನೆ ಸಲ್ಲಿಸುತ್ತೇನೆ.

ಕೋಟಿ ತುಳಸೀ ಅರ್ಚನೆ

-ಗಣೇಶ ಭಟ್ಟ ಕೊಪ್ಪ

ಇತಿಹಾಸಕಾರರು ಗುರುತಿಸುವ ವೇದಗಳ ಕಾಲದಿಂದಲೂ, ಮೂರ್ತಿ ಮತ್ತಾದ ವೈದಿಕ ಸಂಸ್ಕೃತಿಯೆನಿಸುವ ಭಾರತೀಯರು ಶಾಂತಿಪ್ರಿಯರು, ಅಹಿಂಸೆಯನ್ನೊಂದು ಧರ್ಮಲಕ್ಷಣವೆಂದರಿತವರು. ಆದರೆ, ಅಹಿಂಸಾಪರತೆಯು ಇವರ ದೌರ್ಬಲ್ಯ-ವೇನೂ ಅಲ್ಲ. ರಾಷ್ಟ್ರದ ಅಖಂಡತೆಯ ಭಂಗವನ್ನೆಂದೂ ಸಹಿಸಿಲ್ಲ. ''ಆತತಾಯಿನ ಮಾಯಾಂತಂ ಹನ್ಯಾದೇವಾऽವಿಚಾರಯನ್'' ಎಂಬ ತತ್ತ್ವವನ್ನರಿತು, ಪರಕೀಯರ ಆಕ್ರಮಣವನ್ನು ಯಶಸ್ವಿಯಾಗಿ ಎದುರಿಸಬಲ್ಲ ಶಕ್ತಿ ನಮ್ಮಲ್ಲಿದೆ. ಆದರೂ, ಬಹುಕಾಲದಿಂದ ತಮ್ಮ ತನು-ಮನ-ಧನವನ್ನು ಪರಪೀಡೆಗೆಂದೇ ಮೀಸಲಿರಿಸಿ, ಅತಿ ದುರ್ಗಮ ಪ್ರದೇಶದಲ್ಲಿ ಸುಸಜ್ಜಿತವಾಗಿ ಶತ್ರುಗಳು ಸಂಘಟಿತರಾದರೆ, ಒಮ್ಮೆಲೇ ಆ ಬೆದರಿಕೆಯನ್ನು ಹಿಮ್ಮೆಟ್ಟಿಸಲಾಗದು. ದುಷ್ಟಶಕ್ತಿಗಳು, ಕಾರ್ಗಿಲ್ ಹಿಮಕಣಿವೆಯನ್ನೇ ರಣಾಂಗಣವಾಗಿಸಿದಾಗ ನಮ್ಮ ಸೈನ್ಯ, ಸಿದ್ಧತೆಯಲ್ಲಿ ಸ್ವಲ್ಪಮಟ್ಟಿಗೆ ಅಪೂರ್ಣವೆಂದೇ ಹೇಳಬೇಕು. ಪರಿಣಾಮವಾಗಿ ದಿನಗಳುರುಳಿದಂತೆ ಯುದ್ಧದ ತೀವ್ರಸ್ವರೂಪ, ಅಪಾರ ಸಂಖ್ಯೆಯ ಸಾವುನೋವುಗಳು, ನಾಡಿನ ರಕ್ಷಣೆಗಾಗಿ ಕೆಚ್ಚೆದೆಯ ಯೋಧರ ಬಲಿದಾನ, 'ಯುದ್ಧದ ಪರಿಣಾಮವೇನಾದೀತೋ' ಎಂದು ಎಲ್ಲೆಡೆ ಆತಂಕದ ಛಾಯೆ. ವಿಶ್ವಾಸದ ಭೂಮಿಯಲ್ಲಿಯೇ ಸಂಶಯಾಂಕುರಗಳ ಉದಯ-ಈ ರೀತಿಯ ಸ್ಥಿತಿ ದೇಶದಲ್ಲಿ ತೋರಿದ ಸಂದರ್ಭವದು.

ವಿಪತ್ತಿನಲ್ಲಿಯೂ ಕುಂಠಿತವಾಗದ ಆತ್ಮಸ್ಥೈರ್ಯ, ಕಾರ್ಯಾಕಾರ್ಯ ವಿವೇಕ -ಇವು ಮಹಾತ್ಮರಿಗೆ ಪ್ರಕೃತಿ ಸಿದ್ಧವಾದವುಗಳು. ಚಂದಿರನ ಚಂದ್ರಿಕೆಯಿಂದ ಚಂದ್ರಕಾಂತಶಿಲೆಯು ಸಹಜವಾಗಿ ದ್ರವಿಸುವುದಿಲ್ಲವೇ! ಹಾಗೆ ಗಡಿನಾಡಿನ ಸ್ಥಿತಿಯಿಂದ ಅಂತಃಕರಣವು ಸಹಜವಾಗಿ ದುಃಖಿಸಿದರೂ, ಹೂವಿನಂತೆ ಕೋಮಲವಾದ ಮಹಾತ್ಮರ ಮನಸ್ಸು ವಜ್ರದಷ್ಟು ಕಠಿಣವೂ ಹೌದು. ಅದು ಅಧೈರ್ಯವನ್ನೆಂದೂ ತಾಳದು. ಜಯಾಪಜಯಗಳ ಮೂಲವನ್ನು ಬಲ್ಲದು.

ದೈವಾನುಗ್ರಹವಿಲ್ಲವಾದರೆ, ಮನುಷ್ಯ ಮಾತ್ರರ ಎಲ್ಲ ಪ್ರಯತ್ನಗಳೂ ನಿಷ್ಫಲ. ''ಅರಕ್ಷಿತಂ ತಿಷ್ಠತಿ ದೈವರಕ್ಷಿತಂ, ಸುರಕ್ಷಿತಂ ದೈವಹತಂ ವಿನಶ್ಯತಿ'' ಎಂಬ ಮಾತು ಶತಶಃ ಸತ್ಯ. ''ನಮ್ಮ ಸೈನಿಕ ಶಕ್ತಿಯು ಆದಿಭೌತಿಕ ಶಕ್ತಿಯ ಜೊತೆಗೆ, ಆಧ್ಯಾತ್ಮಿಕ-ಆಧಿದೈವಿಕ ಶಕ್ತಿಯಿಂದ ಪರಿಪುಷ್ಟವಾಗಬೇಕು. ರಾಷ್ಟ್ರಕ್ಕಾಗಿ ತಮ್ಮ ಪ್ರಾಣವನ್ನರ್ಪಿಸಿದ ಯೋಧರಿಗೆ, ಶಾಸ್ತ್ರಗಳಲ್ಲಿ ಹೇಳಿದ ಸೂರ್ಯಮಂಡಲ ಭೇದನ ಪೂರ್ವಕವಾದ ಸದ್ಗತಿಯು ದೊರೆಯಬೇಕು'' ಎಂಬ ಉದಾತ್ತ ಧ್ಯೇಯದಿಂದ ಪರಮಪೂಜ್ಯ ಶ್ರೀಗಳವರು ಪರಮಾತ್ಮನನ್ನು ಪ್ರಾರ್ಥಿಸಲು ಅಣಿಯಾದರು. ಸ್ವರ್ಣವಲ್ಲಿಯಲ್ಲಿ ''ಕೋಟಿ-ಕುಂಕುಮಾರ್ಚನೆ-ಕೋಟಿ ತುಳಸೀ ಅರ್ಚನೆ'' ಸಂಕಲ್ಪಿತವಾದದ್ದು ಈ ಹಿನ್ನಲೆಯಲ್ಲಿ.

ಕಾರ್ಯಕ್ರಮವೇನೋ ನಿರ್ಣೀತವಾಯಿತು. ಆದರೆ ಅದಕ್ಕೆ ತಕ್ಕಂತೆ ಎಲ್ಲ ವ್ಯವಸ್ಥೆಗಳೂ ರೂಪುಗೊಳ್ಳಬೇಡವೇ? ಅರ್ಚನೆಯಲ್ಲಿ ಐದು ದಿನಗಳ ಕಾಲ ತೊಡಗುವ ಋತ್ವಿಜರು ಬಹುಸಂಖ್ಯೆಯಲ್ಲಿ ಬೇಕು. ಎಲ್ಲರೂ ಒಟ್ಟಿಗೆ ಅರ್ಚನೆಯಲ್ಲಿ ತೊಡಗಲು ಪೂಜಾಸಾಮಗ್ರಿಗಳು ವ್ಯವಸ್ಥಿತವಾಗಬೇಕು. ಅಪಾರ ಪ್ರಮಾಣದಲ್ಲಿ ತುಳಸೀ ಪತ್ರಗಳು ಸಂಗ್ರಹೀತವಾಗಬೇಕು. ಒಂದೇ, ಎರಡೇ! ಮನೆಯಲ್ಲಿಯೇ ನಾವೊಂದು ಚಿಕ್ಕ ವ್ರತಾದಿ ಅನುಷ್ಠಾನಕ್ಕೆ ಎಷ್ಟು ಸಿದ್ಧತೆಗೆ ತೊಡಗಬೇಕಾಗುತ್ತದೆ-ಯೆಂಬುದು ನಮಗೆ ಅರಿವಿದೆ. ಹೀಗಿರುವಾಗ ಇಂತಹ ಬೃಹತ್ ಧಾರ್ಮಿಕ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಬೇಕೆಂಬುದು ಸಾಮಾನ್ಯ ಮಾತಲ್ಲ. ಆಗಬೇಕಾದ ಕೆಲಸ ಬಹಳ. ಸಮಯ ವಿರಳ. ಜೊತೆಗೆ ಎಲ್ಲೆಡೆ ಆಷಾಢದ ಜಡಿಮಳೆ-ಗಾಳಿಗಳ ಅರ್ಭಟ. ಆದರೆ ಶ್ರೀಗಳ ಸಂಕಲ್ಪವು ಅಷ್ಟು ಶಕ್ತಿಯುತ-ವಾದುದು. ಶ್ರೀರಾಮನಿಗೆ ಸೀತಾನ್ವೇಷಣೆಯ ಸಮಯದ ಸ್ಥಿತಿ ಎಂಥದ್ದು! ಅಗಾಧವಾದ ಜಲರಾಶಿಯನ್ನು ದಾಟಬೇಕು. ವರ-ಶರಗಳಿಂದ ಸಶಕ್ತನಾದ ರಾವಣಾಸುರನನ್ನು ಸಂಹರಿಸಬೇಕು. ಲಂಕಾನಗರಿಯೋ ಅಭೇದ್ಯವಾದುದು. ತನಗೆ ಸಹಾಯಕರೋ ಕಾಡುಕಪಿಗಳು. ಆದರೂ ರಾಮನು ತನ್ನ ಕಾರ್ಯವನ್ನು ಸಾಧಿಸಲಿಲ್ಲವೇ! ಅದಕ್ಕಾಗಿಯೇ ಪ್ರಾಜ್ಞರ ಮಾತು- ''ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ'' (ಕಾರ್ಯಸಿದ್ಧಿ ಅಂತಃಶಕ್ತಿಯಲ್ಲಡಗಿದೆ ಹೊರತು ಬಾಹ್ಯ ಸಾಧನಗಳಲಿಲ್ಲ).

ಶ್ರೀಗಳವರ ಕರೆಗೆ ತಕ್ಷಣ ಓಗೊಟ್ಟು, ಮಠದ ಸಮಸ್ತ ಶಿಷ್ಯರೂ ಕಾರ್ಯಪ್ರವೃತ್ತರಾದುದು ವಿಶೇಷವೇನಲ್ಲ. ಏಕೆಂದರೆ ಶ್ರೀಗಳ ಜ್ಞಾನಶಕ್ತಿ ಹಾಗೂ

ಇಚ್ಛಾಶಕ್ತಿಗಳು ಕ್ರಿಯಾಶಕ್ತಿಯಲ್ಲಿ ಪರ್ಯವಸಾನವಾಗುವಾಗ, ಸದಾ ಶ್ರೀಗಳು ನಿರ್ದೇಶಿಸಿದ ಕಾರ್ಯದಲ್ಲಿ ತೊಡಗುವುದು ಮಠದ ಶಿಷ್ಯರ ಸಾಮಾನ್ಯ ಪ್ರವೃತ್ತಿ. ಅರ್ಚನೆಗಳು ಪ್ರಾರಂಭವಾಗುವ ಮುನ್ನಾದಿನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುವದೆಂಬ ಸಂಗತಿ ಪಾಮರನಿಗೂ ಮನದಟ್ಟಾಗಿತ್ತು. ಶ್ರೀಮಠದ ಮೂರಂಕಣ ಛಾವಡಿಯಲ್ಲಿ ಸಂಗ್ರಹವಾದ ತುಳಸೀರಾಶಿಯನ್ನು ನೋಡಿದರೆ ವೃಂದಾವನವೇ ನಿರ್ಮಾಣಗೊಂಡಂತೆ ಭಾಸವಾಗುತ್ತಿತ್ತು. ಈ ತುಳಸೀ ಸಂಗ್ರಹ ಕಾರ್ಯದಲ್ಲಿ ಮಠದ ಎಲ್ಲ ಸೀಮೆಗಳಿಂದ ಅಬಾಲವೃದ್ಧರೂ, ಮಹಿಳೆಯರೂ ತುಂಬು ಸಹಕಾರವನ್ನು ನೀಡಿದ್ದರು. ಅವರಲ್ಲಿ 'ಇದೊಂದು ಪುಣ್ಯಕಾರ್ಯ, ನಮ್ಮ ಕೈಲಾದ ಸೇವೆಯನ್ನು ಮಾಡೋಣ' ಎಂಬ ಭಾವನೆಯು ಕ್ರಿಯಾರೂಪ ತಾಳಿದುದೇ ಅದಕ್ಕೆ ಕಾರಣ. ಆಯಾ ಗ್ರಾಮದ ದೇವಸ್ಥಾನಗಳು ಪ್ರಾಥಮಿಕ- ಮಾಧ್ಯಮಿಕ ಶಾಲೆಗಳು ತುಳಸೀ ಸಂಗ್ರಹದ ತಾತ್ಕಾಲಿಕ ಕೇಂದ್ರಗಳಾದವು.

ಈ ಸಂದರ್ಭದಲ್ಲಿ ನಾವು ತುಳಸ್ಯರ್ಚನೆಯ ಮಹತ್ತ್ವವನ್ನು ಸ್ವಲ್ಪ ತಿಳಿಯಬೇಕು. ಪರಮಾತ್ಮನ ಪೂಜೆಯ ಅತ್ಯಂತ ಪ್ರಿಯವಾದ ವಸ್ತುಗಳಲ್ಲಿ ತುಳಸೀ ಪತ್ರವೊಂದಾಗಿದೆ. ಶ್ರೀಹರಿಯ ಕೃಪಾದೃಷ್ಟಿಯ ಪಾತ್ರತೆಯನ್ನು ಪಡೆಯುವಲ್ಲಿ ತುಳಸಿಯ ಮಾಹಾತ್ಮ್ಯವು ಅಪಾರ. ಅನೇಕ ಶ್ರುತಿ-ಸ್ಮೃತಿಗಳಿದನ್ನು ಸಾರಿವೆ. ದೇವಿಭಾಗವತದಲ್ಲಿ ಹೀಗೆ ವರ್ಣಿತವಾಗಿದೆ-

''ಸುಧಾಘಟಸಹಸ್ರಾಣಾಂ ಯಾ ತುಷ್ಟಿಸ್ತು ಭವೇದ್ಧರೇಃ ।
ಸಾ ಚ ತುಷ್ಟಿರ್ಭವೇನ್ನೂನಂ ತುಳಸೀ ಪತ್ರದಾನತಃ ॥''

(ಶ್ರೀಹರಿಗೆ ಸಹಸ್ರಸಂಖ್ಯೆಯ ಅಮೃತ ಕಲಶಗಳಿಂದ ಯಾವ ಸಂತುಷ್ಟಿಯು ಲಭಿಸುವುದೋ, ಅದು ಕೇವಲ ಒಂದು ತುಳಸೀದಲವನ್ನು ನೀಡುವುದರಿಂದ ಉಂಟಾಗುವುದು).

ದಿನಾಂಕ 19.07.99 ಆಷಾಢ ಶುದ್ಧ ಸಪ್ತಮಿಯ ಶುಭದಿನದಂದು ಆರಂಭಗೊಂಡ ಕೋಟಿ ಕುಂಕುಮಾರ್ಚನೆಯು ದಿನಾಂಕ 23ರಂದು ಮುಕ್ತಾಯವಾಗುತ್ತಿದ್ದಂತೆಯೇ, ದಿನಾಂಕ 24ರಿಂದ ಕೋಟಿ ತುಳಸೀ ಅರ್ಚನೆಯು ಪ್ರಾರಂಭವಾಯಿತು. ಇದರಲ್ಲಿ ಸ್ವರ್ಣವಲ್ಲಿ, ಬೈರುಂಭೆ, ಉಮ್ಮಚಗಿ, ಸಾಲ್ಕಣಿ, ರೇವಣಕಟ್ಟ, ನೆಲೆಮಾವು ಮೊದಲಾದ ಪಾಠಶಾಲೆಗಳ ವಿದ್ಯಾರ್ಥಿಗಳು ಹಾಗೂ ಇತರ ಅನೇಕ ವೈದಿಕರು ಅರ್ಚಕರಾಗಿ ಪಾಲ್ಗೊಂಡರು. ಪೂರ್ಣ ಒಳಮಠದ ಭಾಗವನ್ನು ಅರ್ಚನೆಯ ಸ್ಥಳವಾಗಿರಿಸಲಾಗಿತ್ತು. ಪೂಜೆಗೆ ಸಂಬಂಧಿಸಿದ ವ್ಯಕ್ತಿಗಳು ಮತ್ತು

ವಸ್ತುಗಳನ್ನು ಬಿಟ್ಟರೆ, ಉಳಿದೇನನ್ನೂ ಆ ಭಾಗದಲ್ಲಿ ಕಾಣುವಂತಿರಲಿಲ್ಲ. 50ಕ್ಕೂ ಹೆಚ್ಚು ಶ್ರೀ ಸುದರ್ಶನ ಯಂತ್ರಗಳನ್ನು ಕ್ರಮವಾಗಿ ಬೇರೆ ಬೇರೆ ಸ್ಥಳಗಳಲ್ಲಿ ಪ್ರತಿಷ್ಠಾಪಿಸ-ಲಾಯಿತು. ಆರಂಭದಲ್ಲಿ ಒಂದೊಂದು ಮಂಡಲದಲ್ಲಿ ಐವರು ಅರ್ಚಕರು ನಿಗದಿತವಾಗಿದ್ದರೂ, ಮುಂದಿನ ದಿನಗಳಲ್ಲಿ ಆ ಸಂಖ್ಯೆ ಶ್ರದ್ಧಾಳು ವೈದಿಕರಿಂದ ಆರೇಳಕ್ಕೆ ಹೆಚ್ಚಿತ್ತು. ಪರಮಪೂಜ್ಯ ಶ್ರೀಗಳ ಸಾನ್ನಿಧ್ಯದಲ್ಲಿ ಮಠದ ಪುರೋಹಿತರು ವಿಧಿವತ್ತಾಗಿ ಕಾರ್ಯಕ್ರಮವನ್ನು ಆರಂಭಿಸಿದರು.

"ನಮಃ ಸಮಸ್ತ ಭೂತಾನಾಮಾದಿಭೂತಾಯ ಭೂಭೃತೇ ।
ಅನೇಕ ರೂಪರೂಪಾಯ ವಿಷ್ಣವೇ ಪ್ರಭವಿಷ್ಣವೇ ॥"

ಎಂದು ಮಹಾವಿಷ್ಣುವನ್ನು ನಮಿಸಿ "ಓಂ ವಿಶ್ವಸ್ಮೈ ನಮಃ" ಎಂದು ಸಹಸ್ರ ನಾಮಪಠನ ಪ್ರಾರಂಭ. ಧ್ವನಿವರ್ಧಕದ ಮೂಲಕ ಇಬ್ಬಿಬ್ಬರಂತೆ ಹಿರಿಯ ವೈದಿಕರು ದಿವ್ಯನಾಮಗಳನ್ನು ಪಠಿಸುತ್ತಿರುವಾಗ, ಎಲ್ಲ ಮಂಡಲಗಳಲ್ಲಿ ಕುಳಿತ ಅರ್ಚಕರಿಂದ ಪ್ರತಿನಾಮಗಳಿಗೂ ಏಕಕಾಲದಲ್ಲಿ ಮಹಾವಿಷ್ಣುವಿಗೆ ತುಳಸೀ ಪತ್ರಗಳು ಸಮರ್ಪಿತ-ವಾಗುತ್ತಿದ್ದವು. ಮಡಿಯುಟ್ಟು ನಿಂತ ಇತರ ಅನೇಕ ಭಕ್ತರು, ಆಯಾ ಸಮಯಕ್ಕೆ ವ್ಯವಸ್ಥಿತವಾಗಿ ಎಲ್ಲ ಮಂಡಲಗಳಿಗೆ ತುಳಸಿಗಳನ್ನು ವಿತರಿಸುತ್ತಿದ್ದರು. ಎಲ್ಲರಲ್ಲಿಯೂ ಏನೋ ಒಂದು ಬಗೆಯ ಭಕ್ತಿ-ಭಾವ-ಉತ್ಸಾಹ ಎದ್ದು ತೋರುತ್ತಿತ್ತು.

ಆ ಸಮಯದಲ್ಲಿ ಮಠದ ಪರಿಸರವನ್ನೆಲ್ಲ ಆವರಿಸಿದ್ದು ಅರ್ಚನೆಯ ದಿವ್ಯ ಪ್ರಭಾವ. ಸ್ವತಃ ಸುಂದರಿಯಾದ ವಧುವಿನ ರೂಪರಾಶಿಯು ಅಲಂಕಾರ-ಆಭರಣಾದಿಗಳಿಂದ ಇಮ್ಮಡಿಯಾದಂತೆ, ಮೊದಲೇ ಪರಿಶುದ್ಧವಾದ ಮಠದ ಪರಿಸರವು ಇನ್ನು ದಿವ್ಯತೆಯನ್ನು ಪಡೆದಿತ್ತು. ಮುನ್ನೂರಕ್ಕೂ ಅಧಿಕ ಅರ್ಚಕರು ಏಕಕಾಲದಲ್ಲಿ ಅರ್ಚನೆಯಲ್ಲಿ ತೊಡಗಿರುವಾಗ ಪರಿಪೂರ್ಣ ವಾತಾವರಣವು ಕೇವಲ ಶುದ್ಧಿಗೊಳ್ಳುತ್ತಿದ್ದುದು ಮಾತ್ರವಲ್ಲ. ಪವಿತ್ರತವಾಗುತ್ತಿತ್ತು. ಆ ಮೂಲಕ ಪರತತ್ವದ ಅಭಿವ್ಯಕ್ತಿಯನ್ನು ಸೂಚಿಸಿತ್ತು.

ಇದಕ್ಕೆ ಕಾರಣ ಅರ್ಚನೆಯು ಶಾಸ್ತ್ರೀಯವಾಗಿ ನಡೆದುದು ಮಾತ್ರವಲ್ಲ. ಅರ್ಚನೆಯಲ್ಲಿ ಪಾಲ್ಗೊಂಡವರ ಭಕ್ತಿ-ಶ್ರದ್ಧೆಗಳು, ಮಹಾಕವಿ ಕಾಳಿದಾಸನು, ತನ್ನ ರಘುವಂಶ ಮಹಾಕಾವ್ಯದಲ್ಲಿ, ದಿಲೀಪ ಮಹಾರಾಜನು ನಂದಿನಿ-ಧೇನುವನ್ನು ಹಿಂಬಾಲಿಸುತ್ತಿದ್ದ ರೀತಿಯನ್ನು ವರ್ಣಿಸುತ್ತಾ, "ಶ್ರದ್ಧೇವ ಸಾಕ್ಷಾದ್ವಿಧಿನೋ- ಪಪನ್ನಾ" ಎನ್ನುತ್ತಾನೆ. ಅಂದರೆ, ರಾಜನಿಂದ ಅನುಸೃತವಾದ ಆ ಧೇನುವು ವಿಧಿಯಿಂದ ಕೂಡಿದ ಶ್ರದ್ಧೆಯಂತೆ ಫಲದಾತ್ರಿಯಾಗಿ ಶೋಭಿಸುತ್ತಿದ್ದಳು. ಆ ರೀತಿಯಲ್ಲಿ ವಿಧಿಯುಕ್ತವಾಗಿ,

ಶ್ರದ್ಧಾಭರಿತ ಅರ್ಚನೆಯು ಧಾರ್ಮಿಕ ಅನುಷ್ಠಾನಗಳಿಗೆ ಮಾದರಿಯೆನಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಹೀಗೆ ಅರ್ಚನೆಯು ನಡೆಯುತ್ತಿದ್ದರೆ, ಅತ್ತ ವ್ಯಾಪಕವಾದ ಮಳೆಯನ್ನೂ ಲೆಕ್ಕಿಸದೆ, ಪ್ರತಿದಿನ ಸಾವಿರಾರು ಜನ ಭಕ್ತರು ಮಠಕ್ಕೆ ಆಗಮಿಸುತ್ತಿದ್ದರು. ಅವರ ಕೈಗಳಲ್ಲಿದ್ದ ಚೀಲಗಳಲ್ಲಿ ತುಂಬಿದ್ದ ಸಾಮಗ್ರಿಗಳಲ್ಲಿ ಎಲ್ಲದರಲ್ಲಿ ಸಾಮಾನ್ಯವಾಗಿ ಸಂಗ್ರಹಿಸಿ ತಂದದ್ದು ತುಳಸೀ ಪತ್ರಗಳು. ಶ್ರೀಮಠದ ಶಿಷ್ಯರೇ ಆದ ರಾಮಕ್ಷತ್ರಿಯರು, ತುಳಸೀ ಅರ್ಚನೆಯಲ್ಲಿ ಸೇವೆ ಸಲ್ಲಿಸಿ 10 ಲಕ್ಷದಷ್ಟು ತುಳಸಿಯನ್ನು ತಂದರು. ಶಿರಸಿಯ ಆಸ್ತಿಕ ಬಂಧುವೊಬ್ಬರು ಪ್ರತಿದಿನ ಬೆಂಗಳೂರಿನಿಂದ 3 ಬೇಲ ತುಳಸಿಯನ್ನು ತರಿಸುತ್ತಿದ್ದರು. ಇವೆಲ್ಲವುಗಳಿಂದ ಅರ್ಚನೆಯ ಮಧ್ಯದಲ್ಲಿ ಒಮ್ಮೆ ತೋರಿದ್ದ ತುಳಸಿಯ ಕೊರತೆಯಾಗಬಹುದೇ ಎಂಬ ಸಂಶಯವು ಕೊನೆಯಲ್ಲ. ಇಷ್ಟೊಂದು ತುಳಸಿಗಳ ಸಂಗ್ರಹ ಆದದ್ದು ಹೇಗೆ ಎಂಬ ವಿಸ್ಮಯದಲ್ಲಿ ನಿಂತಿತ್ತು.

ಪ್ರತಿನಿತ್ಯ ಸಾಮಾನ್ಯ ಏಳು ಆವರ್ತಿಯ ಸಹಸ್ರನಾಮಗಳಿಂದ ಅರ್ಚನೆ ನಡೆದಿತ್ತು ಇಲ್ಲಿ. ಶ್ರೀಗಳವರ ಅನುಕರಣೀಯವಾದ ಶ್ರದ್ಧೆ-ನಿಷ್ಠೆ-ಉತ್ಸಾಹಗಳನ್ನು ಕಂಡಾಗ ಎಂಥವನೂ ಬೆರಗಾಗಬೇಕು. ತಮ್ಮ ನಿರಂತರವಾದ ದೈನಂದಿನ ಪೂಜೆ-ಅನುಷ್ಠಾನ-ಗಳ ನಡುವೆಯೂ ಪ್ರತಿದಿನ ಅರ್ಚನೆಯಲ್ಲಿ ಪಾಲ್ಗೊಂಡು ಒಂದಾವರ್ತಿ ಸಹಸ್ರನಾಮವನ್ನು ಶ್ರೀಗಳೇ ಪಠಿಸುತ್ತಿದ್ದರು. ಜೊತೆಗೆ ನಿತ್ಯವೂ ಮಂಗಳಾರತಿಯ ನಂತರ ತಮ್ಮ ಶಾಂತ-ಗಂಭೀರ ಸ್ವರದಲ್ಲಿ- ''ಹರಿರ್ವಿದಧ್ಯಾನ್ಮಮ ಸರ್ವರಕ್ಷಾಂ ನ್ಯಸ್ತಾಂಘ್ರಿಪದ್ಮಃ ಪತಗೇಂದ್ರ ಪೃಷ್ಠೇ'' ಎಂದು ಶ್ರೀ ನಾರಾಯಣ ಕವಚ ಮಂತ್ರವನ್ನುಪದೇಶಿಸುತ್ತಿದ್ದರೆ ಎಲ್ಲ ಶಿಷ್ಯರೂ ತನ್ಮಯರಾಗಿ ಅದನ್ನು ಅನುಸರಿಸು-ತ್ತಿದ್ದರು. ''ಅಸ್ಮಾಕಂ ಯಾ ಇಷವಸ್ತಾ ಜಯಂತು. ಅಸ್ಮಾಕಂ ವೀರಾ ಉತ್ತರೇ ಭವಂತು. ಅಸ್ಮಾನುದೇವಾ ಅವತಾಹವೇಷು'' (ನಮ್ಮ ಆಯುಧಗಳು ವಿಜೃಂಭಿಸಲಿ, ನಮ್ಮ ವೀರರು ವಿಜಯಿಗಳಾಗಲಿ, ದೇವತೆಗಳು ಯುದ್ಧದಲ್ಲಿ ನಮ್ಮನ್ನು ರಕ್ಷಿಸಲಿ) ಎಂಬ, ಅರ್ಚನೆಗಳ ಉದ್ದೇಶವನ್ನು ಬಿಂಬಿಸುವ ವೇದಘೋಷವು ಮುಗಿಲುಮುಟ್ಟಿತು.

ಇದಲ್ಲದೆ ಅರ್ಚನೆಯ ಈ ದಿನಗಳಲ್ಲಿ ನಿತ್ಯವೂ ಅಷ್ಟಾಕ್ಷರಿ ಮಂತ್ರಜಪ, ಚಂಡೀ ಸಪ್ತಶತೀ ಪಾರಾಯಣ, ಏಕಾದಶವಾರ ರುದ್ರಾಭಿಷೇಕ ಮೊದಲಾದ ಅನುಷ್ಠಾನ-ಗಳೂ ನಡೆದವು. ಆಯಾದಿನದ ಪೂಜಾವಿಧಿಗಳೆಲ್ಲ ಮುಗಿದ ನಂತರ ಶ್ರೀಗಳು ತೀರ್ಥಪ್ರಸಾದವನ್ನು ನೀಡುತ್ತಿದ್ದರು. ನಂತರ ಮಹಾಸಂತರ್ಪಣೆ, ಮಧ್ಯಾಹ್ನದ ನಂತರ ದಿನಾಂಕ 25ರಿಂದ 27ರ ವರೆಗೆ ಶ್ರೀ ನಾರಾಯಣ ದಾಸ ಹೀಪನಳ್ಳಿ ಇವರಿಂದ ಹರಿಕತೆ ನಡೆಯಿತು.

ದಿ: 27.07.99ರ ದಿನ ಈ ಸರ್ವಪ್ರಹರಣಾಯುಧ ಸ್ವರೂಪಿ ಶ್ರೀ ಮಹಾವಿಷ್ಣುವಿನ ಅರ್ಚನೆಯ ಶುಭಾಂತ್ಯ. ಅದೇ ದಿನ ಶ್ರೀಗಳಿಂದ ಚಾತುರ್ಮಾಸ್ಯ ವ್ರತಸಂಕಲ್ಪ. ಅಂದು ದೇಶಕ್ಕಾಗಿ ಶ್ರೀಗಳು ಭಗವಂತನಲ್ಲಿ ಪ್ರಾರ್ಥನೆಗೈಯುವಾಗ ಸೇರಿದ ಭಕ್ತರ ಕಣ್ಣುಗಳಲ್ಲಿ ತಾನೇ ತಾನಾಗಿ ನೀರು ತುಂಬಿತ್ತು. ಭಜಕರಿಗೆ ಪ್ರಾರ್ಥನೆಯ ನಿಜವಾದ ಪರಿಯನ್ನು ಪರಿಚಯಿಸಿತ್ತು, ಶ್ರೀಗಳಂದು ಹೃದಯಬಿಚ್ಚಿ ಮಾಡಿದ ಪ್ರಾರ್ಥನೆ.

ಮಧ್ಯಾಹ್ನದ ನಂತರದಲ್ಲಿ ಈ ಎಲ್ಲ ಅರ್ಚನೆಗಳ ಮುಕ್ತಾಯದ ಸಮಾರಂಭ. ಅಂದು ಸಭೆಯನ್ನು ಮಂತ್ರಮುಗ್ಧಗೊಳಿಸಿದ್ದು ಶ್ರೀಗಳ ಅನುಗ್ರಹ ಭಾಷಣ. ''ದೇಶವೊಂದು ಸುರಕ್ಷಿತವಾಗಿ ಸುಭಿಕ್ಷವಾಗಿ ಇರಬೇಕಾದರೆ, ಕ್ಷಾತ್ರಬಲಕ್ಕೆ ಬ್ರಾಹ್ಮಶಕ್ತಿಯ ಹಿನ್ನಲೆ ಅವಶ್ಯ. ಬ್ರಾಹ್ಮಶಕ್ತಿಯಿಲ್ಲದೆ, ಕ್ಷಾತ್ರಬಲಮಾತ್ರ ಮುಂದೆ ಬಂದರೆ ಆ ದೇಶ ಪಾಕಿಸ್ತಾನದಂತಾಗುತ್ತದೆ. ಆ ದೇಶವಿಂದು ಮತಾಂಧ ಸೈನಿಕರಿಗೆ ಸಿಕ್ಕ ಆಡಳಿತದಿಂದಾಗಿ, ಧರ್ಮದ ಮರ್ಮವನ್ನು ತೃಣೀಕರಿಸಿದೆ. ಹಾಗಾಗಿಯೇ ಗಡಿಪ್ರದೇಶದಲ್ಲಿ ಅವರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆಕ್ರಮಣ ನಡೆಸಿದ್ದಾರೆ'' ಎಂಬ ಶ್ರೀಗಳ ಮಾತುಗಳು ವಾಸ್ತವಿಕತೆಗೆ ಹಿಡಿದ ಕನ್ನಡಿಯಂತಿದ್ದವು. ಮುಂದುವರಿದು ಅವರು, ''ಪಾಕಿಸ್ತಾನದ ಸೈನಿಕರು ಬಂಧನಕ್ಕೊಳಗಾದ ಭಾರತೀಯ ಸೈನಿಕರ ಶರೀರದ ಅವಯವಗಳನ್ನು ಕತ್ತರಿಸಿದ್ದಾರೆ. ಅದನ್ನು ನಮ್ಮವರು ಸಹಿಸಿಕೊಂಡ ಬಗೆ ಊಹೆಗೂ ನಿಲುಕದು. ಅವರ ತ್ಯಾಗ ಚಿರಸ್ಮರಣೀಯ. ಅವರಿಗೆ ಸದ್ಗತಿ ದೊರಕಲಿ'' ಎಂದು ಹೇಳುತ್ತಿರುವಾಗ ಶ್ರೀಗಳ ಹೃದಯ ವೈಶಾಲ್ಯವು ಪ್ರಕಟವಾಗಿತ್ತು. ಅರ್ಚನೆಯಲ್ಲಿ ಪಾಲ್ಗೊಂಡ ಋತ್ವಿಜರನ್ನುದ್ದೇಶಿಸಿ ಮಾತನಾಡುತ್ತ ''ವಯಂ ರಾಷ್ಟ್ರೇ ಜಾಗೃಯಾಮ ಪುರೋಹಿತಾಃ'' (ವೈದಿಕರಾದ ನಾವು ಜಾಗೃತರಾಗಬೇಕು) ಬ್ರಾಹ್ಮಣ್ಯದ ರಕ್ಷಣೆಯಿಂದಲೇ ಧರ್ಮರಕ್ಷಣೆ-ರಾಷ್ಟ್ರರಕ್ಷಣೆ ಸಾಧ್ಯ'' ಎನ್ನುತ್ತ, ಎಲ್ಲ ಮತಗಳ ಸಾರವನ್ನರಿತಿದ್ದ ಶ್ರೀಗಳು ಬೈಬಲ್ಲಿನ ಕಥೆಯೊಂದನ್ನು ಉದಾಹರಿಸಿ ವಿವರಿಸಿದರು. ನಂತರ ಪರಮಪೂಜ್ಯರು ಎಲ್ಲ ಶಿಷ್ಯರಿಗೂ ಮಂತ್ರಾಕ್ಷತೆಯನ್ನು ಅನುಗ್ರಹಿಸಿದರು.

ಈ ಅರ್ಚನೆಗಳ ಪ್ರಾರಂಭದಲ್ಲಿಯೇ, ಅತ್ತ ಗಡಿಯಲ್ಲಿ ನಮ್ಮ ಸೈನಿಕರ ಕೈಮೇಲಾದ ವಾರ್ತೆಗಳು ಬರುತ್ತಿದ್ದವು. ಅರ್ಚನೆಗಳ ಶುಭಾಂತ್ಯದ ವೇಳೆಗೆ ನಮ್ಮವರ ವಿಜಯ ಇನ್ನಷ್ಟು ಸ್ಥಿರವಾಗಿತ್ತು. ಇದು ಪರಮಾತ್ಮ ಪ್ರಸನ್ನನಾದನೆಂಬ ಭಾವನೆಯ ಪುಳಕವನ್ನು ಶಿಷ್ಯಕೋಟಿಯಲ್ಲಿ ಮೂಡಿಸಿತು. ನಂತರದಲ್ಲಿ ''ಗೆಲುವಿನ ಹೆಮ್ಮೆ ಶಾಶ್ವತವಾಗಲಿ''

ಎಂಬ ಶ್ರೀಗಳ ಪ್ರಾರ್ಥನಾ ಪೂರಿತ ಪ್ರಸಾದವನ್ನು ಎಲ್ಲ ಯೋಧರಿಗೆ ವಿತರಿಸಲು ಕೋರಿ, ಶ್ರೀಮಠದ ಶಿಷ್ಯವರ್ಗದವರೇ ಆದ, ಗಡಿರಕ್ಷಣಾದಳದ ಐ.ಜಿ. ಸ್ಥಾನದಲ್ಲಿರುವ ಶ್ರೀ ಸಿ.ಎಂ. ಭಟ್ಟ ಅವರ ಮೂಲಕ ಕಳುಹಿಸಲಾಯಿತು.

ಹೀಗೆ ಇದು ''ಕೋಟಿ ತುಳಸ್ಯರ್ಚನೆ''ಯ ಕಿರುನೋಟ. ಈ ಅರ್ಚನೆಯ ಕಾರ್ಯದ ಯಶಸ್ಸಿಗೆ, ಹವ್ಯಕರೂ, ರಾಮಕ್ಷತ್ರಿಯರೂ, ಶೀಲಿಗರೂ, ಶಿದ್ರಿಗಳೂ -ಹೀಗೆ ಎಲ್ಲ ಮಠೀಯ ಶಿಷ್ಯವರ್ಗಗಳು ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದ್ದಾರೆ. ವಿ|| ಶಂಕರಭಟ್ಟ, ಬಾಲಿಗದ್ದೆ ಅವರು ತಮ್ಮ ವ್ಯವಸ್ಥಿತವಾದ ಸಂಘಟನೆ ಹಾಗೂ ನಿರ್ವಹಣೆಯನ್ನು ಈ ಅರ್ಚನೆಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಈ ಕಾರ್ಯಕ್ರಮದ ಮೂಲಕ ಶ್ರೀಗಳವರು, 'ದೇಶಸೇವೆಯೇ ಈಶಸೇವೆ'ಯೆಂಬುದರ ಯಥಾರ್ಥತೆ-ಯನ್ನು ಈಶಸೇವೆ ಹೇಗೆ ದೇಶಸೇವೆಯಾಗಬಲ್ಲದೆಂಬುದರ ಮೂಲಕ ತೋರಿಸಿದ್ದಾರೆ. ''ಕೋಟಿಕುಂಕುಮಾರ್ಚನೆ, ಕೋಟಿ ತುಳಸ್ಯರ್ಚನೆ''ಯ ಕಾರ್ಯ ಪರಮಪೂಜ್ಯರ ಸಂಕಲ್ಪ ಶಕ್ತಿಗೆ ಮತ್ತೊಂದು ನಿದರ್ಶನವೆನಿಸಿತು. ಶ್ರೀಗಳ ಸರ್ವತೋಮುಖ ಯಶಸ್ಸಿನ ಪಥದಲ್ಲಿ ಮತ್ತೊಂದು ಹೆಜ್ಜೆಯಾಯಿತು.

ಶ್ರೀ ಶಂಕರಾಚಾರ್ಯರನ್ನು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ

-ಡಾ. ಜಿ.ಎಂ. ಹೆಗಡೆ

ಶೃತಿಸ್ಮೃತಿ ಪುರಾಣಾನಾಮಾಲಯಂ ಕರುಣಾಲಯಮ್
ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್

ಭಾರತೀಯ ಆಧ್ಯಾತ್ಮಿಕ ಪ್ರಪಂಚದ ದಿವ್ಯ ಚೇತನವಾದ ಆದಿಶಂಕರಾಚಾರ್ಯರು ಭಾರತೀಯ ಸಂಸ್ಕೃತಿಯ ಪುನರುತ್ಥಾನ ಮಾಡಿದ ವಿಭೂತಿ ಪುರುಷರು. ಅದ್ವೈತದರ್ಶನ, ವೇದಾಂತ ವಿಚಾರಗಳನ್ನು ಆಸೇತು ಹಿಮಾಲಯ ಪರ್ಯಂತ ಪ್ರಸಾರ ಮಾಡಿದ ಶ್ರೀಶಂಕರಾಚಾರ್ಯರು ಅದ್ವಿತೀಯ ಕಾರ್ಯ ಮಾಡಿದ್ದಾರೆ. ಅದ್ಭುತವಾದ ಪ್ರತಿಭೆ, ಆಳವಾದ ಪಾಂಡಿತ್ಯ ಹೊಂದಿದ್ದ ಆದಿಶಂಕರರು ವಿದ್ವತ್ತಿನ ಮೇರು ಶಿಖರವಾಗಿದ್ದರು. ಪ್ರಸ್ಥಾನತ್ರಯಗಳಾದ ಶ್ರೀಭಗವದ್ಗೀತೆ, ಬ್ರಹ್ಮಸೂತ್ರ, ಉಪನಿಷತ್ತುಗಳಿಗೆ ಅವರು ಬರೆದ ಭಾಷ್ಯಗ್ರಂಥಗಳು ಲೋಕವಿಖ್ಯಾತವಾಗಿವೆ. ನಿರ್ಗುಣ ಬ್ರಹ್ಮೋಪಾಸಕರೂ, ಅದ್ಭುತ ತಾರ್ಕಿಕರೂ ಆಗಿದ್ದ ಆದಿಶಂಕರರು ಭಕ್ತವರೇಣ್ಯರೂ ಆಗಿದ್ದರು. ಅವರು ಬರೆದ ಸ್ತೋತ್ರಗಳು ಭಕ್ತಿ-ಜ್ಞಾನ, ವೈರಾಗ್ಯಗಳ ತ್ರಿವೇಣಿ ಸಂಗಮವಾಗಿವೆ. ಪಂಡಿತರು ಮಾತ್ರವಲ್ಲ, ಜನಸಾಮಾನ್ಯರೂ ವೇದಾಂತ ವಿಚಾರಗಳನ್ನು ತಿಳಿದುಕೊಂಡು ಆತ್ಮೋನ್ನತಿಯನ್ನು ಸಾಧಿಸಬೇಕೆಂಬುದು ಅವರ ಮನೀಷೆಯಾಗಿತ್ತು. ಆದಿಶಂಕರರ ಅದ್ವೈತದರ್ಶನ ಭಾರತೀಯ ದರ್ಶನಗಳಲ್ಲೇ ಮಹೋನ್ನತವಾದುದೆಂದು ಮನ್ನಣೆ ಪಡೆದಿದೆ. ಭಾರತೀಯರನ್ನು ಆದಿಶಂಕರರ ವೇದಾಂತ ವಿಚಾರಗಳು ಹನ್ನೆರಡು ಶತಮಾನಗಳಿಂದ ಪ್ರಭಾವಿಸುತ್ತ ಬಂದಿವೆ. ನಿರಂತರ ಚಿಂತನ ಮಂಥನ ಮಾಡುವ ವಿಚಾರಧಾರೆ ಅವರ ಕೃತಿರಾಶಿಯಲ್ಲಿ ಅಂತಸ್ಥವಾಗಿದೆ.

ಹನ್ನೆರಡು ನೂರು ವರ್ಷಗಳ ಭವ್ಯ ಇತಿಹಾಸವುಳ್ಳ ಮಹಾಗುರುಪೀಠವಾದ ಸ್ವರ್ಣವಲ್ಲೀ ಮಹಾಸಂಸ್ಥಾನದಲ್ಲಿ ಆದಿಶಂಕರಾಚಾರ್ಯರನ್ನು ಕುರಿತು ರಾಷ್ಟ್ರೀಯ

ವಿಚಾರ ಸಂಕಿರಣವನ್ನು ಜರುಗಿಸಲು ಪೂಜ್ಯ ಶ್ರೀಗಳಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಮಾರ್ಗದರ್ಶನ ಮಾಡಿದರು. ಆದಿಶಂಕರರ ಕೃತಿಗಳ ವಿಮರ್ಶಾತ್ಮಕ ಅಧ್ಯಯನ, ಸನಾತನಧರ್ಮದ ಪುನರುಜ್ಜೀವನದಲ್ಲಿ ಆದಿಶಂಕರರ ಪಾತ್ರ, ಅದ್ವೈತ ಸಿದ್ಧಾಂತದ ವೈಜ್ಞಾನಿಕತೆ, ಶಂಕರ ಸಿದ್ಧಾಂತದ ಕಾಲೌಚಿತ್ಯ, ಆದಿಶಂಕರರು ಮತ್ತು ಇತರ ಸಿದ್ಧಾಂತಗಳು, ಭಾರತೀಯ ಸಾಹಿತ್ಯದ ಮೇಲೆ ಅದ್ವೈತ ಸಿದ್ಧಾಂತದ ಪ್ರಭಾವ ಎಂಬ ವಿದ್ವತ್ಪೂರ್ಣ ಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ರಾಷ್ಟ್ರದ ನಾನಾ ಭಾಗಗಳಿಂದ ವಿದ್ವಾಂಸರನ್ನು ಆಮಂತ್ರಿಸಲಾಯಿತು. ಶಂಕರ ಜಯಂತಿಯ ಸಂದರ್ಭದಲ್ಲಿ ಮೂರು ದಿನಗಳ ಕಾಲ ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನದಲ್ಲಿ (2,3,4 ಮೇ 2000) ಈ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕಂಚಿಯ ಕಾಮಕೋಟಿ ಪೀಠದ ಪೂಜ್ಯ ಶ್ರೀಗಳಾದ ಶ್ರೀ ಶ್ರೀಜಯೇಂದ್ರ ಸರಸ್ವತಿ ಮಹಾಸ್ವಾಮಿಗಳು ಉದ್ಘಾಟಿಸಿ ಆಶೀರ್ವಚನ ಪ್ರಾಸ್ತಾವಿಕ ಮಾತುಗಳ ಮೂಲಕ ಈ ರಾಷ್ಟ್ರೀಯ ವಿಚಾರಸಂಕಿರಣದ ಮಹತ್ವವನ್ನು ವಿದಿತಪಡಿಸಿದರು. ಅಂದು ಕಂಚಿಮಠದ ಶ್ರೀಗಳಾದ ಶ್ರೀ ಶ್ರೀವಿಜಯೇಂದ್ರ ಸರಸ್ವತಿ ಮಹಾಸ್ವಾಮಿಗಳೂ ಆಶೀರ್ವಚನ ಮಾಡಿದರು.

ಆದಿಶಂಕರರನ್ನು ಕುರಿತ ಈ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ವೈಶಿಷ್ಟ್ಯಪೂರ್ಣವಾದ 18 ಪ್ರಬಂಧಗಳು ಮಂಡಿತವಾದವು. ಅವು ಹೀಗಿವೆ :

1) ಬ್ರಹ್ಮಸೂತ್ರಶಾಂಕರ ಭಾಷ್ಯ-ಒಂದು ವಿಮರ್ಶೆ, ಪ್ರೊ. ಎಂ.ಎನ್. ನರಸಿಂಹಮೂರ್ತಿ
2) ಶ್ರೀಶಂಕರ ಭಗವತ್ಪಾದರ ಭಗವದ್ಗೀತಾ ಭಾಷ್ಯ - ವಿದ್ವಾನ್ ರಾಮಚಂದ್ರ ಶರ್ಮಾ ತ್ಯಾಗಲಿ.
3) ಶ್ರೀ ಶಂಕರ ಭಗವತ್ಪಾದರ ಉಪನಿಷದ್ಭಾಷ್ಯ - ವಿದ್ವಾನ್ ಅನಂತಶರ್ಮಾ ಭುವನಗಿರಿ.
4) ಆದಿಶಂಕರರ ಸ್ತೋತ್ರ ಸಾಹಿತ್ಯ - ವಿದ್ವಾನ್ ವಿ.ಎನ್. ಭಟ್ಟ
5) ಅದ್ವೈತ ದರ್ಶನದ ಮಹಾಚೇತನ ಆದಿಶಂಕರರು - ಡಾ. ಎ.ಕೆ. ಶಾಸ್ತ್ರಿ
6) ಸನಾತನ ಧರ್ಮದ ಪುನರುಜ್ಜೀವನದಲ್ಲಿ ಶ್ರೀಶಂಕರರ ಪಾತ್ರ - ವಿದ್ವಾನ್ ಡಿ.ಎಸ್. ಭಟ್ಟ ಸೋಮಸಾಗರ
7) ಬೌದ್ಧ ವಿಪರೀತ ವಾದಿಗಳು ಮತ್ತು ಶಂಕರರು - ಡಾ. ವಿ.ಡಿ. ಹೆಗಡೆ

8) ಅದ್ವೈತ ಸಿದ್ಧಾಂತ ಹಾಗೂ ಸಾಪೇಕ್ಷತಾವಾದ - ಡಾ. ಕೆ.ವಿ. ಆಚಾರ್ಯ
9) ಗಣಿತದಲ್ಲಿ ಅನಂತತೆಯ ಪರಿಕಲ್ಪನೆ - ಡಾ. ಎಸ್. ಭಾಲಚಂದ್ರರಾವ್.
10) ಅದ್ವೈತ-ಅನುಷ್ಠಾನ ವೇದಾಂತ - ಲಕ್ಷ್ಮೀಶ ತೋಳ್ಪಾಡಿ.
11) ಶ್ರೀಶಂಕರ ಭಗವತ್ಪಾದರು ಮತ್ತು ವೈಷ್ಣವದರ್ಶನ - ಶ್ರೀಶ್ರೀ ರಂಗಪ್ರಿಯ ಮಹಾದೇಶಿಕ ಶ್ರೀಪಾದಂಗಳು.
12) ಶ್ರೀಶಂಕರ ಭಗವತ್ಪಾದರು ಮತ್ತು ಶಾಕ್ತತಂತ್ರ - ಡಾ. ಆರ್. ಗಣೇಶ್
13) ಸಂಸ್ಕೃತ ಸಾಹಿತ್ಯದ ಮೇಲೆ ಶಂಕರರ ಅದ್ವೈತ ಸಿದ್ಧಾಂತದ ಪ್ರಭಾವ - ಡಾ. ಜಿ.ಎನ್. ಭಟ್ಟ
14) ತಮಿಳು ಸಾಹಿತ್ಯದ ಮೇಲೆ ಶಂಕರರ ಅದ್ವೈತ ಸಿದ್ಧಾಂತದ ಪ್ರಭಾವ - ಡಾ. ಅರ್ತಿಕಜೆ ಶ್ರೀಕೃಷ್ಣ ಭಟ್ಟ.
15) ಶಂಕರಾದ್ವೈತ ಮತ್ತು ತೆಲುಗು ಸಾಹಿತ್ಯ - ಡಾ. ಜೆ. ಸದಾನಂದಂ
16) ಮಲೆಯಾಳ ಸಾಹಿತ್ಯದ ಮೇಲೆ ಶಂಕರರ ಅದ್ವೈತ ಸಿದ್ಧಾಂತದ ಪ್ರಭಾವ - ಡಾ. ಅರ್ತಿಕಜೆ ಶ್ರೀಕೃಷ್ಣಭಟ್ಟ
17) ಕನ್ನಡ ಅನುಭವಾಮೃತದಲ್ಲಿ ಅದ್ವೈತದರ್ಶನ - ಡಾ. ಜಿ.ಎಂ. ಹೆಗಡೆ
18) ಅದ್ವೈತ ಪೀಠ ಪರಂಪರೆ ಮತ್ತು ಸ್ವರ್ಣವಲ್ಲೀ ಮಠ - ಡಾ. ಎ.ಕೆ. ಶಾಸ್ತ್ರಿ

ಆದಿಶಂಕರರ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಶ್ರೀ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಸಮಾರೋಪ ಉಪನ್ಯಾಸ ನೀಡಿ ಅದ್ವೈತ ದರ್ಶನದ ಪ್ರಸ್ತುತತೆ, ಅದರ ಅನುಷ್ಠಾನ ವೇದಾಂತ ಮತ್ತು ವೈಜ್ಞಾನಿಕತೆಗಳ ಕುರಿತು ಪಾಂಡಿತ್ಯಪೂರ್ಣ ಉಪನ್ಯಾಸ ನೀಡಿದರು. ಈ ಎಲ್ಲ ವಿದ್ವತ್ ಪೂರ್ಣ ಪ್ರಬಂಧ ಉಪನ್ಯಾಸಗಳನ್ನು ಕೇಳಿ ಅವುಗಳ ಮಹತ್ವವನ್ನು ವಿಮರ್ಶಾತ್ಮಕ ಅಭಿಮತಗಳಿಂದ ಮೌಲ್ಯಮಾಪನ ಮಾಡಿದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ವಿದ್ವತ್‌ಪ್ರೀತಿ ಅನುಪಮವಾದದ್ದು. ಶ್ರೀ ಶಂಕರಾಚಾರ್ಯರ ಅದ್ವೈತ ದರ್ಶನದ ವೈಜ್ಞಾನಿಕತೆ ಮತ್ತು ಭಾರತೀಯ ಸಾಹಿತ್ಯದಲ್ಲಿ ಅದ್ವೈತ ದರ್ಶನದ ಪ್ರಭಾವದಂತಹ ಮಹತ್ವದ ವಿಷಯಗಳನ್ನು ಮೊದಲಬಾರಿಗೆ ಈ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಮಂಡಿಸುವುದರ ಮೂಲಕ ''ವೈಜ್ಞಾನಿಕ ಮಹತ್ವ ಅದ್ವೈತ ದರ್ಶನದಲ್ಲಿದೆ'' ಎಂಬ ಅರ್ಥಪೂರ್ಣ ಹೊಸ ಸಂಶೋಧನೆ ಬೆಳಕಿಗೆ ಬರುವಂತಾಗಿದೆ. ಆಧುನಿಕತೆ ಮತ್ತು ಪರಂಪರೆಯ ನಡುವೆ ಸಮನ್ವಯ ಸಾಧಿಸುವದು ನಮ್ಮ ಗುರಿಯಾಗಿರಬೇಕು. ಆದಿಶಂಕರಾಚಾರ್ಯರ ಅದ್ವೈತದರ್ಶನ ಭಾರತೀಯ

ದರ್ಶನಗಳಲ್ಲಿ ಮಹೋನ್ನತವಾದದ್ದು. ಅದರ ಪ್ರಭಾವ ನಿತ್ಯನಿರಂತರವಾಗಿದೆ. ಅದ್ವೈತವು ಅನುಷ್ಠಾನ ವೇದಾಂತವಾಗಿ ನಮ್ಮ ಬದುಕಿನ ಜೀವವಾಹಿನಿ ಆಗಬೇಕು ಎಂಬುದು ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ಹೃದಯದ ಹಂಬಲವಾಗಿದೆ. ಶ್ರೀ ಶಂಕರಾಚಾರ್ಯರನ್ನು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದ ಸಂಘಟನೆ ಮಾಡುವಲ್ಲಿ ಮಾರ್ಗದರ್ಶನ ಮಾಡಿದ ಶ್ರೀಗಳೇ ಅದರ ಮೌಲಿಕ ವಿಚಾರಗಳ ಪ್ರಬಂಧಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಬೇಕೆಂದು ನಿರ್ದೇಶಿಸಿದರು. ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ಆಶಯದಂತೆ ಈ ವಿಚಾರ ಸಂಕಿರಣದ ಪ್ರಬಂಧಗಳು ಶ್ರೀ ಶಂಕರಾಚಾರ್ಯರ ಅದ್ವೈತ ದರ್ಶನ ಶೀರ್ಷಿಕೆಯಲ್ಲಿ ಶ್ರೀಮಠದ ಶ್ರೀಭಗವತ್ಪಾದ ಪ್ರಕಾಶನದಿಂದ ಪ್ರಕಟವಾಗಿ ವಿದ್ವಾಂಸರ ಅಪಾರ ಪ್ರೀತ್ಯಾದರಕ್ಕೆ ಪಾತ್ರವಾಗಿವೆ. ಶ್ರೀ ಶಂಕರಾ-ಚಾರ್ಯರನ್ನು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಜರುಗಿಸಿದ ಅದ್ವೈತ ದರ್ಶನದ ಮಹಾಗುರು ಪೀಠವಾದ ಸ್ವರ್ಣವಲ್ಲೀ ಮಹಾಸಂಸ್ಥಾನ ಅರ್ಥಪೂರ್ಣವಾದ ಕಾರ್ಯ ಮಾಡಿದೆ. ಇದರ ಶ್ರೇಯಸ್ಸಿನ ಹಿಂದೆ ಶ್ರೀಗಳ ಸಂಕಲ್ಪಶಕ್ತಿಯಿದೆ. ಮಾರ್ಗದರ್ಶನವಿದೆ, ಶಾಂಕರ ದರ್ಶನದ ಪ್ರಸಾರದ ಅನುಪಮ ಚಿಂತನ ಧಾರೆಯಿದೆ.

❃ ❃ ❃

ಶ್ರೀ ಸ್ವರ್ಣವಲ್ಲಿ ಮಠದಿಂದ ಸಾಹಿತ್ಯಕ ಕೊಡುಗೆ :

ಒಂದು ವಿಹಂಗಮ ನೋಟ

ಲೇ: "ನಾ.ಸು." ಭರತನ ಹಳ್ಳಿ

ಸಂಪಾದಕ ಸ್ವರ್ಣವಲ್ಲೀ ಪ್ರಭಾ

ಧಾರ್ಮಿಕ ಆಸಕ್ತ ಸಮೂಹದಲ್ಲಿ ತನ್ನ ಅನೇಕ ವಿಧದ ಕಾರ್ಯಗಳ ಮೂಲಕ ಕೀರ್ತಿ ಪತಾಕೆಯನ್ನು ಮೆರೆಸಿ ಸುಪ್ರಸಿದ್ಧವಾದ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಪೀಠಾಧೀಶರಾಗಿ ವಿರಾಜಿಸಿದವರು, ರಾರಾಜಿಸುತ್ತಿರುವವರು ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಪೀಠಗಳ ಸಂಪ್ರದಾಯದಲ್ಲೊಂದಾದ 'ಸರಸ್ವತೀ ಯತಿ' ಎಂಬ ಪರಂಪರೆಯವರು. ಈ ಸ್ವರ್ಣವಲ್ಲೀ ಪೀಠ ಪರಂಪರೆಯು 9ನೇ ಶತಮಾನದ ಆದಿಯಿಂದಲೇ ಪ್ರಾರಂಭಗೊಂಡಿದೆ. ಕಾಶೀ, ಉಜ್ಜಯಿನಿ, ಸಪ್ತಶೃಂಗ, ತ್ರಯಂಬಕ ಕ್ಷೇತ್ರಗಳಲ್ಲಿ 12ನೇ ಶತಮಾನದವರೆಗೆ ಅನುಸರಣೆಗೊಂಡು ಮುಂದೆ ಈ ಜಿಲ್ಲೆಯ ಗೋಕರ್ಣ ಕ್ಷೇತ್ರಕ್ಕೆ ಆಗಮಿಸಿ ನೆಲೆಗೊಂಡಿತೆಂದೂ 13ನೇ ಶತಮಾನದ ಮಧ್ಯೆಯಿಂದ ಕಡತೋಕಾ ಮಠದಲ್ಲಿಯೂ ನಂತರ 14ನೇ ಶತಮಾನದ ಮಧ್ಯದಿಂದ 16ನೇ ಶತಮಾನದ ಮಧ್ಯದವರೆಗೆ ಈಗಿನ ಈ ಸ್ವರ್ಣವಲ್ಲಿಗೆ ಸನಿಹವಾಗಿರುವ ಶಾಲ್ಮಲಾ ನದೀ ತೀರದ 'ಸಹಸ್ರಲಿಂಗ' - ಎಂಬ ತಾಣದಲ್ಲಿ ಮಠ ಕಟ್ಟಿಸಿಕೊಂಡು ಉಳಿದು ತನ್ನೊಳಗೆ ಅನೇಕ ಯತಿವರ್ಯರರ ಚರಿತ್ರೆಯನ್ನು ದಾಖಲಿಸಿ ಕೊಂಡಿತು.

ಈಗಿನ ಸ್ಥಳದಲ್ಲಿ ರಾರಾಜಿಸುತ್ತಿರುವ ಈ ಸ್ವರ್ಣವಲ್ಲೀ ಮಹಾಸಂಸ್ಥಾನ ಮಠವು 16ನೇ ಶತಮಾನದಲ್ಲಿ ಸೋದೆ ರಾಜ್ಯವನ್ನಾಳುತ್ತಿದ್ದ ಅರಸ ಇಮ್ಮಡಿ ಅರಸಪ್ಪನಾಯಕ ಎಂಬವರಿಂದ ಭಕ್ತಿಪೂರ್ವಕ ನಿರ್ಮಿಸಿಕೊಡಲ್ಪಟ್ಟು ಈ ಲಾಗಾಯ್ತಿನಿಂದ ಶ್ರೀ ಮಠದ ಯತಿಪರಂಪರೆಯ 34ನೇ ಗುರುವರ್ಯಯತಿ ಶ್ರೀ ಶ್ರೀಮದ್ ಹಿರೇ ಚಂದ್ರಶೇಖರ ಮಹಾಸ್ವಾಮಿಗಳವರು ಪೀಠಾಧೀಶರಾಗಿ ಪ್ರಾರಂಭಗೊಂಡು ನಿರಂತರ ಮುನ್ನಡೆದುಕೊಂಡು ಬಂದುದು ದಿವ್ಯಚರಿತ್ರೆ.

ಈ ಪೀಠದ ಯತಿಗಳು - ನಿರುಂಬಳವಾಗಿ ತಪೋ ಯೋಗಾನುಷ್ಠಾನವನ್ನು ಗೈಯುತ್ತ, ಲೋಕ-ಹಿತ ಚಿಂತನೆಯಿಂದೊಡಗೂಡಿ ಪೂಜಾವಿನಿಯೋಗ, ಧರ್ಮೋದ್ದೀಪನ ಕಾರ್ಯಗಳಲ್ಲಿ ನಿರತರಾಗಿರುವುದೇ ಸಾಮಾನ್ಯವಾಗಿ ಅನುಸರಿಸುತ್ತ ಬಂದಂಥ ಹಿರಿಮೆಯ ನಡವಳಿಕೆ. ಶ್ರೀಮಠದ ಹದಿನಾರು ಸೀಮಾ ಕ್ಷೇತ್ರದಾದ್ಯಂತ ವಾಸವಾಗಿರುವ ಶಿಷ್ಯ ಸಮೂಹದೆಡೆಯತ್ತ ದೃಷ್ಟಿಸಿಕೊಳ್ಳುತ್ತ, ಹೊರ ಪ್ರದೇಶದತ್ತವೂ ಗಮನಿಸುತ್ತ ಅಲ್ಲಲ್ಲಿ ಸಂಚಾರವನ್ನೂ ಕೈಗೊಳ್ಳುತ್ತ, ಧರ್ಮಭಾವನೆಯನ್ನೂ ಭಕ್ತಿ-ಭಾವನೆಯನ್ನೂ ಬೋಧನೆ ಗೈಯ್ಯುತ್ತ ಬಂದಿರುವುದೇ ಈ ಮಠದ ಪ್ರಧಾನ ಗಮ್ಯತೆ.

ಈ ಬಗೆಯ ಗಮ್ಯ ಗಮನದೊಂದಿಗೇ ಗಣ್ಯತೆ ತೋರುತ್ತಿದ್ದ ಶ್ರೀ ಸ್ವರ್ಣವಲ್ಲೀ ಮಠದ ಯತಿವರ್ಯರುಗಳಿಂದ ಜನತೆಗೆ ಬೋಧನೆ, ಪ್ರವಚನ, ಉಪದೇಶಗಳ ಹೊರತಾಗಿಯೂ ಧರ್ಮದ ಜ್ಞಾನಬೆಳಕನ್ನು ಗ್ರಂಥರೂಪ-ದಲ್ಲಿಯೂ ಒದಗಿಸುವಂಥ 'ಸಾಹಿತ್ಯಿಕ ಕೊಡುಗೆಯೂ ಇರುವುದು ವೇದ್ಯ.

ಆ ರೀತಿಯ ಕೊಡುಗೆ ಪ್ರಾರಂಭಗೊಂಡುದು ಈ ಪೀಠ ಪರಂಪರೆಯಲ್ಲಿಯ 28ನೇ ಯತಿವರ್ಯ ಗುರುಗಳಾಗಿದ್ದ ಶ್ರೀ ಶ್ರೀ ಬೃಹದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿ(1648-1653)ಗಳವರಿಂದ ಎಂದು ದಾಖಲೆಗಳ ಲಭ್ಯತೆಗನುಸರಿಸಿ ಹೇಳಬಹುದಾಗಿದೆ.

ಶ್ರೀ ಬೃಹದ್ ಗಂಗಾಧರೇಂದ್ರ ಸರಸ್ವತೀಗಳವರ ಕುರಿತು ಉಂಟಾಗಿದ್ದ ಪ್ರಶಂಸೆಯ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ.

''ಶ್ರೀ ಬೃಹದ್ ಗಂಗಾಧರೇಂದ್ರರು ಬುದ್ಧಿಯಲ್ಲಿ ಎಲ್ಲರನ್ನೂ ಮೀರಿಸಿದ್ದರು. ಬುದ್ಧಿವಂತರಿಗೂ ಬುದ್ಧಿವಂತರಾಗಿದ್ದರು. ಅವರು ಪದಶಾಸ್ತ್ರವಾಗಿರುವ ವ್ಯಾಕರಣ; ವಾಕ್ಯ ಶಾಸ್ತ್ರವಾಗಿರುವ 'ಮೀಮಾಂಸಾ'; ಮತ್ತು ಪ್ರಮಾಣ ಶಾಸ್ತ್ರವಾಗಿರುವ 'ತರ್ಕ'ವನ್ನೂ ತಿಳಿದಿದ್ದರು. ಅವರು ಎಲ್ಲರಲ್ಲಿಯೂ ಸಮಭಾವ ಅರ್ಥಾತ್ ಬ್ರಹ್ಮಭಾವದಿಂದ ಬೆಳಗುತ್ತಿದ್ದರು. ಅವರು ಶ್ರೀರಾಮ ಸೇತುವೆಯಿರುವ ಶ್ರೀ ರಾಮೇಶ್ವರದಿಂದ ಹಿಮಾಲಯದವರೆಗೂ ಕೀರ್ತಿಯನ್ನು ಪಡೆದಿದ್ದಾರೆ. ಅಂಥವರು ಹಿಂದೆ ಇರಲಿಲ್ಲ; ನಮ್ಮ ಮುಂದೆಯೂ ಇರಲಿಕ್ಕಿಲ್ಲ'' (ಏತಾದೃಶಃ ಪುರಾನಾಸೀತ್, ಸಂಭವಿಷ್ಯತಿ ನೋ ಪುರಃ) ಹೀಗೆಂದು ಸ್ವರ್ಣವಲ್ಲೀ ಮಠದಲ್ಲಿಯೇ ಲಭ್ಯವಾಗುವ - 'ಜ್ಞಾನ ದೀಪಿಕಾ' - ಎಂಬ ಸಂಸ್ಕೃತ ಗ್ರಂಥದಲ್ಲಿ (ಶ್ಲೋ.5-120-32) ಬೃಹದ್ ಗಂಗಾಧರೇಂದ್ರ ವರ್ಣನೆ ನೋಡಸಿಗುತ್ತದೆ.

ಶ್ರೀ ಬೃಹದ್ ಗಂಗಾಧರೇಂದ್ರರು ಸಂಸ್ಕೃತದಲ್ಲಿ ಎಂಟು ಗ್ರಂಥಗಳನ್ನು ರಚಿಸಿದ್ದಾರೆಂದು ತಿಳಿದುಬರುತ್ತದೆ. ಇವು ಸ್ವರ್ಣವಲ್ಲೀ ಮಠದ ಯತಿಗಳ ಸಾಹಿತ್ಯ ಕೊಡುಗೆಯ ಮಹತ್ವದ ಐತಿಹಾಸಿಕ ದಾಖಲೆಯನ್ನೇ ನಿರ್ಮಿಸಿಕೊಟ್ಟಿವೆ. ಹೀಗೆ ರಚಿತವಾಗಿದ್ದ ಗ್ರಂಥಗಳೆಂದರೆ : (1) ಶುಕಾಷ್ಟಕ-ವ್ಯಾಖ್ಯಾ; (2) ಪ್ರಣವಕಲ್ಪ ಪ್ರಕಾಶ, (3) ಸಿದ್ಧಾಂತ ಸೂಕ್ತಮಂಜರಿ ಪ್ರಕಾಶ, (4) ಸ್ವಾರಾಜ್ಯಸಿದ್ಧಿ, (5) ಸಿದ್ಧಾಂತ ಬಿಂದುಶೇಖರ, (6) ಸಿದ್ಧಾಂತ ಚಂದ್ರಿಕೋದ್ಧಾರ, (7) ಸಿದ್ಧಾಂತ ಲೇಶ ಟೀಕಾ, (8) ಭಾಟ್ಟಸಾರ ಸರ್ವಸ್ತೋದ್ಯೋತ ಚಂದ್ರಿಕಾ - ಎಂಬವು ಮುಖ್ಯ. ಇವುಗಳಲ್ಲಿ 'ಸ್ವಾರಾಜ್ಯ ಸಿದ್ಧಿ' ಎಂಬ ಗ್ರಂಥವು ಗಣ್ಯವಾದ ಕೀರ್ತಿಯನ್ನು ಗಳಿಸಿಕೊಟ್ಟಿದೆ. ಶ್ರೀ ಬೃ|| ಗಂಗಾಧರೇಂದ್ರರು ಶ್ರೀ ಕಾಶಿಕ್ಷೇತ್ರದಲ್ಲಿ ವಾಸವಿದ್ದಾಗ ಅಲ್ಲಿ ಶ್ರೀ ಸ್ವಪ್ರಕಾಶೇಂದ್ರರಿಗೂ ಇವರಿಗೂ ಶಾಸ್ತ್ರವಾದ ಉಂಟಾಯಿತಂತೆ. ಆ ವಾದದಲ್ಲಿ ಜಯಶಾಲಿಗಳಾಗಲೆಂದೇ ಶ್ರೀ ಬೃ|| ಗಂಗಾಧರೇಂದ್ರರು - 'ಸ್ವಾರಾಜ್ಯ ಸಿದ್ಧಿ' ಎಂಬ ಗ್ರಂಥವನ್ನೇ ಬರೆದು ಮಂಡಿಸಿದರು. ಆ ಮೂಲಕ ವಿದ್ವತ್ ಸಮೂಹ-ದಿಂದ ಪ್ರಶಂಸೆಗೆ ಪಾತ್ರರಾದರಲ್ಲದೇ, ಉಂಟಾಗಿದ್ದ ಆವಾದದಲ್ಲಿಯೂ ಶ್ರೀ ಸ್ವಪ್ರಕಾಶೇಂದ್ರರು ಸೋಲನ್ನೊಪ್ಪಿಕೊಂಡರು ಎಂಬುದನ್ನು ಚರಿತ್ರೆ ಸಾರಿದೆ. ಈ ಸ್ವಾರಾಜ್ಯ ಸಿದ್ಧಿ ಗ್ರಂಥಕ್ಕೆ ಸ್ವತಃ ಅವರೇ 'ಕೈವಲ್ಯ ಕಲ್ಪದ್ರುಮ'' ಎಂಬ ವಿಶದವಾದ ವ್ಯಾಖ್ಯಾನವನ್ನೂ ಪ್ರತ್ಯೇಕ ಒಂದು ಗ್ರಂಥವಾಗಿ ಬರೆದು ಅರ್ಥ ಸರಳೀಕರಣ-ಗೊಳಿಸಿದ್ದಾರೆಂದೂ ಹೇಳಲಾಗಿದೆ. 'ಸ್ವಾರಾಜ್ಯಸಿದ್ಧಿ' ಗ್ರಂಥದಿಂದಾಗಿ ಶ್ರೀ ಬೃಹದ್ ಗಂಗಾಧರೇಂದ್ರ ಸರಸ್ವತಿಗಳವರ ಕೀರ್ತಿ ವಿದ್ವತ್ ಸಾರಸ್ವತ ಲೋಕದಲ್ಲಿಯೂ, ಆಧ್ಯಾತ್ಮಿಕ ಸಾಹಿತ್ಯ ಲೋಕದಲ್ಲಿಯೂ ಚಿರಸ್ಥಾಯಿಗೊಂಡಿತು. ಅವರು ಬರೆದ ಗ್ರಂಥಗಳು ತಾಳೇಗರಿಯ ಕಟ್ಟಿನಲ್ಲಿಯೋ, ಕೈ ಬರಹದ ಪ್ರತಿಯಲ್ಲಿಯೋ, ದೇಶವಿದೇಶಗಳ ಗ್ರಂಥಾಲಯದಲ್ಲಿಯೋ ದೊರೆಯುತ್ತವೆ. ''ಅಂದು ಅವರು ರಚಿಸಿದ್ದ ಗ್ರಂಥಗಳನ್ನು ವಿದ್ವಾಂಸರ ಎದುರಿಗೆ ಸ್ವತಃ ತಾವೇ ನಿರೂಪಿಸಿದ್ದರೆ ಇಂದು ಆ ಗ್ರಂಥಗಳೇ ಶ್ರೀ ಶ್ರೀ ಗಂಗಾಧರೇಂದ್ರರನ್ನು ಲೋಕಕ್ಕೆ ಪರಿಚಯಿಸು-ತ್ತವೆ. ''ಸ್ವರಾಜ್ಯಸಿದ್ಧಿ'' ಎಂಬ ಗ್ರಂಥವು ವಿಶ್ವವಿದ್ಯಾಲಯ ಮಟ್ಟದಲ್ಲೂ ಸಂಸ್ಕೃತ ವಾಙ್ಮಯ ಸಾಹಿತ್ಯಕ ಮಹತ್ವಗಳಿಸಿದೆ ಎಂಬುದಕ್ಕೆ ಕರ್ನಾಟಕ ವಿಶ್ವವಿದ್ಯಾಲಯವು ಈ ಗ್ರಂಥವನ್ನು ಪ್ರಕಟಿಸಿ ಪ್ರಸರಿಸಿದ್ದೇ ಸಾಕ್ಷಿ.'' (ಡಾ. ಸೂರ್ಯನಾರಾಯಣ ಭಟ್ಟ ಅವರ ಕೃತಿಯಿಂದ ಉಲ್ಲೇಖ)

ಸ್ವರ್ಣವಲ್ಲೀ ಮಠದಲ್ಲಿ ಲಭ್ಯವಾಗುವ ಇನ್ನೊಂದು ಚಾರಿತ್ರಿಕ ದಾಖಲೆಯ ಮಹತ್ವ ಹೊಂದಿರುವ ಕೃತಿ - ''ಜ್ಞಾನದೀಪಿಕಾ''. ಈ ಗ್ರಂಥವು ಸ್ವರ್ಣವಲ್ಲೀ

ಮಠದ ಆತನಕದ ಚರಿತ್ರೆಯ ಸಂಗತಿಗಳ ಮೇಲೆ ಬೆಳಕು ಬೀರುವ ಏಕೈಕ ಆಕರ ಗ್ರಂಥವಾಗಿದೆ. ಕಾವ್ಯಾತ್ಮಕ ಶೈಲಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟ ಈ ಗ್ರಂಥವನ್ನು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ವಿದ್ವದ್ಗಂಗಾಧರ ಸರಸ್ವತಿನಾ ವಿರಚಿತಾಯಾಂ ಜ್ಞಾನದೀಪಿಕಾಯಾಂ.... ಎಂಬುದಾಗಿ ಬರೆದವರ ಹೆಸರು ನಮೂದಿತವಾಗಿದೆ. ಈಗಿನ ಶ್ರೀ ಗಂಗಾಧರೇಂದ್ರರ ಪರಮ ಗುರುಪೀಠದ ಶ್ರೀ ಗಂಗಾಧರೇಂದ್ರ ಸರಸ್ವತೀ-ಅವರು (52ನೇ ಯತಿಗಳು) ಕನ್ನಡಕ್ಕೆ ತರ್ಜುಮೆಗೊಳಿಸಿದ್ದರು. ನಂತರ ಅದು ಮುದ್ರಣವನ್ನೂ ಹೊಂದಿದೆ.

ಈ 'ಜ್ಞಾನದೀಪಿಕಾ' ಗ್ರಂಥವನ್ನು ರಚಿಸಿದವರೂ 38ನೆಯವರಾದ ಶ್ರೀ ಬೃಹದ್ ಗಂಗಾಧರೇಂದ್ರ ಸರಸ್ವತೀ ಯತಿಗಳವರೇ ಎಂದು ಹಿರಿಯ ಇತಿಹಾಸ ಸಂಶೋಧಕ-ವಿದ್ವಾಂಸರಾದ ಡಾ|| ಎ.ಕೆ. ಶಾಸ್ತ್ರಿಗಳು ಸಿದ್ಧಗೊಳಿಸಿದ ಶ್ರೀ ''ಸ್ವರ್ಣವಲ್ಲೀ ಮಹಾಸಂಸ್ಥಾನ'' (ಚರಿತ್ರೆ) ಎಂಬೀ ಗ್ರಂಥದಲ್ಲಿ ಅಲ್ಲಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಸಂಸ್ಕೃತ ಗ್ರಂಥ ಸಂಶೋಧನಾ ಕಾರ್ಯದಲ್ಲಿ ತಜ್ಞತೆ-ಗಣ್ಯತೆ ಪಡೆದ ವಿದ್ವಾಂಸ ಡಾ|| ಸೂರ್ಯನಾರಾಯಣ ಭಟ್ಟ ಹಿತ್ಲಳ್ಳಿ ಅವರು ಜ್ಞಾನದೀಪಿಕಾ''ದಲ್ಲಿ ದೊರೆಯುವ ಶ್ಲೋಕಗಳನ್ನು ಉಲ್ಲೇಖಿಸುತ್ತ - ''ಶ್ರೀ ಬೃಹದ್ ಗಂಗಾಧರೇಂದ್ರರು ಬುದ್ಧಿಯಲ್ಲಿ ಎಲ್ಲರನ್ನೂ ಮೀರಿಸಿ ಬುದ್ಧಿವಂತರಿಗೂ ಬುದ್ಧಿವಂತರಾಗಿದ್ದರು. ಅಂಥವರು ಹಿಂದೆ ಇರಲಿಲ್ಲ. ಮುಂದೆಯೂ ಇರುವುದಿಲ್ಲ'' (ಜ್ಞಾನದೀಪಿಕಾ 5, ಶ್ಲೋ.130-132) ಎಂಬೀ ವಾಕ್ಯ ಹಾಗೂ ''ತಾರಕವಾದ ಅಂದರೆ ಮೋಕ್ಷವನ್ನು ನೀಡಿ ಸಂಸಾರಸಾಗರವನ್ನು ದಾಟಿಸುವ ಬ್ರಹ್ಮವು ಸ್ವಪ್ರಕಾಶವಾಗಿದೆ' ಎಂಬ ವಿಷಯದಲ್ಲಿ ಶ್ರೀ ಸ್ವಪ್ರಕಾಶರಿಗೂ ಶ್ರೀ ಬೃಹದ್ ಗಂಗಾಧರೇಂದ್ರರಿಗೂ ಕಾಶಿಯಲ್ಲಿ ವಾದವುಂಟಾಯಿತು. ಅದನ್ನು ಗೆಲ್ಲಲು ಶ್ರೀ ಗಂಗಾಧರೇಂದ್ರರು - 'ಸ್ವಾರಾಜ್ಯ ಸಿದ್ಧಿ' ಎಂಬ ಗ್ರಂಥವನ್ನೇ ಬರೆದರು. ಈ ಗ್ರಂಥದಿಂದಾಗಿ ಶ್ರೀ ಸ್ವಪ್ರಕಾಶರು ಸೋತುಹೋದರು.'' (ಜ್ಞಾನದೀಪಿಕಾ. 5-33-34) 'ವಿದ್ಯೆ, ತ್ಯಾಗ ಮತ್ತು ತಪಸ್ಸಿನ ಬಲದಿಂದ ಜಗತ್ತೆಲ್ಲವೂ ಅವರಿಂದ (ಬೃ.ಗಂಗಾಧರೇಂದ್ರರಿಂದ) ವ್ಯಾಪಿಸಲ್ಪಟ್ಟಿದೆ. (ಜ್ಞಾ.ದೀ. 5-33) ಸಂಪ್ರದಾಯ, ಸನ್ಯಾಸ ನಿಷ್ಠೆ, ವಿದ್ಯೆ, ಜ್ಞಾನ, ತಪಸ್ಸುಗಳ ಬಲದಿಂದ ಶ್ರೀ ಬೃ|| ಗಂಗಾಧರೇಂದ್ರರು ಸರ್ವರಿಗೂ ಹಿರಿಯರಾಗಿದ್ದಾರೆ.'' ಇತ್ಯಾದಿ ಅಭಿಪ್ರಾಯಗಳಿರುವ ಶ್ಲೋಕಗಳು ಜ್ಞಾನದೀಪಿಕಾ ಗ್ರಂಥದಲ್ಲಿಯೇ ಲಭಿಸುತ್ತವೆ. ಅಲ್ಲದೇ, ಜ್ಞಾ.ದೀ. ಗ್ರಂಥದ ಶ್ಲೋ. 5132ನೇದರಲ್ಲಿ ಒಬ್ಬ ಗಂಗಾಧರೇಂದ್ರರೆಂಬುವರು ಸ್ಪಷ್ಟವಾಗಿ ಬೃಹದ್

ಗಂಗಾಧರೇಂದ್ರರನ್ನು ಅತ್ಯಂತ ಗೌರವದಿಂದ ಪ್ರಶಂಸಿಸುವ ಶ್ಲೋಕಗಳೂ ಲಭ್ಯ. ಅಂದರೆ ಯಾರಾದರೂ ಗ್ರಂಥಕರ್ತ ತಾನು ಬರೆದ ಗ್ರಂಥದಲ್ಲಿಯೇ ತನ್ನ ಬಗ್ಗೆ ವರ್ಣಿಸಿ- ಕೊಳ್ಳುವುದಾಗಲೀ, ತನಗೆ ತಾನೇ ನಮಸ್ಕರಿಸಿಕೊಳ್ಳುವುದಾಗಲೀ ಇರಲುಂಟೇ? ಎಂಬಿತ್ಯಾದಿ ಶಂಕೆಗಳನ್ನೆತ್ತಿ: 'ಜ್ಞಾನ ದೀಪಿಕಾ' ಗ್ರಂಥವು ಶ್ರೀ ಬೃಹದ್ ಗಂಗಾಧರೇಂದ್ರರಿಂದ ರಚಿತವಾದುದಲ್ಲ. ಆನಂತರದಲ್ಲಿ ಪೀಠಸ್ಥರಾದ ಬೇರೊಬ್ಬ ಗಂಗಾಧರೇಂದ್ರರು 'ಜ್ಞಾನದೀಪಿಕಾ' ಕರ್ತೃ ಎಂದು ಅಭಿಪ್ರಾಯ ಪಡುವ ಡಾ|| ಸೂರ್ಯನಾರಾಯಣ ಭಟ್ಟರು ಈ ಕೃತಿ ರಚನಾಕಾರರು 41ನೇ ಗಂಗಾಧರೇಂದ್ರರು (ಅಥವಾ ಆಧುನಿಕರು 48ನೇಯವರು ಎಂದರೆ ಅದನ್ನು ಸಮರ್ಥಿಸಿಕೊಳ್ಳುವುದು ಅವರ ಜವಾಬ್ದಾರಿ) - ಎಂದು ಖಚಿತ ಅಭಿಪ್ರಾಯ ಹೊಂದಿದ್ದಾರೆ. ಡಾ|| ಎ.ಕೆ. ಶಾಸ್ತ್ರಿಯವರು ರಚಿಸಿರುವ ಸ್ವರ್ಣವಲ್ಲೀ ಮಹಾಸಂಸ್ಥಾನ (ಚರಿತ್ರೆ) ಎಂಬ ಗ್ರಂಥದಲ್ಲಿ 38ನೆಯವರಾದ ಬೃಹತ್ ಗಂಗಾಧರೇಂದ್ರರು 'ಜ್ಞಾನದೀಪಿಕಾ' ಗ್ರಂಥ ರಚಿಸಿದ್ದಾರೆ ಎಂದು ಹೇಳಲ್ಪಡು- ತ್ತಲೂ ಅದೇ ಗ್ರಂಥದ ಪು.58ರ 2ನೇ ಪರಿಚ್ಛೇದದಲ್ಲಿ- ''ಶ್ರೀ ರಾಮಚಂದ್ರ ಸರಸ್ವತಿಗಳು ಪೀಠದಲ್ಲಿ 40ನೆಯವರಾಗಿದ್ದರೆಂಬುದು ಜ್ಞಾನ ದೀಪಿಕೆಯಿಂದಲೂ ತಿಳಿಯುತ್ತದೆ'' ಎಂದು ಉಲ್ಲೇಖಿಸಿರುವುದನ್ನು ನೋಡಿದರೆ 40ನೇ ಯತಿಗಳ ನಂತರದವರೇ ಜ್ಞಾನದೀಪಿಕೆಯನ್ನು ಬರೆದಿದ್ದಾರೆಂಬುದು ಸ್ಪಷ್ಟಗೊಳ್ಳುತ್ತದೆ. ಹಾಗಾಗಿ ಡಾ|| ಸೂ.ನಾ. ಭಟ್ಟರ ಅಂಬೋಣಕ್ಕನುಸರಿಸಿ 41ನೇಯವರಾಗಿದ್ದ ಶ್ರೀ ಗಂಗಾಧರೇಂದ್ರ ಸರಸ್ವತಿಯವರು ಒದಗಿಸಿ ಕೊಟ್ಟ ಒಂದು ಮಹತ್ವದ ಚರಿತ್ರೆಯ ಗ್ರಂಥ ಈ 'ಜ್ಞಾನದೀಪಿಕಾ' ಎನ್ನಬಹುದಾಗಿದೆ.

ಆನಂತರದಲ್ಲಿ ನಮಗೆ ಲಭ್ಯವಾಗುವ ಲಿಖಿತ, ಮುದ್ರಿತ ಸಾಹಿತ್ಯಕೃತಿ 'ಪ್ರಹ್ಲಾದಚರಿತಂ' ಎಂಬ ಸಂಸ್ಕೃತ ಭಾಷೆಯಲ್ಲಿಯರುವ ಏಕಾಂಕ ನಾಟಕ. ಪ್ರಸ್ತುತದಲ್ಲಿರುವ ಶ್ರೀಮದ್ ಗಂಗಾಧರೇಂದ್ರರ ಹಿಂದಿನ ಪೀಠಸ್ಥರಾಗಿದ್ದ ಗುರು ಶ್ರೀಮದ್ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳವರು (1918-1990) ಐದು ದಶಕಗಳಷ್ಟು ಹಿಂದೆಯೇ ಶ್ರೀಮಠದ ಪ್ರಧಾನ ಆರಾಧ್ಯ ದೇವರಾಗಿರುವ ಶ್ರೀ ಲಕ್ಷ್ಮೀನೃಸಿಂಹ ದೇವರ ಮೇಲಿರುವ ತಮ್ಮ ಶ್ರದ್ಧಾಭಕ್ತಿಯ ಪ್ರಕಟ ರೂಪವಾಗಿ ಈ ನಾಟಕವನ್ನು ಸಂಸ್ಕೃತದಲ್ಲಿ ರಚಿಸಿದ್ದಿರಬಹುದು. ಅದು ಶ್ರೀ ಮಠದಲ್ಲಿಯೇ ರಂಗ ಪ್ರಯೋಗವಾಗಿಯೂ ಪ್ರಕಾಶಿಸಲ್ಪಟ್ಟು ಆನಂತರ ಮುದ್ರಣ ಹೊಂದಿತಾಗಿ ತಿಳಿಯುತ್ತದೆ. ಇದು ಶ್ರೀಗಳವರಲ್ಲಿದ್ದ ಸಂಸ್ಕೃತ ಭಾಷೆ ಮತ್ತು ಕಾವ್ಯ ಸಾಮರ್ಥ್ಯವನ್ನು ತೋರ್ಪಡಿಸುತ್ತದೆ. ಶ್ರೀ ಸರ್ವಜ್ಞೇಂದ್ರ

ಸರಸ್ವತಿಗಳು ಶ್ರೇಷ್ಠ-ಸಂಸ್ಕೃತ ಕವಿಗಳೂ ಆಗಿದ್ದರು. ಅವರು ಪ್ರತಿವರ್ಷ ವಿಜಯದಶಮಿಯಂದು, ಚಾತುರ್ಮಾಸ್ಯ ವ್ರತ ಸಮಾಪ್ತಿಯಂದು ಶಿಷ್ಯರಿಗೆ ನೀಡುವ ಆಶೀರ್ವಚನವನ್ನು ಕಾವ್ಯಾತ್ಮಕ ಶ್ಲೋಕಗಳ ರೂಪದಲ್ಲಿ ರಚಿಸಿ ಪಠಿಸುವ ವಾಡಿಕೆಯನ್ನು ಬಹುವರ್ಷ ಅನುಸರಿಸಿದ್ದರು. ಎಂಬುದು ಸ್ಮರಣಾರ್ಹ. ಆ ಕಾವ್ಯ ಶ್ಲೋಕಗಳು ಜನರಿಗೆ ಧರ್ಮ-ನೀತಿ-ಶ್ರದ್ಧೆಯ ಸಂದೇಶಗಳಾಗಿರುತ್ತಿದ್ದವು. ಇವಲ್ಲದೇ ಶ್ರೀಮಠದಲ್ಲಿ ಜರುಗಿಸಲ್ಪಟ್ಟ ಯಜ್ಞ-ಯಾಗಾದಿ ಮಹಾ ಕೃತುವಿನ ಸಂದರ್ಭದಲ್ಲಿಯೂ ಕೂಡಾ ಕಾವ್ಯ ಶ್ಲೋಕಗಳ ರೂಪದಲ್ಲಿ ಆಶೀರ್ವಚನ ನೀಡಿರುವವೂ ಇವೆ. ಈ ಎಲ್ಲವನ್ನೂ ಒಂದೆಡೆ ಸಂಗ್ರಹಿಸಿ ಪ್ರಕಟಣೆ ಕೈಕೊಂಡರೆ ಸ್ವರ್ಣವಲ್ಲೀ ಮಠದಿಂದ ಉತ್ತಮ ಕಾವ್ಯ ಕೃತಿಯೊಂದರ ಕೊಡುಗೆಯ ದಾಖಲೆ ಉಳಿಯಬಹುದಾಗಿದೆ.

ಆದೇ ಶ್ರೀ ಸರ್ವಜ್ಞೇಂದ್ರ ಸರಸ್ವತೀಗಳವರ ಕಾಲದಲ್ಲಿಯೇ ಸ್ವರ್ಣವಲ್ಲೀ ಮಠದ ಚರಿತ್ರೆಯ ಸ್ಥೂಲ ಪರಿಚಯವನ್ನೊಳಗೊಂಡ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಸಾಧನೆಗೆ ಶ್ರೀಮಠದ ಅಭಿವೃದ್ಧಿ ಇತ್ಯಾದಿಗಳನ್ನೂ ಸಂಕ್ಷಿಪ್ತವಾಗಿ ಪರಿಚಯಿಸುವಂತೆ ಲೇಖಕ-ವಿದ್ವಾಂಸ ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮರು ರಚಿಸಿಕೊಟ್ಟ 'ಸ್ವರ್ಣವಲ್ಲೀ ದರ್ಶನ' ಎಂಬ ಕಿರು ಹೊತ್ತಿಗೆ ಹಾಗೂ ಸಾಹಿತಿ ಶ್ರೀ ಗೋಪಾಲಕೃಷ್ಣ ಕೇರಿಮನೆ- ಅವರು ಬರೆದ 'ಸ್ವರ್ಣವಲ್ಲೀ ಪ್ರಕಾಶ' ಎಂಬ ಇನ್ನೊಂದು ಕಿರುಹೊತ್ತಿಗೆ ಪ್ರಕಟಗೊಂಡಿವೆ.

ಶ್ರೀ ಬೃಹದ್ ಗಂಗಾಧರೇಂದ್ರ ಯತಿವರ್ಯರು ಧಾರ್ಮಿಕ ಜ್ಞಾನ-ಜಿಜ್ಞಾಸೆಗೆ ಒಳಪಟ್ಟು ಹಲವು ಗ್ರಂಥಗಳನ್ನು ನೀಡಿ ವಿದ್ವತ್ ಲೋಕದಲ್ಲಿ ನೆನಪನ್ನುಳಿಸಿದ್ದರೆ- ಆನಂತರದಲ್ಲಿ ಶ್ರೀ ಮಠದಿಂದ ನೀಡಲ್ಪಟ್ಟ ಗ್ರಂಥಕೃತಿಗಳು ಶ್ರೀ ಸಾಮಾನ್ಯನವರೆಗೂ ಪಸರಿಸಿಕೊಳ್ಳಲು ಕಾರಣವಾಗಿವೆ. ಪ್ರಸ್ತುತದಲ್ಲಿ ವಿರಾಜಮಾನರಾಗಿರುವ ಈಗಿನ ಪೀಠಾಧಿಪತಿ ಯುವ ಮಹಾಸ್ವಾಮಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿಗಳವರು ಪೀಠಾರೋಹಣಗೈದ ಆನಂತರದಲ್ಲಂತೂ ಶ್ರೀಮಠದಿಂದ ಗ್ರಂಥ ಸಾಹಿತ್ಯ ಕೊಡುಗೆ ವಿಪುಲ ಪ್ರಮಾಣದಲ್ಲಿ ಕಾಣಿಸಿ-ಕೊಳ್ಳುತ್ತಿದ್ದು ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿ ಮುನ್ನಡೆದಿದೆ ಎಂದೇ ಅನ್ನಬಹುದು.

ಶಿಷ್ಯ ಜನಾಂಗದಲ್ಲಿ ಅಧ್ಯಾತ್ಮ ಜ್ಞಾನ ಬೆಳೆಸಲು, ಪರಂಪರಾವಿಹಿತ ಆಚರಣೆ, ಅನುಷ್ಠಾನಗಳತ್ತ ಉದ್ದೀಪನಗೊಳಿಸುವಂಥ, ಆದಿಸೆಯಲ್ಲಿ ಸರಿಯಾದ

ತಿಳುವಳಿಕೆಯನ್ನೂ ನೀಡುವಂಥ ಉಪಯುಕ್ತ ಗ್ರಂಥಗಳನ್ನು ಜನರ ಕೈಗೆ ನೀಡುವ ದೃಷ್ಟಿಯನ್ನಿರಿಸಿಕೊಂಡು ತನ್ನ ಶಿಷ್ಯವರ್ಗದವರ ಆಡುಭಾಷೆ-ನಾಡಭಾಷೆ-ಯಾಗಿರುವ 'ಕನ್ನಡ'ದಲ್ಲಿಯೇ ಹೆಚ್ಚಿನ ಗ್ರಂಥಗಳು ಪ್ರಕಟಿಸಲ್ಪಡಬೇಕೆಂಬ ಧೋರಣೆ ಈಗಿನ ವೈಶಿಷ್ಟ್ಯ. ಆದರೆ ಶ್ರೀ ಮಠದ ಜವಾಬ್ದಾರಿ, ಆ ಘನತೆಗೆ ತಕ್ಕದಾಗಿ ಸಕಲ ವಿದ್ವತ್ ಅನುಯಾಯಿಗಳಿಗೆ, ಪುರೋಹಿತರುಗಳಿಗೆ ಅವಶ್ಯಕ-ವಾಗುವಂಥ ಶಾಸ್ತ್ರಗ್ರಂಥಗಳೂ, ಅವುಗಳಿಗೆ ಯುಕ್ತವೆನಿಸುವ ಅವಶ್ಯವೂ ಆಗಿರುವ ಸಂಸ್ಕೃತ ಭಾಷೆಯಲ್ಲಿ ಪ್ರಕಾಶಗೊಂಡ ಗ್ರಂಥಗಳೂ ಮೇಳೈಸಿವೆ.

ಈ ಹಿಂದಿನಂತೆ ಶ್ರೀಮಠದ ಯತಿವರ್ಯರು ರಚಿಸಿದ್ದ ಗ್ರಂಥಗಳು ಮಾತ್ರ ಪ್ರಕಟಣೆಗೆ ಈಗ ಸೀಮಿತವಾಗಿಲ್ಲ. ವಿವಿಧ ಪ್ರಾಜ್ಞಲೇಖಕರಿಂದಲೂ ಸರಿ ಹೊಂದುವ ಅವಶ್ಯಕ ಗ್ರಂಥ ರಚನಾ ಕಾರ್ಯವನ್ನು ಮಾಡಿಸಿಕೊಂಡು ಅವುಗಳನ್ನು ಶ್ರೀಮಠದಿಂದ ಪ್ರಕಾಶಿಸುವ ಕಾರ್ಯವೂ ಇದೇ ಮೊದಲಿಗೆ ಕಾಣಿಸಿಕೊಂಡಿದೆ.

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳವರು ಈ ಪೀಠದ 54ನೇ ಗುರುಗಳಾಗಿ ದೀಕ್ಷೆ ಪಡೆದು ಪೀಠಾರೋಹಣ ಗೈದ ಸಂದರ್ಭದಲ್ಲಿ, 'ಸರ್ವಜ್ಞೇಂದ್ರ ಸರಸ್ವತೀ'' - ಎಂಬ ಸಂಸ್ಮರಣ ಗ್ರಂಥವೊಂದು ಪ್ರಕಾಶಿಸ-ಲ್ಪಟ್ಟಿತು. ಶ್ರೀ ಮಠದ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲ ವಿದ್ವಾನ್ ಬಾಲಚಂದ್ರ ಶಾಸ್ತ್ರಿಗಳವರ ಪ್ರಧಾನ ಸಂಪಾದಕತ್ವದಲ್ಲಿ ತದ್ದಲಸೆ ವಿಘ್ನೇಶ್ವರ ಶರ್ಮ, ಗೋಪಾಲಕೃಷ್ಣ ಹೆಗಡೆ ಕೇರಿಮಾನೆ, ನಾ.ಸು. ಭರತನಹಳ್ಳಿ, ಆರ್.ಎಸ್. ಹೆಗಡೆ ಭೈರುಂಬೆ ಇವರುಗಳುಳ್ಳ ಸಂಪಾದಕ ಮಂಡಳಿಯು ಈ ಬೃಹತ್ ಸಂಸ್ಮರಣ ಗ್ರಂಥವನ್ನು ಅಣಿಗೊಳಿಸಿದೆ. ಇದರಲ್ಲಿ ಹಿರಿಯ ಗುರುಗಳಾದ ಬ್ರಹ್ಮೈಕ್ಯ ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತಿಗಳವರ ಕುರಿತು ಪರಿಚಯಾತ್ಮಕ - ವಿಶ್ಲೇಷಣೆಯೊಂದಿಗೆ ಅವರ ಸಾಧನೆ, ತಪಸ್ಸು, ವ್ಯಕ್ತಿ ವೈಶಿಷ್ಟ್ಯ, ವ್ಯಕ್ತಿತ್ವಗಳನ್ನು ಬಿಂಬಿಸುವ, ಹಾಗೂ ಚರಿತ್ರೆಯನ್ನೂ ಪರಿಚಯಿಸುವ ಇಪ್ಪತ್ತು ವಿದ್ವತ್ ಲೇಖನಗಳನ್ನು ವಿವಿಧ ಲೇಖಕರು ನೀಡಿದ್ದಿವೆ. ಇದರಲ್ಲಿ 'ಅನ್ವೇಷಣೆ ಎಂಬ 2ನೇ ಭಾಗದಲ್ಲಿ ಆಧ್ಯಾತ್ಮಿಕ ತಳಹದಿಯುಳ್ಳ ವಿಚಾರ-ಚಿಂತನೆಗಳನ್ನೊಳಗೊಂಡ, ಹದಿನಾಲ್ಕು ಲೇಖನಗಳೂ ಇವೆ. ಜಿ.ಎಂ. ಹೆಗಡೆ ಹುಳಗೋಳ ಅವರು ಪ್ರಕಟಣಾ ಸಮಿತಿಯ ಅಧ್ಯಕ್ಷರಾಗಿ ಗ್ರಂಥವನ್ನು ಹೊರತಂದಿದ್ದಾರೆ. 235 ಪುಟಗಳುಳ್ಳ ಈ ಗ್ರಂಥದ ಬೆಲೆ ರೂ.30/- ಇಡಲಾಗಿತ್ತು. ಅನೇಕ ಭಾವಚಿತ್ರಗಳೇ ಮೌಲಿಕವಾದವುಗಳಾಗಿವೆ.

ಶ್ರೀ ಮಠದಲ್ಲಿಯ ಆಡಳಿತಾತ್ಮಕಸುಗಮ ನಿರ್ವಹಣೆಗಾಗಿ ಶ್ರೀ ಶ್ರೀಗಳವರ ಸರ್ವಾಧ್ಯಕ್ಷತೆಯುಳ್ಳ ಕೆಲವು ಅಂಗಸಂಸ್ಥೆಗಳನ್ನು ರಚಿಸಿಕೊಂಡಿದಿದ್ದು ಅವುಗಳ

ಪೈಕಿ- ''ಸರ್ವಜ್ಞೇಂದ್ರ ಸರಸ್ವತಿ ಪ್ರತಿಷ್ಠಾನ'' ಎಂಬುದೂ ಒಂದು ಅಂಗಸಂಸ್ಥೆ-ಯಿದೆ. 1991 ರಿಂದ 1998ರ ತನಕವೂ ಈ ಅಂಗ ಸಂಸ್ಥೆಯ ಮೂಲಕ ಶ್ರೀ ಮಠವು ಅಪೇಕ್ಷಿಸಿದ ಗ್ರಂಥಗಳ ಪ್ರಕಟಣಾ ಕಾರ್ಯ ನಿರ್ವಹಿಸಲ್ಪಟ್ಟಿದೆ.

ಸಾಹಿತ್ಯಿಕ, ಪ್ರಕಟಣಾ ಕಾರ್ಯಗಳಿಗಾಗಿಯೇ ಶ್ರೀ ಭಗವತ್ಪಾದ ಪ್ರಕಾಶನ ಎಂಬ ಹೆಸರಿನ ಒಂದು ಅಂಗ ಸಂಸ್ಥೆಯನ್ನು 1998 ರಲ್ಲಿ ರಚಿಸಿಕೊಳ್ಳಲಾಗಿದೆ. ಭಗವತ್ಪಾದ ಪ್ರಕಾಶನವು ಅಸ್ತಿತ್ವಕ್ಕೆ ಬರುವ ಕಾಲಾವಧಿಯ ಮೊದಲು ಅಂದರೆ 1998ಕ್ಕಿಂತ ಪೂರ್ವದಲ್ಲಿ ಶ್ರೀಮಠದಿಂದ ಸರ್ವಜ್ಞೇಂದ್ರ ಪ್ರತಿಷ್ಠಾನದ ಹೆಸರಿನಲ್ಲಿ (1991 ರಿಂದ 1998) ಕೆಲವು ಗ್ರಂಥಗಳು ಪ್ರಕಟಗೊಂಡಿವೆ. ಮುಖ್ಯವಾಗಿ : ಶ್ರೀ ಮಠದ ಸೀಮಾ ಪ್ರದೇಶದ ಹವ್ಯಕ-ಬ್ರಾಹ್ಮಣ ಗೃಹಸ್ಥರು ತಮ್ಮ ಮನೆಯಲ್ಲಿ ನಿತ್ಯ ದೇವರ ಪೂಜೆ, ಹಬ್ಬ ಹರಿದಿನಗಳ ಪೂಜೆಗಳನ್ನು ಮಂತ್ರ ಮುಖೇನ ಆಚರಿಸಲು ಅಗತ್ಯವಾದ, ಅನುಕೂಲವಾಗುವ ಮಂತ್ರಗಳನ್ನು ಬೌಧಾಯನೀ ಸೂತ್ರ ಕ್ರಮದಲ್ಲಿ, ಸಾಮಾನ್ಯ ಓದಬಲ್ಲವನಿಗೂ ಎಟಕುವಂತೆ ಸ್ಪಷ್ಟ ಕನ್ನಡ ಲಿಪಿಯಲ್ಲಿ ಸುಂದರ ವಿನ್ಯಾಸದೊಂದಿಗೆ 'ಬೌಧಾಯನೀಯ ನಿತ್ಯಕರ್ಮ' ಎಂಬ ಗ್ರಂಥವನ್ನು ಪ್ರಕಟಿಸಲಾಗಿದೆ. ಇದರ ಬೆಲೆ ರೂ. 100-00. ಪ್ರಸ್ತುತ ಈ ಗ್ರಂಥಕ್ಕೆ ಎರಡನೇ ಮುದ್ರಣದ ಅವಶ್ಯಕತೆಯುಂಟಾಗಿದೆ ಎಂಬುದು ತಿಳಿದಾಗ ಆ ಗ್ರಂಥದ ಪ್ರಕಟಣೆಯಿಂದಾದ ಉಪಯುಕ್ತತೆ ಸುಸ್ಪಷ್ಟ. ನಂತರದಲ್ಲಿ ನವ ಉಪನಯನದ ವಟುಗಳಿಗೆ ಉಪಯುಕ್ತವಾಗುವ- 'ಬೌಧಾಯನೋಕ್ತ ಸಂಧ್ಯಾವಿಧಿ' ಎಂಬ ಕಿರುಹೊತ್ತಿಗೆಯನ್ನೂ, ಹಾಗೂ ಸಂಧ್ಯಾವಿಧಿಯ ಧ್ವನಿ ಸುರಳಿ (ಕ್ಯಾಸೆಟ್)ಯನ್ನೂ ಪ್ರಕಟಿಸಲಾಗಿದೆ.

ಸ್ವರ್ಣವಲ್ಲೀ ಮಠದ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸುವ 'ಸ್ವರ್ಣವಲ್ಲೀ ದರ್ಶನ' ಮತ್ತು 'ಸ್ವರ್ಣವಲ್ಲೀ ಪ್ರಕಾಶ' ಎಂಬೆರಡು ಚಿಕ್ಕ ಪುಸ್ತಕಗಳು ಈ ಹಿಂದೆಯೇ ಪ್ರಕಟವಾಗಿದೆಯಷ್ಟೇ! ಅದನ್ನು ಮೀರಿ ಭಿನ್ನರೀತಿಯಲ್ಲಿ ಸ್ವರ್ಣವಲ್ಲೀ ಚರಿತ್ರೆಯ ಗರ್ಭದೊಳಗಡೆ ತುಂಬಿರುವ ಅನೇಕ ಸಂಗತಿಗಳನ್ನು ಕಾಲಮಾನದ ನಿಖರ ಮಾಹಿತಿಯೊಂದಿಗೆ ಅಂದಂದಿನ ಧಾರ್ಮಿಕ-ಸಾಮಾಜಿಕ; ರಾಜಕೀಯದ ಸನ್ನಿವೇಶಗಳನ್ನೂ ಅನುಭವ ಗೋಳಿಸುವಂತೆ ಮಹತ್ವದ ಆಕರ-ಗ್ರಂಥವಾಗುವ ಹಾಗೆ ಅಧ್ಯಯನ ಯುಕ್ತವಾಗಿರುವ ''ಸ್ವರ್ಣವಲ್ಲೀ ಮಹಾಸಂಸ್ಥಾನ'' (ಚರಿತ್ರೆ) ಎಂಬ ವಿಸ್ತೃತ ಗ್ರಂಥವೊಂದು ಪ್ರಕಟಿಸಲ್ಪಟ್ಟಿತು. ಈ ಗ್ರಂಥವನ್ನು ಇತಿಹಾಸ ಸಂಶೋಧನೆಯ ತಜ್ಞರಲ್ಲಿ ಗಣ್ಯರಲ್ಲೊಬ್ಬರೆನಿಸಿರುವ ಡಾ|| ಎ.ಕೆ. ಶಾಸ್ತ್ರಿ ಅವರು ಸಿದ್ಧಗೊಳಿಸಿದ್ದಾರೆ. ಈ ಗ್ರಂಥದಲ್ಲಿ ಸ್ವರ್ಣವಲ್ಲೀ ಪೀಠದ ಗುರು ಪರಂಪರೆಯು

ಕಾಶಿಯಿಂದ ಪ್ರಾರಂಭಗೊಂಡು ಆಗಾಗ ಸ್ಥಳಾಂತರ-ಸ್ಥಿತ್ಯಂತರಗೊಳ್ಳುತ್ತ ಈಗಿನ ಸ್ವರ್ಣವಲ್ಲೀ ಸ್ಥಳದಲ್ಲಿ ಸ್ಥಿರಸ್ಥಾಯಿಗೊಂಡು 54ನೇ ಪೀಠದ ಗುರುಗಳವರೆಗಿನ ಮಹತ್ವದ ಸಂಗತಿಗಳನ್ನು ದಾಖಲಿಸಲಾಗಿದೆ. ಆ ಪೀಠದ ಮುಖ್ಯ ಘಟನಾವಳಿ-ಗಳೂ, ಮಠದ ಸಾಧನೆಗಳೂ ಅಭಿವೃದ್ಧಿಗಳೂ ಸಾಧಾರ ದಾಖಲೆಗಳಿಂದಲೇ ಉದ್ಧೃತಗೊಳಿಸಲ್ಪಟ್ಟಿವೆ. ಅಂದಿನ ಸ್ವಾದಿ ಅರಸರುಗಳು ಸಲ್ಲಿಸಿದ ಸೇವಾಪೋಷಣೆ, ದಾನ-ದತ್ತಿ ಮುಂತಾದ ಸಂಗತಿಗಳೂ ಸಾಧಾರ ವಿವರಿಸಲ್ಪಟ್ಟು ಐತಿಹಾಸಿಕವಾದ ಪರಿಚಯವನ್ನು ಎದುರಿಗಿಡುತ್ತದೆ. ಅದರಂತೆ ಹೈದರ, ಟಿಪ್ಪು ಹಾಗೂ ಆಂಗ್ಲರಾಳಿಕೆಯ ಕಾಲದಲ್ಲಾದ ಶ್ರೀ ಮಠದ ಸಂಗತಿಗಳೂ ಪರಿಚಯಿಸಲ್ಪಡುತ್ತವೆ. ಶ್ರೀಮಠದಲ್ಲಿಯ ಧಾರ್ಮಿಕ-ವ್ಯವಸ್ಥೆ, ಸಾಮಾಜಿಕ-ಸಂಬಂಧದ ವ್ಯವಹಾರ, ಸಾಂಸ್ಕೃತಿಕ ಸ್ಥಿತಿ-ಗತಿ, ಆಡಳಿತಾತ್ಮಕ ವ್ಯವಸ್ಥೆ ಈ ಎಲ್ಲವುಗಳೂ ಪರಿಚಯವಾಗು-ವಂತಿರುವ ಈ ಗ್ರಂಥ ಮುಂದಿನ ಚರಿತ್ರಕಾರರಿಗೆ ಅಧ್ಯಯನಕ್ಕೆ ಅವಶ್ಯವಾಗುವ ಒಂದು ಅಧಿಕೃತ (Quthentic) ಆಕರ ಗ್ರಂಥವಾಗಿದೆ ಎನ್ನಬಹುದು. ಇದರ ಬೆಲೆ ರೂ.200/-

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಪೀಠಾರೋಹಣ(1991)ಗೈದಕಾಲಕ್ಕೆ ನಿಕಟಪೂರ್ವ ಹಿರಿಯ ಗುರು ಶ್ರೀ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಸಂಸ್ಮರಣಾರ್ಥ 'ಸರ್ವಜ್ಞೇಂದ್ರ ಸರಸ್ವತೀ' ಎಂಬ ಒಂದು ಗ್ರಂಥವನ್ನು 'ಸರ್ವಜ್ಞೇಂದ್ರ ಸರಸ್ವತೀ' ಪ್ರತಿಷ್ಠಾನ-ದವರು ಹೊರತಂದಿರುವುದನ್ನು ಈಗಾಗಲೇ ವಿವರಿಸಲಾಗಿದೆ. ಆನಂತರದಲ್ಲಿ ಶ್ರೀ ಮಠದಲ್ಲಿ ಜರುಗಿದ್ದ 'ಸನಾತನ ಸಂಸ್ಕಾರಗಳು' ಎಂಬ ಗೋಷ್ಠಿಯ ಪ್ರಬಂಧ-ಗಳನ್ನೊಳಗೊಂಡ 'ಸನಾತನ ಸಂಸ್ಕಾರಗಳು' ಎಂಬ ಒಂದು ಗ್ರಂಥವೂ, 'ವಿವಾಹ ಸಂಸ್ಕಾರಗಳು' ಎಂಬ ಚಿಕ್ಕ ಹೊತ್ತಿಗೆಯೂ ಈ ಸರ್ವಜ್ಞೇಂದ್ರ ಪ್ರತಿಷ್ಠಾನದ ಮೂಲಕವೇ ಪ್ರಕಾಶಿಸಲ್ಪಟ್ಟಿತು.

ಅದೇ ರೀತಿ ಶ್ರೀಮಠದಲ್ಲಿ ಜರುಗಿದ್ದ ಲಕ್ಷ ಗಾಯತ್ರೀ ಪುನಶ್ಚರಣ ಮಹಾಯಾಗದ ಕಾಲಕ್ಕೆ ಒಂದು ಸ್ಮರಣ ಗ್ರಂಥವನ್ನು ಹೊರತರಲಾಗಿದೆ. ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಸ್ವತಃ ಭಗವದ್ಗೀತೆಯ 'ಕರ್ಮಯೋಗದ ವಿಷಯವಾಗಿ ನೀಡಿದ್ದ 'ಉಪನ್ಯಾಸ ಸಪ್ತಾಹದ' ಪ್ರವಚನ-ಗಳನ್ನು 'ಭಗವದ್ಗೀತೆ-ಅಧ್ಯಾತ್ಮಯೋಗ ಭಾಗ-1' ಎಂಬ ಹೆಸರಿನ ಗ್ರಂಥವನ್ನಾಗಿ ಪ್ರಕಟಗೊಳಿಸಲಾಗಿದೆ.

ಈಗಿನ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿಗಳವರು ಶ್ರೇಷ್ಠ ಪ್ರವಚನಕಾರರು. ಶ್ರೋತೃಗಳಿಗೆ ಮನಮುಟ್ಟುವಂತೆ ತಿಳಿಯಾದ ಭಾಷೆಯಲ್ಲಿ, ಬೋಧನಾಪ್ರದವಾಗಿ ಸಾವಿರಾರು ಧಾರ್ಮಿಕ ನೆಲೆಯ ಆಶೀರ್ವಚನ ನುಡಿಗಳನ್ನು ಕರುಣಿಸಿದ್ದಾರೆ; ನೀಡುತ್ತಲೇ ಇದ್ದಾರೆ. ಅಂಥ ಉಪನ್ಯಾಸಗಳಲ್ಲಿ (ಮೊದಮೊದಲಿನ) ಕೆಲವಷ್ಟನ್ನು ಆಯ್ದು (ಧ್ವನಿ ಸುರುಳಿಯಿಂದ) ಗ್ರಂಥ ರೂಪಕ್ಕಿಳಿಸಿ ಸ್ವರ್ಣವಲ್ಲೀ ಸುಧಾಕುಸುಮ-1, ಸ್ವರ್ಣವಲ್ಲೀ ಸುಧಾ ಕುಸುಮ-2 ಎಂಬ ಹೆಸರಿನ ಎರಡು ಕೃತಿಗಳು ಪ್ರಕಾಶಿಸಲ್ಪಟ್ಟಿವೆ. (ಪ್ರತಿಯೊಂದರ ಬೆಲೆ ರೂ.10) ಈ ಹೊರತಾಗಿ ಒಂದೆರಡು ಗ್ರಂಥಗಳೂ (ವಿವರ ಲಭ್ಯವಾಗಲಿಲ್ಲ) ಮತ್ತು 'ಸನಾತನ' ಎಂಬ ದಾಖಲಾರ್ಹ ನೆನಪಿನ ಸಂಚಿಕೆ-(ಡೆಮಿ 1/4 ಆಕಾರದ)ಯೂ ಹೊರತರಲ್ಪಟ್ಟಿದೆ. ಯಜ್ಞ ಯಾಗಾದಿಗಳಿಗೆ ಅತ್ಯವಶ್ಯ ಆಕರ-ಆಧಾರ ಗ್ರಂಥವಾಗಿರುವ, ವೈದಿಕ ವಿದ್ವಾಂಸರಿಗೆ ಅತ್ಯುಪಯುಕ್ತವಾಗಿರುವ ಗ್ರಂಥವಿದು.

ಶ್ರೀಮಠದಿಂದ ಗ್ರಂಥ ಪ್ರಕಟಣಾಕಾರ್ಯವನ್ನು ಹೆಚ್ಚು ವ್ಯವಸ್ಥಿತಗೊಳಿಸಿ ಮುನ್ನಡೆಸುವ ಧ್ಯೇಯಹೊಂದಿ ಆ ಕಾರ್ಯ ನಿರ್ವಹಣೆ ಉಸ್ತುವಾರಿಗಷ್ಟೇ ಮೀಸಲಾಗಿರುವಂತೆ ''ಶ್ರೀ ಭಗವತ್ಪಾದ ಪ್ರಕಾಶನ'' ಎಂಬ ಪ್ರಕಾಶನ ಅಂಗಸಂಸ್ಥೆಯೊಂದು 1998ರಲ್ಲಿ ನೋಂದಾಯಿಸಲ್ಪಟ್ಟಿತು. ಇದಕ್ಕಾಗಿ ಗೌರವ ಸದಸ್ಯರುಳ್ಳ ಒಂದು ಮಂಡಳಿ ರಚಿತವಾಗಿ, ಪ್ರೊ॥ ಶ್ರೀ ಪಿ.ಐ. ಹೆಗಡೆ (ಪದ್ಮನಾಭ ಈಶ್ವರ ಹೆಗಡೆ) ಶಿರಸಿ ಅವರು ಅದರ ಮುಖ್ಯ ಕಾರ್ಯದರ್ಶಿಯಾಗಿ ನಿಯುಕ್ತಗೊಂಡು, ಕೇವಲ ಶ್ರೀ ಮಠದಿಂದ ಪ್ರಕಟಿಸಬೇಕಾದ ಗ್ರಂಥಗಳ ವಿಷಯಕ್ಕಷ್ಟೇ ಮೀಸಲಾಗಿ, ನಿಯುಕ್ತವಾಗಿ ಈ ಸಂಸ್ಥೆಯು ಕಾರ್ಯನಿರ್ವಹಿಸಿದೆ. ಈ ಸಂಸ್ಥೆಯ ಪ್ರವೃತ್ತಗೊಂಡನಂತರ ಗ್ರಂಥ ಪ್ರಕಟಣಾ ಕಾರ್ಯವು ಹೆಚ್ಚು ಚುರುಕಾಗಿ ಕಾಣಿಸಿಕೊಂಡಿತು. ಶ್ರೀಗಳವರ ನಿರ್ದೇಶನಕ್ಕನುಸರಿಸಿ ಯುಕ್ತ ಗ್ರಂಥಗಳ ಸಂಪಾದನೆಯ ಹೊಣೆಯನ್ನು ಡಾ॥ ಜಿ.ಎಂ. ಹೆಗಡೆ ಧಾರವಾಡ (ಶ್ರೀಮಠದ ಶಿಷ್ಯ ಕುಟುಂಬದವರಲ್ಲೊಬ್ಬರು) ಹಾಗೂ ಶ್ರೀ ಪಿ.ಆಯ್. ಹೆಗಡೆ ಅವರಿಗೆ ನೀಡಲಾಗಿತ್ತು. (1998ರಿಂದ 2001 ಈ ಲೇಖನ ಸಿದ್ಧಗೊಳಿಸುವ ತನಕದ ಮಾಹಿತಿಯಂತೆ)

ಈ ಹಿಂದೆಯೇ ಪ್ರಕಾಶನಗೊಂಡಿದ್ದ ''ಕೃಷ್ಣಯಜುರ್ವೇದ ಸ್ವಾಹಾಕಾರ ವಿಧಿ'' ಗ್ರಂಥದ ಮುಂದುವರಿದ 2ನೇ ಭಾಗದ ಪರಿಷ್ಕೃತ ಕೃತಿಯು 450-00 ರೂ ಬೆಲೆ ಹೊಂದಿದ ಬೃಹತ್ ಗ್ರಂಥವಾಗಿ ಪ್ರಕಟಿಸಲ್ಪಟ್ಟಿತು. ಶ್ರೀಮಠದ ಆರಾಧ್ಯ ದೇವ ಲಕ್ಷ್ಮೀನರಸಿಂಹ ದೇವರ ಅರ್ಚನೆ-ಆರಾಧನೆ ಕ್ರಮವನ್ನು ಶಾಸ್ತ್ರೋಕ್ತವಾಗಿ ಒದಗಿಸುವ 'ಶ್ರೀ ಲಕ್ಷ್ಮೀನರಸಿಂಹ ಕಲ್ಪೋಕ್ತ ಪೂಜಾವಿಧಿಃ' ಎಂಬ ಮಂತ್ರ ಪುಸ್ತಕವನ್ನೂ ಹೊರತರಲಾಯಿತು.

'ಶ್ರೀ ಶಂಕರಾಚಾರ್ಯರ ಸ್ತೋತ್ರ ರತ್ನಮಾಲೆ'' ಎಂಬ ಪರಿಷ್ಕೃತ ಶುದ್ಧ ಆವೃತ್ತಿಯೊಂದು ಪ್ರಕಾಶನ ಸಂಸ್ಥೆಯ ಮೂಲಕವೇ ಪ್ರಕಾಶನಗೊಂಡು ಶ್ರೀಮಠ-ದಲ್ಲಿ ''ಶ್ರೀ ಶಂಕರಾಚಾರ್ಯ ಜಯಂತಿ' ಪ್ರಯುಕ್ತ ಜರುಗಿದ ಸಮಾರಂಭ-ವೊಂದರಲ್ಲಿ ಶ್ರೀ ಕಾಂಚಿ ಕಾಮಕೋಟಿ ಪೀಠದ ಶ್ರೀ ಶಂ.ಜ.ಗು. ಶ್ರೀ ಶ್ರೀ ಜಯೇಂದ್ರ ಸರಸ್ವತೀ ಮಹಾಸ್ವಾಮಿಗಳವರಿಂದ ಬಿಡುಗಡೆ ಹೊಂದಿ ಉತ್ತಮ ಮಾರಾಟವನ್ನೂ ಕಂಡಿತು. ಸುವಿಖ್ಯಾತ ವಿದ್ವಾಂಸ ವಾಗ್ಮಿ ಶತಾವಧಾನಿ ಆರ್. ಗಣೇಶ್ ಅವರು ರಚಿಸಿ ಕೊಟ್ಟ- ''ವಿಭೂತಿ ಪುರುಷ ವಿದ್ಯಾರಣ್ಯ'' ಎಂಬ ಕನ್ನಡ ಗ್ರಂಥವನ್ನೂ ಈ ಸಂದರ್ಭದಲ್ಲಿ ಸಂಸ್ಥೆಯಿಂದಲೇ ಮುದ್ರಿಸಿ ಪ್ರಕಟಿಸಲಾಗಿದೆ. ವಿಜಯನಗರದ ವಿದ್ಯಾರಣ್ಯ ಗುರುವರ್ಯರ ಕುರಿತು ಹೆಚ್ಚು ಅಧ್ಯಯನ ಯುಕ್ತವಾದ ಸಂಶೋಧನಾತ್ಮಕ ಸಂಗತಿಗಳನ್ನೊಳಗೊಂಡ ಗ್ರಂಥ ಇದಾಗಿದೆ.

ಈಗಿನ ಶ್ರೀಗಳವರು ಪೀಠಾರೋಹಣಗೈದ ದಶವರ್ಷಗಳ ದ್ಯೋತಕವಾಗಿ ''ಹತ್ತು ಗ್ರಂಥಗಳನ್ನು'' ಪ್ರಕಟಿಸಬೇಕೆಂದು ಶ್ರೀ ಭಗವತ್ಪಾದ ಪ್ರಕಾಶನವು ಸಂಕಲ್ಪಿಸಿ ಆ ದಿಸೆಯಲ್ಲಿ ಕಾರ್ಯೋದ್ಯುಕ್ತವಾಗಿ ಮೇಲೆ ನಮೂದಿಸಿದ ಎರಡು ಗ್ರಂಥಗಳನ್ನು ಪ್ರಕಟಿಸಿದಂತೆ - ಆ ಕಾರ್ಯ ಮುಂದುವರಿಯಲ್ಪಟ್ಟಿದೆ.

ಸುಪ್ರಸಿದ್ಧ ವಿದ್ವಾಂಸ ಲೇಖಕ ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮ ತದ್ದಲಸೆ ಬರೆದಿರುವ ಹಿರಿಯ ಗುರುಗಳಾದ ಬ್ರಹ್ಮೈಕ್ಯ 'ಶ್ರೀಮದ್ ಸರ್ವಜ್ಞೇಂದ್ರ ಸರಸ್ವತೀ ಮಹಾ ಸ್ವಾಮಿಗಳವರ ಯತಿ ಜೀವನ ವೃತ್ತಾಂತವನ್ನು ಸ್ಥೂಲವಾಗಿ ವಿವರಿಸುವ 'ಶ್ರೀ ಸರ್ವಜ್ಞೇಂದ್ರರು' ಎಂಬ ಗ್ರಂಥ; ಸಂಶೋಧಕ- ವಿದ್ವಾಂಸ ಡಾ|| ಸೂರ್ಯನಾರಾಯಣ ಭಟ್ಟ ಹಿತ್ಲಳ್ಳಿ (ಮೈಸೂರು) ಅವರು ಅಧ್ಯಯನ ಯುಕ್ತವಾಗಿ ಈ ಪೀಠದ 38ನೇ ಯತಿವರ್ಯ ಶ್ರೀಮದ್ ಬೃಹದ್ ಗಂಗಾಧರೇಂದ್ರರ ಕುರಿತು ಪರಿಚಯ ಹಾಗೂ ಅವರ ಸಾಹಿತ್ಯಕ ರಚನೆಯ ಪರಿಚಯವನ್ನೊಳಗೊಂಡು ರಚಿಸಿಕೊಟ್ಟ ''ಬೃಹದ್ ಗಂಗಾಧರೇಂದ್ರ ಸರಸ್ವತೀ'' ಎಂಬ ಗ್ರಂಥ; ವಿದ್ವಾನ್ ಶ್ರೀ ಬಾಲೀಗದ್ದೆ ತಿಮ್ಮಭಟ್ಟ ಯಲ್ಲಾಪುರ ಅವರು ಸಂಸ್ಕೃತ ಕಾವ್ಯ ಮತ್ತು ಅವರ ಸರಳ ಕನ್ನಡಾನುವಾದ ಯುತವಾಗಿ ಬರೆದಿರುವ ''ಸ್ವರ್ಣವಲ್ಲೀ ಗುರುವಂಶ ಚರಿತಮ್'' ಎಂಬ ಕನ್ನಡ ಲಿಪಿ ಗ್ರಂಥ; ಸಾಹಿತಿ, ಪತ್ರಿಕಾ ಕರ್ತ ಶ್ರೀ ನಾ.ಸು. ಭರತನ ಹಳ್ಳಿ ಅವರು ಸಂಪಾದಿಸಿ ಕೃತಿರಚನೆಗೈದ ಶ್ರೀಗಳವರ ಸಂದೇಶ ನುಡಿ'' ಎಂಬ ಶ್ರೀಮಠದ ಪ್ರಸ್ತುತ ಪೀಠಾಧೀಶ ಗುರುವರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾ ಸ್ವಾಮಿಗಳು ಸ್ವರ್ಣವಲ್ಲೀ ಪ್ರಭಾ ಮಾಸ ಪತ್ರಿಕೆಗಾಗಿ ಪ್ರತಿತಿಂಗಳೂ ನೀಡಿ ಪ್ರಕಟಗೊಂಡ 'ಸಂದೇಶ ನುಡಿ' ಎಂಬ

ಲೇಖನ ಮಾಲೆಯಿಂದ ಆಯ್ದು) ಗ್ರಂಥ ರೂಪದ ಕೃತಿ ಇದಲ್ಲದೆ 2, 3 ಮತ್ತು 4 ಮೇ 2000ರಂದು ನಡೆಸಲ್ಪಟ್ಟ ''ಶಂಕರಾಚಾರ್ಯರನ್ನು ಕುರಿತು ರಾಷ್ಟ್ರೀಯ ವಿಚಾರಸಂಕಿರಣ''ದಲ್ಲಿ ಮಂಡಿಸಲ್ಪಟ್ಟ 18 ಪ್ರಬಂಧಗಳನ್ನೊಳಗೊಂಡ, ಡಾ|| ಜಿ.ಎಂ. ಹೆಗಡೆಯವರಿಂದ ಸಂಪಾದಿಸಲ್ಪಟ್ಟ ''ಶಂಕರಾಚಾರ್ಯರ ಅದ್ವೈತ ದರ್ಶನ'' ಎಂಬ ಗ್ರಂಥ. ಹೀಗೆ ಐದು ಕೃತಿಗಳೂ ಬೇರೆ ಬೇರೆ ಮುದ್ರಣಾಲಯ-ದಿಂದ ಮುದ್ರಿತಗೊಂಡು ಏಕಕಾಲಕ್ಕೇ ಪ್ರಕಟಗೊಂಡ ವಿಶೇಷ ಕೊಡುಗೆ ನೀಡಲ್ಪಟ್ಟಿದೆ.

ಈ ಐದೂ ಗ್ರಂಥಗಳನ್ನೂ 2001ನೇ ಇಸ್ವಿ ''ಶ್ರೀ ಶಂಕರ ಜಯಂತಿ'' ಪ್ರಯುಕ್ತ ಶ್ರೀ ಮಠದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಮಾಜಿ ಮಂತ್ರಿಗಳೂ, ಆಡಳಿತ ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆಗಿರುವ ಶ್ರೀ ಹಾರ್ನಳ್ಳಿ ರಾಮಸ್ವಾಮಿಗಳವರಿಂದಲೂ, ಶ್ರೀಗಳವರ ಹಸ್ತದಿಂದಲೂ ಬಿಡುಗಡೆಗೊಳಿಸಲಾಯಿತು.

ಈ ಹೊರತಾಗಿ ಉದ್ದೇಶಿತ, ಸಂಕಲ್ಪಿತ ಗ್ರಂಥಗಳನ್ನೂ ಹೊರತರಲು ಪ್ರಕಾಶನ ಮಂಡಳಿ ಸಿದ್ಧತೆ ನಡೆಸಿರುವುದು ತಿಳಿದು ಬಂದಿದೆ.

ಶ್ರೀ ಭಗವತ್ಪಾದ ಪ್ರಕಾಶನದ ಮೂಲಕ ಶ್ರೀ ಮಠವು ಕೈಕೊಂಡಿರುವ ಸಾಹಸದ ಮತ್ತು ಮಹತ್ವದ್ದಾದ ಐತಿಹಾಸಿಕ ಪ್ರಥಮ ದಾಖಲೆಯೂ ಆಗಿರುವ ಸಾಹಿತ್ಯಕ-ಕೊಡುಗೆಯ ಕಾರ್ಯವೆಂದರೆ - ಧಾರ್ಮಿಕ, ನೈತಿಕ, ಜ್ಞಾನ ಪ್ರಸಾರಕ್ಕೆ ಮೀಸಲಾದ 'ಸ್ವರ್ಣವಲ್ಲೀ ಪ್ರಭಾ' ಎಂಬ ನಿಯತಕಾಲಿಕ ಮಾಸ ಪತ್ರಿಕೆಯನ್ನು ಹೊರತರ ತೊಡಗಿರುವುದು ಎನ್ನಬೇಕು.

ರಾಷ್ಟ್ರೀಯ ಪತ್ರಿಕಾ ಕಛೇರಿಯಿಂದ ನೋಂದಾಯಿಸಲ್ಪಟ್ಟು (ನೊ.ನಂ.ಪಿ.ಆರ್. 71973/1998) 'ಸ್ವರ್ಣವಲ್ಲೀ ಪ್ರಭಾ' ಎಂಬ ಶಿರೋನಾಮೆ ಪಡೆದು ಈ ಪತ್ರಿಕೆಯು 1998ನೇ ಇಸ್ವಿ ನವೆಂಬರ್ ತಿಂಗಳಲ್ಲಿ ಶ್ರೀ ಮಠದ ಆಶ್ರಯದಲ್ಲಿ ಜರುಗಿಸಲ್ಪಟ್ಟ 'ದಕ್ಷಿಣವಲಯ ವೇದ ಸಮ್ಮೇಳನ' ಎಂಮ ಬೃಹತ್ ಸಮಾರಂಭದಲ್ಲಿ ನ.26ನೇ ದಿನಾಂಕದಂದು ನಾಡಿನ ಗಣ್ಯಪತ್ರಿಕೆ ಸಂಯುಕ್ತ ಕರ್ನಾಟಕ''ದ ವ್ಯವಸ್ಥಾಪಕ ಸಂಪಾದಕರೂ, ಪತ್ರಿಕಾಲೋಕದ ಭೀಷ್ಮ ಎಂದು ಖ್ಯಾತಿ ಪಡೆದವರೂ ಆಗಿರುವ ಶ್ರೀ ಕೆ. ಶ್ಯಾಮರಾವ್ ಅವರಿಂದ ಬಿಡುಗಡೆ-ಗೊಂಡು ಪ್ರಥಮ ಪತ್ರಿಕೆ ಹೊರಬಂದಿತು. ಆ ಬಗ್ಗೆ ಒಂದು ಸಂಪಾದಕ ಮಂಡಳಿ ರಚಿಸಲ್ಪಟ್ಟು ಜಿಲ್ಲೆಯ ಹಿರಿಯ ಪತ್ರಿಕಾ ಕರ್ತರಲ್ಲೊಬ್ಬರೂ ಸಾಹಿತಿಗಳೂ

ಎನಿಸಿರುವ ಶ್ರೀ ನಾ.ಸು. ಭರತನ ಹಳ್ಳಿ, ಅವರು ಈ ಪತ್ರಿಕೆಯ ಪ್ರಧಾನ ಸಂಪಾದಕ ನಿರ್ವಾಹಕರಾಗಿ ನಿಯುಕ್ತಗೊಂಡು ಪ್ರತಿತಿಂಗಳೂ ಕರಾರುವಾಕ್ಕಾಗಿ ಪತ್ರಿಕೆ ಪ್ರಕಟಗೊಳ್ಳುತ್ತ ಬಂದಿದೆ. ಇದೀಗ ತನ್ನ 36ನೇ ಸಂಚಿಕೆಯೊಂದಿಗೆ 3ನೇ ವರ್ಷದ ಮೆಟ್ಟಲು ದಾಟುತ್ತಲಿದೆ. ಪತ್ರಿಕೆಯ ಪ್ರಕಾಶನ ಸಂಸ್ಥೆಯ ಪರವಾಗಿ ಕಾರ್ಯದರ್ಶಿ ಪ್ರಾಧ್ಯಾಪಕ ಶ್ರೀ ಪಿ.ಐ. ಹೆಗಡೆ ಶಿರಸಿ ಅವರು ಪ್ರಕಟಣಾ ಕಾರ್ಯದ ಹೊಣೆ ಹೊತ್ತು ಸೇವಾನಿರತರಾಗಿದ್ದಾರೆ.

ಈ ಪತ್ರಿಕೆಯು - 'ಕನ್ನಡದಲ್ಲಿರುವ ಈ ಬಗೆಯ ಧಾರ್ಮಿಕ ಪತ್ರಿಕೆಗಳಲ್ಲಿಯೇ ಸ್ವರ್ಣವಲ್ಲೀ ಪ್ರಭಾ ಉನ್ನತವಾಗಿ ಹೊರಬರುತ್ತಿದೆ'' ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಪತ್ರಿಕೆಯು ಚತುರ್ವರ್ಣ ರಂಜಿತ ಕಣ್ಮನ ಸೆಳೆಯುವ ವೈವಿಧ್ಯಮಯ ಮುಖಪುಟ ವಿನ್ಯಾಸ, ಉತ್ತಮ ಕಾಗದದ ಬಳಕೆ, ಪ್ರತಿಲೇಖನಕ್ಕೂ ಆಕರ್ಷಕ ಪುಟವಿನ್ಯಾಸ, ಅಲ್ಲಲ್ಲಿ ಧರ್ಮ ನೀತಿ ಸುಭಾಷಿತಗಳ ಬಿಡಿನುಡಿಯ ಅಲಂಕಾರಗಳನ್ನು ಹೊಂದಿರುತ್ತದಷ್ಟೇ ಅಲ್ಲ; ಒಳಗಡೆ ಪ್ರತಿ ಸಂಚಿಕೆಯೂ ತುಂಬಿ ತರುವ ಶ್ರೇಷ್ಠ ವಿಚಾರ ಪ್ರಭಾ, ವೇದ ಸಂದೇಶ, ಓದುಗರ ಪ್ರತಿಕ್ರಿಯೆಯನ್ನು ದಾಖಲಿಸುವ ಸಹ ಸ್ಪಂದನ, ಶ್ರೀಗಳವರ ದಿವ್ಯ ಸಂದೇಶ ನುಡಿ, ಉಪನಿಷತ್ ಸಂದೇಶ, ಸಂಪಾದಕೀಯ ಬರಹ, ಚಿಂತನ ಪ್ರಭಾ ಶಾಸ್ತ್ರವಿಚಾರ, ಸನಾತನ ಪ್ರಭೆ, ತತ್ವಾರ್ಥ ಚಿಂತನೆ, ಪುರಾಣ ಕಥನ, ವಿಚಾರ-ವಿಮರ್ಶೆ; ಜಿಜ್ಞಾಸೆ, ಕಾವ್ಯ ಪರಿಚಯ, ಶೃತಿಸಾರ, 'ಮನುಸ್ಮೃತಿ ಚಿಂತನೆ' (ದೀರ್ಘಧಾರಾವಾಹಿ) ಮಹಿಳಾ ವಿಚಾರ ಪ್ರಭಾ, ಯುವ ವಿಚಾರ ಪ್ರಭಾ, ಆಯುರ್ವೇದ ಶಾಸ್ತ್ರ ಶ್ರೀಮಠ ಕ್ಷೇತ್ರ ವಾರ್ತೆ ಇತ್ಯಾದಿ ವಿವಿಧ ಸ್ಥಿರ ಅಂಕಣಗಳೊಂದಿಗೆ ಓದುಗರಿಗೆ ವಿವಿಧ ವೈಚಾರಿಕ, ಜ್ಞಾನದಾಯಕ ಪೌಷ್ಟಿಕ ಆಹಾರವನ್ನು ನೀಡುತ್ತ ಬಂದಿದೆ. ಇತ್ತೀಚೆ ಶ್ರೀ ಮಠದಿಂದ ಪ್ರಾಯೋಜಿಸಲ್ಪಟ್ಟು ಜರುಗಿದ್ದ 'ಸಂವಿಧಾನದಲ್ಲಿ ಅಧ್ಯಾತ್ಮಿಕ ಅಳವಡಿಕೆ'' ಎಂಬ ವಿಚಾರ ಗೋಷ್ಠಿಯಲ್ಲಿ ಯತಿಗಳೂ, ರಾಷ್ಟ್ರೀಯ ಚಿಂತಕ ಗಣ್ಯರೂ, ರಾಜಕೀಯ ಧುರೀಣರೂ, ನ್ಯಾಯಾಧೀಶರು ಮುಂತಾಗಿ ಪ್ರಾಜ್ಞರು ಮಂಡಿಸಿದ್ದ 'ಧರ್ಮದ ಕುರಿತಾದ' ಮೌಲಿಕ ಜಿಜ್ಞಾಸೆಯೊಂದು ಲೇಖನ ಮಾಲೆಯಾಗಿ ಧಾರವಾಹಿಯಾಗಿ ಪ್ರಕಟವಾಗಿರುವುದು ಪತ್ರಿಕೆಯ ವಿಶಾಲತೆಯನ್ನು ಸಾರಿದೆ.

ಭಾರತೀಯ ಪರಂಪರೆಯ ಸತ್ವವಾಗಿರುವ 'ಧರ್ಮ'ದ ವಿಚಾರವನ್ನು ಯಾವುದೇ ಜಾತಿ-ಮತ ಪಂಥಗಳೊಂದಿಗೆ ತಳಕುಗೊಳಿಸದೇ ಆಧ್ಯಾತ್ಮಿಕ ವೈಶಾಲ್ಯತೆಯ ತಳಹದಿಯಲ್ಲೇ ನಿರೂಪಿಸುವುದು, ಬಿಂಬಿಸುವುದೂ ಪತ್ರಿಕೆ ತೋರಿ ಕೊಂಡ ವೈಶಿಷ್ಟ್ಯದಲ್ಲೊಂದು. ಧರ್ಮಾಚರಣೆಗೂ ಜೀವನವ್ಯವಹಾರ-

ವಿಧಾನಕ್ಕೂ ಸಾಂಗತ್ಯಗೊಳಿಸಿ ವಿವೇಚಿಸುವ ಸರಳ ಹಾಗೂ ವಾಚ್ಯಾಭಿರುಚಿಯುಳ್ಳ ಶೈಲಿಯ ಲೇಖನಗಳು ಓದುಗ ಪಂಡಿತವರ್ಗ ಸಾಮಾನ್ಯ ವರ್ಗ ಸುಶಿಕ್ಷಿತ ಯುವವರ್ಗ, ಮಹಿಳಾವರ್ಗಗಳ ಎಲ್ಲರಿಗೂ ಮೆಚ್ಚಿಗೆಯಾಗಿರುವುದು ದೊರೆತ ಪ್ರತಿಕ್ರಿಯೆ ಎಂಬುದು ವೇದ್ಯ.

ಪತ್ರಿಕೆಯಲ್ಲಿ ಪ್ರತಿ ತಿಂಗಳೂ ಶ್ರೀಗಳವರು ಬರೆಯುವ ಲೇಖನವಲ್ಲದೇ ಜಿಲ್ಲೆಯ ಒಳಗಿನ ಹಾಗೂ ಹೊರಗಿನ ಸುಪ್ರಸಿದ್ಧ ಗಣ್ಯ ಲೇಖಕರ ಬರಹಗಳೂ ಮೂಡಿ ಬಂದಿವೆ. ಒಟ್ಟಿನಲ್ಲಿ ಶ್ರೀ ಮಠದ ಸಾಹಿತ್ಯಕ-ಕೊಡುಗೆಯ ಇತಿಹಾಸದಲ್ಲಿ ಒಂದು ಪ್ರತ್ಯೇಕ ಮಹತ್ವದ ಸಾಧನೆಯನ್ನಾಗಿ ದಾಖಲಿಸುವಂತಾಗಿದೆ.

ಹೀಗೆ ಗ್ರಂಥ ಕೃತಿ, ನಿಯತಕಾಲಿಕ-ಪತ್ರಿಕೆಗಳ ಕೊಡುಗೆಯ ಜೊತೆಗೇ ಇತ್ತೀಚೆಗೆ ಧರ್ಮ ಪ್ರಚಾರ ಸಾಹಿತ್ಯವನ್ನು ಧ್ವನಿಸುರುಳಿಯ (ಕ್ಯಾಸೆಟ್) ಮೂಲಕವೂ ಜನತೆಗೆ ಮುಟ್ಟಿಸುವ ಪ್ರಯತ್ನವೂ ತೋರಿಕೊಂಡಿದೆ. ಈಗಾಗಲೇ 'ಗಾಯತ್ರೀ ಮಹತ್ವ; ಬೌಧಾಯನೋಕ್ತ ಸಂಧ್ಯಾವಂದನೆ' ಎಂಬೀ ಎರಡು ಧ್ವನಿ ಸುರಳಿಗಳು ಆ ಬಗೆಯ ಸಾಧನೆಗಳಾಗಿ ತೋರಿ ಕೊಂಡಿದ್ದು ಈ ಹಂಬಲ ಮುಂದುವರಿಯುತ್ತಿದೆ.

ಶ್ರೀ ಮಠವು ಈ ದಶಕದಲ್ಲಿ ತೋರಿಕೊಂಡ ಅಭೂತಪೂರ್ವ ಇನ್ನಿತರ ಹಲವು ಸಾಧನೆ ಸಿದ್ಧಿಗಳೊಂದಿಗೆ ಸಾಹಿತ್ಯಕ-ಕೊಡುಗೆಯಲ್ಲೂ ಪ್ರಕಾಶಮಾನವಾಗಿ ಹೊಳಪನ್ನು ಹೊರ ಹೊಮ್ಮಿಸಿದೆ.

❁ ❁ ❁

ಜೀವನ ಶಿಕ್ಷಣ ಅಧ್ಯಯನ ಶಿಬಿರ

ಲೇಖಕ- ಶ್ರೀ ಗಣೇಶ ಭಟ್ಟ, ಕೊಪ್ಪ
ಮಾರ್ಗದರ್ಶನ- ವಿದ್ವಾನ್ ಶಂಕರಭಟ್ಟ, ಬಾಲೀಗದ್ದೆ

ವಾರ್ಷಿಕ ಪರೀಕ್ಷೆಗಳೆಲ್ಲ ಮುಗಿದು ಇನ್ನೇನು ರಜೆಯ ದಿನಗಳು ಆರಂಭ-ವಾಗುತ್ತವೆ ಎನ್ನುವಾಗ ವಿದ್ಯಾರ್ಥಿಗಳಿಗೆಲ್ಲ ಒಂದು ರೀತಿಯ ಸಂಭ್ರಮ-ಸಂತೋಷ. ವರ್ಷವಿಡೀ ಪಠ್ಯಪುಸ್ತಕಗಳಿಗೆ ಸೀಮಿತವಾಗಿ ಕಳೆದು, ಒಂದು ರೀತಿಯ ಮಾನಸಿಕ ಒತ್ತಡಗಳಿಗೋ, ಜಾಡ್ಯಕ್ಕೋ ಒಳಗಾದ ವಿದ್ಯಾರ್ಥಿಗಳಿಗೆ, ಬೇಸಿಗೆಯ ರಜೆಯ ದಿನಗಳನ್ನು ಹಾಯಾಗಿ ಕಳೆಯುವ ಹಂಬಲ. ರಜಾ ದಿನಗಳನ್ನು ಕಳೆಯುವ ಕುರಿತು ಕಾರ್ಯಕ್ರಮಗಳ ಪಟ್ಟಿಯೇ ಸಿದ್ಧವಾಗಿರುತ್ತವೆ. ಬಂಧು-ಬಾಂಧವರ ಮನೆಗಳನ್ನು ಸುತ್ತುವುದರಿಂದ ಪ್ರಾರಂಭವಾಗಿ ಮದುವೆ-ಮುಂಜಿ-ಪ್ರವಾಸ ಮುಂತಾದ ಹಲವು ಹತ್ತು ಚಟುವಟಿಕೆಗಳ ಉತ್ಸಾಹ ವಿದ್ಯಾರ್ಥಿಗಳನ್ನು ಆವರಿಸುತ್ತವೆ.

ಮಕ್ಕಳಿಗೆ ಉತ್ಸಾಹ, ಸಂಭ್ರಮದ ಈ ಕಾಲ ಪಾಲಕರನೇಕರಿಗೆ ನುಂಗಲಾರದ ತುತ್ತು. ಒಂದು ರೀತಿಯಲ್ಲಿ ಅವರಿಗಿದು ತಲೆನೋವು ತರುವ ಕಾಲ. ಅದರಲ್ಲಿಯೂ ನಗರವಾಸಿಗಳಾದ ಪಾಲಕರಿಗೆ ಇದೊಂದು ದೊಡ್ಡ ಸಮಸ್ಯೆ. ನಗರದ ಯಾಂತ್ರಿಕ ಬದುಕು, ದುಡಿಮೆಯ ಒತ್ತಡದಿಂದಾಗಿ ಮನೆಯ ಮಕ್ಕಳನ್ನು ನಿಭಾಯಿಸುವುದು ಕಷ್ಟದ ಕೆಲಸ. ಮಕ್ಕಳನ್ನು ಮನೆಯಲ್ಲಿಯೇ ಕೂಡಿಹಾಕುವಂತೆಯೂ ಇಲ್ಲ, ಅತ್ತ ಸ್ವಚ್ಛಂಧವಾಗಿ ಹೊರಗೆ ಬಿಡುವಂತೆಯೂ ಇಲ್ಲ. ಇಂಥಹ ಸಂದಿಗ್ಧಕ್ಕೆ ಸಿಲುಕಿದ ಪಾಲಕರಿಗೆ ಒಳ್ಳೆಯ ಪರಿಹಾರವೋ ಎಂಬಂತೆ ಒದಗುವುದು ಬೇಸಿಗೆ ಶಿಬಿರ. ಬೆಂಗಳೂರಿನಂತಹ ಮಹಾನಗರಗಳಲ್ಲಿ ಇಂಥಹ ಶಿಬಿರಗಳು ಸಾಮಾನ್ಯ. ಮಾರ್ಚ-ಏಪ್ರಿಲ್ ತಿಂಗಳುಗಳು ಸಮೀಪಿಸುತ್ತಿದ್ದಂತೆ, ನಾಯಿಕೊಡೆಗಳಂತೆ ತಲೆ ಎತ್ತುತ್ತವೆ. ಕಲೆ-ವಿಜ್ಞಾನ-ಕ್ರೀಡೆ ಮುಂತಾದವುಗಳಿಗೆ ಸಂಬಂಧಿಸಿದ ಹಲವು ಶಿಬಿರಗಳು ಪ್ರಾರಂಭಗೊಳ್ಳುತ್ತವೆ. ಪ್ರಾಯೋಜಕರ ಹುಡುಕಾಟವೇ

ಮೊದಲಾದವು ನಡೆಯುವುದಿದೆ. ಕೆಲವೊಂದು ಶಿಬಿರಗಳಂತೂ ವ್ಯವಸ್ಥಾಪಕರಿಗೆ ಒಳ್ಳೆಯ ಲಾಭ ತರುವ ಉದ್ಯೋಗವಾಗಿದೆ. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯನ್ನೇ ಗಮನದಲ್ಲಿರಿಸಿಕೊಂಡ ಹಾಗೂ ಅವರಲ್ಲಿ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಜನಾ ಕೀರ್ಣಾಂ ಮನ್ಯೆ ಹುತವಪರೀತಂ ಗೃಹಮಿವ ಎಂದು ಕಾಳಿದಾಸನು ಹೇಳಿರುವಂತೆ, ನಗರದ ವಾತಾವರಣ-ವ್ಯವಹಾರವೇ ಬೆಂಕಿಬಿದ್ದ ಮನೆಯ ಸದೃಶವಾದದ್ದು.

ಅಧ್ಯಯನಕ್ಕೆ, ಅದರಲ್ಲೂ ನಮ್ಮ ಪ್ರಾಚೀನ ಪರಂಪರೆಯ ವೇದ-ವೇದಾಂಗ, ಸಂಸ್ಕೃತಿಗಳ ಅಧ್ಯಯನಕ್ಕೆ, ಪ್ರಭಾವಶಾಲಿಗಳಾದ ಕಾರಣಗಳಲ್ಲಿ ಪ್ರಶಾಂತ ಪರಿಸರವು ಮುಖ್ಯವಾದುದು. ಹಕ್ಕಿಗಳ ಚಿಲಿಪಿಲಿ ನಾದ, ಸುಂಯ್ಯೆಂದು ಬೀಸುವ ತಂಗಾಳಿ, ಮಾಮರದ ಎಲೆಗಳಲ್ಲಿ ಕೋಗಿಲೆಗಳ ಪಂಚಮದ ಇಂಚರ, ಮಂಜುಳವಾಗಿ ಪ್ರವಹಿಸುವ ನದಿಯ ಜುಳು-ಜುಳು ಧ್ವನಿ-ಇವುಗಳಿಂದ ಕೂಡಿದ ಶಾಂತ ಪರಿಸರದಲ್ಲಿನ ಗುರುಕುಲ ಶಿಕ್ಷಣ ಪದ್ಧತಿ, ಭಾರತೀಯರ ವಿಶಿಷ್ಟ ಪರಂಪರೆಗೆ ಸೇರಿದೆ. ಇಂತಹ ಸೌಮ್ಯ-ಸುಂದರತೆಯ ಪರಿಸರದಲ್ಲಿ ವರ್ಷವಿಡೀ ನಾಲ್ಕು ಗೋಡೆಗಳ ನಡುವೆ ಆಧುನಿಕ ಶಿಕ್ಷಣವನ್ನು ತಲೆಯಲ್ಲಿ ತುಂಬಿಕೊಂಡ ವಿದ್ಯಾರ್ಥಿಗಳಿಗೆ, ನಮ್ಮ ಸಂಸ್ಕೃತಿಯ ತತ್ವಗಳನ್ನು ಬೋಧಿಸಿ, ಅವರ ಜೀವನವನ್ನು ರೂಪಿಸಬಲ್ಲ ಅಧ್ಯಯನ ಶಿಬಿರವೊಂದು ಪವಿತ್ರ ತಪೋಭೂಮಿಯಲ್ಲಿ ಒಂಬತ್ತು ವರ್ಷಗಳಿಂದಲೂ ನಡೆದುಕೊಂಡುಬಂದಿರುವುದು ಅತ್ಯಂತ ಶ್ಲಾಘನೀಯ. ಅದುವೇ ಶ್ರೀಸ್ವರ್ಣವಲ್ಲೀ ಮಠದಲ್ಲಿ ನಡೆಯುವ ಜೀವನ ಶಿಕ್ಷಣ ಅಧ್ಯಯನ ಶಿಬಿರ. ಈ ಶಿಬಿರವನ್ನು ಶ್ರೀಮಠದ ಅಂಗಸಂಸ್ಥೆಯಾದ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನವು ನಡೆಸಿಕೊಂಡು ಬರುತ್ತಿದೆ.

ಅಧ್ಯಯನ ಪರಂಪರೆ, ಧಾರ್ಮಿಕ ತತ್ವಗಳು, ನೈತಿಕ ಜೀವನ ಇವುಗಳ ಪುನರುತ್ಥಾನಕ್ಕಾಗಿ ಪರಮಪೂಜ್ಯ ಸ್ವರ್ಣವಲ್ಲೀ ಪೀಠಾಧೀಶ್ವರರು ಹಗಲಿರುಳೂ ಶ್ರಮಿಸುತ್ತಿರುವುದು ಶಿಷ್ಯಕೋಟಿಗೆಲ್ಲ ಚಿರಪರಿಚಿತ. ಶ್ರೀಗಳ ಧ್ಯೇಯ-ಧೋರಣೆಗಳು, ಯೋಜನೆಗಳು, ವ್ಯಾಪಕವೂ, ಅಮೋಘವೂ, ದೂರದೃಷ್ಟಿ-ಯುಳ್ಳವೂ ಆಗಿವೆ. ಸಮಾಜದ ಇಂದಿನ ನೈತಿಕ ಅಧಃಪತನಕ್ಕೆ ಶಿಕ್ಷಣದಿಂದ ನೈತಿಕತೆ ದೂರವಾಗಿರುವುದೊಂದು ಮಹತ್ವದ ಕಾರಣವೆನ್ನುವುದನ್ನು ಅರಿತವರು ಶ್ರೀಗಳವರು. ಎಳೆಯ ವಯಸ್ಸಿನಲ್ಲಿ ದೊರೆತ ಶಿಕ್ಷಣ ಪ್ರಭಾವಗಳು ಜೀವನ-ದುದ್ದಕ್ಕೂ ಹಿಂಬಾಲಿಸುತ್ತವೆ. ಹಸಿ ಮಣ್ಣಿರುವಾಗ ಕುಡಿಕೆಯಲ್ಲಿ ಮೂಡಿಸಿದ ರೇಖಾಚಿತ್ರಗಳು ಬೆಂಕಿಯಲ್ಲಿ ಕಾಯಿಸಿ ಗಟ್ಟಿಯಾದಾಗಲೂ ಅದರಲ್ಲಿ ಸ್ಥಿರವಾಗಿ

ನಿಲ್ಲುತ್ತವಷ್ಟೇ. ಅದಕ್ಕಾಗಿ ನೈತಿಕತೆ, ಧಾರ್ಮಿಕತೆಗಳಿಂದ ಕೂಡಿದ, ಸಮಗ್ರ ಸಾರ್ಥಕ ಜೀವನವನ್ನು ರೂಪಿಸುವ ಶಿಕ್ಷಣವನ್ನು ಇಂದಿನ ಮಕ್ಕಳಿಗೆ ಸ್ವಲ್ಪಪ್ರಮಾಣದಲ್ಲಾದರೂ ನೀಡಬೇಕೆಂಬ ಘನೋದ್ದೇಶದಿಂದ ಶಿಬಿರವೆಂಬ ಶ್ರೀಗಳ ಸಾಂಸ್ಕೃತಿಕ ಕಳಕಳಿಯ ಕೂಸು 1992ನೇ ಇಸ್ವಿಯಲ್ಲಿ ಜನ್ಮ ತಾಳಿತು. ವೇದ-ಸಂಸ್ಕೃತಿಯ ತರಗತಿಗಳಲ್ಲಿ ಪ್ರಧಾನವಾಗಿ ನಡೆದರೂ, ಅದಷ್ಟಕ್ಕೇ ಸೀಮಿತವಾಗಿಲ್ಲ. ಅಂತೆಯೇ ಶಿಬಿರವನ್ನು ವೇದ ಶಿಬಿರವೆಂದು ಕರೆಯದೆ, ಜೀವನ ಶಿಕ್ಷಣ ಅಧ್ಯಯನ ಶಿಬಿರವೆಂದು ಕರೆಯಲಾಗಿದೆ. ಈ ಶಿಬಿರದ ಅವಧಿ 21 ದಿನಗಳಾಗಿದ್ದು, ಇದಕ್ಕೋಸ್ಕರ ಯಾವುದೇ ಶುಲ್ಕಗಳನ್ನು ಸ್ವೀಕರಿಸಲಾಗುವುದಿಲ್ಲ. ಶಿಬಿರಾರ್ಥಿಗಳಿಗೆ ಶಿಕ್ಷಣ, ಭೋಜನ, ವಸತಿ, ಚಿಕಿತ್ಸೆ ಎಲ್ಲವೂ ಉಚಿತ. ಶಿಬಿರ ನಡೆಯುವ ದಿನಾಂಕವನ್ನು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ, ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಶಿಬಿರದ ಸ್ವರೂಪ ಮತ್ತು ನಿಯಮಾವಳಿಯನ್ನು ಪಾಲಕರಿಗೆ ಮತ್ತು ಶಿಬಿರಾರ್ಥಿಗಳಿಗೆ ತಿಳಿಸಲಾಗುತ್ತದೆ. ಅರ್ಜಿ ಸಲ್ಲಿಸಿ ಅವಕಾಶ ಪಡೆದ ವಿದ್ಯಾರ್ಥಿಗಳು ಶಿಬಿರದ ಪೂರ್ಣ ಅವಧಿಗೆ ಇರುವುದು ಅನಿವಾರ್ಯ. ಮಧ್ಯದಲ್ಲಿ ಮನೆಗೆ ಹೋಗಲು ಅನುಮತಿಸುವುದಿಲ್ಲ. ಶಿಬಿರದ ಶಿಸ್ತು ಹಾಗೂ ಏಕರೂಪತೆಯನ್ನು ಕಾಯ್ದುಕೊಂಡು ಹೋಗುವ ದೃಷ್ಟಿಯಲ್ಲಿದೆ. ಆದರೂ ಪಾಲಕರು ಬಂದು ತಮ್ಮ ಮಕ್ಕಳ ಕುಶಲವನ್ನು ವಿಚಾರಿಸಿ ಹೋಗಬಹುದು. ಎರಡನೆಯ ಹಾಗೂ ಮೂರನೆಯ ವರ್ಷದ ವಿದ್ಯಾರ್ಥಿಗಳಿಗೆ ಅವಕಾಶವಿದ್ದು ಆಯಾ ವರ್ಷದ ಶಿಬಿರಾರ್ಥಿಗಳಿಗೆ ವೇದ ಹಾಗೂ ಸಂಸ್ಕೃತ ಪಾಠಗಳು ಭಿನ್ನವಾಗಿರುತ್ತವೆ. ಹೆಚ್ಚಾಗಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದರೂ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಶಿಕ್ಷಣದ ಉಸ್ತುವಾರಿಯನ್ನು ವಹಿಸಿದರೆ, ಮಠದ ಸಿಬ್ಬಂದಿ ವರ್ಗವು ಉಳಿದ ವ್ಯವಸ್ಥೆಯನ್ನು ಮಾಡುತ್ತದೆ. ವೇದವರ್ಗ, ಸಂಸ್ಕೃತ ಪಾಠ, ಉಪನ್ಯಾಸಗಳು, ಕ್ರೀಡೆ ಮುಂತಾಗಿ ವೈವಿಧ್ಯಮಯವಾದ ಈ ಶಿಬಿರದ ದೈನಂದಿನ ಚಟುವಟಿಕೆಗಳು ಹೀಗಿವೆ :-

ಪ್ರಾತಃ	5.00	ಘಂಟೆಗೆ		ಉತ್ಥಾನ-ಮುಖಪ್ರಕ್ಷಾಲನ
	5.15	ರಿಂದ	5.45	ಪ್ರಾತಃ ಸ್ಮರಣೆ ಹಾಗೂ ಪಂಚಾಂಗ ಶ್ರವಣ
	5.45	ರಿಂದ	6.45	ಯೋಗಾಸನ
	6.45	ರಿಂದ	8.00	ಸ್ನಾನ-ಸಂಧ್ಯಾವಂದನ
	8.00	ರಿಂದ	9.00	ಉಪಾಹಾರ
	9.00	ರಿಂದ	10.00	ವೇದ ವರ್ಗ-1
	10.00	ರಿಂದ	10.45	ಸಂಸ್ಕೃತ ವರ್ಗ

10.45	ರಿಂದ	11.45	ವೇದ ವರ್ಗ-2
11.45	ರಿಂದ	12.30	ಲೇಖನ
12.30	ರಿಂದ	3.00	ಮಾಧ್ಯಾಹ್ನಿಕ, ಭೋಜನ ಮತ್ತು ವಿರಾಮ
3.00	ರಿಂದ	4.00	ವೇದ ವರ್ಗ-3
4.00	ರಿಂದ	4.45	ಉಪನ್ಯಾಸ
4.45	ರಿಂದ	5.00	ಲಘುಪಾನೀಯ
5.00	ರಿಂದ	6.30	ಕ್ರೀಡೆಗಳು ಹಾಗೂ ಪಾಲಕರ ಭೇಟಿ
6.30	ರಿಂದ	8.30	ಸಾಯಂ ಸಂಧ್ಯಾ, ಸ್ತೋತ್ರಪಾಠ, ಗೀತಾ ಪಾಠ
8.30	ರಿಂದ	9.00	ರಾತ್ರಿ ಭೋಜನ
9.00	ರಿಂದ	10.00	ಅನೌಪಚಾರಿಕ ಕಾರ್ಯಕ್ರಮ
10.00	ಘಂಟೆಗೆ		ದೀಪ ನಿರ್ವಾಪ

ಹೀಗೆ ನಿರಂತರವಾಗಿ ಚಟುವಟಿಗೆಗಳಲ್ಲಿ ತೊಡಗಿರುವುದರಿಂದ ಶಿಬಿರಾರ್ಥಿಗಳಲ್ಲಿ ಆಲಸ್ಯವಾಗಲಿ, ಅನಾವಶ್ಯಕ ಹರಟೆಗಳಾಗಲಿ ಉದ್ಭವಿಸುವುದಿಲ್ಲ. ಏಕೆಂದರೆ, ಆಂಗ್ಲಕವಿಯೊಬ್ಬ ನುಡಿದಿರುವಂತೆ, ಕೆಲಸವಿಲ್ಲದ ಬುದ್ಧಿಯೆಂದರೆ, ಅದು ದೆವ್ವಗಳ ಕಾರ್ಯಾಗಾರವಿದ್ದಂತೆ. ಆದರೆ ಶಿಬಿರಾರ್ಥಿಗಳ ಈ ನಿರಂತರ ಕ್ರಿಯಾಶೀಲತೆಯು ಅವರಲ್ಲಿ ಉತ್ಸಾಹವನ್ನು ವರ್ಧಿಸುವುದರ ಜೊತೆ, ಸಮಯದ ಸದುಪಯೋಗವನ್ನು ನೀಡುತ್ತದೆ. ಅಲ್ಲದೇ ಇದು ಮಕ್ಕಳಲ್ಲಿ ಮನೆಯ ನೆನಪಾಗಿ ಬೇಸರ ಮೂಡಿ ಮಧ್ಯದಲ್ಲಿ ಮನೆಗೆ ಹೋಗಬೇಕೆಂಬ ಬಯಕೆಯು ಸುಳಿಯದಂತೆ ಮಾಡಿದೆ.

ವೈವಿಧ್ಯಮಯವಾದ ಈ ಶಿಬಿರದಲ್ಲಿ ಪಾಲ್ಗೊಳ್ಳುವುದು ವಿದ್ಯಾರ್ಥಿಗಳಿಗೊಂದು ಉತ್ಸವವಾದರೆ, ಶಿಬಿರದ ಕಾರ್ಯಸ್ವರೂಪವನ್ನು ಕಣ್ಣಾರೆ ನೋಡುವವರಿಗೊಂದು ವಿಶಿಷ್ಟ ಅನುಭವ. ಸಮಾನ ವಯಸ್ಸಿನ ನೂರಾರು ಮಕ್ಕಳು ಒಂದೆಡೆ ಸೇರಿದಾಗ, ಅವರ ಉತ್ಸಾಹ-ಸಂಭ್ರಮಗಳು ಹೇಳತೀರದು. ಪಾಲಕರಿಗಾದರೋ ತಮ್ಮ ಮಕ್ಕಳನ್ನು ಕಂಡಾಗ ಅಪರಿಮಿತ ಆನಂದ. ಇನ್ನೂ ಹಾಲುಗಲ್ಲದ ಹಸುಳೆಗಳು, ತ್ರಿಪುಂಡ್ರಧಾರಿಯಾಗಿ, ಉತ್ತರೀಯವನ್ನು ಧರಿಸಿ, ಸಸ್ವರವಾಗಿ ವೇದಮಂತ್ರಗಳನ್ನು ಪಠಿಸುವಾಗ ಯಾವ ವಯಸ್ಸು ತಾನೇ ಪುಳಕಿತಗೊಳ್ಳದು. ಎಲ್ಲ ಮಕ್ಕಳೂ ಸೇರಿ ಶಿಸ್ತಿನಿಂದ ಯೋಗಾಸನ ಮಾಡುವಾಗ, ಸ್ತೋತ್ರಗಳನ್ನು ಪಠಿಸುವಾಗ, ತ್ರಿಕಾಲಗಳಲ್ಲಿ ಗಾಯತ್ರಿ ಉಪಾಸನೆಯಲ್ಲಿ ತೊಡಗಿರುವಾಗ, ಆ ಬಾಲ ಬ್ರಹ್ಮಚಾರಿಗಳ ಶಿಸ್ತು, ಸೌಂದರ್ಯ, ತೇಜಸ್ಸು ಇವು ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ವಿದ್ವಾಂಸರುಗಳ ಉಪನ್ಯಾಸವನ್ನು ಕೇಳುತ್ತಾ, ಅಲ್ಲಿನ ವಿಷಯವನ್ನು ಗ್ರಹಿಸಿ,

ಟಿಪ್ಪಣಿಗಳನ್ನು ಬರೆದುಕೊಳ್ಳುತ್ತಾ, ಉಪನ್ಯಾಸಕರೊಡನೆ ಪ್ರಶ್ನೋತ್ತರಗಳಿಂದ ಸ್ಪಂದಿಸುವಾಗ ಮಕ್ಕಳಲ್ಲಿ ಅಧ್ಯಯನ ಹಾಗೂ ವಿಮರ್ಶೆ ಶಕ್ತಿಯು ಜಾಗೃತವಾದುದನ್ನು ನಾವು ಗಮನಿಸಬಹುದು. ಸ್ವತಃ ಶ್ರೀಗಳವರೇ ತಮ್ಮನ್ನುದ್ದೇಶಿಸಿ ಪ್ರವಚನ-ಗೈಯುವಾಗ ಮಕ್ಕಳಲ್ಲೇನೋ ಒಂದು ಬಗೆಯ ಕುತೂಹಲ, ಆನಂದ, ಧನ್ಯತಾ ಭಾವ ಮೂಡಿದ್ದರಲ್ಲಿ ಆಶ್ಚರ್ಯವಿಲ್ಲ. ಅದು ಶ್ರೀಗಳ ಪ್ರಭಾವ ಪೂರ್ಣ ಪ್ರವಚನದ ಪರಿಣಾಮದ ಒಂದು ಉದಾಹರಣೆ ಮಾತ್ರ.

ಇದು ಶಿಬಿರವನ್ನು ಕುರಿತು ಮಾಡುವ ವರ್ಣನೆಯಲ್ಲ. ಬದಲಾಗಿ ಶಿಬಿರಾರ್ಥಿ-ಗಳು ತಮ್ಮ ಅನುಭವವನ್ನು ವ್ಯಕ್ತಪಡಿಸಿದ ಬಗೆ. ಜೊತೆಗೆ ಪಾಲಕರು ಈ ಶಿಬಿರದಿಂದ ತುಂಬ ಪ್ರಭಾವಿತರಾಗಿದ್ದಾರೆ. ಅನೇಕರು ಶಿಬಿರದ ನಂತರವೂ ತಮ್ಮ ಮಕ್ಕಳ ದೈನಂದಿನ ಸಂಧ್ಯಾವಂದನೆ, ಯೋಗಾಸನ ಇವುಗಳನ್ನು ನೋಡಿ ತಾವು ಅದನ್ನು ಅನುಸರಿಸಿದ್ದಾರೆ.

ಕಳೆದ ಒಂಬತ್ತು ವರ್ಷಗಳಿಂದ ನಡೆಯುತ್ತಿರುವ ಈ ಶಿಬಿರಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಯಲ್ಲಾಪುರ, ಹೊನ್ನಾವರ, ಕುಮಟಾ, ಭಟ್ಕಳ, ದಾಂಡೇಲಿ, ಹಳಿಯಾಳ, ಕಾರವಾರ ಮೊದಲಾದ ಪ್ರಾಂತಗಳಿಂದ ಮಾತ್ರವಲ್ಲದೇ ಸಾಗರ, ತಾಳಗುಪ್ಪ ಮುಂತಾದ ಸ್ಥಳಗಳಿಂದಲೂ ಸೇರಿ ಸಾವಿರಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ. ಸ್ವರ್ಣವಲ್ಲಿಯ ಶ್ರೀಮಠದ ವತಿಯಿಂದ ಸೀಮೆಯ ಇತರ ಹಲವು ಸ್ಥಳಗಳಲ್ಲಿ ಶಿಬಿರಗಳು ನಡೆದಿವೆ. ಇದರ ವಿವರಗಳ ಕೋಷ್ಟಕಗಳನ್ನು ಇಲ್ಲಿ ತೋರಿಸಲಾಗಿದೆ.

ಅ.ನಂ.	ವರ್ಷ	ಸ್ಥಳ	ಶಿಬಿರಾರ್ಥಿಗಳ ಸಂಖ್ಯೆ
1.	1992 (ಮೇ)	ಶ್ರೀಮಠ	
2.	1993 (ಮೇ)	ಶ್ರೀಮಠ	
3.	1993 (ಮೇ)	ಮಲವಳ್ಳಿ	
4.	1994 (ಮೇ)	ಶ್ರೀಮಠ	
5.	1995 (ಮೇ)	ಶ್ರೀಮಠ	
6.	1995 (ಮೇ)	ಅರಳಿಮಕ್ಕಿ	
7.	1995 (ಅಕ್ಟೋಬರ್)	ಶ್ರೀಮಠ	32
8.	1995 (ಅಕ್ಟೋಬರ್)	ಸರಕುಳಿ	31

9.	1996 (ಮೇ)	ಕವಡೀಕೇರಿ	57
10.	1996 (ಮೇ)	ಸೋಮಸಾಗರ	
11.	1996 (ಮೇ)	ಸರಕುಳಿ	
12.	1997 (ಮೇ)	ಶ್ರೀಮಠ	80
13.	1998 (ಮೇ)	ಶ್ರೀಮಠ	95
14.	1999 (ಮೇ)	ಶ್ರೀಮಠ	96
15.	2000 (ಮೇ)	ಶ್ರೀಮಠ	106
16.	2001 (ಮೇ)	ಶ್ರೀಮಠ	175

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎಂಬ ಮಾತು ನಮಗೆ ತಿಳಿದದ್ದೆ. ಆದರೆ ಈ ಭವ್ಯ ಪ್ರಜೆಗಳನ್ನು ಯಾವ ರೀತಿಯ ಶಿಕ್ಷಣದಿಂದ ಬೆಳೆಸುತ್ತಿದ್ದೇವೆಂದು ನಾವು ಅವಲೋಕಿಸಬೇಕಾಗಿದೆ. ಈ ಭರತ ಭೂಮಿಯ ದಿವ್ಯ ಸಂಸ್ಕೃತಿಯ ಮಹೋಚ್ಚ ತತ್ವಗಳನ್ನು ಮಕ್ಕಳಿಗೆ ತಿಳಿಸಬೇಕು. ಆ ತತ್ವಗಳು ಜೀವನದಲ್ಲಿ ಕಾರ್ಯರೂಪವನ್ನು ತಾಳಬೇಕು. ನೈತಿಕತೆಯಿಂದ ದೂರವಾದ ತಾಂತ್ರಿಕ-ಯಾಂತ್ರಿಕ ಶಿಕ್ಷಣವು ಸತ್ಪ್ರಜೆಗಳನ್ನೆಂದೂ ನಿರ್ಮಿಸಲಾರದು. ಆ ಕಾರಣದಿಂದಲೇ ಈ ಶಿಬಿರದಲ್ಲಿ ವೇದ, ಸಂಸ್ಕೃತ, ಯೋಗಾಸನ, ಧ್ಯಾನ ಮುಂತಾದವುಗಳನ್ನು ಸೇರಿಸಿದೆ.

ಶ್ರೀಗಳವರು ತಮ್ಮ ನಿರಂತರವಾದ ಅನುಷ್ಠಾನ, ಅರ್ಚನೆ ಹತ್ತು-ಹಲವಾರು ಧಾರ್ಮಿಕ ಹಾಗೂ ಸಮಾಜೋದ್ಧಾರಕವಾದ ಕಾರ್ಯ ಯೋಜನೆಗಳ ನಡುವೆ ಈ ಶಿಬಿರಗಳನ್ನು ಕಾಳಜಿ ವಹಿಸಿ ನಡೆಸುತ್ತಿರುವುದು ಆರ್ಷ ವಿದ್ಯೆ ಮತ್ತು ಸಂಸ್ಕೃತಿಯ ಮೇಲಿನ ಅವರ ಕಳಕಳಿಯ ದ್ಯೋತಕ. ಶಿಬಿರಾರ್ಥಿಗಳನ್ನುದ್ದೇಶಿಸಿ ಶಿಬಿರದ ಆದಿ-ಮಧ್ಯಾವಸಾನಗಳಲ್ಲಿ ಅವರು ನೀಡುವ ಪ್ರವಚನಗಳನ್ನು ಕೇಳಿದವರಿಗಿದು ಸುವೇದ್ಯ.

ಒಟ್ಟಿನಲ್ಲಿ ಸ್ವರ್ಣವಲ್ಲಿಯ ಜೀವನ ಶಿಕ್ಷಣ ಅಧ್ಯಯನ ಶಿಬಿರವು ಬೇಸಿಗೆ ಶಿಬಿರಗಳಿಗೊಂದು ಆದರ್ಶ. ಅಂತೆಯೇ ಶಿಷ್ಯಕೋಟಿಯ ಹಿತವನ್ನು ಸದಾ ಹಂಬಲಿಸುತ್ತಿರುವ ಶ್ರೀಗಳ ಉದಾತ್ತ ಕಾರ್ಯಕ್ಕೊಂದು ನಿದರ್ಶನ.

ಶ್ರೀ ಗಣೇಶಾಯ ನಮಃ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಯವರು ಹಾಗೂ ವೇದಗೋಷ್ಠಿಗಳು

-ಸಾಂಬದೀಕ್ಷಿತ ಗೋಕರ್ಣ
ಶ್ರೀಮಠದ ಪುರೋಹಿತರು

ವೈದಿಕರತ್ನ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಯವರು ಪೂರ್ವಾಶ್ರಮದಲ್ಲಿ ವೈದಿಕ ಮನೆತನದವರು ಇವರ ಅಜ್ಜನವರು ಸಿಂಹಭಟ್ಟರು ಶ್ರೀಕ್ಷೇತ್ರ ಗೋಕರ್ಣದಲ್ಲಿ ಚಿತ್ರಗೆ ಸುಬ್ಬಣ್ಣಭಟ್ಟರು ನಡೆಸಿದ ಸರ್ವಾಪ್ತೋರ್ಯಾಮ-ಯಾಗದಲ್ಲಿ ನಿಡಗೋಡ ಶಂಭುಭಟ್ಟರು ಭಾವಭಾವ ಬಂದಿದ್ದರು. ಎರಡೂ ಜನರು ಒಂದೆಡೆ ಕೂತು ಭಸ್ಮದ ಪಟ್ಟಿ ಹೊಡೆದು ಅನುಷ್ಠಾನಕ್ಕೆ ಕೂತರೆಂದರೆ ವೇಳೆ ಹೋದದ್ದೇ ಗೊತ್ತಿಲ್ಲ. ಇಬ್ಬರೂ ಪುರೋಹಿತರುಗಳು ವೈದಿಕರು ವೈದಿಕಾಭಿಮಾನಿ-ಗಳು ಇದ್ದರು. ಆ ಕಾಲಕ್ಕೆ ನಾನು ಇನ್ನೂ ಚಿಕ್ಕವ. ಅವರನ್ನು ನೋಡಿದರೆ ವಿಶ್ವಾಮಿತ್ರಾದಿಗಳನ್ನು ನೋಡಿದಂತೆ ಭಾಸವಾಗುತ್ತಿತ್ತು. ಅವರ ಮಗ ಶಿವರಾಮ ಭಟ್ಟರೂ ವೈದಿಕ ಪರಂಪರೆಯನ್ನು ನಡೆಸಿಬಂದ ಕರ್ಮನಿಷ್ಠರು ಆ ದಂಪತಿಗಳಲ್ಲಿ ಪರಮೇಶ್ವರನ ಜನ್ಮ. ಬಾಲ್ಯದಲ್ಲಿಯೇ ಸ್ವರ್ಣವಲ್ಲೀ ಮಠದಲ್ಲಿ ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಯವರು ಬಹುವಾಗಿ ಬೆಳೆಸಬೇಕೆಂಬ ಆಸೆಯಿಂದ ಸ್ಥಾಪಿಸಿದ ಶ್ರೀ ರಾಜರಾಜೇಶ್ವರೀ ವೇದ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಕ್ಷೇತ್ರಗೋಕರ್ಣದ ಗಾಯತ್ರೀ ಮನೆತನದ ರಾಮಚಂದ್ರಭಟ್ಟರಿಂದ ವೇದಾಭ್ಯಾಸ. ಅವರ ಅಧ್ಯಾಪನದಿಂದಾಗಿ ವೇದಾಭ್ಯಾಸದಲ್ಲಿ ಶ್ರದ್ಧೆಯಿಂದ ವೇದಾಭ್ಯಾಸ. ನಂತರ ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ವೇದಾಂತಾಭ್ಯಾಸಮಾಡಿ ಈ ಸ್ಪರ್ಧೆಗಳಲ್ಲಿ ಬಂಗಾರದ ಪದಕಗಳನ್ನು ಕಳಿಸಿ ಮೊಳಕೆಯಲ್ಲಿಯೂ ವೃಕ್ಷ ತನ್ನ ಬಲವನ್ನು ತಿಳಿಸುವಂತೆ ಸ್ವಪ್ರತಿಭೆಯನ್ನು ಕಾಣಿಸಿದ್ದರು.

ಸನ್ಯಾಸಾಶ್ರಮ ಸ್ವೀಕಾರಕ್ಕಾಗಿ ಹಿರಿಯರನ್ನ ಗುರುಗಳನ್ನು ನಮಸ್ಕರಿಸಿ ಹುಟ್ಟಿದ ಮನೆ ನಿಡಗೋಡದಿಂದ ಭಗವಾನ್ ಶಂಕರಾಚಾರ್ಯರ ಫೋಟೋವನ್ನು ಕೈಯಲ್ಲಿ ಹಿಡಿದು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಕ್ಕುತ್ತ ಪೂರ್ವಾಶ್ರಮದ ನೆಲೆಯಿಂದ ಬಿಡಿಸಿ-ಕೊಂಡು ಮನದಲ್ಲಿ ಭವಿಷ್ಯವನ್ನು ಚಿಂತಿಸುತ್ತಲೋ ಎಂಬಂತೆ ಬರುತ್ತಿದ್ದ ಆ ರೀತಿ ಇಂದೂ ನಮ್ಮೆಲ್ಲರ ಮನದಲ್ಲಿ ಅಚ್ಚೊತ್ತಿದಂತಿದೆ. ಆ ಫೋಟೋ ಇಂದೂ ಶ್ರೀಗಳವರ ಆಸನದ ಎದುರಿಗೇ ಇದ್ದುದನ್ನು ಕಾಣಬಹುದು.

ಧೀರೋದಾತ್ತತೆ : ಸನ್ಯಾಸಾಶ್ರಮ ಸ್ವೀಕಾರದ ಮಹೋತ್ಸವ ಸಂಭ್ರಮದ ಕೊನೆಯದಿನ (2.2.91 ಅಭಿಪ್ರದಾನ) ಲಕ್ಷೋಪಲಕ್ಷ ಶಿಷ್ಯರು ನೆರೆದಿದ್ದಾರೆ. ಒಂದೆಡೆ ರಾಜಕಾರಣಿಗಳು ಇನ್ನೊಂದೆಡೆ ವೈದಿಕರು ಶಾಸ್ತ್ರವೇತ್ತರು ಮಂಡಿಸಿದ ಮಹಾಸಭೆ-ಯಲ್ಲಿ ಇಂದ್ರಸರಸ್ವತೀ ಪರಂಪರೆ ಜಗದ್ಗುರು ಶಂಕರಾಚಾರ್ಯ ಶ್ರೀ ಕಂಚೀಕಾಮ-ಕೋಟಿ ಪೀಠಾಧೀಶ್ವರ ಶ್ರೀ ಶ್ರೀ ಜಯೇಂದ್ರ ಸರಸ್ವತೀ ಸ್ವಾಮಿಯವರ ಸಮ್ಮುಖದಲ್ಲಿ ಮಾಡಿದ ಪ್ರಥಮ ಭಾಷಣದಲ್ಲಿ ಜಗದ್ಗುರುಗಳು ನಮ್ಮ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ನಾನು ಕೇವಲ ಸೀಮೆಗಳ ಅಭಿವೃದ್ಧಿಗಷ್ಟೇ ನನ್ನವಂತವೂ ಬರಾದಿಗಳನ್ನು ಇಟ್ಟಿಲ್ಲ. ಇಡೀ ಭಾರತದ ಸರ್ವಾಂಗೀಣ, ಧಾರ್ಮಿಕ, ಅಭಿವೃದ್ಧಿಯನ್ನು ಲಕ್ಷ್ಯ ಎಂದು ಹೇಳಿದ್ದು ಇನ್ನೂ ಕರ್ಣದಲ್ಲಿ ಬಡಿಯುತ್ತಿದೆ.

ಕೆಲವೇ ಕಾಲದಲ್ಲಿ ಆಡಿದಂತೆ ಮಾಡುವೆನೆಂದು ತೋರಿಸಲು ಬೇಡತೀ ಅಣೆಕಟ್ಟನ್ನು ವಿರೋಧಿಸಲು ಅಗ್ರಗಾಮಿಗಳಾಗಿದ್ದು ಹಸಿರುಸ್ವಾಮಿ ಎಂಬ ಹೊಸ ಹೆಸರನ್ನು ತಂದುಕೊಂಡರು.

ಬ್ರಾಹ್ಮಣನಾಗಿ ಜನ್ಮಕ್ಕೆ ಬಂದ ಮೇಲೆ ಅವನು ಹೆಗಡೆ ಆಗಿರಲಿ ಭಟ್ಟನಾಗಿರಲಿ, ವೇದಾಭ್ಯಾಸ, ಕೊನೆಗೆ ನಿತ್ಯವೂ ರುದ್ರಪಾರಾಯಣದಿಂದ ಮೊದಲು ಮನೆಯ ದೇವರ ಪೂಜೆ ಮಾಡಿ ಆಮೇಲೆ ದೈನಂದಿನ ವ್ಯವಹಾರ, ಈ ರೀತಿ ನಿತ್ಯವೂ ನಡೆಸಬೇಕೆಂಬುದು ಪರಮಾಚಾರ್ಯರಾದ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಯವರ ಸಂದೇಶ. ಅಲ್ಲದೇ ಗೋಕರ್ಣಕ್ಷೇತ್ರದ ವೇದಭವನ ಮಹಾವಿದ್ಯಾಲಯದಲ್ಲಿ 27-02-80. ಸಿದ್ಧಾರ್ಥಿ ಸಂ.ದ ಪುಷ್ಯಶು 12 ದಿವಸ ನಡೆದ ಅಖಿಲಭಾರತೀಯ ವೇದಶಾಸ್ತ್ರಸಮ್ಮೇಲನದ ಸಮಾರೋಪ ಭಾಷಣದಲ್ಲಿ

ಸ್ವಧರ್ಮಾಚರಣಾದೇವ ದೇವತಾನುಗ್ರಹೋಭವೇತ್ ।
ಪೂರ್ವಾಚಾರರತೈರ್ನಿತ್ಯಂ ವರ್ತಿತವ್ಯಂ ಜನೈಃ ಸದಾ ॥
ಗೋಕರ್ಣೇಶ ಮಹಾಬಲೇಶ ಕೃಪಯಾ ವೇದೈಕನಿಷ್ಠಾದ್ವಿಜಾಃ ।
ವಿಶ್ವಸ್ಮಿನ್ ಗುರುತಾಮವಾಪ್ಯ ಸತತಂ ಚಾರಿತ್ರ್ಯ ಶಿಕ್ಷಾವಿಧೌ ॥

ತಮ್ಮ ಧರ್ಮಾಚರಣೆಯಿಂದ ದೈವತಾನುಗ್ರಹವನ್ನು ಪಡೆಯುವುದರಿಂದ ಎಲ್ಲರೂ ಪೂರ್ವಾಚಾರರತರಾಗಿರಿ. ಗೋಕರ್ಣ ಮಹಾಬಲೇಶ್ವರನ ಕೃಪೆಯಿಂದಾಗಿ ಬ್ರಾಹ್ಮಣರು ವೇದೈಕನಿಷ್ಠರಾಗಿ ಜಗತ್ತಿಗೇ ಮಾರ್ಗದರ್ಶಕರಾಗಲಿ ಎಂದು ಮನುವು ಹೇಳಿದ "ಏತದ್ದೇಶ ಪ್ರಸೂತಸ್ಯ ಸಕಾಶಾದಗ್ರಜನ್ಮನಃ । ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್, ಪೃಥಿವ್ಯಾಂ ಸರ್ವಮಾನವಾಃ" ಎಂಬುದನ್ನು ಆದೇಶಿಸಿ ಹೇಳಿದ್ದಾರೆ.

ದೈವಯೋಗದಿಂದಲೇ ನಮ್ಮೆಲ್ಲರಿಗೆ ಮಾರ್ಗದರ್ಶಕರಾಗಿ ಗುರುಗಳಾಗಿ ಲಭಿಸಿದ ಇಂದಿನ ಶ್ರೀಗಳವರು ಅದನ್ನೇ ಮುಂದುವರಿಸುತ್ತಾ ವೇದ, ಸಂಸ್ಕೃತ ಅಭಿವೃದ್ಧಿಯನ್ನೇ ಮುಂದಿಟ್ಟು ಪರಮಾಚಾರ್ಯರು ಬಂಗಾರದಲ್ಲಿ ಬರೆಸಿಟ್ಟ ಶ್ರೀ ರಾಜರಾಜೇಶ್ವರೀ ಸಂಸ್ಕೃತ ಪಾಠಶಾಲೆಯನ್ನು ಮಹಾವಿದ್ಯಾಲಯವನ್ನಾಗಿಸಿ, ಸಾರ್ಥಕ ಗೊಳಿಸಿದ್ದಲ್ಲದೆ 9.2.99ರಲ್ಲಿ ವೇದವ್ಯಾಸ ಶಂಕರಾಚಾರ್ಯರ ಪುನಃ ಪ್ರತಿಷ್ಠೆ ಹಾಗೂ 29.4.99 ಉತ್ತರ ಕನ್ನಡದಲ್ಲಿ ಸಂಸ್ಕೃತ ವಾಙ್ಮಯ ಗೋಷ್ಠಿ ಮೊದಲಿಗೆ ವೇದಮಾತಾ ಗಾಯತ್ರೀಜಪಯಜ್ಞವನ್ನು 27.1.96ರಲ್ಲಿ ದೊಡ್ಡದಾಗಿ ನಡೆಸಿದ್ದಾರೆ. ಆ ಕಾಲಕ್ಕೆ 'ಋತ್ವಿಜರಿಗಾಗಿ ಋಗ್ವೇದ ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದ್ದು ನೆನಪಿದೆ.

21.11.98ರಿಂದ 29.11.99ರ ವರೆಗೆ ಶ್ರೀಮಠದಲ್ಲಿ ವೇದಗೋಷ್ಠಿಯನ್ನು ನಡೆಸಿ ಚತುರ್ವೇದ ಯಾಗ ಹಾಗೂ ಋಗ್ವೇದದಲ್ಲಿ ವೇ। ಸಾಂಬದೀಕ್ಷಿತರು ಯಜುರ್ವೇದದಲ್ಲಿ ಶ್ರೌತಿ ರಾಮಚಂದ್ರ ಘನಪಾಠಿಗಳನ್ನು ಸಾಮವೇದದಲ್ಲಿ ಅಲೇಖ ಶಿವರಾಮಭಟ್ಟರನ್ನು ಹಾಗೂ ಅನೇಕ ವೇದವಿದ್ವಾಂಸರನ್ನು ಗೌರವ ಪೂರ್ವಕ ನೇಮಿಸಲಾಗಿತ್ತು. 11.12.99ರಂದು ಗೋಕರ್ಣದಲ್ಲಿ ನಡೆದ ಕ್ಷೇತ್ರೀಯ ವೇದವಿದ್ವತ್ಸಮ್ಮೇಲನವನ್ನು ಉದ್ಘಾಟಿಸಿ ವೇದವನ್ನು ಬೆಳೆಸುವದೆಂದರೆ "ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಂ" ಎಂಬ ವೇದಾದೇಶದಂತೆ ನಡೆದುಬರಲು ಆದೇಶಿಸಿದ್ದರು.

ಅಂತೆಯೇ ಶ್ರೀಮಠದಲ್ಲಿಯೂ ಕ್ಷೇತ್ರೀಯ ವೇದವಿದ್ವತ್ಸಮ್ಮೇಲನವನ್ನು ಸಾಂದೀಪನೀ ವೇದ ವಿದ್ಯಾಪ್ರತಿಷ್ಠಾನದ ಸಹಕಾರದೊಂದಿಗೆ ನಡೆಸಿ, ಅಂದೂ ಮೂರು ವೇದಗಳ ಸಂಹಿತಾಹವನ ಅಥರ್ವ ವೇದಪಾರಾಯಣ ನಡೆಸಿದ್ದರು.

ಈ ವರ್ಷವಂತೂ ವರ್ಷದಲ್ಲಿ ವೇದಸಂಗಮನವನ್ನು ನಡೆಸಿ ಲುಪ್ತವಾಗುತ್ತಿರುವ, ಅಂದರೆ ಹಿಂದೆ ನಮ್ಮ ಬ್ರಾಹ್ಮಣರಲ್ಲಿ ಅನೇಕ ಕಡೆ ವಾರ್ಷಿಕವಾಗಿ, ನವರಾತ್ರಿ ಮುಂತಾದ ಸಮಯಗಳಲ್ಲಿ ವೇದತ್ರಯ ಪಾರಾಯಣ ಹಲವೆಡೆ ಗೃಹಸ್ಥರ ಮನೆಯಲ್ಲಿಯೂ ನಡೆಯುತ್ತಿತ್ತು. ಉದಾಹರಣೆಗಾಗಿ ಸಾಲಕೋಡ (ಹೊನ್ನಾವರ

ತಾಲೂಕು) ಯಾಜಿಗಳ ಮನೆಯಲ್ಲಿ ಮೂರೂ ವೇದ ಪಾರಾಯಣ ನೀಡುತ್ತಿದ್ದರು. ನಮ್ಮ ಹಿರಿಯರು ಅಲ್ಲಿ ಪಾರಾಯಣ ಮಾಡಿ ಬಂದ ಪವನಗಳನ್ನು ಗೋಕರ್ಣದ ದ್ವಿಭುಜ ಮಹಾಗಣಪತಿಗೆ ಕುಲದೇವರಿಗೆ ಹಾರ ಮಾಡಿಹಾಕಿಸಿದ್ದಾರೆ. 75ಕ್ಕಿಂತ ಹೆಚ್ಚು ಪವನಗಳಿವೆ. ಇಂದೂ ಆಸರಕ್ಕೆ ಸಾಲಕೋಡ ಪವನಸರವೆನ್ನುತ್ತಾರೆ. ಘಟ್ಟದ ಮೇಲೂ ಬಹಳ ಕಡೆ ವೇದಪಾರಾಯಣದ ರೂಢಿ ಇತ್ತು. ವೈದಿಕರ ಅಭಾವ, ವೇದದಲ್ಲಿ ಅಶ್ರದ್ಧೆ ಮೊದಲಾದ ಕಾರಣಗಳಿಂದ ಲುಪ್ತವಾಗಲು ಪ್ರಾರಂಭವಾಗಿ ಕೆಲಕಡೆ ನಿಂತೂಹೋಗಿತ್ತು.

ವರಾಹ ಮೂರ್ತಿ ಮುಳುಗುತ್ತಿರುವ ಭೂಮಿಯನ್ನೇ ಉದ್ಧಾರ ಮಾಡಿದಂತೆ ನವೀನ ಶಂಕರಾಚಾರ್ಯರಾದ ನಮ್ಮ ಸ್ವಾಮಿಯವರಾದ ಶ್ರೀ ಶ್ರೀ ರಾಘವೇಶ್ವರ ಭಾರತೀಸ್ವಾಮಿಯವರೂ ಶಿರ್ಶಿ ಸಿದ್ದಾಪುರ ಯಲ್ಲಾಪುರ ವಿಭಾಗಗಳಲ್ಲಿ 37 ಪಾರಾಯಣಗಳನ್ನು ಹಲವೆಡೆ ನಡೆಸಿ ವೇದದ ಮಹತಿಯನ್ನು ತಿಳಿಸಲು ಅಲ್ಲಲ್ಲಿ ಪ್ರವಚನ ನಡೆಸಿದರು.

ಕೊನೆಯಲ್ಲಿ ಶ್ರೀಮಠದಲ್ಲಿ ಸಂಹಿತಾಯಾಗಗಳನ್ನು ಋಗ್ವೇದ, ಕೃಷ್ಣಯಜುರ್ವೇದ ಶುಕ್ಲಯಜುರ್ವೇದ ಸಾಮವೇದ ಸಂಹಿತಾಯಾಗಗಳ ಪೂರ್ಣಾಹುತಿಯೊಂದಿಗೆ ವೇದಸಂಗಮಕ್ಕೆ ಮಂಗಲ ಹಾಡಿಸಿದರು.

ಅಂದು ಕೃಷ್ಣಯಜುರ್ವೇದ ಸ್ವಾಹಾಕಾರ ವಿಧಿಃ ಎರಡನೇ ಭಾಗ ಕೂಡ. ವಿದ್ವಾನ್ ಸೂರಿ ರಾಮಚಂದ್ರಶಾಸ್ತ್ರಿಗಳಿಂದ ಬಿಡುಗಡೆ ಹೊಂದಿತು. ಅನೇಕ ವಿದ್ವಾಂಸರೂ ಸನ್ಮಾನಿಸಲ್ಪಟ್ಟರು. ವೇದಸಂಗಮ ಪಾರಾಯಣ ನಡೆಯುವಲ್ಲಿ ತಾವೂ ಭೇಟಿಕೊಟ್ಟು ಅಲ್ಲಲ್ಲಿ ವೇದಗಳ ಬಗ್ಗೆ ಪ್ರವಚನ ಮಾಡಿದ್ದು ಸುವರ್ಣಾಕ್ಷರದಲ್ಲಿ ಬರೆಯುವುದೇ

''ಭೂತಂ ಭವ್ಯಂ ಭವಿಷ್ಯಂ ಚ ಸರ್ವಂ ವೇದಾತ್ ಪ್ರಸಿದ್ಧ್ಯತಿ
ನಿಃಸೃತಂ ಸರ್ವಶಾಸ್ತ್ರಂತು ವೇದ ಶಾಸ್ತ್ರಾತ್ ಸನಾತನಾತ್''

'ನಾಸ್ತಿ ವೇದಾತ್ ಪರಂ ಶಾಸ್ತ್ರಂ''

ಶ್ರೀ ಶ್ರೀ ರಾಘವೇಶ್ವರ ಸ್ವಾಮಿಗಳು, ರಾಮಚಂದ್ರಾಪುರ ಮಠ, ಇವರ ಪೀಠಾರೋಹಣ ಸಂದರ್ಭದಲ್ಲಿ ಶ್ರೀ ಶ್ರೀಗಳು.

ವೇದಸಂಗಮದಲ್ಲಿ ಶ್ರೀಶ್ರೀಗಳಿಗೆ ಸ್ವಾಗತ.

ಶ್ರೀ ಶಾಂಕರ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಶ್ರೀಶ್ರೀಗಳು. ಶ್ರೀ ಶ್ರೀಮಜ್ಜಯೇಂದ್ರ ಸರಸ್ವತೀ ಸ್ವಾಮಿಗಳು ಶ್ರೀ ಶ್ರೀಮದ್ವಿಜಯೇಂದ್ರ ಸರಸ್ವತೀ ಸ್ವಾಮಿಗಳು

ಬೇಡ್ತಿ ಯೋಜನೆಯನ್ನು ವಿರೋಧಿಸುವ ಅಭಿಯಾನದಲ್ಲಿ ಶ್ರೀಶ್ರೀಗಳ ನೇತೃತ್ವ

ಪ್ರವಾಸಕಾಲದಲ್ಲಿ ಶ್ರೀಶ್ರೀಗಳು ಪೂಜಾನಿರತರಾಗಿರುವುದು.

ಕ್ಷೇತ್ರೀಯ ವೇದಸಮ್ಮೇಲನದ ಒಂದು ದೃಶ್ಯ.

ಗಾಯತ್ರೀ ಜಪಯಜ್ಞದಲ್ಲಿ ವಿದ್ವಾಂಸರನ್ನು ಸನ್ಮಾನಿಸುವ ಸಮಾರಂಭ.

ಹಸನ್ಮುಖಿಗಳಾದ ಶ್ರೀ ಶ್ರೀಗಳು.

ಸನಾತನ ಧರ್ಮದ ದಾರಿದೀವಿಗೆ :

ಶ್ರೀ ಸ್ವರ್ಣವಲ್ಲೀ ಶ್ರೀ ಶ್ರೀಗಳವರು

-ಆರ್.ಎನ್. ಹೆಗಡೆ, ಭಂಡೀಮನೆ

ಹಿಂದು ಸನಾತನ ಧರ್ಮವು ಸತ್ಯ, ತ್ಯಾಗ, ವಿಶ್ವಭ್ರಾತೃಪ್ರೇಮ, ಭಕ್ತಿ, ಶ್ರದ್ಧೆ, ಸಜ್ಜನರ ಸಂಗ, ಗುರುಹಿರಿಯರ ಮೇಲೆ ಭಕ್ತಿ ಇರುವುದು ಮೊದಲಾದ ಸುಸಂಸ್ಕೃತಿಯ ಇಟ್ಟಿಗೆಗಳಿಂದ ಕಟ್ಟಿದ ಬುನಾದಿಯ ಮೇಲೆ ನಿಂತಿದೆ. ಈ ನೆಲಗಟ್ಟು ಭದ್ರವಾಗಿದ್ದರೆ ಮಾತ್ರ ಸಮಾಜ, ದೇಶ ಸುಖ-ಶಾಂತಿಯಿಂದ ಇರಲು ಸಾಧ್ಯ. ಈ ಸದ್ಗುಣಗಳನ್ನು ಜನರು ಪಾಲಿಸಲು ಮತ್ತು ಕಾಯ್ದುಕೊಂಡು ಬರುವಲ್ಲಿ ಭಾರತ ದೇಶದ ರುಷಿಮುನಿಗಳ ಪಾತ್ರ ಹಿರಿದು. ಹೀಗಾಗಿ ಇವತ್ತಿಗೂ ಭಾರತವು ವಿಶ್ವದ ಎಲ್ಲ ದೇಶಗಳಿಗೆ ಆಧ್ಯಾತ್ಮಿಕ ಪ್ರೇರಣೆಯಾಗಿ ಮಾರ್ಗದರ್ಶಿಯಾಗಿ ನಿಂತಿದೆ.

ಸನಾತನ ಧರ್ಮ ಪರಂಪರೆಯಲ್ಲಿ ಗುರುವಿನ ಸ್ಥಾನ ಬಹಳ ಉಚ್ಚದ್ದಾಗಿದೆ. ಯಾವುದೇ ಶುಭಕಾರ್ಯ ಮಾಡುವಾಗ ನಾವು ಗುರುಬಲ ಮತ್ತು ಗುರುಕೃಪೆ ಇರಬೇಕು ಎಂದು ಆಶಿಸುತ್ತೇವೆ. ಭಾರತದಲ್ಲಿ ಅನೇಕ ಮಠಗಳು ಸ್ಥಾಪನೆಯಾಗಿ ಅದರಲ್ಲಿ ನೆಲೆಸಿರುವ ಗುರುವರ್ಯರುಗಳು ಕಾಲದಿಂದ ಕಾಲಕ್ಕೆ ಸಮಾಜದಲ್ಲಿ ಜನಜಾಗೃತಿ ಮಾಡಿದ್ದಾರೆ. ಅಂಥವುಗಳಲ್ಲಿ ಶ್ರೀ ಸ್ವರ್ಣವಲ್ಲೀ ಮಠವೂ ಒಂದು ಮತ್ತು ಅದಕ್ಕೆ ಒಂದು ಸಾವಿರ ವರ್ಷದ ಇತಿಹಾಸವೂ ಇದೆ. ಈ ಗುರುಪೀಠಕ್ಕೆ ನಡೆದುಕೊಳ್ಳುವ 16 ಶೀಮೆಗಳ ಶಿಷ್ಯರುಗಳಿಗೆ ಧಾರ್ಮಿಕ ಕಾರ್ಯಕಟ್ಟಲೆಗಳಿಗೆ ಮಾರ್ಗದರ್ಶಕವಾಗಿ ನೆಲೆಸಿರುವ ಈ ಮಠಕ್ಕೆ ನಾನು ನನ್ನ ಅಜ್ಜ (ದಿ|| ಭಂಡೀಮನೆ ರಾಮಚಂದ್ರ ಹೆಗಡೆ)ನ ಜೊತೆ ಚಿಕ್ಕಂದಿನಿಂದಲೂ ನಾಲ್ಕು ದಶಕಗಳಿಂದಿನಿಂದಲೂ ಹೋಗುತ್ತಲೇ ಇದ್ದೇನೆ. ಆಗ ಸೋಂದಾ ಹೊಳೆಗೆ (ಶಾಲ್ಮಲಾ ನದಿ) ಸೇತುವೆ ಕೂಡಾ ಇರಲಿಲ್ಲ. ಹೊಳೆಯಲ್ಲಿ ಇಳಿದು ದಾಟಿ ಹೋಗಬೇಕಾಗಿತ್ತು. ಒಮ್ಮೆ ನಮ್ಮ ಮನೆ ಚಕ್ಕಡಿ ಗಾಡಿಯಲ್ಲಿ ಸೋಂದಾ ತೇರಿಗೂ ಹೋಗಿದ್ದುದು ನೆನಪಿಗೆ ಬರುತ್ತಿದೆ.

ಆಗ ಬ್ರಹ್ಮೀಭೂತ ಶ್ರೀ ಸ್ವರ್ಣವಲ್ಲೀ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಗಳವರಿಂದ ನನ್ನ ಅಜ್ಜನಿಗೆ ಮಂತ್ರಾಕ್ಷತೆ ಸಿಗದೇ 1-2 ದಿನ ಹೆಚ್ಚು ಮಠದಲ್ಲಿ ಉಳಿದದ್ದೂ ಇದೆ. ಆಗ ಶ್ರೀಮಠದಲ್ಲಿ ನಡೆಯುತ್ತಿದ್ದ ಆತಿಥ್ಯದ ನೆನಪು ಹಸಿರಾಗಿ ಇದೆ. ರುಚಿಕರವಾದ ಕೇಸರೀಭಾತ್, ಶಿರಾ, ಮಾವಿನ ಹಣ್ಣಿನ ಸೀಕರಣೆ (ಸೀಸನ್-ದಲ್ಲಿ) ಸವಿಯದೇ ಯಾವಾಗಲೂ ಮಠದಿಂದ ಮರಳಿದ್ದು ನೆನಪಿಲ್ಲ. ನನ್ನ ಅಜ್ಜನು ಯಾವಾಗಲೂ ಹೇಳುತ್ತಿದ್ದ ''ಮನೆವಾರಿಗೆಯವರು ಸಮಯಕ್ಕೆ ಸರಿಯಾಗಿ ಮತ್ತು ಹೇಗೆ ಆತಿಥ್ಯವನ್ನು ನೀಡಬೇಕು ಎಂಬುದನ್ನು ಮಠವನ್ನು ನೋಡಿ ಕಲಿಯಬೇಕು.'' ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಗಳವರು ಅನೇಕ ಬಾರಿ ನಮ್ಮ ಮನೆಗೂ ಬಂದಿದ್ದಾರೆ. ನಾವು ಗುರುಗಳ ಭಿಕ್ಷ ಮತ್ತು ಪಾದಪೂಜೆ ಮಾಡಿದ್ದೇವೆ. ನನ್ನ ವಿದ್ಯಾರ್ಥಿ ಜೀವನದಲ್ಲಿ ನಮ್ಮ ವಾಹನಕ್ಕೆ ನಾನೇ ಸಾರಥಿಯಾಗಿ ಶ್ರೀಗಳವರನ್ನು ಕರೆದುಕೊಂಡು ಬಂದು ವಾಪಸು ಬಿಟ್ಟಿದ್ದೇನೆ. ಅನೇಕ ಸಾರಿ ನನ್ನ ಮಾವ ದಿ|| ಕಡವೆ ಶ್ರೀಪಾದ ಹೆಗಡೆಯವರೊಡನೆಯೂ ಶ್ರೀಮಠಕ್ಕೆ ಹೋಗಿದ್ದೇನೆ. ಹೀಗೆ ನಮ್ಮ ಎರಡೂ ಕುಟುಂಬಗಳು ಮಠಕ್ಕೆ ಅನಾದಿಕಾಲದಿಂದ ನಡೆದುಕೊಂಡು ಬಂದಿರುವುದರಿಂದ ನಮಗೆ ಗುರುಕೃಪೆಯಾಗಿ ಒಳ್ಳೆಯದೇ ಆಗಿದೆಯೆಂತ ನನ್ನ ನಂಬಿಗೆ.

ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳವರು 1991ರಲ್ಲಿ ಪೀಠಾರೋಹಣ ಮಾಡಿದ ನಂತರ ನಮ್ಮ ಮನೆಗೆ ಕರೆದುಕೊಂಡು ನಾವು ಅವರ ಪಾದಪೂಜೆ ಮಾಡಿದ್ದೇವೆ. ಈಗ ಬ್ಯಾಂಕ್ ಉದ್ಯೋಗಿಯಾಗಿರುವ ನಾನು ಪರಸ್ಥಳದಲ್ಲಿದ್ದರೂ ಊರಿಗೆ ಹೋದಾಗಲೆಲ್ಲ ವರ್ಷಕ್ಕೊಮ್ಮೆಯಾದರೂ ಶ್ರೀಗುರುಪೀಠ ಮತ್ತು ಶ್ರೀಗಳವರ ದರ್ಶನಲಾಭ ಪಡೆದುಬರುತ್ತಿದ್ದೇನೆ. ಇದು ನನಗೆ ಮನಸ್ಸಿಗೆ ನೆಮ್ಮದಿ ತರುತ್ತಿದೆ.

ಹಾಗೆಯೇ 1999ರಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳವರು ಉತ್ತರ ಭಾರತದ ಪ್ರವಾಸದಲ್ಲಿರುವಾಗ ವಾಪಸ್ಸು ಬರುವಾಗ ಪುಣೆ ಕ್ಯಾಂಪ್‌ನಲ್ಲಿ ನಾನು ಮುಂಬೈಯಲ್ಲಿರುವ ನಮ್ಮ ಹವ್ಯಕ ಬಾಂಧವರಿಗೆ ಮತ್ತು ಮಠದ ಶಿಷ್ಯರಾದ ರಾಮಕ್ಷತ್ರಿಯ ಸಮಾಜದ ಭಕ್ತರಿಗೂ ಶ್ರೀಗಳವರ ದರ್ಶನ ಲಾಭ ಸಿಗುವಂತೆ ಅವಕಾಶ ಕಲ್ಪಿಸುವ ಸುಯೋಗ ನನಗೆ ಲಭಿಸಿತ್ತು. ಇದಕ್ಕಾಗಿ ನಮ್ಮ ಮುಂಬೈ ಹವ್ಯಕದಿಂದ ಶೀಘ್ರದಲ್ಲಿ ನಿರ್ಮಾಣವಾಗಲಿರುವ ಹವ್ಯಕ ನಗರ ಮನೆ ಯೋಜನೆಗೆಂದು ಖರೀದಿಸಲಾದ 20 ಎಕರೆ ಜಮೀನನ್ನು ಶ್ರೀಗಳವರ ಪಾದಧೂಳಿಯಿಂದ ಪವಿತ್ರಗೊಳಿಸುವ ಮತ್ತು ಒಂದು ಸಾಮೂಹಿಕ ಪಾದಪೂಜೆ ಕಾರ್ಯಕ್ರಮವನ್ನು ಆಯೋಜಿಸಿದವು. ಈ ನಗರದ ಜಾಗ ಮುಂಬೈಯಿಂದ 50 ಕಿ.ಮಿ. ದೂರದಲ್ಲಿ ಪುಣೆದಾರಿಯಲ್ಲಿದೆ. ಪನವೇಲ ಶಹರದಿಂದ 8 ಕಿ.ಮಿ. ದೂರದಲ್ಲಿರುವ

ಒಂದು ಕುಗ್ರಾಮದಲ್ಲಿದೆ. ಜನನಿಬಿಡ ಮುಂಬೈಯಿಂದ ಹಳ್ಳಿಯ ಜೀವನವನ್ನು ಬಯಸುವ ಹವ್ಯಕರು ಬಂಗ್ಲೆ ಕಟ್ಟಿಸುವ ಸಲುವಾಗಿ ಈ ಗ್ರಾಮವನ್ನೇ ಆಯ್ದು-ಕೊಂಡಿದ್ದಾರೆ.

ಅಂಥ ಒಂದು ಜನ ವಿರಳ ಊರಿನಲ್ಲಿ ಟೆಂಟ್ ಹಾಕಿ ಭಕ್ತರನ್ನು ಸೇರಿಸುವುದು ಎಂದರೆ ನನಗೆ ಬಹಳ ಹೆದರಿಕೆಯಾಗಿತ್ತು. ಆದರೆ ಮುಂಬೈ ಹವ್ಯಕದ ಮಾಜೀ ಅಧ್ಯಕ್ಷ ಶ್ರೀ ವಿ.ಜಿ. ಭಟ್ ಸರ್ಪಕರ್ಣೇಶ್ವರ ಕರ್ಕಿ, ಡಾ. ಎನ್.ಜಿ. ಭಟ್, ಚಿತ್ರಿಗಿ ಮತ್ತು ಡಾ. ಎನ್.ಜಿ. ಹೆಗಡೆ, ಮಾದಪ್ಪನ್, ಕರ್ಕಿ (ಈಗಿನ ಪುಣೆ ಹವ್ಯಕದ ಅಧ್ಯಕ್ಷರು) ಮತ್ತು ಅನೇಕ ಶ್ರದ್ಧಾಳುಗಳ ಸಕ್ರಿಯ ಸಹಯೋಗದಿಂದ ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆದು ಐತಿಹಾಸಿಕ ದಾಖಲೆಯಾಯಿತು. ಮತ್ತು ಈ ಕೆಳಗಿನ ಘಟನೆಗಳು ಅಚ್ಚರಿ ಪಡುವಂತೆ ಮಾಡಿದೆ.

ಬೈರುಂಬೆ ಸಣ್ಣ ಹೆಗಡೇಮನೆಯವರಾದ ಶ್ರೀ ಆರ್.ವಿ. ಹೆಗಡೆಯವರು ಲಾರ್ಸೇನ್ ಮತ್ತು ಟ್ಯೂಬೋ ಕಂಪನಿಯಲ್ಲಿ ಹಿರಿಯ ಇಂಜಿನೀಯರ್ ಇದ್ದು ಅವರ ಪನವೇಲ್ ಮನೆಯಲ್ಲಿ ಶ್ರೀಗಳವರ ವಿಶ್ರಾಂತಿಗೆ ಮತ್ತು ಪರಿವಾರದವರ ಆತಿಥ್ಯಕ್ಕೆ ಏರ್ಪಾಡು ಮಾಡಿದ್ದೆವು. ಜಾಗ ಸಣ್ಣದಾಗಿದೆಯೆಂದು ಆಲೋಚನೆ ಮಾಡುತ್ತಿರು-ವಾಗ ಅವರ ಪಕ್ಕದ ಮನೆ (ಫ್ಲಾಟ್) ಖಾಲಿ ಇದ್ದದ್ದು, ಆ ಮನೆಯವರ ಪ್ರೀತಿಯಿಂದ ನಮಗೆ ಆ ದಿನದ ಬಳಕೆಗೆ ಸಿಗುವಂತೆ ಮಾಡಿದ್ದು. ನಂತರ ಒಂದೇ ವಾರದಲ್ಲಿ ಯಾರೋ ಬಾಡಿಗೆಗೆ ಬಂದರಂತೆ. 4 ತಿಂಗಳಿನಿಂದ ಬಾಡಿಗೆದಾರರಿಗೆ ಪ್ರಯತ್ನಿಸುತ್ತಾ ಇದ್ದರೂ ಸ್ವಾಮಿಗಳು ಬಂದು ಹೋಗುವವರೆಗೆ ಯಾರೂ ಬರಲಿಲ್ಲ.

ಒಂದು ನೂರು ಭಕ್ತರನ್ನು ಕೂಡಿಸುವುದು ಕಷ್ಟ ಎನ್ನುವಾಗ ಅಪಾರ ಸಂಖ್ಯೆಯಲ್ಲಿ ಜನರು ಸೇರಿದ್ದು. ಎರಡು ಬಸ್ ಹವ್ಯಕರದ್ದು. ಎರಡು ಬಸ್ ರಾಮಕ್ಷತ್ರಿಯ ಸಮಾಜದವರದ್ದು, ಅಲ್ಲದೇ ಸ್ವಂತ ವಾಹನದಲ್ಲಿ ಬಂದವರು, ಆ ಹಳ್ಳಿಯ ಜನರು ಎಲ್ಲ ಸೇರಿ ಸಂಖ್ಯೆ 500ಕ್ಕೂ ಮಿಕ್ಕಿತ್ತು.

ಆಗಿನ ದಿನಗಳಲ್ಲಿ ಪುಣೆ-ಮುಂಬೈ ರಸ್ತೆಗೆ ಶೀಘ್ರಗತಿ (100 ಕಿ.ಮಿ. ವೇಗದ ರಸ್ತೆ) ಹೆದ್ದಾರಿ ನಿರ್ಮಿಸುವ ಕಾರ್ಯದ ಯೋಜನೆ ನಡೆಯುತ್ತಿದ್ದು, ಪುಣೆಯಿಂದ ಪನವೇಲ 150 ಕಿ.ಮಿ. ಬರಲು 5-6 ತಾಸು ಮತ್ತೆ ಕೆಲವು ಸಾರೆ ಅನಿರ್ದಿಷ್ಟ ಸಮಯವೂ ಬೇಕಾಗಿತ್ತು. ಆದರೆ ಆ ದಿನ ಶ್ರೀಗಳವರು ಕೇವಲ 3 ತಾಸಿನಲ್ಲಿ ಕ್ರಮಿಸಿ, ಕಾರ್ಯಕ್ರಮವು ನಿಗದಿತ ಸಮಯಕ್ಕೆ ಯಶಸ್ವಿಯಾಗಿ ಜರುಗಲು ಸಾಧ್ಯವಾಯಿತು.

ಇದೆಲ್ಲ ಗುರುಕೃಪೆ, ದೈವೀ ಇಚ್ಛೆ ಹೊರತೂ ಮಾನವೀಯ ಪ್ರಯತ್ನದಿಂದ ಅಲ್ಲವೆಂದು ನನ್ನ ದೃಢ ನಂಬಿಕೆ. 1978ರಲ್ಲಿ ಹಿರಿಯ ಶ್ರೀಗಳವರ ಆಶೀರ್ವಚನದ

ಧ್ವನಿಸುರುಳಿ ನಮ್ಮ ಭಂಡೀಮನೆಯಲ್ಲಿ ಮಾಡಿದಂತೆ ನಾನು 1999ರಲ್ಲಿ ಮತ್ತೆ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳವರ ಆಶೀರ್ವಚನವನ್ನು ಪನವೇಲದಲ್ಲಿ ಧ್ವನಿಸುರುಳಿ ಮಾಡಿದ್ದೇನೆ. ಯಾವಾಗಲಾದರೂ ಮನಸ್ಸಾದಾಗ ಈ ಆಶೀರ್ವಚನ-ಗಳನ್ನು ಕೇಳುತ್ತೇನೆ.

ಶ್ರೀ ಶ್ರೀ ಗಂಗಾಧರೇಂದ್ರ ಸ್ವಾಮಿಗಳವರು ಅತಿ ಚಿಕ್ಕವಯಸ್ಸಿನಲ್ಲಿ ಧಾರ್ಮಿಕವಲ್ಲದೇ ಎಲ್ಲ ಸಾಮಾಜಿಕ ವಿಷಯಗಳ ಮೇಲೂ ಅಪಾರ ಜ್ಞಾನ ಸಂಪಾದಿಸಿ, ಜನರನ್ನು ಜಾಗೃತಿಗೊಳಿಸುತ್ತಾ ಇರುವುದು ನಮಗೆ ಅತೀವ ಹೆಮ್ಮೆಯ ವಿಷಯ. ಮನೆಮನೆಗಳಲ್ಲಿ ಗಾಯತ್ರೀ ಮಂತ್ರ ಉಪಾಸನೆ, ವೇದ ಪಾರಾಯಣ, ನಿಸರ್ಗ ಚಿಕಿತ್ಸೆ, ಯೋಗಾಭ್ಯಾಸ, ಸಂಸ್ಕೃತ ಭಾಷೆಯ ಪ್ರಸಾರ, ಭಗವದ್ಗೀತೆಯ ಮೇಲೆ ಪ್ರವಚನ, ಪರಿಸರ ರಕ್ಷಣೆ ಮೊದಲಾದ ಕಾರ್ಯಕ್ರಮಗಳು ಜನಪ್ರಿಯವಾಗಿ ಭಕ್ತರನ್ನು ಸನಾತನ ಧರ್ಮದ ಕಡೆ ಎಳೆಯುತ್ತಿವೆ. ಇದು ನಮ್ಮ ಸೌಭಾಗ್ಯ.

ಪನವೇಲದಲ್ಲಿ ಆಶೀರ್ವಚನವನ್ನು ಶ್ರೀಗಳವರು ನೀಡಿದ ನಂತರ ಸ್ವಲ್ಪ ಹೊತ್ತು ಹಿಂದಿಯಲ್ಲಿಯೂ ನಿರರ್ಗಳವಾಗಿ ಮಾತನಾಡಿ ಕನ್ನಡೇತರ ಭಕ್ತವೃಂದಕ್ಕೂ ಆಶೀರ್ವಚನಾಮೃತದ ಲಾಭ ಬರುವಂತೆ ಮಾಡಿದ್ದು ನನಗೆ ಬಹಳ ಆಶ್ಚರ್ಯ-ವಾಯಿತು. ಶ್ರೀಗಳವರು ಮೊದಲನೇ ಸಾರೆ ಮುಂಬೈನ ಹತ್ತಿರದ ಹಳ್ಳಿಗೆ ಬಂದು ಕೇವಲ 4 ತಾಸು ಭಕ್ತರ ಜೊತೆ ಇದ್ದರೂ ಅವರು ಎಲ್ಲರ ಮನ ಸೆಳೆದು, ಎಲ್ಲರ ಹೃದಯದಲ್ಲಿ ನೆಲೆಸುವಂತಾಗಿದ್ದು ನಿಜವಾಗಿ ಪವಾಡವೆಂದು ಅನಿಸುತ್ತದೆ. ಇದು ನಮ್ಮಂಥ ಸಾಮಾನ್ಯರಿಗೆ ನಿಲುಕುವ ವಿಷಯವಲ್ಲ.

ಅಷ್ಟೇ ಅಲ್ಲ. ಶ್ರೀಮಠದ ಕೀರ್ತಿ ಹಳೆಯ ತಲೆಮಾರಿನಲ್ಲಿ ಕೇವಲ ಜಿಲ್ಲೆಗೆ ಸೀಮಿತವಾಗಿದ್ದು, ಈಗ ಶ್ರೀಗಳವರು ತಮ್ಮ ತೇಜಸ್ಸು, ವಾಗ್ವೈಖರಿಯಿಂದ ಭಕ್ತರನ್ನು ಆಕರ್ಷಿಸಿ ಜಿಲ್ಲೆಯ ಹೊರಗೂ ರಾಷ್ಟ್ರವ್ಯಾಪಿಯಾಗಿ ಸಾಕಷ್ಟು ಪ್ರಭಾವ ಬೀರುತ್ತಾ ಇರುವದು. ನಮಗೆಲ್ಲ ಗೌರವದ ಸಂಗತಿ. ಹೀಗೆ ವರ್ಷದಿಂದ ವರ್ಷಕ್ಕೆ ಶ್ರೀಗಳವರ ಧರ್ಮಜಾಗೃತಿ ಕಾರ್ಯಕ್ರಮಗಳು ಹೆಚ್ಚಿನ ಪ್ರಮಾಣದಲ್ಲಿ ಜರುಗುತ್ತ ಹೋಗಿ ಹೆಚ್ಚು ಭಕ್ತರನ್ನು ಆಧ್ಯಾತ್ಮಿಕತೆಗೆ ಒಯ್ಯುವಂತೆ ಆಗುವುದೆಂದು ನನ್ನ ದೃಢ ನಂಬಿಕೆ.

''ವ್ಯಸನ ರಹಿತ ಸಮಾಜ ನಿರ್ಮಾಣ''

-ಎಂ.ಎಸ್. ಹೆಗಡೆ ಹಳವಳ್ಳಿ

'ಶರೀರಮಾದ್ಯಂ ಖಲು ಧರ್ಮ ಸಾಧನಂ' ಆರೋಗ್ಯವೇ ಭಾಗ್ಯ' ಮುಂತಾದ ಉಕ್ತಿಗಳು ಶಾರೀರಿಕ ಹಾಗೂ ಮಾನಸಿಕ ಸ್ವಾಸ್ಥ್ಯದ ಮಹತ್ವವನ್ನು ಅರುಹುತ್ತವೆ. ಹಾಗಾಗಿ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಮನುಷ್ಯ ಸದಾ ಎಚ್ಚರಿಕೆಯಿಂದಿರಬೇಕು. ದೈಹಿಕ ಅನಾರೋಗ್ಯವೇ ಮಾನಸಿಕ ನೆಮ್ಮದಿ ಕೆಡಲು ಮೂಲ ಕಾರಣ. ದೇಹ ಹಾಗೂ ಮನಸ್ಸುಗಳ ಮೇಲೆ ದುಷ್ಪರಿಣಾಮ ಬೀರುವ ಹಲವಾರು ಆಕರ್ಷಣೆಗಳು ಮನುಷ್ಯನ ಜೀವನದಲ್ಲಿ ಸಹಜವಾಗಿ ಬರುತ್ತವೆ. ವಿವೇಚನೆಯಿಲ್ಲದೆ ವರ್ತಿಸಿದಾಗ ಅನಾರೋಗ್ಯದ ಹಾದಿ ತುಳಿಯಬೇಕಾದುದು ಅನಿವಾರ್ಯವಾಗುತ್ತದೆ. ಚಿಕ್ಕವಯಸ್ಸಿನಲ್ಲಿ ಮಕ್ಕಳನ್ನು ಸಹಜವಾಗಿ ಆಕರ್ಷಿಸುವ ಅನೇಕ ದುರ್ವ್ಯಸನಗಳು ಭವಿಷ್ಯ ಜೀವನದಲ್ಲಿ ಅವರು ವ್ಯಸನ ಪಡುವಂತೆ ಮಾಡುತ್ತವೆ. ಹದಿ ವಯಸ್ಸಿನವರ ಮನಸ್ಸು ಹಸಿ ಗೋಡೆ ಇದ್ದಂತೆ. ಸಹಜ ಕುತೂಹಲ, ಸಮಾನ ವಯಸ್ಕರ ಒತ್ತಾಯಗಳು ಅವರನ್ನು ದಾರಿ ತಪ್ಪಿಸಬಹುದು. ಚಿಕ್ಕ ವಯಸ್ಸಿನಲ್ಲಿಯೇ ವ್ಯಸನಗಳನ್ನು ಅಂಟಿಸಿಕೊಂಡು ಅದರ ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ ಎಂಬ ಪರಿಜ್ಞಾನವೇ ಇಲ್ಲದೇ ಬಳಲುತ್ತಿರುವ ಅನೇಕರನ್ನು ನಾವು ಸಮಾಜದಲ್ಲಿ ದಿನನಿತ್ಯ ಕಾಣುತ್ತೇವೆ. ದುಶ್ಚಟಗಳಿಂದ ಆಗಬಹುದಾದ ಭಯಂಕರ ಪರಿಣಾಮಗಳ ಬಗ್ಗೆ ಮೊದಲೇ ತಿಳಿದಿದ್ದರೆ ಅದರಿಂದ ದೂರವೇ ಉಳಿಯಬಹುದಿತ್ತು ಎಂದು ಪರಿತಪಿಸುತ್ತಿರುವವರೂ ಅನೇಕರಿದ್ದಾರೆ. ಹಾಗಾಗಿ ಸಕಾಲದಲ್ಲಿ ಈ ಕುರಿತು ಎಚ್ಚರಿಸಿ ಸರಿಯಾದ ಮಾರ್ಗದರ್ಶನ ಮಾಡುವುದು ಹಿರಿಯರ ಜವಾಬ್ದಾರಿಯಾಗಿದೆ. ಈಗಾಗಲೇ ವ್ಯಸನಿಗಳಾಗಿ ತಮ್ಮ ಜೀವವನ್ನು ನರಕವನ್ನಾಗಿಸಿಕೊಂಡವರನ್ನು ಆ ಕೂಪದಿಂದ ಹೊರತರುವುದು ಕಷ್ಟಸಾಧ್ಯ. ಇದಕ್ಕಿಂತಲೂ, ಭವಿಷ್ಯದ ಪ್ರಜೆಗಳಾಗುವ ಇಂದಿನ ಮಕ್ಕಳಿಗೆ ಈ ಕುರಿತು ತಿಳಿಹೇಳಿ ಅವರು ದುಶ್ಚಟಗಳ ದಾಸರಾಗದಂತೆ ತಡೆಯುವುದು ಸುಲಭ. ಇದೇ ವ್ಯಸನ ಮುಕ್ತ ಸಮಾಜ ನಿರ್ಮಾಣದ ಪರಿಕಲ್ಪನೆ.

ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ ಹಮ್ಮಿಕೊಂಡ ಅನೇಕ ಕಾರ್ಯಕ್ರಮಗಳಲ್ಲಿ ಇದೂ ಒಂದು. ಆರೋಗ್ಯವಂತ ಸದೃಢ ಸಮಾಜ ನಿರ್ಮಾಣವಾಗಬೇಕಾದರೆ ಅದು ದುರ್ವ್ಯಸನಗಳಿಂದ ಮುಕ್ತವಾಗಿರಬೇಕು. ಯಾವ ಸಮಾಜದಲ್ಲಿ ಬಹುಜನರ ಸಮೃದ್ಧಿ, ಆಸಕ್ತಿ, ಕುತೂಹಲ, ಸಾಮರ್ಥ್ಯ ಇವೆಲ್ಲವೂ ಅತ್ಯುನ್ನತವಾಗಿರುವವೋ ಅಲ್ಲಿಮಾತ್ರ ಪ್ರತಿಭಾವಂತರ ನೈತಿಕ ಅಥವಾ ಬೌದ್ಧಿಕ ಶಕ್ತಿಗಳು ಉನ್ನತ ಮಟ್ಟದಲ್ಲಿರಲು ಸಾಧ್ಯ. ಸಮಾಜದ ಪ್ರತಿ ವ್ಯಕ್ತಿಯೂ ದುಶ್ಚಟಗಳಿಂದಾಗುವ ಪರಿಣಾಮ ಮತ್ತು ಅವುಗಳಿಂದ ದೂರವಿರುವ ಮಾರ್ಗೋಪಾಯಗಳ ಬಗ್ಗೆ ತಿಳಿದುಕೊಂಡಾಗ ಮಾತ್ರ ವ್ಯಸನರಹಿತ ಸಮಾಜ ನಿರ್ಮಾಣ ಮಾಡಬಹುದು.

ಪ್ರತಿಷ್ಠಾನವು ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರ ಸಂಕಲ್ಪ ಹಾಗೂ ಆಭಿಲಾಷೆಯಂತೆ ಈ ಕುರಿತು ಚಿಂತನೆ ನಡೆಸಿ ಕಾರ್ಯಕ್ರಮ ರೂಪಿಸಿ ಅನುಷ್ಠಾನಕ್ಕೆ ತಂದಿದೆ.

ವ್ಯಸನಗಳಿಂದ ಮುಕ್ತವಾಗಿರುವ ಸಮಾಜದ ನಿರ್ಮಾಣ ಒಂದು ಭವ್ಯವಾದ ಕನಸು. ಅದನ್ನು ನನಸಾಗಿಸುವ ಕಾಯಕದಲ್ಲಿ ಶಿಕ್ಷಣ ತಜ್ಞರ, ಮನಃಶಾಸ್ತ್ರಜ್ಞರ ಸಮಾಜಶಾಸ್ತ್ರಜ್ಞರ ಜೊತೆ ಸಮಾಲೋಚಿಸಿ ಅವರಿಂದಲೂ ಅಮೂಲ್ಯ ಸಲಹೆ ಸೂಚನೆಗಳನ್ನು ಪಡೆಯಲಾಗಿದೆ. ಈ ಕಾರ್ಯಕ್ರಮ ರೂಪಿಸುವಲ್ಲಿ ಮುಖ್ಯವಾಗಿ ಸ್ವಾಮೀಜಿಯವರ ಹಲವು ವರ್ಷಗಳ ಚಿಂತನೆಯಿದೆ. ಮನುಷ್ಯ ದುಶ್ಚಟಗಳಿಗೆ ಬಲಿಯಾಗುವದು ಬಹುತೇಕ ತನ್ನ ಹದಿಹರಯದಲ್ಲಿ ಅದೂ ಕೂಡ ಹೆಚ್ಚಿನ ವ್ಯಾಸಂಗಕ್ಕಾಗಿ ಮನೆಯ ಹಿರಿಯರಿಂದ ದೂರ ಉಳಿಯಬೇಕಾದ ಸಂದರ್ಭದಲ್ಲಿ ಹಾಗಾಗಿ ಈ ಕಾರ್ಯಕ್ರಮವನ್ನು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಮೂರು ದಿನಗಳ ಶಿಬಿರದ ರೂಪದಲ್ಲಿ ಆಯೋಜಿಸಿ ಪ್ರತಿ ಪ್ರೌಢಶಾಲೆಯಲ್ಲಿ ಪ್ರತಿವರ್ಷ ನಡೆಸಲು ನಿರ್ಧರಿಸಲಾಗಿದೆ. ಮಕ್ಕಳ ಮನಸ್ಸಿನಲ್ಲಿ ದುಶ್ಚಟಗಳ ಕುರಿತು ಸರಿಯಾದ ತಿಳಿವಳಿಕೆಯನ್ನು ಸಕಾಲದಲ್ಲಿ ನೀಡಿದಾಗ ಮಾತ್ರ ಅವರನ್ನು ವ್ಯಸನಗಳಿಂದ ದೂರವಿಡಬಹುದು. ಅಲ್ಲದೇ ವ್ಯಸನ ರಹಿತ ಜೀವನ ನಡೆಸಲು ಅವರು ದಿನನಿತ್ಯ ಅನುಸರಿಸಬೇಕಾದ ಚಟುವಟಿಕೆಗಳ ಪಟ್ಟಿಯನ್ನು ಅವರಿಗೆ ಒದಗಿಸುವುದು ಅಗತ್ಯ. ಕೆಟ್ಟದ್ದನ್ನು ಬಿಡುವಾಗ ಒಳ್ಳೆಯದನ್ನು ಹಿಡಿದು-ಕೊಳ್ಳಬೇಕು. ಕೆಟ್ಟದ್ದರಿಂದ ದೂರವಿಡಬೇಕಾದರೆ ಅವರನ್ನು ಒಳ್ಳೆಯದರ ಸಮೀಪ ಒಯ್ಯಬೇಕು. ಆದ್ದರಿಂದ ಶಿಬಿರದಲ್ಲಿ ಎರಡು ಪ್ರಮುಖ ವಿಭಾಗಗಳು - ಡಾಕ್ಟರರುಗಳು ದುಶ್ಚಟಗಳ ಕೆಡುಕನ್ನು ಹೇಳಿದರೆ ಸ್ವಾಮೀಜಿಯವರು ಸುಖ ಜೀವನದ ಮಾರ್ಗದರ್ಶನ ಮಾಡುತ್ತಾರೆ.

ಯಾವುದೇ ದುರ್ವ್ಯಸನಗಳಿಂದಾಗುವ ದೈಹಿಕ ಪರಿಣಾಮಗಳನ್ನು ಉಳಿದವರಿಗಿಂತ ವೈದ್ಯರೇ ಚೆನ್ನಾಗಿ ನಿರೂಪಿಸಬಲ್ಲರು. ಈ ವಿಷಯವನ್ನು ವೈದ್ಯರು ಹೇಳಿದಾಗ ಮಾತ್ರ ಮಕ್ಕಳಿಗೆ ಅದರಲ್ಲಿ ಹೆಚ್ಚಿನ ವಿಶ್ವಾಸ ಮೂಡುತ್ತದೆ. ಕಾರಣ ತಂಬಾಕು ಸೇವನೆ, ಮದ್ಯಪಾನ, ಜೂಜು ಹಾಗೂ ಇತರೇ ವ್ಯಸನಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಹೇಳಲು ಉತ್ಸಾಹಿ ಅನುಭವಿ ವೈದ್ಯರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ಸಿರ್ಸಿ ಹಾಗೂ ಯಲ್ಲಾಪುರ ತಾಲೂಕುಗಳ ಅನೇಕ ಜನಪ್ರಿಯ ವೈದ್ಯರು ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಹಕರಿಸುತ್ತಿದ್ದಾರೆ. ಪ್ರತಿವರ್ಷವೂ ಎರಡು ದಿವಸ ಪ್ರೌಢಶಾಲೆಗಳಿಗೆ ಹೋಗಿ ಈ ವ್ಯಸನಗಳ ಕುರಿತು ಎರಡೆರಡು ತಾಸುಗಳ ಉಪನ್ಯಾಸ ನೀಡಿ ಮಕ್ಕಳಿಗೆ ತಿಳಿಹೇಳುತ್ತಾರೆ. ಮೊದಲನೇ ದಿನದ ಉಪನ್ಯಾಸದಲ್ಲಿ ಧೂಮಪಾನ, ಗುಟುಕಾ ಹಾಗೂ ತಂಬಾಕು ಸೇವನೆಯ ಕುರಿತು ಹಾಗೂ ಎರಡನೇ ದಿನದ ಉಪನ್ಯಾಸದಲ್ಲಿ ಮದ್ಯಪಾನ ಮತ್ತು ಜೂಜು ಮುಂತಾದ ಇತರ ವ್ಯಸನಗಳ ಕುರಿತು ಹೇಳುತ್ತಾರೆ. ಈ ಪಾಠಗಳಲ್ಲಿ ಇಂತಹ ಚಟಗಳಿಂದ ದೇಹದ ವಿವಿಧ ಅಂಗಗಳ ಮೇಲೆ ಆಗುವ ದುಷ್ಪರಿಣಾಮಗಳನ್ನು ಚಿತ್ರಪಟ ಹಾಗೂ ಮಾಡೆಲ್‌ಗಳ ಮೂಲಕ ತೋರಿಸಲಾಗುತ್ತದೆ. ದುರ್ವ್ಯಸನಗಳಿಂದ ಬರುವ ಮಾರಕರೋಗಗಳ ಕುರಿತು ಅಂತಹ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನಗಳ ಕುರಿತು ಕೌಟುಂಬಿಕ ಬವಣೆಗಳ ಕುರಿತು ಆರ್ಥಿಕ ಸಂಕಷ್ಟಗಳ ಕುರಿತು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಲಾಗುತ್ತದೆ.

ಶಿಬಿರದ ಮೂರನೇ ದಿನ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾರೆ. ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆಯೂ ಎಲ್ಲ ಶಿಬಿರಗಳಿಗೂ ಸ್ವತಃ ಭೆಟ್ಟಿ ನೀಡಿ ಮಕ್ಕಳ ಮನಮುಟ್ಟುವಂತೆ ಹಿತ ನುಡಿಗಳ ಅಮೃತ ಸಿಂಚನ ಮಾಡುತ್ತಾರೆ. ವ್ಯಸನವೆಂದರೇನು? ವ್ಯಸನಗಳ ಕುರಿತು ಪ್ರಾಚೀನ ಋಷಿಮುನಿಗಳ ಅಭಿಪ್ರಾಯಗಳೇನು? ವ್ಯಸನಿಗಳಿಗೆ ಎಂತಹ ಕಠಿಣ ಶಿಕ್ಷೆಯನ್ನು ಪ್ರಾಚೀನರು ಹೇಳಿದ್ದಾರೆ? ಎಂಬ ವಿಷಯಗಳನ್ನು ಸ್ವಾಮೀಜಿಯವರು ವಿವರಿಸುತ್ತಾರೆ. ಕಠಿಣ ಶಿಕ್ಷೆಗೆ ಅರ್ಹವಾದ ವ್ಯಸನಗಳು ಮಹಾಪರಾಧಗಳೆಂದು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುತ್ತಾರೆ.

ತಮ್ಮ ಉಪದೇಶದ ಎರಡನೇ ಭಾಗದಲ್ಲಿ ಸ್ವಾಮೀಜಿಯವರು ದುರ್ವ್ಯಸನಗಳನ್ನು ಬಿಡಬೇಕಾದರೆ ಜೀವನದಲ್ಲಿ ನಾವು ಯಾವುದನ್ನು ಹಿಡಿದುಕೊಳ್ಳಬೇಕೆಂಬ ಬಗ್ಗೆ ಬೆಳಕು ಚೆಲ್ಲುತ್ತಾರೆ. ದುಶ್ಚಟಗಳಿಗೆ ಬಲಿಯಾಗಲು ಮಾನಸಿಕ ದೌರ್ಬಲ್ಯವೇ ಕಾರಣವೆಂದು ಹೇಳಿ ಅಂತಹ ದೌರ್ಬಲ್ಯಗಳನ್ನು ಗೆಲ್ಲುವ ಮಾರ್ಗೋಪಾಯಗಳನ್ನು

ಸೂಚಿಸುತ್ತಾರೆ. ನಿಯತವಾದ ನಿತ್ಯಜೀವನ, ನಿರಂತರ ಮಾನಸಿಕ ಚಟುವಟಿಕೆ, ಸದ್ಗ್ರಂಥಗಳ ಅಧ್ಯಯನ, ಆಹಾರ ಶುದ್ಧಿ, ಸತ್ಸಂಗ, ಯೋಗಾಸನ ಮುಂತಾದ ವಿಷಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮನೋದೌರ್ಬಲ್ಯವನ್ನು ಹೋಗಲಾಡಿಸಿಕೊಳ್ಳಬೇಕೆಂದು ಉದಾಹರಣೆಗಳೊಂದಿಗೆ ವಿವರಿಸುತ್ತಾರೆ. ಮಾತೃಭಾವದಿಂದ ಸ್ತ್ರೀಯರನ್ನು ಕಾಣಬೇಕು ಮತ್ತು ಟಿ.ವಿ. ನೋಡುವುದನ್ನು ಕಡಿಮೆ ಮಾಡಬೇಕೆಂದು ಕಿವಿಮಾತನ್ನು ಕೂಡ ಹೇಳುತ್ತಾರೆ. ಈ ಎಲ್ಲ ಸಂಗತಿಗಳನ್ನು ಆಚರಣೆಯಲ್ಲಿ ತಂದರೆ ನಮಗೆ ಅರಿವಿಲ್ಲದ ಹಾಗೆ ನಾವು ಸದೃಢ ಮನಸ್ಕರಾಗಿ, ವ್ಯಸನಗಳು ನಮ್ಮ ಹತ್ತಿರವೂ ಸುಳಿಯದಂತೆ ಮಾಡಬಹುದೆಂಬ ಸತ್ಯವನ್ನು ಶಿಬಿರಾರ್ಥಿಗಳಿಗೆ ತಿಳಿಸಿ ಅವರನ್ನು ಆಶೀರ್ವದಿಸುತ್ತಾರೆ. ಎಲ್ಲ ದಿನಗಳಲ್ಲಿ ಪ್ರಶ್ನೋತ್ತರಗಳಿಗೆ ಅವಕಾಶ ಮಾಡಿಕೊಟ್ಟು ವಿದ್ಯಾರ್ಥಿಗಳ ಸಂಶಯ ನಿವಾರಣೆ ಮಾಡಲಾಗುತ್ತದೆ.

ಶಿಬಿರದ ಮೂರೂ ದಿನ ಭಜನೆ ಹಾಗೂ ಸ್ತೋತ್ರಗಳನ್ನು ಹೇಳಿಕೊಡಲಾಗುತ್ತದೆ. ಉಪನ್ಯಾಸಗಳಿಂದ ಬೇಸರ ತಲೆದೋರದಂತೆ ತಡೆಯಲು ಮತ್ತು ತಮ್ಮ ಭವಿಷ್ಯ ಜೀವನದಲ್ಲಿ ಮುಂದುವರೆಸಿಕೊಂಡು ಹೋಗಲು ಅನುಕೂಲವಾಗುವ ರೀತಿಯಲ್ಲಿ ಕೆಲವು ದೇವತಾ ಸ್ತುತಿಗಳನ್ನು ಹಾಗೂ ಭಜನೆಗಳನ್ನು ಲಯಬದ್ಧವಾಗಿ ಕಲಿಸಿ ಕೊಡಲಾಗುತ್ತದೆ. ಸಂಗೀತ ಬಲ್ಲ ಸಹೃದಯರನೇಕರ ನೆರವು ಪಡೆದು ಪ್ರತಿ ಶಿಬಿರದಲ್ಲಿಯೂ ಭಜನೆ - ಸ್ತೋತ್ರ ಪಠಣ ಆಯೋಜಿಸಲಾಗಿದೆ.

ಶಿಬಿರಾರ್ಥಿಗಳಿಗೆ ವಿ. ರಾಮಚಂದ್ರ ಭಟ್ಟ ಕೋಟೆಮನೆ ಇವರು ಬರೆದ 'ದಾರಿಗೆ ದೀವಿಗೆ' ಎಂಬ ಪುಸ್ತಕ ಮತ್ತು ದೇವತಾಸ್ತುತಿಗಳ ಇನ್ನೊಂದು ಪುಸ್ತಕವನ್ನು ಕೊಡಲಾಗುತ್ತದೆ. ಅಲ್ಲದೇ ಮೂರು ದಿನಗಳಲ್ಲಿ ವೈದ್ಯರು ಹಾಗೂ ಸ್ವಾಮೀಜಿ-ಯವರು ಮಾಡಿದ ಉಪನ್ಯಾಸಗಳ ಸಾರಾಂಶವನ್ನು ಸಹ ಮುದ್ರಿಸಿ ಕೊಡಲಾಗುತ್ತದೆ.

1997-98ನೇ ಶೈಕ್ಷಣಿಕ ವರ್ಷದಿಂದಲೇ ಈ ಕಾರ್ಯಕ್ರಮ ಸಿರ್ಸಿ ತಾಲೂಕಿನ 15 ಪ್ರೌಢಶಾಲೆಗಳಲ್ಲಿ ಅನುಷ್ಠಾನಕ್ಕೆ ಬಂದಿದೆ. ಅಜಿತ ಮನೋಚೇತನದ ಡಾ. ಗಿರಿಧರ, ಡಾ. ರಾಯ್ಸದ್, ಡಾ. ಪವಾರ ಅಲ್ಲದೇ ರೋಟರಿ ಆಸ್ಪತ್ರೆಯ ಮೂವರು ವೈದ್ಯರುಗಳು ವಿವಿಧ ಶಿಬಿರಗಳಲ್ಲಿ ಉಪನ್ಯಾಸ ನೀಡಿದ್ದಾರೆ. ಶ್ರೀನಾರಾಯಣದಾಸ ಶ್ರೀ ಶಂಕರ ಭಟ್ಟ ವಿಂಚಳ್ಳಿ ಮುಂತಾದವರು ಶಿಬಿರಗಳಲ್ಲಿ ಭಜನೆ ಹೇಳಿಕೊಡುತ್ತಾರೆ. ಸಿರ್ಸಿ ತಾಲೂಕಿನ ಶಿಬಿರ ಸಂಯೋಜಕರಾಗಿ ಶ್ರೀ ಸತೀಶ ಹೆಗಡೆ ಮತ್ತು ಅಶೋಕ ಭಟ್ಟ ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ.

1998-99ನೇ ಶೈಕ್ಷಣಿಕ ವರ್ಷದಲ್ಲಿ ಯಲ್ಲಾಪುರ ತಾಲೂಕನ್ನು ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ತರಲಾಗಿದೆ. ತಾಲೂಕಿನ 7 ಪ್ರೌಢಶಾಲೆಗಳಲ್ಲಿ ಪ್ರತಿವರ್ಷ ಶಿಬಿರಗಳು ನಡೆಯುತ್ತಿವೆ. ಡಾ. ಎಸ್.ಎನ್. ಭಟ್ಟ ಅಸ್ತಾಳ, ಡಾ. ವಿನಾಯಕ ಕಣ್ಣಿ, ಡಾ. ಜಿ.ಎನ್. ಹೆಗಡೆ, ಡಾ. ಲಕ್ಷ್ಮಿದೇವಿ, ಡಾ. ಕಿರಣ ಕುಲಕರ್ಣಿ ಮುಂತಾದವರು ಉಪನ್ಯಾಸ ನೀಡುತ್ತಾರೆ. ಶ್ರೀಮತಿ ಮುಕ್ತಾ ಶಂಕರ, ಶ್ರೀಮತಿ ಲತಾ ವಿಡಗಣಿ, ಶ್ರೀ ಆರ್.ಎಸ್. ಹೆಗಡೆ, ಶ್ರೀ ಬೆಟ್ಟಿಪಾಲ ಗಾಂವ್ಕರ, ಶ್ರೀ ಗೋಪಾಲಕೃಷ್ಣ ಭಾಗವತ ಮುಂತಾದವರು ಭಜನೆ ಹೇಳಿಕೊಡುವಲ್ಲಿ ನೆರವಾಗುತ್ತಿದ್ದಾರೆ. ತಾಲೂಕಿನ ಶಿಬಿರ ಸಂಯೋಜಕರು ಶ್ರೀ ಎಂ.ಎನ್. ಹೆಗಡೆ ಹಳವಳ್ಳಿ ಹಾಗೂ ಶ್ರೀ ಶಂಕರ ಭಟ್ಟ ತಾರಿಮಕ್ಕಿ. ಸಿದ್ದಾಪುರ ತಾಲೂಕಿನ ಒಂದು ಪ್ರೌಢಶಾಲೆಯಲ್ಲಿ ಶಿಬಿರ ನಡೆಸಲಾಗಿದೆ. ಘಟ್ಟದ ಮೇಲಿನ ಎಲ್ಲ ತಾಲೂಕುಗಳ ಸಂಚಾಲಕರಾಗಿ ಶ್ರೀ ಎಲ್.ಎಂ. ಹೆಗಡೆ ಗೋಳಿಕೊಪ್ಪ ಕಾರ್ಯನಿರತ-ರಾಗಿದ್ದಾರೆ.

ಶಿಬಿರಗಳು ನಡೆಯುತ್ತಿರುವ ಊರುಗಳಲ್ಲಿ ಈ ಕುರಿತು ಸದಭಿಪ್ರಾಯ ವ್ಯಕ್ತವಾಗಿದೆ. ಆ ಊರುಗಳಲ್ಲಿ ಗುಟುಕಾ ಮಾರಾಟ ಗಣನೀಯ ಪ್ರಮಾಣದಲ್ಲಿ ಇಳಿದ ಬಗ್ಗೆ ತಿಳಿದು ಬಂದಿದೆ. ಇದರಿಂದ ಈ ಕಾರ್ಯಕ್ರಮದ ಬೇಡಿಕೆಯೂ ಹೆಚ್ಚಾಗಿದೆ. ಅಪೇಕ್ಷಿತ ಪರಿಣಾಮ ಸಿಗಬೇಕಾದರೆ ಇನ್ನೂ ವ್ಯಾಪಕಾಗಿ ಈ ಕಾರ್ಯಕ್ರಮ ಅನುಷ್ಠಾನಗೊಳ್ಳಬೇಕು. ಸ್ವಾಮೀಜಿಯವರ ಸತ್ ಸಂಕಲ್ಪದಂತೆ ಜಿಲ್ಲೆಯ ಎಲ್ಲ ತಾಲೂಕುಗಳ ಪ್ರತಿಯೊಂದು ಪ್ರೌಢಶಾಲೆ ಮತ್ತು ಕಿರಿಯ ಮಹಾವಿದ್ಯಾಲಯ-ಗಳಲ್ಲಿಯೂ ಶಿಬಿರ ನಡೆಯುವಂತಾದರೆ ವ್ಯಸನ ರಹಿತವಾದ ಸಮಾಜವನ್ನು ಕಾಣುವ ದಿನಗಳು ದೂರವಿರಲಾರವು. ಅಂತಹ ಸುದಿನಗಳನ್ನು ನಿರೀಕ್ಷಿಸುವ ನಾವೆಲ್ಲರೂ ಕಾರ್ಯಕ್ರಮದ ಅನುಷ್ಠಾನದಲ್ಲಿ ನಮ್ಮ ಕೈಜೋಡಿಸೋಣ.

❀ ❀ ❀

ಶ್ರೀ ಗುರುಗಣಪತೇ ನಮಃ

ಧರ್ಮಸಾಮ್ರಾಜ್ಯದ ನೇತಾರರು ಸಮಾಜ ಸಂಘಟನಾ ಚತುರರು ಶಿಸ್ತಿನ ಮೂರ್ತಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನಂ

-ಡಾ. ಎನ್.ಜಿ. ಭಟ್ಟ ಚಿತ್ರಿಗಿ, ಮುಂಬೈ

1999 ಅಕ್ಟೋಬರದಲ್ಲಿ ನನಗೆ ಅನಿರೀಕ್ಷಿತವಾಗಿ ಒದಗಿಬಂದ ಒಂದು ಸುಸಂದರ್ಭ. ನನ್ನ ಅಣ್ಣ ಶ್ರೀ ಆರ್.ಜಿ. ಭಟ್ಟ ಚಿತ್ರಿಗಿಯವರು ಮಂಗಳೂರಿನಿಂದ ನನಗೆ ಫೋನಾಯಿಸಿ ಬರುವ ವಾರ ನಾವಿಬ್ಬರೂ ಕೂಡಿಕೊಂಡು ಶ್ರೀ ಸ್ವರ್ಣವಲ್ಲಿ ಸಂಸ್ಥಾನ ಶ್ರೀ ಗಂಗಾಧರೇಂದ್ರ ಸ್ವಾಮೀಜಿಯವರ ಉತ್ತರ ಹಿಂದುಸ್ಥಾನದ ಧರ್ಮಯಾತ್ರೆಯಲ್ಲಿ ಭಾಗವಹಿಸಲು ಶ್ರೀ ಸ್ವಾಮೀಜಿಯವರಿಂದಲೇ ಪರವಾನಗಿ ಮಂತ್ರಾಕ್ಷತೆ ಪಡೆದು ಬಂದಿರುವುದಾಗಿ ತಿಳಿಸಿದರು. ಯಾತ್ರೆಯ ಪೂರ್ವಭಾವಿ ಸಿದ್ಧತೆಯಾದ ನಂತರವು ಕೊನೆಯ ಘಳಿಗೆಯಲ್ಲಿ ನಮ್ಮಿಬ್ಬರನ್ನು ಸೇರಿಸಿಕೊಂಡರು. ಉತ್ತರ ಹಿಂದುಸ್ಥಾನದ ತೀರ್ಥಯಾತ್ರೆ ನಮ್ಮಿಬ್ಬರ ಬಹುದಿನಗಳ ಕನಸು. ಈ ಸುಸಂದರ್ಭ ಆಕಸ್ಮಿಕವಾಗಿ ಶ್ರೀಗಳವರ ಇಚ್ಛಾಶೀರ್ವಾದ ರೂಪದಿಂದ ಒದಗಿ ಬಂದದ್ದು ನಮ್ಮಿಬ್ಬರ ಪೂರ್ವಜನ್ಮದ ಪುಣ್ಯವಲ್ಲದೇ ನಮ್ಮ ಗುರುಹಿರಿಯರ ವಿಶೇಷವಾಗಿ ನಮ್ಮ ತೀರ್ಥರೂಪಿ ದಿವಂಗತ ಚಿತ್ರಿಗಿ ಗಣೇಶ ಭಟ್ಟರ ಆಶೀರ್ವಾದ ಎನ್ನುವುದು ನಿಸ್ಸಂಶಯ. ನಾನಂತೂ ಆಗಷ್ಟೇ ಶಸ್ತ್ರಚಿಕಿತ್ಸೆಗೊಳಗಾಗಿ ಚೇತರಿಸಿ-ಕೊಳ್ಳುತ್ತಿದ್ದೆನು. ಶ್ರೀ ಸ್ವಾಮೀಜಿಯವರ ದಿವ್ಯ ಸಂದೇಶಾಶೀರ್ವಾದ ನನ್ನನ್ನು ಪುನಃಶ್ಚೇತನಗೊಳಿಸಿತ್ತು. ನನ್ನ ವೈದ್ಯಕೀಯ ವೃತ್ತಿಯ ಕೆಲಸಗಳನ್ನು ಬದಿಗೊತ್ತಿ ಕೂಡಲೇ ಸಿದ್ಧನಾದೆನು. ನನ್ನ ಅಣ್ಣನ ಜೊತೆಗೆ ಮುಂಬೆಯಿಂದ ಹೊರಟು ಶ್ರೀ

ಶ್ರೀ ಸ್ವಾಮೀಜಿಯವರ ಸವಾರಿಯನ್ನು ಹರಿದ್ವಾರದ ಗಂಗಾಘಾಟದ ಕಾಂಚಿ ಕಾಮಕೋಟಿ ಶ್ರೀಗಳವರ ಮಠದ ಕ್ಯಾಂಪಿನಲ್ಲಿ ಕೂಡಿಕೊಂಡೆವು.

ಮೇಲೆ ನಮೂದಿಸಿದ ಈ ಆಕಸ್ಮಿಕ (ನನ್ನ ಪಾಲಿಗೆ) ಸುಸಂದರ್ಭ ನನಗೂ ನನ್ನ ಅಣ್ಣನಿಗೂ ಆಶ್ಚರ್ಯವನ್ನುಂಟುಮಾಡಿದೆಯಲ್ಲದೇ ಹೊಸತಲ್ಲ. ಸ್ವರ್ಣವಲ್ಲಿ ಶ್ರೀಮಠಕ್ಕೆ ನಮ್ಮ ತೀರ್ಥರೂಪಿ ಶ್ರೀ ಚಿತ್ರಿಸಿ ಗಣೇಶ ಭಟ್ಟರು, ವ್ಯಾವಹಾರಿಕವಾಗಿ ಅಡಿಕೆ ದಲಾಲ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರಿಂದ ಖಾಯಂ ಸಂಪರ್ಕವಿಟ್ಟು ಕೊಂಡಿರಲೇಬೇಕು. ಇಪ್ಪತ್ತನೇ ಶತಮಾನದ ಆದಿಯಲ್ಲಿ ಶ್ರೀರಮಣ ಮಹರ್ಷಿ ಶ್ರೀ ಕಪಾಲ ಮಹರ್ಷಿ ಅಲ್ಲದೇ ಕಾವ್ಯಕಂಠ ಶ್ರೀ ಗಣಪತಿ ಶಾಸ್ತ್ರಿಯಂಥವರ ಕೃಪಾದೃಷ್ಟಿ ಆಶೀರ್ವಾದಗಳಡಿಯಲ್ಲಿ ಬೆಳೆದವರು.

ನನ್ನ ಹಿರಿಯಣ್ಣ ಶ್ರೀ ಎನ್.ಜಿ. ಭಟ್ಟ ಚಿತ್ರಿಗಿ (ಈಗ ವಕೀಲರು) ಅವರ ಉಪನಯನ ಸಮಾರಂಭಕ್ಕೆ ನಮ್ಮ ಸಿರ್ಸಿ ಪೇಟೆಯ ಮನೆಗೆ ವಟುವನ್ನು ಆಶೀರ್ವದಿಸಲು ಬ್ರಹ್ಮೀಭೂತ ಶ್ರೀ ಸರ್ವಜ್ಞೇಂದ್ರ ಸರಸ್ವತಿ ಶ್ರೀಗಳವರು ಬಂದ ನೆನಪು. (1940 ದಶಕದ ಕೊನೆ). ಆ ಅಪಕ್ವ ಎಳೆತನದಲ್ಲೂ ಶ್ರೀಗಳವರ ವೇದಘೋಷಗಳ ಆಗಮನ ತದನಂತರದ ದರ್ಶನ ಮೈಪುಳಕಿತಗೊಂಡ ಸವಿನೆನಪು. ಅಲ್ಲಿಂದಲೇ ನಮ್ಮ ತೀರ್ಥರೂಪಿಯವರು ಶ್ರೀಮಠದೊಡನೆ ಸಂಪರ್ಕ ದಾರಿ ತೋರಿಸಿದವರು. ನಮ್ಮನ್ನು ಈ ಸುಸಂಸ್ಕೃತಿಯ ಚೌಕಟ್ಟಿನಲ್ಲಿ ಧರ್ಮಶ್ರದ್ಧೆ-ಯಿಂದಿರುವ ಸನ್ಮಾರ್ಗ ಕಲ್ಪಿಸಿಕೊಟ್ಟಿರುವರು. ಅಂತೆಯೇ ಮುಂದುವರಿಯಲು ಪ್ರೇರೇಪಿಸಿದವರು. ಬಾಲ್ಯ ಜೀವನದಲ್ಲಿ ಸಂದರ್ಭ ಒದಗಿಬಂದಾಗಲೆಲ್ಲ ಆಗಿನ ಕಾಲದಲ್ಲಿ ವಾಹನ ಸೌಕರ್ಯ ವಿಶೇಷವಿಲ್ಲದಾಗ್ಯೂ ದೂರದ ಸ್ವರ್ಣವಲ್ಲಿ ಶ್ರೀಮಠಕ್ಕೆ ಸ್ವಾಮೀಜಿಯವರ ದರ್ಶನಕ್ಕೆ ಹೋಗುತ್ತಿದ್ದ ನೆನಪು ಹೆಚ್ಚು ಹಸುರಾಗಿ ಉಳಿದಿದೆ. ಮುಂದೆ ನಲ್ವತ್ತರ ದಶಕದ ಕೊನೆಯಲ್ಲಿ ಶ್ರೀ ಸರ್ವಜ್ಞೇಂದ್ರ ಸರಸ್ವತಿ ಶ್ರೀಗಳವರು ಅವರ ಸವಾರಿಯೊಂದಿಗೆ ನಮ್ಮ ಕುಮಟಾದ ಚಿತ್ರಿಗಿ ಮನೆಯಲ್ಲೇ ಅಜಮಾಸ ಹದಿನೈದು ದಿವಸಗಳವರೆಗೆ ಕ್ಯಾಂಪ್ ಹಾಕಿದ ನೆನಪು. ಶ್ರೀಗಳವರು ದಿನನಿತ್ಯ ವಿಶೇಷಪೂಜೆ, ಶುಕ್ರವಾರ ಶ್ರೀಚಕ್ರಪೂಜೆ ಮಾಡುತ್ತಿರುವ ಸಮಯ ಅತಿ ನಿಕಟದಿಂದ ವೀಕ್ಷಿಸುವ ಸೌಭಾಗ್ಯ ನಮ್ಮ ಪಾಲಿಗೆ ಬಂದಿತ್ತು.

ಶ್ರೀಗಳವರಂತೆ ನಮ್ಮ ತಂದೆಯವರೂ ಯಕ್ಷಗಾನ ಪ್ರಿಯರು. ಧಾರ್ಮಿಕ ಕಾರ್ಯಗಳೊಂದಿಗೆ ನಮ್ಮ ಮನೆಯ ಅಂಗಳದಲ್ಲಿಯೇ ಸಾರ್ವಜನಿಕ ಮನೋರಂಜನಾ ಕಾರ್ಯಕ್ರಮ ಯಕ್ಷಗಾನ ಆಯೋಜಿಸಲ್ಪಟ್ಟಿತ್ತು. ಭಕ್ತಪ್ರಲ್ಹಾದ

ಚರಿತ್ರೆ ಆಯ್ದುಕೊಂಡಿದ್ದರು. ನನ್ನ ಸೋದರ ಭಾವ ದಿ। ವೆಂಕಟ್ರಮಣ ಹೆಗಡೆ ಬೇಲೆಕೇರಿ ಹೊಲನಗದ್ದೆಯವರ ನರಸಿಂಹನ ಪಾತ್ರ. ಆಗಿನಕಾಲಕ್ಕೆ ಸುಪ್ರಸಿದ್ಧ ಯಕ್ಷಗಾನ ಕಲಾವಿದರೂ. ನನ್ನ ತಂದೆಯವರ ಸೋದರಮಾವನವರೂ ಆದ ದಿ। ನಾರಾಯಣ ಹೆಗಡೆ ಬಾಡರವರ ಹಿರಣ್ಯಕಶಿಪು. ಉಗ್ರನರಸಿಂಹ ಖಂಬ ಒಡೆದು ಹೊರಬಂದು ಕಶಿಪುವನ್ನು ತೊಡೆಯ ಮೇಲೆ ಮಲಗಿಸಿ ಹೊಟ್ಟೆಸೀಳಿ ಕರುಳು ಬಗೆಯುವ ದೃಶ್ಯ ತೋರಿಸುವ ನರಸಿಂಹನ ಪಾತ್ರದವರು ನಿಜ ಆವೇಶಕ್ಕೆ ಒಳಗಾಗಿದ್ದರು. ಯಕ್ಷಗಾನ ವೀಕ್ಷಿಸುತ್ತಿದ್ದ ಶ್ರೀಗಳವರು ಸಂದರ್ಭ ಅರಿತು ಸ್ವತಃ ಎದ್ದು ಬಂದು ತಮ್ಮ ಅಮೃತ ಹಸ್ತದಿಂದ ಕಮಂಡಲಿನ ತೀರ್ಥ ಮಂತ್ರೋಚ್ಚಾರಣೆ-ಯೊಂದಿಗೆ ಸಿಂಪಡಿಸಿದಾಗ ನರಸಿಂಹನ ಪಾತ್ರದಾರಿ ಯಥಾಸ್ಥಿತಿಗೆ ಬಂದ ದೃಶ್ಯ ಇನ್ನೂ ನನ್ನ ಕಣ್ಣಮುಂದೆಯೇ ಇದೆ. ಅತಿ ತಪೋನಿಷ್ಠರಾದ ಶ್ರೀಗಳವರು ಈ ಚಮತ್ಕಾರ ಸಹಜವಾಗಿ ತೋರಿಸಿಕೊಟ್ಟ ನಿದರ್ಶನವಿದೆ. ಮಠದ ಆರಾಧ್ಯದೇವರು ಲಕ್ಷ್ಮೀನರಸಿಂಹ ಅಲ್ಲದೇ ನರಸಿಂಹನ ಪಾತ್ರದಾರಿಯವರ ಕುಲದೇವರು ನರಸಿಂಹ. ಹಾಗಾಗಿ ಈ ಘಟನೆ ಹಿಡಿತಕ್ಕೆ ಬಂದಿರಬೇಕು.

ವೈದ್ಯಕೀಯ ವಿದ್ಯಾರ್ಥಿ ಜೀವನ, ದೂರದ ಮುಂಬೈಯಲ್ಲಿ ಶಸ್ತ್ರಚಿಕಿತ್ಸೆ ವಿಷಯ-ದಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸ. ಅಲ್ಲದೇ ನಂತರದ ವೃತ್ತಿಜೀವನ ಸೇರಿ ಮೂವತ್ತು ವರ್ಷಗಳ ಸಮಯ ಒದಗಿಬಂದಾಗಲೆಲ್ಲ ಶ್ರೀಮಠಕ್ಕೆ ಅಥವಾ ಇನ್ನಿತರ ಕಡೆ ಶ್ರೀಗಳವರ ದರ್ಶನ ಪಡೆದು ಆಶೀರ್ವಾದ ಮಂತ್ರಾಕ್ಷತೆ ಪಡೆದುಕೊಳ್ಳುತ್ತಲೇ ಇದ್ದೆವು. ಯಾವುದೇ ಸಮಯದಲ್ಲಿ ಎಷ್ಟೇ ಗದ್ದಲವಿದ್ದರೂ ನಮ್ಮನ್ನು ವೈಯಕ್ತಿಕವಾಗಿ ಮಾತನಾಡಿಸಿ ನಮ್ಮ ತಂದೆಯವರನ್ನು ನೆನಪಿಸಿ- ಕೊಳ್ಳುತ್ತಿದ್ದರು. ಇದು ನಮ್ಮ ಕುಟುಂಬದ ಮೇಲೆ ನಿರಂತರವಾಗಿ ಇಟ್ಟಿರುವ ಪ್ರೀತಿ ವಾತ್ಸಲ್ಯಗಳ ದ್ಯೋತಕ. ನಾವು ಶ್ರೀಮಠಕ್ಕೆ ಭೇಟಿಕೊಟ್ಟಾಗಲೆಲ್ಲ ಉಪಚರಿಸಿ ಆತಿಥ್ಯ ನೀಡುತ್ತಿದ್ದುದು ನಮ್ಮ ಸೌಭಾಗ್ಯವೇ ಸರಿ. ನಮ್ಮ ನಿಕಟ ಸಂಬಂಧಿ ದಿ॥ ಶ್ರೀ ರಾಮಚಂದ್ರ ಹೆಗಡೆ ಇಬ್ಬಣಗಿರಿ ಹೊಲನಗದ್ದೆಯವರನ್ನು ಮಠದ ಅಡಿಗೆ ಕೆಲಸಕ್ಕೆ ತೊಡಗಿಸಿ ಅವರ ಕುಟುಂಬ ತೊಂದರೆ ನಿವಾರಿಸಿ ಎತ್ತಿಹಿಡಿದ ವಿಷಯ ಅವರ ಶಿಷ್ಯ ಅನುಗ್ರಹ ಕಳಕಳಿ ಎದ್ದು ಕಾಣುವುದು.

ಸ್ವರ್ಣವಲ್ಲಿ ಸಂಸ್ಥಾನ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿಯವರ ಪೀಠಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ನಮ್ಮ ಮುಂಬೈ ಹವ್ಯಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಬಹಳ ವರ್ಷಗಳಿಂದ ಸೇವೆ

ಸಲ್ಲಿಸುತ್ತಿದ್ದೇನೆ. ನನ್ನ ಬಾಲ್ಯಮಿತ್ರರಾದ ಶ್ರೀ ಆರ್.ಎನ್. ಹೆಗಡೆ ಭಂಡೀಮನೆ-ಯವರು ಮುಂಬೈಗೆ ಬದಲಿಯಾಗಿ ಬಂದಾಗ ನನ್ನ ವಿನಂತಿ ಮೇರೆಗೆ ಕಾರ್ಯಕಾರಿ ಸಮಿತಿಯ ಸದಸ್ಯರಾದರು. ಶ್ರೀಸ್ವಾಮೀಜಿಯವರ ಪ್ರೇರಣೆಯಂತೆ ನಾವಿಬ್ಬರೂ ಸೇರಿ, ಎರಡು ಹವ್ಯಕ ಸಮಾಜಗಳ ಮಠಗಳಾದ ಶ್ರೀರಾಮಚಂದ್ರಾಪುರ ಮಠ ಮತ್ತು ಶ್ರೀ ಸ್ವರ್ಣವಲ್ಲಿ ಸೋಂದಾ ಮಠ ಕುರಿತಾದ ಇತಿಹಾಸ ಪರಿಚಯ ಲೇಖನವನ್ನು ನಮ್ಮ ಹವ್ಯಕ ಸಂಘದ ಮಾಸಪತ್ರಿಕೆ ''ಹವ್ಯಕಸಂದೇಶ''ದಲ್ಲಿ (ಇಂಗ್ಲೀಷ್ ಭಾಷೆಯಲ್ಲಿ) ನಾವು ತಿಳಿದಂತೆ ಬರೆದು 1997ರಲ್ಲಿ ಪ್ರಕಟಿಸಿದ್ದೆವು. ಮಠಕ್ಕೆ ಸಮರ್ಪಿಸಿ ಆ ಲೇಖನದ ವಿಶ್ಲೇಷಿಸಿದ ಆಜ್ಞಾವೆತ್ತ ಬಯಸಿ ಕಾಯುತ್ತಿದ್ದೆವು. ಆ ಹೊತ್ತಿನ ವರೆಗೆ ನನಗೆ 'ಶ್ರೀ ಶ್ರೀ ಗಂಗಾಧರೇಂದ್ರ ಶ್ರೀಗಳವರ ಪ್ರತ್ಯಕ್ಷ ದರ್ಶನ ಪಡೆಯಲಾಗಿರಲಿಲ್ಲ. ಶ್ರೀಮಠದಿಂದ ಯಾವುದೇ ಆದೇಶ ಉತ್ತರ ಬರದೇ ಇದ್ದುದರಿಂದ ನಿರಾಶೆಯಾಗಿತ್ತು. ಸಿರ್ಸಿ ತೋಟಗಾರ ಕಲ್ಯಾಣ ಮಂಟಪದಲ್ಲಿ ಹವ್ಯಕ ಫೈನಾನ್ಸ್ ಶಾಖೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಶ್ರೀಗಳವರು ಬರುವ ವಿಚಾರ ತಿಳಿದು ನಾನೂ ಊರಿಗೆ ಹೋದ ಸಂದರ್ಭವಾದುದರಿಂದ ಕಾರ್ಯಕ್ರಮಕ್ಕೆ ಹೋಗಿದ್ದೆನು. ಅಲಂಕಾರ ವೇದಿಕೆಯ ಮೇಲೆ ಆಸೀನರಾದ ತೇಜೋಮಯ ಸ್ವಾಮೀಜಿಯವರನ್ನು ದೂರದಿಂದಲೇ ನೋಡುತ್ತಿದ್ದೆನು. ಕಾರ್ಯಕ್ರಮದ ಕೊನೆಗೆ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಶ್ರೀಗಳು ವಾಪಸ್ ಆಗುತ್ತಿರುವಾಗ ಶಿರಸಾಷ್ಟಾಂಗ ನಮಸ್ಕರಿಸಿ, ನನ್ನ ಪರಿಚಯ ತಿಳಿಸಿ ನಾನು ಬಯಸುತ್ತಿದ್ದ ಉತ್ತರಗಳ ಬಗ್ಗೆ ಮತ್ತೊಮ್ಮೆ ಯಾಚಿಸಿದೆನು. ಶ್ರೀಗಳವರು ಆ ಬಗ್ಗೆ ಖೇದ ವ್ಯಕ್ತಪಡಿಸಿ ಮಠಕ್ಕೆ ಹಿಂತಿರುಗಿದ ನಂತರ ಯೋಗ್ಯ ಚೌಕಾಶಿಮಾಡಿ ನನಗೆ ಉತ್ತರ ಕಳುಹಿಸಿದ್ದು ನನ್ನ ಸೌಭಾಗ್ಯ. ಅಂತೆಯೇ ಸ್ವಾಮೀಜಿಯವರು ಶಿಷ್ಯರ ಮೇಲೆ ಇಟ್ಟಿರುವ ಅಪಾರ ಪ್ರೇಮ ವ ಖಾಳಜಿ ಎದ್ದು ತೋರುವುದು. ಆ ನಂತರ ಶ್ರೀಗಳವರನ್ನು ನನ್ನ ಭಾವ ಶ್ರೀ ಕೆ.ಜಿ. ಮಂಜುನಾಥ ಬಿರೂರ ಅವರ ಮನೆಯ ಕ್ಯಾಂಪನಲ್ಲಿ ದರ್ಶನ ಪಡೆದೆ. ನನ್ನ ಪರಿಚಯ ಮತ್ತು ನಮ್ಮ ಕುಟುಂಬದ ಪ್ರತಿಯೊಬ್ಬರ 75 ವರ್ಷಗಳ ಸಂಪರ್ಕ ವಿವರಿಸಲು ಸಾಧ್ಯವಾಯಿತು.

ಈ ಹಿಂದೆ ನಮೂದಿಸಿದಂತೆ, ಅಕ್ಟೋಬರ್ 1999ರಲ್ಲಿ ಶ್ರೀ ಗಂಗಾಧರೇಂದ್ರ ಶ್ರೀಗಳವರ ಆಶೀರ್ವಾದದಿಂದ ನಮ್ಮಿಬ್ಬರ ಉತ್ತರ ಹಿಂದುಸ್ಥಾನ ಧರ್ಮಯಾತ್ರೆ ಅವರ ಪರಿವಾರದೊಂದಿಗೆ ಸಾಧ್ಯವಾಯಿತು. ಹರಿದ್ವಾರದಲ್ಲಿ ದರ್ಶನ ಪಡೆದಾಗ ನನ್ನನ್ನು ಎರಡನೇ ಬಾರಿಗೆ ನೋಡುತ್ತಿದ್ದರೂ ನನ್ನ ಪರಿಚಯ ವಿವರ ಕೊಡಲೇ ವ್ಯಕ್ತಪಡಿಸಿದರು. ಇದು ಶ್ರೀಗಳವರ ನೆನಪಿನ ಅಮೋಘ ಶಕ್ತಿ. ನಾನು ನನ್ನ ಅಣ್ಣ

ಕೊನೆಯ ಘಳಿಗೆಯಲ್ಲಿ ಧರ್ಮಯಾತ್ರೆಗೆ ಸೇರಿಸಲ್ಪಟ್ಟಿದ್ದೆವು. ಸಂಪೂರ್ಣ ಕಾರ್ಯಕ್ರಮಗಳ ಮುದ್ರಿತ ಪಟ್ಟಿಯೇ ತಯಾರಾಗಿತ್ತು. ಅದೂ ಸವಿವರವಾಗಿತ್ತು. ಮುಂದಿನ ಸ್ಥಾನಕ್ಕೆ (ಹರಿದ್ವಾರದಿಂದ) ಸೇರಲು ವಿವರವನ್ನು ಸ್ವತಃ ಮನದಟ್ಟು ಮಾಡಿಕೊಟ್ಟರು. ಸಿರ್ಸಿ ಬೊಪ್ಪನಳ್ಳಿ ಶ್ರೀ ಎನ್.ಪಿ. ಹೆಗಡೆಯವರು ಮತ್ತು ನನ್ನ ಭಾವ ಶ್ರೀ ಕೆ.ಜಿ. ಮಂಜುನಾಥರವರು ಸೇರಿಕೊಂಡಿದ್ದರು. ಹಿಮಾಲಯ ಪರ್ವತದ ಎತ್ತರ ಮತ್ತು ದೂರದ ಅತಿ ಶೀತವಾತಾವರಣದ ದುರಂತದ ಪ್ರಯಾಣದಲ್ಲಿಯೂ ತಮ್ಮ ದೈಹಿಕ ಆಯಾಸ ಕಡೆಗಣಿಸಿ ಪರಂಪರಾಗತ ಮಠದ ಆರಾಧ್ಯ ದೇವತಾ ಪೂಜೆ. ಶ್ರೀಚಕ್ರಪೂಜೆ ಮತ್ತು ಅನುಷ್ಠಾನ ಚಾಚೂ ತಪ್ಪದೆ ನಡೆಸಿಕೊಂಡು ಬಂದುದು ಅವರ ಧರ್ಮನಿಷ್ಠೆಯನ್ನು ಎತ್ತಿ ತೋರಿಸುತ್ತದೆ. ಪರಿವಾರದಲ್ಲಿ ಸ್ವಯಂ ಶಿಸ್ತು ಪಾಲನೆ ಇತ್ತು. ಎಲ್ಲಿ ಹೋದರೂ ಪರಿವಾರದವರ ಅಡಿಗೆ ಊಟವಾದುದರಿಂದ ಆರೋಗ್ಯ ಸಮಸ್ಯೆ ಎದುರಿಸಬೇಕಾಗಲಿಲ್ಲ. ಶ್ರೀಗಳವರ ಇಚ್ಛೆಯಂತೆ ಶತಾವಧಾನಿ ಶ್ರೀ ಆರ್. ಗಣೇಶರೂ ಕೂಡಿಕೊಂಡಿದ್ದರು. ವಯೋವೃದ್ಧ ಕಲಸೆ ಶ್ರೀಗಳೂ ಜೊತೆಗಿದ್ದರು. ಶ್ರೀಗಳವರ ಸಂಘಟನಾ ಶಕ್ತಿ ಅಪಾರ. ಈ ಹಿಂದೆ ಶ್ರೀಗಳವರು ಬೇಡ್ತಿ ಯೋಜನೆ ವಿರೋಧಿಸಿ ಕೃಷಿಕರಿಗೆ ಆಗಬಹುದಾದ ಅಪಾರಹಾನಿ ವಿವರಿಸುವ ಪಾದಯಾತ್ರೆ ಮುಷ್ಕರಗಳ ಬಗ್ಗೆ ಓದಿ ತಿಳಿದಿದ್ದೆನು. ಧರ್ಮಯಾತ್ರೆಯಲ್ಲಿ ಧಾರ್ಮಿಕವಿಧಿಗಳ ಕುರಿತು ನಮಗೆ ಮಾರ್ಗದರ್ಶನ ಕೊಡುತ್ತಲೇ ಇದ್ದರು. ಇವೆಲ್ಲವೂ ನಮ್ಮ ಪೂರ್ವಜನ್ಮದ ಪುಣ್ಯ. ಎರಡು ವಾರಗಳ ನಂತರ ನಾವಿಬ್ಬರು ವಾಪಸ್ ಆದರೂ ಶ್ರೀಗಳವರ ಯಾತ್ರೆಯ ಕೊನೆಯ ಹಂತದಲ್ಲಿ ಶ್ರೀ ಆರ್.ಎನ್. ಹೆಗಡೆ ಬಂಢೀಮನೆಯವರ ಬಹುಪ್ರಯತ್ನದಿಂದ ಮೂಬೇಟ ಹವ್ಯಕನಗರ ವನವೇನ ಸ್ಥಳ ಭೇಟಿ ಪಾದಪೂಜಾ ಕಾರ್ಯಕ್ರಮ ಸಾಗಿತು. ಇದು ಐತಿಹಾಸಿಕ ಭೇಟಿ.

ಈ ಗುರುಶಿಷ್ಯ ಪರಂಪರೆಯ ನಿಕಟ ಸಂಬಂಧ ಆಧುನಿಕ ಯಾಂತ್ರಿಕ ಯುಗದಲ್ಲೂ ನಮ್ಮ ಮುಂದಿನ ಪೀಳಿಗೆಯು ಮರೆಯದೇ ಮುಂದುವರಿಸಿಕೊಂಡು ಬರುತ್ತ ನಮ್ಮ ಗುರುಮಠಗಳಿಂದ ಸದಾ ಆಶೀರ್ವಾದ ಪಡೆದು ಸನ್ಮಾರ್ಗ-ಗಳಾಗಲೆಂದು ನನ್ನ ಕಳಕಳಿಯ ಹಾರೈಕೆ.

❋ ❋ ❋

ದಶಮಾನದ ಮಹತ್ತ್ವದ (ಕೆಲವು) ಘಟನೆಗಳು

-ಪ್ರೊ. ಪಿ.ಐ. ಹೆಗಡೆ

2-2-91 ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದಲ್ಲಿ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಗಂಗಾಧರೇಂದ್ರ ಮಹಾಸ್ವಾಮಿಗಳವರ ಪೀಠಾರೋಹಣ ಕಾರ್ಯಕ್ರಮ ನೆರವೇರಿತು.

91-93ರ ಅವಧಿಯಲ್ಲಿ ಶ್ರೀಮಠದ ಧರ್ಮ ಶಾಸನಕ್ಕೆ ಒಪ್ಪಿದ ಸೀಮಾ ಭಿಕ್ಷಗಳು ನಡೆದವು.

29-5-91 ಶ್ರೀಗಳ ಪೀಠಾರೋಹಣದ ನಂತರ ನಡೆದ ಶ್ರೀಮಠದ ಪ್ರಥಮ ಮಹಾಸಭೆ.

23-9-91 ಹೊಸ ಶ್ರೀ ಚಕ್ರ ಪ್ರತಿಷ್ಠಾಪನೆ, ಬ್ರಹ್ಮಶ್ರೀ ವಿದ್ವಾನ್ ಕೆ.ಪಿ. ಶಂಕರ ಶಾಸ್ತ್ರಿಯವರ ನೇತೃತ್ವದಲ್ಲಿ

25-11-91 ಶ್ರೀಕ್ಷೇತ್ರ ಇಡಗುಂಜಿ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಪ್ರಥಮ ಭೇಟಿ.

15-12-91 ಬೆಂಗಳೂರಿಗೆ ಶ್ರೀಗಳ ಪ್ರಥಮ ಭೇಟಿ (ಸವಾರಿ) ರಾಗೀಗುಡ್ಡದ ಪ್ರಸನ್ನ ಆಂಜನೇಯ ದೇವಸ್ಥಾನದಲ್ಲಿ ವಾಸ್ತವ್ಯ.

9-1-92 ಪ್ರಥಮ ಶಾಸ್ತ್ರಗೋಷ್ಠಿಯಲ್ಲಿ ಶ್ರೀಗಳ ಸಾನ್ನಿಧ್ಯ.

20-1-92 ಮೇಧಾ ದಕ್ಷಿಣಾಮೂರ್ತಿ ಕಾಲೇಜು ಗೋಕರ್ಣದ ವಾರ್ಷಿಕೋತ್ಸವದಲ್ಲಿ ಶ್ರೀಗಳ ಸಾನ್ನಿಧ್ಯ. (ಗೋಕರ್ಣಕ್ಕೆ ಶ್ರೀಗಳ ಪ್ರಥಮ ಭೇಟಿ.)

19-2-92 ಉತ್ತರ ಕನ್ನಡ ಜಿಲ್ಲಾ ಪಾಠಶಾಲಾ ಶಿಕ್ಷಕರ ಸಮ್ಮೇಳನ, ತೋಟಗಾರರ ಕಲ್ಯಾಣ ಮಂಟಪದಲ್ಲಿ; ಶ್ರೀಗಳ ಸಾನ್ನಿಧ್ಯ.

6-3-92 ರಿಂದ 8-3-92	ಶ್ರೀಕ್ಷೇತ್ರ ಕೊಲ್ಲೂರಿಗೆ ಆಗಮಿಸಿ ಮೂಕಾಂಬಿಕಾ ಸನ್ನಿಧಿಯಲ್ಲಿ ಲೋಕಕಲ್ಯಾಣಕ್ಕೋಸ್ಕರ ತ್ರಿಪುರ ಸುಂದರೀ ಸೇವೆ (ಶ್ರೀಚಕ್ರಾರ್ಚನೆ) ಸಲ್ಲಿಸಿದರು.
28-3-92	''ಮಹೋದಯ'', ಶ್ರೀಕ್ಷೇತ್ರ ಗೋಕರ್ಣಕ್ಕೆ ಭೇಟಿ.
19-4-92	ಕಾಂಚಿಯ ಪರಮಪೂಜ್ಯ ಶ್ರೀ ಶ್ರೀ ಜಯೇಂದ್ರ ಸರಸ್ವತೀ ಮಹಾಸ್ವಾಮಿಗಳು ತಮ್ಮ ಪ್ರವಾಸದ ಮಧ್ಯದಲ್ಲಿ ಶ್ರೀಮಠಕ್ಕೆ ಅನಿರೀಕ್ಷಿತ ಭೇಟಿ ನೀಡಿ ಆಶೀರ್ವದಿಸಿದರು.
7-92	ಕಾಂಚೀ ಪ್ರಯಾಣದ ಮಾರ್ಗದಲ್ಲಿ ಬೆಂಗಳೂರಿನ ಹವ್ಯಕ ಮಹಾಸಭಾಕ್ಕೆ ಭೇಟಿ ನೀಡಿ ಆಶೀರ್ವಚನ ಗೈದರು.
14-9-92	ಐದು ದಿನಗಳ ಕಾಲ ಬೇಡ್ತೀ ಪಾದಯಾತ್ರೆ ಕೈಗೊಂಡು ಕೊನೆಯ ದಿನ ಮಾಗೋಡಿನಲ್ಲಿ ಅಭೂತಪೂರ್ವ ಬೃಹತ್ ಜನಾಂದೋಲನ ಸಭೆಯಲ್ಲಿ ಮಾರ್ಗದರ್ಶನ ನೀಡಿದರು.
30-11-92	ಶ್ರೀ ರಾಮಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳವರ ಅಪೇಕ್ಷೆಯಂತೆ ತೀರ್ಥಹಳ್ಳಿ ರಾಮಚಂದ್ರಾಪುರ ಮಠಕ್ಕೆ ಪ್ರಯಾಣ ಬೆಳೆಸಿದರು. ಇದು ಉಭಯ ಶ್ರೀಗಳವರ ಮೊದಲ ಭೇಟಿಯಾಗಿತ್ತು. ಸಮಸ್ತ ರಾಜಮರ್ಯಾದೆಗಳೊಂದಿಗೆ ಸ್ವಾಗತಿಸಲ್ಪಟ್ಟರು.
1-12-92	ಉಭಯ ಶ್ರೀಗಳು ಎರಡೂ ಮಠದ ಶಿಷ್ಯರಲ್ಲಿ ಪ್ರೇಮ ಸೌಹಾರ್ದಗಳು ಬೆಳೆಯುವಂತಾಗಲೆಂದು ಆಶೀರ್ವಚನ ನೀಡಿದರು.
1-93	ಶ್ರೀಮಠದಲ್ಲಿ ಉತ್ತರ ಕನ್ನಡ ಜಿಲ್ಲಾ ವೈದಿಕ ಸಮಾವೇಶ ನೆರವೇರಿತು.
2-93	ದಕ್ಷಿಣ ಕನ್ನಡದ ತೋಡೀಕಾನ ಮಲ್ಲಿಕಾರ್ಜುನ ದೇವಸ್ಥಾನದ ಬ್ರಹ್ಮಕಲಶೋತ್ಸವದಲ್ಲಿ ಪಾಲ್ಗೊಂಡು, ಅಲ್ಲಿಯೇ ಶ್ರೀ ಶೃಂಗೇರೀ ಜಗದ್ಗುರು ಶ್ರೀಮದ್ ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳನ್ನು ಭೇಟಿ ಮಾಡಿದರು.
4-93	ಶ್ರೀಗಳು ಕೊಡಚಾದ್ರಿಗೆ ಭೇಟಿಯಿತ್ತು ಸರ್ವಜ್ಞ ಪೀಠ, ಅಗಸ್ತ್ಯ ತೀರ್ಥ, ಚಿತ್ರಾಮೂಲಗಳ ದರ್ಶನ ಪಡೆದರು.

5-93 ಶಿರಸಿಯ ಶ್ರೀ ಶ್ರೀಧರ ಪಾದುಕಾಶ್ರಮಕ್ಕೆ ಭೇಟಿ.

6-93 ಜಮಖಂಡೀ ಕಾಲೇಜಿನಲ್ಲಿ ''ವಿಜ್ಞಾನ ಹಾಗೂ ಮಾನವ ಜೀವನದ ಮೌಲ್ಯ'' ಎಂಬ ವಿಷಯವನ್ನು ಕುರಿತು ಉಪನ್ಯಾಸ ನೀಡಿದರು.

23-4-94 ವರದಹಳ್ಳಿ ಶ್ರೀ ಶ್ರೀಧರ ಆಶ್ರಮದಲ್ಲಿ ನಡೆದ ಅತಿರುದ್ರ ಯಾಗಕ್ಕೆ ಭೇಟಿ. ಎರಡು ದಿನ ವಾಸ್ತವ್ಯ ರುದ್ರಾನುಷ್ಠಾನ ಮತ್ತು ಶ್ರೀಧರ ಸ್ವಾಮಿಗಳನ್ನು ಕುರಿತು ಉಪನ್ಯಾಸ.

2-5-94 ರಿಂದ ದಾವಣಗೆರೆ ಗೀತಾಮಂದಿರದಲ್ಲಿ ಕಠೋಪನಿಷತ್ತನ್ನು ಕುರಿತು 9-5-94 ರವರೆಗೆ ಉಪನ್ಯಾಸ

14-5-94 ಶಿರಸಿಯಲ್ಲಿ ಸಂಸ್ಕೃತ ಸಂಗಮದ ಮುಕ್ತಾಯ ಸಮಾರಂಭದಲ್ಲಿ ಆಶೀರ್ವಚನ.

24-9-94 ಶ್ರೀ ಸಂಸ್ಥಾನದಲ್ಲಿ ಶ್ರೀ ದುರ್ಗಾಪರಮೇಶ್ವರಿ ಪ್ರತಿಷ್ಠಾನ ಕಟೀಲು ಮತ್ತು ಶ್ರೀ ಸರ್ವಜ್ಞೇಂದ್ರ ಪ್ರತಿಷ್ಠಾನ ಸ್ವರ್ಣವಲ್ಲಿ. ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ''ಉತ್ತರ ಕನ್ನಡದಲ್ಲಿ ಸಂಸ್ಕೃತ ವಾಙ್ಮಯ'' ಕುರಿತ ವಿಚಾರ ಸಂಕಿರಣ ನಡೆಯಿತು. ಡಾ|| ಜಿ.ಎನ್. ಭಟ್‌ರ ಸಂಚಾಲಕತ್ವದಲ್ಲಿ ಸಂಶೋಧನಾ ಕೇಂದ್ರದ ಸ್ಥಾಪನೆಯ ರೂಪರೇಶೆಯ ಬಗ್ಗೆ ಸಮಿತಿ ರಚನೆ.

20-10-94 ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸದ ಶತಮಾನೋತ್ಸವದ ಕಾರ್ಯಕ್ರಮದ ಅಂಗವಾಗಿ ಶ್ರೀಮಠದಲ್ಲಿ ನೆರವೇರಿದ ಸಭೆಯಲ್ಲಿ ಶ್ರೀ ಶ್ರೀಗಳವರ, ಮೈಸೂರು ರಾಮಕೃಷ್ಣಾಶ್ರಮದ ಸ್ವಾಮೀಜಿಯವರ ಮತ್ತು ಕಾಂಚೀ ರಾಮಕೃಷ್ಣಾಶ್ರಮದ ಸ್ವಾಮಿಗಳ ಉಪಸ್ಥಿತಿ.

29-10-94 ಶ್ರೀಕ್ಷೇತ್ರ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ನಡೆದ ''ಅಪರ ಸಂಸ್ಕಾರ'' ಚಿಂತನಗೋಷ್ಠಿಯಲ್ಲಿ ಸಾನ್ನಿಧ್ಯ ಮತ್ತು ಆಶೀರ್ವಚನ.

24-12-94 ರಿಂದ 16-1-95ರವರೆಗೆ ಕಾಂಚೀ ಪ್ರವಾಸ

24-12-94 ಮಲ್ಲಾಡಿಹಳ್ಳಿಗೆ ಭೇಟಿ - ರಾಘವೇಂದ್ರ ಗುರೂಜಿಗಳೊಂದಿಗೆ ಸಮಾಲೋಚನೆ.

25-12-94 ಬೆಂಗಳೂರಿಗೆ ಪ್ರಯಾಣ. ನಾಲ್ಕು ದಿನ ಬಿ.ಕೆ. ಶ್ರೀಧರರ ಮನೆಯಲ್ಲಿ ವಾಸ್ತವ್ಯ.

27-12-94 "ಗೀತಾ ಬುಕ್ ಹೌಸ್ ಬೆಂಗಳೂರ್", ಭೇಟಿ

29-12-94 ಕಾಂಚೀ ಪರಮಾಚಾರ್ಯರ ಆರಾಧನಾ ಮಹೋತ್ಸವದಲ್ಲಿ ಶ್ರೀಗಳು ಪಾಲ್ಗೊಂಡು ಸಂಸ್ಕೃತದಲ್ಲಿ ಉಪನ್ಯಾಸ ನೀಡಿದರು. ಮಾಜಿ ರಾಷ್ಟ್ರಪತಿ ಆರ್. ವೆಂಕಟರಾಮನ್, ಮಧ್ಯ ಪ್ರದೇಶದ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್, ಶ್ರೀ ಕೃಷ್ಣಕಾಂತ್, ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ, ಆಸ್ಸಾಂನ ರಾಜ್ಯಪಾಲರು ಮುಂತಾದ ಗಣ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

30-12-94 ಕಾಂಚಿಯಿಂದ ಪಾಂಡಿಚೇರಿ ಮಾರ್ಗವಾಗಿ ಚಿದಂಬರಂ ತಲುಪಿ ಅಲ್ಲಿ ವಾಸ್ತವ್ಯ.

31-12-94 ಚಿದಂಬರಂ ನಿಂದ ಕುಂಭಕೋಣಕ್ಕೆ ಪ್ರಯಾಣ ಬೆಳೆಸಿದರು. ಗೋವಿಂದಪುರದಲ್ಲಿ ಕಾಂಚಿ ಕಾಮಕೋಟಿ ಪೀಠದ ಶ್ರೀ ಭಗವನ್ನಾಮ ಬೋಧೇಂದ್ರ ಸರಸ್ವತೀ ಸ್ವಾಮಿಗಳವರ ಸಜೀವ ಸಮಾಧಿ ದರ್ಶನ ಮಾಡಿದರು.

4-1-95 ಪುದುಕೋಟೆಯಿಂದ ದೇವೀ ಪಟ್ಟಣಕ್ಕೆ ಪ್ರಯಾಣ. ಅಲ್ಲಿ ನವಪಾಷಣ ದರ್ಶನ ಮಾಡಿ ರಾಮೇಶ್ವರಕ್ಕೆ ಪ್ರಯಾಣ ಬೆಳೆಸಿದರು. ರಾಮೇಶ್ವರದಲ್ಲಿ ಸಮಸ್ತ ರಾಜಮರ್ಯಾದೆ ಯೊಂದಿಗೆ (ಗಜಚಾಮರ ಮರ್ಯಾದೆ ಸಹಿತ) ಪುರ ಪ್ರವೇಶ ಮಾಡಿ ಕಾಂಚೀ ಶಂಕರ ಮಠದಲ್ಲಿ ವಾಸ್ತವ್ಯ, ಧನುಷ್ಕೋಟಿಗೆ ಭೇಟಿ.

5-1-95 ರಾಮೇಶ್ವರದಲ್ಲಿ ಅಗ್ನಿ ತೀರ್ಥಸ್ನಾನ, ಸೇತು ದರ್ಶನ, ಸೈಕತಲಿಂಗ ಪೂಜೆ ಮುಗಿಸಿ ದೇವಾಲಯದಲ್ಲಿ ಸ್ಫಟಿಕ ಲಿಂಗಾಭಿಷೇಕ ವೀಕ್ಷಣೆ ಮಾಡಿದರು.

6-1-95 ಗಂಧಮಾದನ ಪರ್ವತದಲ್ಲಿ ಶ್ರೀರಾಮಪಾದುಕಾದರ್ಶನ ಮಾಡಿದರು. ಅದೇ ದಿನ ರಾಮ ನಾಡಿನ ಮಹಾರಾಣಿಯವರು ಶ್ರೀಗಳವರನ್ನು ಸಂದರ್ಶಿಸಿ ಆಶೀರ್ವಾದ ಪಡೆದರು.

8-1-95 ಶ್ರೀ ಕ್ಷೇತ್ರ ಶ್ರೀರಂಗದಲ್ಲಿ ಶ್ರೀರಂಗನಾಥ ಸ್ವಾಮಿಯ ದರ್ಶನ ಮಾಡಿ ತಂಜಾವೂರಿಗೆ ಪ್ರಯಾಣ ಬೆಳೆಸಿದರು. ಮುಂದೆ ಸೇಲಂ ಮಾರ್ಗವಾಗಿ ಬೆಂಗಳೂರು ತಲುಪಿದರು.

16-1-95 ರಾಗಿಗುಡ್ಡ, ಚನ್ನೇನಹಳ್ಳಿ, ರಾಜನಹಳ್ಳಿಗಳಿಗೆ ಭೇಟಿಕೊಟ್ಟು ಇಪ್ಪತ್ತನಾಲ್ಕು ದಿನಗಳ ರಾಮೇಶ್ವರ ಯಾತ್ರೆ ಮುಗಿಸಿ ಶ್ರೀ ಮಠಕ್ಕೆ ಬಂದರು.

3-2-95 ಬೆಳಗಾಂವ್ ಜಿಲ್ಲೆಯ ಸಂಕೇಶ್ವರದ ಏರಂಡೆ ಶ್ರೀ ಸ್ವಾಮಿಗಳ ರುದ್ರಾಕ್ಷಿ - ಕಿರೀಟಧಾರಣ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು.

18-2-95 ಶ್ರೀ ಕ್ಷೇತ್ರ ಗೋಕರ್ಣದಲ್ಲಿ ನಡೆದ ಸೋಮಯಾಗದಲ್ಲಿ ಸಾನ್ನಿಧ್ಯ ವಹಿಸಿ ಅನುಗ್ರಹ ಭಾಷಣ ನೀಡಿದರು.

26-11-95 ರಿಂದ 2-02-96ರರವರೆಗೆ ವಿಭಿನ್ನ ಸೀಮೆಗಳಲ್ಲಿ ಕೋಟಿ ಗಾಯತ್ರೀ ಜಪ ನೆರವೇರಿಸಿದರು.

12-95 ಕಾಂಚೀಮಠಕ್ಕೆ ಪ್ರಯಾಣ, ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡರು. ಅಲ್ಲಿ ಮಾಜಿ ರಾಷ್ಟ್ರಪತಿ ಆರ್. ವೆಂಕಟರಾಮನ್, ರಂಗನಾಥ ಮಿಶ್ರಾ, ಡಾ|| ಮುರಳೀ ಮನೋಹರ ಜೋಶಿ ಮುಂತಾದ ಗಣ್ಯರು ಶ್ರೀಗಳವರ ದರ್ಶನ ಮಾಡಿ ಆಶೀರ್ವಾದ ಪಡೆದಿದ್ದಾರೆ.

25-12-95 ಮೈಸೂರಿನ ಎಡತೊರೆ ಸಂಸ್ಥಾನಕ್ಕೆ ಭೇಟಿ ಮತ್ತು ಶ್ರೀ ಶಂಕರ ಭಾರತೀ ಸ್ವಾಮಿಗಳೊಂದಿಗೆ ಸಂದರ್ಶನ.

26-1-96 ರಿಂದ 2-2-96ರವರೆಗೆ ಶ್ರೀ ಮಠದಲ್ಲಿ ಏಳು ದಿನಗಳ ಕಾಲ ಕೋಟಿ ಗಾಯತ್ರಿ ಜಪಯಜ್ಞ ಮತ್ತು ಸಂಹಿತಾ ಯಾಗಗಳು ನೆರವೇರಿದವು. ಈ ಸಂದರ್ಭದಲ್ಲಿ ಕಾಂಚಿಯ ಶ್ರೀ ಶ್ರೀ ಜಯೇಂದ್ರ ಸರಸ್ವತಿ ಮಹಾಸ್ವಾಮಿಗಳು ಸಾನ್ನಿಧ್ಯವಹಿಸಿ ಆಶೀರ್ವದಿಸಿದರು. ಇವೇ ಸಂದರ್ಭದಲ್ಲಿ ರಾಷ್ಟ್ರನಾಯಕ ಅಟಲ್ ಬಿಹಾರೀ ವಾಜಪೇಯಿಯವರು ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಭಾಷಣ ಮಾಡಿದರು.

3-96 ಹಾನಗಲ್ಲಿನಲ್ಲಿ ನಡೆದ ಗಾಯತ್ರೀ ಹವನದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

21-5-96 ಕೋಟದ ಸದ್ಯೋಜಾತ ಪ್ರತಿಷ್ಠಾನದ ಮಹಾರುದ್ರಯಾಗ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

30-9-96	ಕೇರಳ ಕಾಸರಗೋಡಿನ ಎಡೆನೂರು ಮಠದ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳು ಶ್ರೀ ಸ್ವರ್ಣವಲ್ಲೀ ಮಠದಲ್ಲಿ ಶ್ರೀಗಳನ್ನು ಸಂದರ್ಶಿಸಿದರು. ಸಂದರ್ಭ : ಯಕ್ಷಶಾಲ್ಮಲಾ ವಿಶ್ವಸ್ತ ಮಂಡಳಿಯ ಉದ್ಘಾಟನೆ.
29-5-96	ಕಾಂಚೀಮಠದಲ್ಲಿ ನೂತನವಾಗಿ ನಿರ್ಮಿಸಿದ 60' ಅಡಿ ಎತ್ತರದ ಶ್ರೀ ಶಂಕರಾಚಾರ್ಯರ ಭವ್ಯ ಪ್ರತಿಮೆಯ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ 900ಕ್ಕೂ ಹೆಚ್ಚು ಯತಿವರೇಣ್ಯರಿಂದ ಅಲಂಕರಿಸಲ್ಪಟ್ಟ ಮತ್ತು ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಸೇರಿದ ಭಕ್ತ ಸಭೆಯಲ್ಲಿ ಶ್ರೀ ಶಂಕರರ ಕೃತಿಗಳ ಕುರಿತು ವಿದ್ವತ್ಪೂರ್ಣ ಉಪನ್ಯಾಸ ನೀಡಿ ಸ್ವರ್ಣವಲ್ಲಿ ಮಹಾಸಂಸ್ಥಾನದ ಯಶೋದುಂದುಭಿಯನ್ನು ಮೊಳಗಿಸಿದರು.
30-10-96	ಶ್ರೀಮಠದ ಮಹಾಸಭೆ
11-4-97	21 ದಿನಗಳ ಜೀವನ ಶಿಕ್ಷಣ ಶಿಬಿರ ಶ್ರೀಮಠದಲ್ಲಿ ನೆರವೇರಿತು. ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ್ವರ ತೀರ್ಥ ಶ್ರೀಪಾದಂಗಳವರು ಭೇಟಿ ನೀಡಿ ಆಶೀರ್ವದಿಸಿದರು.
10, 11, 12 -05-97	ಶಂಕರ ಜಯಂತಿ ಕಾರ್ಯಕ್ರಮಗಳ ಮಾಲೆಯಲ್ಲಿ ಅವಧಾನ ಸರಸ್ವತಿ ಡಾ॥ ಆರ್. ಗಣೇಶರವರಿಂದ ಅಷ್ಟಾವಧಾನ ಕಾರ್ಯಕ್ರಮವು ಶ್ರೀಗಳ ಉಪಸ್ಥಿತಿಯಲ್ಲಿ ನೆರವೇರಿತು.
24,25,26 -10-97	ಶ್ರೀಮಠದ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಮಟ್ಟದ ಇತಿಹಾಸ ಸಮ್ಮೇಳನವು ನೆರವೇರಿತು. ಈ ಸಂದರ್ಭದಲ್ಲಿ ಸೋಂದಾ ರಾಜಮನೆತನದ ಗೋವಾದಲ್ಲಿ ವಾಸವಾಗಿರುವ ಶ್ರೀ ಬಸವಲಿಂಗ ರಾಜ ಒಡೆಯರ್ ಮತ್ತು ಶ್ರೀ ಮಧುಲಿಂಗರಾಜ ಒಡೆಯರ್, ರಾಜಕುಮಾರರು ಶ್ರೀಗಳಿಂದ ಆಶೀರ್ವಾದ ಪಡೆದರು.
6-11-97 ರಿಂದ 12-11-97	ರವರೆಗೆ ಎಡನೀರು ಮಹಾಸಂಸ್ಥಾನದ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳವರ ಹಿರಿತನದಲ್ಲಿ ಯಕ್ಷಗಾನ ಸಪ್ತಾಹವು ಶ್ರೀ ಮಠದಲ್ಲಿ ಶ್ರೀ ಶ್ರೀಗಳ ಮಾರ್ಗದರ್ಶನದಲ್ಲಿ ನೆರವೇರಿತು.
12-12-97	ಶಿರಸಿ ಅಂಬಾಗಿರಿಯ ಕಾಳಿಕಾ ಮಂದಿರದಲ್ಲಿ ಶ್ರೀ ರಾಮಕೃಷ್ಣರ ಪ್ರತಿಮೆಯನ್ನು ಶ್ರೀಗಳು ಅನಾವರಣ ಗೊಳಿಸಿದರು.

14-12-97 ರಿಂದ 29-1-98ರ ವರೆಗೆ ಶ್ರೀಗಳ ದಕ್ಷಿಣ ಭಾರತ ಯಾತ್ರೆ

28-12-97 ತಿರುವಣ್ಣಾಮಲೈ ರಮಣಾಶ್ರಮಕ್ಕೆ ಭೇಟಿ.

31-11-97 ತಿರುಚನಾಪಳ್ಳಿ ಅಖಿಲಾಂಡೇಶ್ವರಿ ಮತ್ತು ಜಂಬುಕೇಶ್ವರಿ ದೇವಾಲಯಕ್ಕೆ ಭೇಟಿ.

1-1-98 ಮಧುರೈ ಮೀನಾಕ್ಷಿ ದೇವಾಲಯಕ್ಕೆ ಭೇಟಿ

4-1-98 ಶಿವಕಾಶಿಯಲ್ಲಿ ಕಾಶೀ ವಿಶ್ವನಾಥ ಹಾಗೂ ವಿಶಾಲಾಕ್ಷಿಯರ ದರ್ಶನ ಪಡೆದು ವಟಪತ್ರಶಾಯಿ ವೈದ್ಯನಾಥನ ಪೂಜೆ ಸಲ್ಲಿಸಿದರು.

12-1-98 ಕನ್ಯಾಕುಮಾರಿಗೆ ತಲುಪಿ ಕನ್ಯಾಕುಮಾರಿ ಮತ್ತು ವಿವೇಕಾನಂದರ ಭವ್ಯ ಶಿಲಾಮೂರ್ತಿಯ ದರ್ಶನವನ್ನು ಪಡೆದರು.

18-1-98 ಕಾಲಟಿಯನ್ನು ಸಂದರ್ಶಿಸಿ 30ರಂದು ಪಾಲಘಾಟಿನಲ್ಲಿ ಕ್ಷೇತ್ರೀಯ ವೈದಿಕ ಸಮ್ಮೇಳನದಲ್ಲಿ ಆಶೀರ್ವಚನ ನೀಡಿದರು.

21-1-98 ಪೋರ್ಕಳಂದಲ್ಲಿ ಶ್ರೀದೇವರ ಮುಖ ಮಂಟಪದಲ್ಲಿ ಶಿಲಾನ್ಯಾಸ ಕಾರ್ಯಕ್ರಮವನ್ನು ನೆರವೇರಿಸಿ 22ರಂದು ಗುರುವಾಯೂರು ಶ್ರೀ ಕೃಷ್ಣನ ದರ್ಶನವನ್ನು ಪಡೆದರು.

27-1-98 ಮಂಗಳೂರಿನ ಭಕ್ತ ಜನರಿಂದ ಅಭಿನಂದನಾ ಕಾರ್ಯಕ್ರಮ ನೆರವೇರಿಸಲ್ಪಟ್ಟಿತು.

28-1-98 ಉಡುಪಿಯ ಶ್ರೀ ಕೃಷ್ಣನ ದರ್ಶನ ಮಾಡಿ ಶ್ರೀಮಠಕ್ಕೆ ಮರುಪ್ರಯಾಣ ಮಾಡಿದರು.

6-4-98 ಶಿವಳಮನೆಯಲ್ಲಿ ಕೋಟಿ ಅಷ್ಟಾಕ್ಷರಿ ಜಪಯಜ್ಞದ ಪೂರ್ಣಾಹುತಿ ಕಾರ್ಯಕ್ರಮದಲ್ಲಿ ಸಾನ್ನಿಧ್ಯ.

20-4-98 ಶಿವಮೊಗ್ಗಾದ ಪ್ರಸನ್ನ ಗಣಪತಿ ದೇವಾಲಯದ ಶಿಖರ ಕಲಶ ಪ್ರತಿಷ್ಠಾಪನೆಯಲ್ಲಿ ಸಾನ್ನಿಧ್ಯ.

23-4-98 ಹುಬ್ಬಳ್ಳಿ ಮಹಾರುದ್ರಯಾಗ-ಮಂಗಲ ಕಾರ್ಯಕ್ರಮದಲ್ಲಿ ಸಾನ್ನಿಧ್ಯ.

30-5-98 ಶ್ರೀಮಠದ ಶಂಕರ ಜಯಂತಿ ಸಭೆಯಲ್ಲಿ ಶಿರಾಲಿ ಮಠದ ಸದ್ಯೋಜಾತ ಶಂಕರಾಶ್ರಮ ಸ್ವಾಮಿಗಳ ಉಪನ್ಯಾಸ.

26-10-98 ಧಾರವಾಡದ ಆಕಾಶವಾಣಿ ಕೇಂದ್ರಕ್ಕೆ ಭೇಟಿ ನೀಡಿ ಶ್ರೀಗಳು ಚಿಂತನ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

29-10-98 ಹುಬ್ಬಳ್ಳಿ ಜ್ಯೋತಿರ್ವಿಜ್ಞಾನ ಸಮ್ಮೇಳನದಲ್ಲಿ ಆಶೀರ್ವಚನ.

2-11-98 ಸೋದೆಯ ಜೈನಮಠದಲ್ಲಿ ಭಟ್ಟಾಕಳಂಕ ಸ್ವಾಮಿಗಳೊಂದಿಗೆ ಭೇಟಿ.

10-12-98 ಬೆಂಗಳೂರಿನ ಶಂಕರಕೃಪಾದಲ್ಲಿ ಉಪನ್ಯಾಸ

12-12-98 ಬೆಂಗಳೂರು ಗಿರಿನಗರದಲ್ಲಿ ರಾಮಚಂದ್ರಪುರ ಮಠದ ಶ್ರೀ ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳೊಂದಿಗೆ ಭೇಟಿ ಮತ್ತು ಉಭಯ ಶ್ರೀಗಳಿಂದ ಆಶೀರ್ವಚನ.

15-12-98 ಕಾಂಚೀಪರಮಾಚಾರ್ಯರ ಆರಾಧನಾ ಮಹೋತ್ಸವದಲ್ಲಿ ಉಪಸ್ಥಿತಿ.

18-12-98 ತಿರುಪತಿ ವೆಂಕಟೇಶ್ವರ ದೇವರ ದರ್ಶನ

26,27,28 -11-98 ಶ್ರೀಮಠದಲ್ಲಿ ದಕ್ಷಿಣಭಾರತ ಕ್ಷೇತ್ರೀಯ ವೇದ ಸಮ್ಮೇಳನದಲ್ಲಿ ಭಗವತ್ಪಾದ ಪ್ರಕಾಶನ ಸಂಸ್ಥೆಯ ಉದ್ಘಾಟನೆ, ಸ್ವರ್ಣವಲ್ಲೀ ಪ್ರಭಾ ಮಾಸ ಪತ್ರಿಕೆಯ ಬಿಡುಗಡೆ, ಸಂಹಿತಾಯಾಗ ಸಮಾಪ್ತಿ. ಶ್ರೀಶ್ರೀಗಳಿಂದ ಆಶೀರ್ವಚನ

5-10-1998 ವೃಕ್ಷ-ಲಕ್ಷ ಆಂದೋಲನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನಕ್ಕೆ ಕೇಂದ್ರ ಪರಿಸರ ಖಾತೆಯ ಸಚಿವ ಶ್ರೀ ಸತೀಶ ಪ್ರಭು ಅವರು ಭೇಟಿ ನೀಡಿದರು. ಆ ಸಂದರ್ಭದಲ್ಲಿ ಶ್ರೀಗಳು ''ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ತಮ್ಮ ವಿರೋಧವಿಲ್ಲ. ಆದರೆ ಆ ಕಾರ್ಯಗಳು ಪರಿಸರ ವಿರೋಧಿಯಾಗಬಾರದು'' ಎಂಬ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

16-2-99 ಮಂಗಳೂರಿನ ಪುರಭವನದಲ್ಲಿ ಪೇಜಾವರ ಶ್ರೀಗಳ ಪೀಠಾರೋಹಣ ವಜ್ರಮಹೋತ್ಸವ ಕಾರ್ಯಕ್ರಮದಲ್ಲಿ ಆಶೀರ್ವಚನ.

24-2-99 ಹೆಲ್ಲೂರಿನ ನೃಸಿಂಹ ದೇವರ ಪುನಃಪ್ರತಿಷ್ಠಾಪನೆ ಮತ್ತು ಆಶೀರ್ವಚನ.

8-3-99	ಮಂಗಳೂರಿನ ಕಾಪೂಬೈಲಿನ ಕೋಟಿಗಾಯತ್ರಿಯಾಗದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ.
8-3-99	ಕರ್ನಾಟಕ ರಾಜ್ಯ ಮಟ್ಟದ ದಿನಪತ್ರಿಕೆ "ಕನ್ನಡ ಜನ ಅಂತರಂಗ" ಪತ್ರಿಕಾ ಕಾರ್ಯಾಲಯಕ್ಕೆ ಭೇಟಿ
12-3-99	ಬೆಂಗಳೂರಿನ 'ಯವನಿಕಾ'ದಲ್ಲಿ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿದ ಘಟಿಕೋತ್ಸವದಲ್ಲಿ ವಿದ್ವತ್ ಪದವಿ ಪ್ರಧಾನ ಸಮಾರಂಭ ಕಾರ್ಯಕ್ರಮದಲ್ಲಿ ಅನುಗ್ರಹ ಭಾಷಣ ಮತ್ತು ಪ್ರಶಸ್ತಿ ಪ್ರದಾನ.
25-10-98 ರಿಂದ 29-10-98	ಹುಬ್ಬಳ್ಳಿ-ಧಾರವಾಡ ನಗರ ಹವ್ಯಕ ಸಾಂಸ್ಕೃತಿಕ ಸಂಘದ ಸಮ್ಮೇಳನದಲ್ಲಿ "ಅಕ್ಷರಂ" ಸಂಭಾಷಣಾ ಶಿಬಿರದಲ್ಲಿ ಪಾಲ್ಗೊಂಡು ಆಶೀರ್ವಚನ ನೀಡಿದರು. ಸವದತ್ತಿಗೆ ಆಹ್ವಾನಿತರಾಗಿ ಸನಿಹದ ಗೊಣ್ಣೂರೆಂಬಲ್ಲಿ ಲಕ್ಷ ದೀಪೋತ್ಸವಕ್ಕೆ ಸಾನ್ನಿಧ್ಯ ನೀಡಿದಾಗ ಸಾವಿರ ಮಹಿಳೆಯರ ದೀವಿಗೆ ಹಿಡಿದ ಕೈ ಮತ್ತು ಸಾವಿರ ಪುರುಷರ ಫಲಪುಷ್ಪಕರ 1 ಕಿಲೋಮೀಟರ್ ಉದ್ದದ ಹೂ ಹಗ್ಗದೊಂದಿಗೆ ಅಭೂತ ಪೂರ್ವ ಸ್ವಾಗತ ಲಭಿಸಿತ್ತು.
19-7-99 ರಿಂದ 28-7-99	10 ದಿವಸ ಕಾರ್ಗಿಲ್-ಯೋಧರ ವಿಜಯವನ್ನು ಪ್ರಾರ್ಥಿಸಿ ಲೋಕ ಕಲ್ಯಾಣಾರ್ಥವಾಗಿ ಕೋಟಿ ತುಳಸಿ ಅರ್ಚನೆ ಮತ್ತು ಸುವಾಸಿನಿಯರಿಂದ 5 ದಿವಸ ಕೋಟಿ ಕುಂಕುಮಾರ್ಚನೆ ನೆರವೇರಿತು. ರಾಜ್ಯದಲ್ಲಿಯೇ ಪ್ರಪ್ರಥಮವಾದ ಸಂಸ್ಕೃತ ಕವಿಗೋಷ್ಠಿ ನೆರವೇರಿತು.
20-9-99 ರಿಂದ 9-12-99	ಶ್ರೀಗಳವರ ಉತ್ತರಭಾರತ ಯಾತ್ರೆ-ಹರಿದ್ವಾರ, ರುದ್ರಪ್ರಯಾಗ, ಗೌರಿಕುಂಡ, ಕೇದಾರನಾಥ, ಬದರೀನಾಥ, ಹೃಷೀಕೇಶ, ಅಯೋಧ್ಯಾ, ವಾರಾಣಸಿ, ಗಯಾ, ಪ್ರಯಾಗ, ಚಿತ್ರಕೂಟ, ಉಜ್ಜಯನಿ, ಓಂಕಾರೇಶ್ವರ, ಔದುಂಬರ, ಕೊಲ್ಲಾಪುರ. ಅಕ್ಷಯ ಭವನ ನಿರ್ಮಾಣದ ಸಂಕಲ್ಪ.
20-4-99	ರಾಮಚಂದ್ರಾಪುರ ಮಠದ ಪೂಜ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳವರ ಆಗಮನ ಮತ್ತು ಭೇಟಿ. ಶಂಕರ

ಜಯಂತಿಯ ಸಭಾಕಾರ್ಯಕ್ರಮದ ಉದ್ಘಾಟನೆ, ಆಶೀರ್ವಚನ (ಶ್ರೀಮಠದಲ್ಲಿ)

27-4-99 ಶ್ರೀ ರಾಮಚಂದ್ರಾಪುರ ಮಠಕ್ಕೆ ಶ್ರೀಗಳವರ ಪ್ರಯಾಣ ಪೀಠಾರೋಹಣ ಕಾರ್ಯಕ್ರಮದಲ್ಲಿ ಸಾನ್ನಿಧ್ಯ.

8-5-99 ಕೇರಳದ ಕಾಸರಕೋಡಿನ ಎಡನೀರು ಮಠಕ್ಕೆ ಶ್ರೀಗಳವರ ಪ್ರಯಾಣ. ಶೇಣಿ ಗೋಪಾಲಭಟ್ಟರ ಸನ್ಯಾಸ ಕಾರ್ಯಕ್ರಮದಲ್ಲಿ ಸಾನ್ನಿಧ್ಯ.

10-5-99 ಕೊಲ್ಲೂರು ಮೂಕಾಂಬಿಕಾ ದರ್ಶನ ಮತ್ತು ಪೂಜೆ.

11-12-99 ಶ್ರೀಸೋದೆ ವಾದಿರಾಜ ಮಠದ ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಶ್ರೀಪಾದಂಗಳವರ ಆಗಮನ ಮತ್ತು ಸೋಂದಾ ಕೈಪಿಡಿ ಬಿಡುಗಡೆ.

28-12-99 ಕಾಂಚೀ ಪ್ರವಾಸ, ಪರಮಾಚಾರ್ಯರ ಆರಾಧನಾ ಕಾರ್ಯಕ್ರಮ ರಿಂದ 10-1-2000 ದಲ್ಲಿ ಉಪಸ್ಥಿತಿ.

10-2-2000 ಕೆ.ಆರ್. ನಗರದ ಎಡತೊರೆ ಸಂಸ್ಥಾನದಲ್ಲಿ ಶಾಸ್ತ್ರಗೋಷ್ಠಿ ಕಾರ್ಯಕ್ರಮದಲ್ಲಿ ಸಾನ್ನಿಧ್ಯ.

14-2-2000 ಮೈಸೂರಿನ ವೇದಶಾಸ್ತ್ರ ಪೋಷಿಣೀ ಸಭಾದವರು ಮಹಾರಾಜಾ ಸಂಸ್ಕೃತ ಕಾಲೇಜಿನ ಮಧ್ಯಮಾಂಗಣದಲ್ಲಿ ಆಯೋಜಿಸಿದ್ದ "ವಿದ್ವಾಂಸರ ಸನ್ಮಾನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

2-3-2000 ಸಂಸ್ಕೃತ ಪರಿಷತ್ ಕಾರವಾರ ಮತ್ತು ಸಂಸ್ಕೃತ ಉತ್ಸವ ಸಮಿತಿ ಕಾರವಾರ ಇವರುಗಳು ಸಂಸ್ಕೃತ ವರ್ಷದ ನಿಮಿತ್ತ ಶ್ರೀಗಳವರ ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿದ್ದರು.

ಶ್ರೀ ಭಾವೇಶಾನಂದ ಜೀ ಸ್ವಾಮಿ, ಶ್ರೀ ರಾಮಕೃಷ್ಣಾಶ್ರಮ ಕಾರವಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಶ್ರೀಗಳು "ಪುನರ್ಜನ್ಮ ಸಿದ್ಧಾಂತ" ಕುರಿತು ಉಪನ್ಯಾಸ ನೀಡಿ "ಭಾರತೀಯರು ಪ್ರತಿಪಾದಿಸಿದ ಪುನರ್ಜನ್ಮ ಸಿದ್ಧಾಂತ ಹಾಗೂ ಪಾಪ-ಪುಣ್ಯ ಕರ್ಮಫಲಾನುಸಾರ ಜನ್ಮಾವಸ್ಥೆ" ಎಂಬುದನ್ನು ಉದ್ಬೋಧಕವಾಗಿ ವಿವರಿಸಿದರು.

2-5-2000 ಶ್ರೀ ಸ್ವರ್ಣವಲ್ಲೀ ಶ್ರೀಸರ್ವಜ್ಞೇಂದ್ರ ಸರಸ್ವತೀ ಮಂಟಪದಲ್ಲಿ ಶ್ರೀ ಆದಿಶಂಕರಾಚಾರ್ಯರನ್ನು ಕುರಿತು "ರಾಷ್ಟ್ರೀಯ ವಿಚಾರ ಸಂಕಿರಣ ನಡೆಸಲಾಯಿತು. ಉದ್ಘಾಟಕರು ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಶ್ರೀಮತ್ ಜಯೇಂದ್ರ ಸರಸ್ವತೀ ಸ್ವಾಮಿಗಳು ಕಾಂಚೀ ಕಾಮಕೋಟಿ ಪೀಠಮ್, ಪೂಜ್ಯ ಶ್ರೀಗಳಿಂದ ಪ್ರಾಸ್ತಾವಿಕ ಭಾಷಣ.

"ಶಂಕರಾಚಾರ್ಯರ ಸ್ತೋತ್ರ ರತ್ನಮಾಲೆ" ಮತ್ತು "ಶ್ರೀ ಲಕ್ಷ್ಮೀ ನರಸಿಂಹ ಪೂಜಾವಿಧಿ" ಗ್ರಂಥಗಳನ್ನು ಶ್ರೀ ಶ್ರೀಮತ್ ಶಂಕರ ವಿಜಯೇಂದ್ರ ಸರಸ್ವತೀ ಸ್ವಾಮಿಗಳು ಕಾಂಚೀ ಕಾಮಕೋಟಿ, ಇವರು ಬಿಡುಗಡೆ ಮಾಡಿದರು. ಕಾಂಚೀಕಾಮಕೋಟಿ ಪೀಠದ ಉಭಯ ಶ್ರೀಗಳೂ ಆಶೀರ್ವಚನ ನೀಡಿದರು.

2-5-2000 ರಿಂದ 4-5-2000 ಶ್ರೀಮಠದಲ್ಲಿ ಶ್ರೀ ಆದಿಶಂಕರಾಚಾರ್ಯರನ್ನು ಕುರಿತು ನಡೆಸಲ್ಪಟ್ಟ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ರಾಷ್ಟ್ರದ ಬೇರೆ ಬೇರೆ ಭಾಗಗಳಿಂದ ಬಂದ 18 ವಿದ್ವಾಂಸರಿಂದ, 18 ವಿವಿಧ ವಿಷಯಗಳ ಮೇಲೆ ಪ್ರಬಂಧಗಳನ್ನು ಮಂಡಿಸಲ್ಪಟ್ಟವು. ಕೊನೆಯಲ್ಲಿ ಶ್ರೀಗಳಿಂದ ಸಮಾರೋಪ ಉಪನ್ಯಾಸ.

4-5-2000 ಶಂಕರ ಜಯಂತಿಯ ಪ್ರಯುಕ್ತ ನಡೆದ ಸನ್ಮಾನ ಸಮಾರಂಭದಲ್ಲಿ ಶ್ರೀಗಳು

1. ಶ್ರೀ ಶಂಕರ ನಾರಾಯಣ ಘನಪಾಠಿಗಳು ಸಂಪೆಕಟ್ಟೆ
2. ತ್ರಿವೇದಿ ಹಂದಲಸು ಲಕ್ಷ್ಮೀನಾರಾಯಣ ಭಟ್ಟ
3. ವೈದ್ಯ ಶ್ರೇಷ್ಠ ಡಾ|| ಎ.ಎನ್. ಪಟವರ್ಧನ್
4. ಸಿ.ಎಂ. ಭಟ್ಟ ಕಾನಗೋಡು, ಉತ್ತರ ಪ್ರದೇಶದಲ್ಲಿ ಐ.ಜಿ.
5. ಕಾರ್ಗಿಲ್ ಯುದ್ಧದಲ್ಲಿ ಹೋರಾಡಿ ವಿಜಯಗಳಿಸಲು ಕಾರಣರಾದ ಮೇಜರ್ ಗಣೇಶ ಭಟ್ಟ

ಇವರುಗಳಿಗೆ ಶಾಲು, ಪ್ರಶಸ್ತಿಪತ್ರ ಮತ್ತು ಫಲಮಂತ್ರಾಕ್ಷತೆ ಕೊಟ್ಟು ಸನ್ಮಾನಿಸಿದರು. ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಶ್ರೀ ರಂಗಪ್ರಿಯ ಮಹಾಸ್ವಾಮಿಗಳು ಸನ್ಮಾನಿತರನ್ನು ಶ್ಲಾಘಿಸಿ ಆಶೀರ್ವಚನ ನೀಡಿದರು.

10-5-2000 ಮತ್ತು 11-5-2000 ಉ.ಕ. ಜಿಲ್ಲಾ ಸಂಸ್ಕೃತ ವರ್ಷ ಸಮಿತಿ, ಶ್ರೀ ಸ್ವರ್ಣವಲ್ಲೀ ಮಹಾ ಸಂಸ್ಥಾನ ಸೋಂದಾ ಹಾಗೂ ಸಂಸ್ಕೃತ ಭಾರತೀ ಕರ್ನಾಟಕ, ಇವುಗಳ ಸಂಯುಕ್ತ ಆಶ್ರಯದಲ್ಲಿ ತೋಟಗಾರರ ಕಲ್ಯಾಣ ಮಂಟಪ ಶಿರಸಿಯಲ್ಲಿ ನಡೆದ ''ಅಖಿಲ ಕರ್ನಾಟಕ ಸಂಸ್ಕೃತ ಶಿಕ್ಷಕ-ವಿದ್ಯಾರ್ಥಿ ಸಮ್ಮೇಳನ''ದಲ್ಲಿ ಶ್ರೀಗಳ ಸಾನ್ನಿಧ್ಯ ಮತ್ತು ಆಶೀರ್ವಚನ.

5-6-2000 ಉಡುಪಿಯ ಶ್ರೀ ಕೃಷ್ಣಮಠದಲ್ಲಿ ಶ್ರೀ ಶ್ರೀ ಪೇಜಾವರ ವಿಶ್ವೇಶತೀರ್ಥರ ನೇತೃತ್ವದಲ್ಲಿ ವಿಶ್ವಹಿಂದೂ ಪರಿಷತ್ ಸಂಘಟಿಸಿದ್ದ ''ಯತಿ ಸಮ್ಮೇಳನ''ದಲ್ಲಿ ಶ್ರೀಗಳು ಸಾನ್ನಿಧ್ಯ ನೀಡಿ ಆಶೀರ್ವಚನ ಮಾಡಿದರು.

7-10-2000 ಶ್ರೀಮಠದಲ್ಲಿ ಶ್ರೀ ದೇವಿಯ ಸನ್ನಿಧಿಯಲ್ಲಿ ಸಮಸ್ತ ಶಿಷ್ಯರ ಕಲ್ಯಾಣವನ್ನಪೇಕ್ಷಿಸಿ ಚಂಡೀಹವನವನ್ನು ಶ್ರೀಗಳ ಮಾರ್ಗದರ್ಶನ ದಲ್ಲಿ ನೆರವೇರಿಸಲಾಯಿತು.

19-11-2000 ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದಲ್ಲಿ ನಡೆಸಲ್ಪಟ್ಟ ಅಖಿಲ ಕರ್ನಾಟಕ ಸಂಸ್ಕೃತ ಕಾಲೇಜು ಬೋಧಕರ ಶಾಸ್ತ್ರ ಶಿಕ್ಷಣ ಚಿಂತನ ಗೋಷ್ಠಿ ಮತ್ತು ಬೆಳಗಾವಿ ವಿಭಾಗೀಯ ಮಟ್ಟದ ಸಂಸ್ಕೃತೋತ್ಸವ ಕಾರ್ಯಕ್ರಮಗಳನ್ನು ಶ್ರೀಗಳು ದೀಪಬೆಳಗಿ ಉದ್ಘಾಟಿಸಿದರು.

31-12-2000 ಬೆಂಗಳೂರಿನ ಭವ್ಯ ಭಾರತೀಯ ವಿದ್ಯಾಭವನದ ಸಭಾಂಗಣ-ದಲ್ಲಿ ಒಂದು ಅಭೂತಪೂರ್ವ ವಿಚಾರ ಗೋಷ್ಠಿ - ಸಂವಿಧಾನ-ದಲ್ಲಿ ಆಧ್ಯಾತ್ಮಿಕತೆಯ ಅಳವಡಿಕೆ. ಈ ರಾಷ್ಟ್ರೀಯ ಚಿಂತನ ಗೋಷ್ಠಿಯನ್ನು ಪ್ರಪ್ರಥಮವಾಗಿ ಸಂಘಟಿಸಿ ಏರ್ಪಡಿಸಿದ ಮೂಲ ಪ್ರವರ್ತಕರೆಂಬ ಕೀರ್ತಿ ನಮ್ಮ ಶ್ರೀ ಸ್ವರ್ಣವಲ್ಲೀ ಮಠಾಧೀಶ ಶ್ರೀ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿ-ಗಳಿಗೆ ಸಂದಿದೆ. ಸನ್ಮಾನ್ಯ ಶ್ರೀ ಹಾರ್ನಳ್ಳಿ ರಾಮಸ್ವಾಮಿ, ಸುಪ್ರೀಮ್ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಶ್ರೀ ರಾಮಾಜೋಯಿಸ, ಮಾಜಿ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಮುಂತಾದವರು ಭಾಗವಹಿಸಿದ ಈ ವಿಚಾರ ಗೋಷ್ಠಿ ಇಡೀ ರಾಷ್ಟ್ರದ ಗಮನ ಸೆಳೆದಿದೆ.

28-2-2001 ರಿಂದ 5-3-2001 ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದಲ್ಲಿ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ''ವೇದ ಸಂಗಮ'' ಪಾರಾಯಣ ಅಭಿಯಾನದ ಮುಕ್ತಾಯ ಸಮಾರಂಭ. ಎಲ್ಲ ವೇದಗಳ ಸಂಹಿತಾ ಹವನ ನಡೆಯಿತು. ಇದೇ ಸಂದರ್ಭದಲ್ಲಿ ''ಕೃಷ್ಣಯಜುರ್ವೇದ ಸ್ವಾಹಾಕಾರ ವಿಧಿಃ'' ಭಾಗ-2ರ ಬಿಡುಗಡೆ ಮಾಡಲಾಯಿತು.

ಇದಕ್ಕೆ ಪೂರ್ವಭಾವಿಯಾಗಿ ಶ್ರೀ ಸ್ವರ್ಣವಲ್ಲೀ ಮಠ ಹಾಗೂ ಶ್ರೀ ರಾಮಚಂದ್ರಾಪುರ ಮಠ, ಈ ಉಭಯ ಪೀಠಾಧೀಶ್ವರರ ದಿವ್ಯ ಮಾರ್ಗದರ್ಶನದಲ್ಲಿ, ಯಲ್ಲಾಪುರ, ಸಿರ್ಸಿ, ಸಿದ್ದಾಪುರ, ಹೊನ್ನಾವರ ಮತ್ತು ಕುಮಟಾ ತಾಲ್ಲೂಕುಗಳಲ್ಲಿ ಆಯ್ದ ಐದು ಗೃಹಸ್ಥರ ಮನೆಗಳಲ್ಲಿ ವೇದ ಪಾರಾಯಣಗಳನ್ನು ನಡೆಸಲಾಯಿತು. ಇವೆಲ್ಲವುಗಳ ಮೂಲ ಉದ್ದೇಶ ಜ್ಞಾನಭಂಡಾರವಾದ ವೇದ ಸಂದೇಶಗಳನ್ನು ಜನಮಾನಸದಲ್ಲಿ ಪುನಃ ಪ್ರತಿಷ್ಠಾಪಿಸುವುದೇ ಆಗಿದೆ.

11-3-2001 ಯೋಗ ಸಂಗಮ ಕಾರ್ಯಕ್ರಮದ ಸಮಾರೋಪ ಸಮಾರಂಭ. ಪೂರ್ವಭಾವಿಯಾಗಿ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಅಂಗ ಸಂಸ್ಥೆಯಾದ ಶ್ರೀ ಸರ್ವಜ್ಞೇಂದ್ರ ಪ್ರತಿಷ್ಠಾನ - ಯೋಗಮಂದಿರ ಶಿರಸಿ, ಶಾಂತಿವನ ಟ್ರಸ್ಟ್ (ರಿ.) ಧರ್ಮಸ್ಥಳ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವಿಜ್ಞಾನ ಕಾಲೇಜು, ಆಸ್ಪತ್ರೆ, ಧರ್ಮಸ್ಥಳ, ಇವುಗಳ ಸಂಯುಕ್ತ ಆಶ್ರಯದಲ್ಲಿ ಮೊದಲನೆಯ ಹಂತವಾಗಿ ಉತ್ತರ ಕನ್ನಡ ಜಿಲ್ಲೆಯ ಮೂರು ತಾಲ್ಲೂಕುಗಳ ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಆಯ್ದ 35 ಸ್ಥಳಗಳಲ್ಲಿ ಬೃಹತ್ ಯೋಗ ಹಾಗೂ ಪ್ರಕೃತಿ ಚಿಕಿತ್ಸಾ ಶಿಬಿರವು 25-2-2001 ರಿಂದ 11-3-2001 ರ ವರೆಗೆ ನಡೆಯಿತು.

ಪೊನ್ನಂಪೇಟೆಯ ಶ್ರೀ ರಾಮಕೃಷ್ಣಾ-ಶಾರದಾಶ್ರಮದ ಶ್ರೀ ಸ್ವಾಮೀ ಜಗದಾತ್ಮಾನಂದಜೀಯವರ ಅಧ್ಯಕ್ಷತೆಯಲ್ಲಿ ಶಿರಸಿಯ ಕಡವೆ ಹೆಗಡೆ ಕಲ್ಯಾಣ ಮಂಟಪದಲ್ಲಿ ಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಿತು.

❀ ❀ ❀

ಶ್ರೀ ಸ್ವರ್ಣವಲ್ಲೀ ಮಠದ ಗುರುಪರಂಪರೆ

ಸ್ಥಳ	ಯತಿಗಳು (ಸರಸ್ವತಿ)	ಪೀಠಸ್ಥರಾದ ಬಗ್ಗೆ ಜ್ಞಾನದೀಪಿಕಾ ಅಧ್ಯಾಯ ಮತ್ತು ಶ್ಲೋಕ	ಪೀಠಸ್ಥರಾದ ಬಗ್ಗೆ *ದಾಖಲೆ ಸಂಖ್ಯೆ
ಕಾಶಿ	೧. ವಿಶ್ವವಂದ್ಯ	ಅ-೩;೧೬, ೧೭, ೧೮ ೧೯, ೪೫, ೪೬	
	೨. ನಾರಾಯಣೇಂದ್ರ	ಅ-೪;೨,೧೬,೧೭,೨೭ ೨೮, ೨೯,೩೦,೩೨ ೪೦-೪೨	
ಉಜ್ಜಯನಿ	೩. ಕೈವಲ್ಯೇಂದ್ರ ೪. ಪ್ರಕಾಶೇಂದ್ರ ೫. ಸರ್ವಜ್ಞೇಂದ್ರ	ಅ-೪; ೫೯, ೬೦	
	೬. .... ೧೮...............	ಅ-೪; ೬೨	
ತ್ರಯಂಬಕ	೧೯ ವಿಶ್ವನಾಥೇಂದ್ರ	ಅ-೪;೬೪	
	೨೦. ಗಂಗಾಧರೇಂದ್ರ	ಅ-೫; ೨,೮-೧೨ ಅ-೫; ೧೩-೧೮, ೨೨, ೨೪, ೨೬, ೨೮ ೩೨, ೩೩, ೩೮, ೪೪ ೪೫, ೪೭, ೪೮	
ಗೋಕರ್ಣ	೨೧. ವಿಶ್ವವಂದ್ಯ	ಅ-೫, ೫೦	
	೨೨. ಗಂಗಾಧರೇಂದ್ರ		
	೨೩. ವಿಶ್ವನಾಥೇಂದ್ರ	ಅ-೫, ೫೯	
	೨೪. ರಾಮಚಂದ್ರ		
	೨೫. ಮಾಧವೇಂದ್ರ	ಅ-೫, ೬೦	
	೨೬. ವಿಶ್ವವಂದ್ಯ	ಅ-೫, ೬೧-೬೩	
ಕಡತೋಕಾ	೨೭.		
	೨೮.	ಅ-೫, ೬೪	
	೨೯ ವಿಶ್ವವಂದ್ಯ	ಅ-೫, ೭೧, ೭೨, ೭೬ ೮೪, ೯೨, ೯೪, ೧೦೪	
ಸಹಸ್ರಲಿಂಗ ಸುಧಾಪುರ ಸದಾಶಿವರಾಯ	೩೦. ವಿಶ್ವನಾಥ	ಅ-೫, ೧೦೮, ೧೧೦, ೧೧೨, ೧೨೦, ೧೨೭	
	೩೧. ಪ್ರಕಾಶೇಂದ್ರ ೩೨. ಪ್ರತ್ಯಗ್ಬ್ರಹ್ಮೇಂದ್ರ ೩೩. ಹಿರೇಸರ್ವಜ್ಞೇಂದ್ರ ೩೪. ಚಂದ್ರಶೇಖರ ೩೫. ಸರ್ವಜ್ಞೇಂದ್ರ ೩೬. ರಾಮಚಂದ್ರ	ಅ-೫, ೧೧೨ ಅ-೫, ೧೨೬	೬,೭,೮,೧೬ ೯,೧೧,೧೪,೧೫,೧೭ ೧೮,೨೦
	೩೭. ಸರ್ವಜ್ಞೇಂದ್ರ	ಅ-೫, ೧೨೯	೨೧
ಈಗಿನ ಸ್ವರ್ಣ ವಲ್ಲೀ ಮಠ	೩೮. ಬೃಹತ್ ಗಂಗಾಧರೇಂದ್ರ	ಅ-೫, ೧೩೦-೧೩೪ ೧೪೧-೧೪೨	೨೨, ೨೩
	೩೯ ಸರ್ವಜ್ಞೇಂದ್ರ	ಅ-೫, ೧೨೯	೨೩
	೪೦. ರಾಮಚಂದ್ರ	ಅ-೫, ೧೪೭	೨೪

ಸ್ಥಳ	ಯತಿಗಳು (ಸರಸ್ವತಿ)	ಪೀಠಸ್ಥರಾದ ಬಗ್ಗೆ *ದಾಖಲೆ ಸಂಖ್ಯೆ	ಜನ್ಮಸ್ಥಳ
	೪೧. ಸರ್ವಜ್ಞೇಂದ್ರ	೨೫, ೨೭, ೨೮	
	೪೨. ಮಾಧವೇಂದ್ರ	೨೯	
	೪೩. ಸರ್ವಜ್ಞೇಂದ್ರ	೩೦, ೩೧, ೩೩	
	೪೪. ರಾಮಚಂದ್ರ	೩೫	
	೪೫. ಪ್ರತ್ಯಗ್ಬ್ರಹ್ಮೇಂದ್ರ	೪೦, ೪೧, ೪೨ ೪೩, ೪೪, ೪೬	
	೪೬. ರಾಮಚಂದ್ರ	೪೬, ೪೭, ೪೮, ೫೦	
	೪೭. ಸರ್ವಜ್ಞೇಂದ್ರ	೪೯	
	೪೮. ಗಂಗಾಧರೇಂದ್ರ	೫೮, ೮೩, ೮೪, ೧೦೭ ೧೬೪, ೪೪೪, ೪೪೫ ೪೪೭, ೪೪೯, ೪೫೦	ಗುಂಟಕಲ್ಲು (ಜಯಂತಿ)
	೪೯ ಸರ್ವಜ್ಞೇಂದ್ರ	ಅ-೬, ೧೬೫-೧೭೦	ಹುಳಗೋಳ ಜೋಯಿಸರ ಮನೆ
	೫೦. ಗಂಗಾಧರೇಂದ್ರ	ಅ-೭, ೧೭೧-೨೦೭ ೪೫೨, ೪೫೩, ೪೫೫ ೪೫೬	ಕವಡೀಕೆರೆ
	೫೧. ಸರ್ವಜ್ಞೇಂದ್ರ	ಅ-೮, ೨೦೮-೨೨೩	ಹುಳಗೋಳ (ದೇವರುಭಟ್ಟರು)
	೫೨. ಗಂಗಾಧರೇಂದ್ರ	ಅ-೯, ೨೨೪-೨೯೩	ಅರಸಾಪುರ
	೫೩. ಸರ್ವಜ್ಞೇಂದ್ರ	ಅ-೧೦, ೨೯೪-೩೯೪	ಅರಳೀಮಕ್ಕಿ
	೫೪. ಗಂಗಾಧರೇಂದ್ರ	ಹಾಲಿ ಇದ್ದವರು	ನಡಗೋಡು

★ ವಿ.ಸೂ. ' ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಿಂದ ಪ್ರಕಾಶಿತ, ಡಾ|| ಎ.ಕೆ ಶಾಸ್ತ್ರಿಯವರಿಂದ ಬರೆಯಲ್ಪಟ್ಟ, ''ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು ಸಂಪುಟ-೧''

ಶ್ರೀಮಠದ ಆಡಳಿತ ವ್ಯವಸ್ಥೆ

ಶ್ರೀ ಶ್ರೀಗಳವರು

- **ಆಡಳಿತ ಮಂಡಳಿ**
  - ಸೀಮಾ ಪರಿಷತ್
  - ಉಪ ಸಮಿತಿಗಳು
    - ಕೃಷಿ ಸಮಿತಿ
    - ಊಟೋಪಚಾರ ಸಮಿತಿ
    - ಧಾರ್ಮಿಕ ಸಮಿತಿ
    - ಕಾನೂನು ಸಲಹಾ ಸಮಿತಿ
    - ಕಟ್ಟಡ ಸಮಿತಿ
    - ಅಲಂಕಾರ ಸಮಿತಿ
- **ಅಂಗ ಸಂಸ್ಥೆಗಳು**

1. ರಾಜರಾಜೇಶ್ವರಿ ವಿದ್ಯಾಸಂಸ್ಥೆ
   - ಬ್ರಹ್ಮ ವಿದ್ಯಾಸಂಸ್ಥೆ
   - ಗ್ರಂಥಾಲಯ
   - ವಿದ್ಯಾರ್ಥಿ ಸಹಕಾರೀ ಸಂಘ
2. ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ
   - ಜಾಗೃತ ವೇದಿಕೆ
   - ಯೋಗ ಮಂದಿರ
3. ಲಲಿತಾಂಬಾ ನಿಧಿ (ರಿ)
4. ಶ್ರೀ ಭಗವತ್ಪಾದ ಪ್ರಕಾಶನ
5. ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ
6. ಯಕ್ಷಶಾಲ್ಮಲಾ (ಶ್ರೀಗಳ ಮಾರ್ಗದರ್ಶನದಲ್ಲಿ)
7. ಗ್ರಾಮಾಭ್ಯುದಯ
8. ಶ್ರೀ ದೇವೀ ಶಿಕ್ಷಣ ಸಂಸ್ಥೆ (ಶ್ರೀಗಳ ಮಹಾಪೋಷಕತ್ವದಲ್ಲಿ)
9. ಸ್ವರ್ಣವಲ್ಲೀ ಸೇವಾ ಪ್ರತಿಷ್ಠಾನ, ಬೆಂಗಳೂರು
10. ಶ್ರೀ ರಾಮಕ್ಷತ್ರಿಯ ಸೀಮಾ ಪರಿಷತ್ (ಚಂದಾವರ)

ಶ್ರೀ ಭಗವತ್ಪಾದ ಪ್ರಕಾಶನ (ರಿ.)

ಮಾರಾಟಕ್ಕೆ ಲಭ್ಯವಿರುವ ಪುಸ್ತಕಗಳ ಮತ್ತು ಕ್ಯಾಸೆಟ್‌ಗಳ ವಿವರ

1.	ಬೌಧಾಯನೀಯ ನಿತ್ಯಕರ್ಮ	100-00
2.	ಬೋಧಾಯನೋಕ್ತಸಂಧ್ಯಾವಿಧಿಃ	10-00
3.	ಸ್ವರ್ಣವಲ್ಲೀ ಮಹಾಸಂಸ್ಥಾನ (ಚರಿತ್ರೆ)	100-00
4.	ವಿವಾಹ ಸಂಸ್ಕಾರ	25-00
5.	ಗಾಯತ್ರೀ ಜಪಯಜ್ಞ	25-00
6.	ಸ್ವರ್ಣವಲ್ಲೀ ಸುಧಾ ಕುಸುಮ - 1	10-00
7.	ಸ್ವರ್ಣವಲ್ಲೀ ಸುಧಾ ಕುಸುಮ - 2	10-00
8.	ಭಗವದ್ಗೀತೆ ಆಧ್ಯಾತ್ಮವಿದ್ಯೆ ಸಂ.-1	100-00
9.	ಕೃಷ್ಣಯಜುರ್ವೇದ ಸ್ವಾಹಾಕಾರವಿಧಿಃ	180-00
10.	ಶ್ರೀ ಸರ್ವಜ್ಞೇಂದ್ರ ಸರಸ್ವತೀ	25-00
11.	ಗಾಯತ್ರೀ ಮಹತ್ವ (ಕ್ಯಾ.)	30-00
12.	ಬೋಧಾಯನೋಕ್ತಸಂಧ್ಯಾವಂದನೆ (ಕ್ಯಾ)	30-00
13.	ಶ್ರೀ ಲಕ್ಷ್ಮೀನೃಸಿಂಹ ಕಲ್ಪೋಕ್ತಪೂಜಾವಿಧಿಃ	50-00
14.	ಶಂಕರಾಚಾರ್ಯರ ಸ್ತೋತ್ರರತ್ನಮಾಲೆ	50-00
15.	ಸನಾತನ ಸಂಸ್ಕಾರಗಳು	50-00
16.	ಕೃಷ್ಣಯಜುರ್ವೇದ ಸ್ವಾಹಾಕಾರ ವಿಧಿಃ ಭಾಗ-2-450	
17.	ವಿಭೂತಿ ಪುರುಷ ವಿದ್ಯಾರಣ್ಯರು	65-00
18.	ಶ್ರೀ ಬೃಹತ್ ಗಂಗಾಧರೇಂದ್ರ ಸರಸ್ವತೀ	70-00
19.	ಶ್ರೀ ಸರ್ವಜ್ಞೇಂದ್ರರು	45-00
20.	ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಸಂದೇಶ ನುಡಿ	75-00
21.	ಶ್ರೀ ಸ್ವರ್ಣವಲ್ಲೀ ಗುರುವಂಶ ಚರಿತಂ	100-00
22.	ಶ್ರೀ ಶಂಕರಾಚಾರ್ಯರ ಅದ್ವೈತದರ್ಶನ	120-00
23.	ಶ್ರೀ ಲಕ್ಷ್ಮೀನಾರಾಯಣ ಹೃದಯ	10-00

"ಸ್ವರ್ಣವಲ್ಲೀ ಪ್ರಭಾ" ಮಾಸಪತ್ರಿಕೆಗೆ ಚಂದಾದಾರರಾಗಿ

ಚಂದಾವಿವರ : ವಾರ್ಷಿಕ ಚಂದಾ ರೂ.90-00